# ಕನ್ನಡ ಭಾಷಾ ಪಠ್ಯ

## ಬಿ.ಎಸ್ಸಿ ೧ನೇ ಸೆಮಿಸ್ಟರ್
## ಕನ್ನಡ ಪಠ್ಯ ಪುಸ್ತಕ

ಬೆಂಗಳೂರು
ನಗರ ವಿಶ್ವವಿದ್ಯಾಲಯ

BENGALURU
CENTRAL UNIVERSITY

ಆಗು ನೀ ಅನಿಕೇತನ
BE BOUNDLESS

ಬೆಂಗಳೂರು ನಗರ ವಿಶ್ವವಿದ್ಯಾನಿಲಯ

**Published by : Bengaluru City University**

**Pages : iv + 156**

# ಬಿ.ಎಸ್ಸಿ
# ಮೊದಲನೇ ಸೆಮಿಸ್ಟರ್

# ಪರಿವಿಡಿ


## ಭಾಗ ೧ – ಪ್ರಾಯ

೧. ಕಾವ್ಯ – ಚಿತ್ರ ಕೆತ್ತಿದ ಕದನ– ಪ್ರತಿಭಾ ನಂದಕುಮಾರ್ ........................೨–೩

೨. ಕನ್ನಡ ಮೇಘದೂತ – ಡಾ. ದ. ರಾ. ಬೇಂದ್ರೆ..................................೪–೬

೩. ಕಥೆ – ದಾಹ – ಪಿ. ಲಂಕೇಶ್.......................................................೭–೧೭

೪. ಓದು ಪಠ್ಯ ಪ್ರಬಂಧ : ಹರೆಯ ಬಂತು ಹರೆಯ ........................................
– ಡಾ. ಮಹಾಬಲೇಶ್ವರ ರಾವ್ ..................................................೧೮–೩೯

## ಭಾಗ ೨ – ಕಾಲ

೧. ಕಾವ್ಯ – ಮಳೆಗಾಲ – ಪು.ತಿ. ನರಸಿಂಹಾಚಾರ್...........................೪೧–೪೪

೨. ಪಯಣ – ಯಶವಂತ ಚಿತ್ತಾಲ.................................................೪೫–೫೬

೩. ಕಾಲ – ಜಯಪ್ರಕಾಶ್ ಮಾವಿನಕುಳಿ...........................................೫೭–೬೬

೪. ಓದು ಪಠ್ಯ – ಯಶಸ್ಸಿನ ಮೂರು ದ್ವಾರಗಳು
ಮೂಲ: ಸ್ಟೀಫನ್ ಹಾಕಿನ್ಸ್ ಅನುವಾದ: ಬಿ.ಎಸ್. ಮಯೂರ .......೬೭–೯೩

## ಭಾಗ ೩ – ಪ್ರವಾಸ

೧. ಕಾವ್ಯ – ಕಾಶ್ಮೀರದಲ್ಲಿ ಕಾರ್ಗಾಲ – ಸಿದ್ಧಯ್ಯ ಪುರಾಣಿಕ..............೯೫–೯೬

೨. ಪ್ರಬಂಧ – ಬೆಡಗಿನ ಜೈಪುರ – ಡಾ. ಕೆ. ಶಿವರಾಮಕಾರಂತ......೯೭–೧೦೪

೩. ಲೇಖನ – ಮಹಾನಗರ ಮಾಸ್ಕೋ
– ಡಾ. ಜಿ.ಎಸ್. ಶಿವರುದ್ರಪ್ಪ.............................................೧೦೫–೧೧೦

೪. ಓದು ಪಠ್ಯ – ಆಸ್ಟ್ರೇಲಿಯಾ – ಡಾ. ಲತಾ ಗುತ್ತಿ...................೧೧೧–೧೨೦

## ಭಾಗ ೪ – ಪ್ರಯೋಗಶೀಲತೆ

೧. ಕಾವ್ಯ – ಏನಾದರೂ ಮಾಡುತಿರು ತಮ್ಮ
– ಡಾ. ಎಂ. ಗೋಪಾಲಕೃಷ್ಣ ಅಡಿಗ.................................೧೨೨–೧೨೪

೨. ಕಥೆ – ಅಕ್ಕ ಅವನು ಸಿಕ್ಕಿದನೇ? – ಸ್ವಾಮಿ ಪೊನ್ನಾಚಿ ...........೧೨೫–೧೩೭

೩. ಲೇಖನ – ಸಹಜ ಕೃಷಿಯ ನಾಲ್ಕು ತತ್ವಗಳು
– ಮೂಲ: ಮಸನೊಬು ಫುಕುವೊಕಾ
ಕನ್ನಡಕ್ಕೆ: ಸಂತೋಷ್ ಕೌಲಗಿ ............................................೧೩೮–೧೪೨

೪. ಓದು ಪಠ್ಯ – ಗಾಂಧಿಯವರ ಬ್ರಹ್ಮಚರ್ಯಪಾಲನೆ
ಮತ್ತು ಸರಳ ಜೀವನ.........................................................೧೪೭–೧೫೬

# ಭಾಗ ೧ – ಪ್ರಾಯ

## ಆಶಯ:

ಪ್ರತಿಯೊಂದು ಜೀವಿಯ ಬದುಕಿನ ವಿವಿಧ ಅವಸ್ಥಾಂತರಗಳಲ್ಲಿ ಪ್ರಾಯವು ಒಂದು ಪ್ರಮುಖವಾದ ಘಟ್ಟ. ಈ ಹರೆಯದ ಘಟ್ಟವು ಜೀವಿಯೊಂದರ ಶಕ್ತಿ, ಹುಮ್ಮಸ್ಸು, ಬಲಾಢ್ಯತೆ, ವೇಗ, ಪರಿವರ್ತನೆ, ಹೊಸತನವೇ ಮೊದಲಾದ ಊರ್ಧ್ವಮುಖಿಯ ಏರು ಪ್ರಾಯದ ಘಟ್ಟ, ಪ್ರಪಂಚದ ಜನಸಂಖ್ಯೆಗೆ ಹೋಲಿಸಿದರೆ ಭಾರತದಲ್ಲಿ ಯುವಕರ ಸಂಖ್ಯೆ ಹೆಚ್ಚಿದೆ. ಅಂಥ ಯುವ ಸಮುದಾಯವನ್ನು ಬಳಿಸಿಕೊಂಡು ದೇಶವನ್ನು ಬಲಿಷ್ಠವಾಗಿ ಕಟ್ಟಬೇಕಿದೆ.

"ಹೊಸನೆತ್ತರುಕ್ಕುಕ್ಕಿ ಆರಿ ಹೋಗುವ ಮುನ್ನ,
ಹರೆಯದೀ ಮಾಂತ್ರಿಕನ ಮಾಟ ಮಸುಳುವ ಮುನ್ನ,
ಉತ್ಸಾಹಸಾಹಸದ ಉತ್ತುಂಗ ವೀಚಿಗಳ
ಈ ಕ್ಷುಬ್ಧಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನು!"

– ಎಂಬ ಡಾ. ಎಂ. ಗೋಪಾಲಕೃಷ್ಣ ಅಡಿಗರ ಮಾತು ಅರ್ಥಪೂರ್ಣ ವಾಗಿದೆ. ಬಾಲ್ಯ ಮುಗಿದು ಪ್ರಾಯಕ್ಕೆ ತಿರುಗುತ್ತಿರುವ ಮನುಷ್ಯನ ಈ ಜೀವನದ ಘಟ್ಟದಲ್ಲಿ ದೈಹಿಕ ಮಾನಸಿಕ ಬದಲಾವಣೆಗಳು ಸಹಜವಾಗಿಯೇ ಇರುತ್ತವೆ. ಸುಮಾರು ಹನ್ನೆರಡರಿಂದ ಹತ್ತೊಂಬತ್ತನೆಯ ವಯಸ್ಸಿನವರೆಗೆ ಉಂಟಾಗುವ ಈ ಪರಿವರ್ತನೆಯ ಅವಧಿ ಬಹಳ ಸೂಕ್ಷ್ಮವಾದ ಮನುಷ್ಯನ ಜೀವನದ ಘಟ್ಟ. ಬದುಕಿನ ಆದರ್ಶ ಹಾಗೂ ವಿಭಿನ್ನವಾದ ಸಾಮಾಜಿಕ ಮುಖಾಮುಖಿ ಇಂಥ ಹರೆಯದ ಯುವಕರನ್ನು ಜರ್ಝರಿತರನ್ನಾಗಿ ಮಾಡಿಬಿಡುವ ಇದೇ ಕಾರಣಕ್ಕೆ ನೈತಿಕ ಬದುಕಿಗೆ ಬೆನ್ನು ತಿರುಗಿಸುವ ಅಪಾಯವಿರುತ್ತದೆ. ಪೋಷಕರು ತಮ್ಮ ಮಕ್ಕಳನ್ನು ಅರ್ಥ ಮಾಡಿಕೊಂಡು ಸನ್ಮಾರ್ಗದಲ್ಲಿ ಕರೆದೊಯ್ಯುವಲ್ಲಿ ಯಶಸ್ವಿಯಾದರೆ ಅವರ ಮಕ್ಕಳ ಬಾಳು ಬಂಗಾರವಾಗುತ್ತದೆ. ಇಲ್ಲದೇ ಹೋದರೆ ದಾರಿ ತಪ್ಪಿದ ಮಕ್ಕಳು ದುರ್ವ್ಯಸನಗಳ ದಾಸರಾಗಿ ತಾವು ಹಾಳಾಗುವುದಲ್ಲದೆ ತಮ್ಮ ಪೋಷಕರ ಬದುಕನ್ನು ನರಕದಲ್ಲಿ ಮುಳುಗಿಸಿ ಬಿಡುತ್ತಾರೆ. ಪ್ರಾಯದ ಅವಸ್ಥೆಯ ವಿವಿಧ ಮಗ್ಗುಲುಗಳನ್ನು ಪರಿಚಯಿಸುವ ಪ್ರಯತ್ನ ಈ ಭಾಗದಲ್ಲಿ ಮಾಡಿಕೊಡಲಾಗಿದೆ. ಈ ಭಿತ್ತಿಯ ಮೇಲೆ ಮತ್ತಷ್ಟು ನಿಮ್ಮ ಅನುಭವ ಕಥನಗಳ ಮೂಲಕ ಪ್ರಾಯ (ಹರೆಯ) ವಿಷಯವನ್ನು ವಿದ್ಯಾರ್ಥಿಗಳಿಗೆ ತಲುಪಿಸಿ ಯುವ ಸಮುದಾಯವನ್ನು ಜವಾಬ್ದಾರಿಯುತ ಸತ್ಪ್ರಜೆಗಳನ್ನಾಗಿ ಮಾಡುವಿರೆಂದು ಆಶಿಸುತ್ತೇವೆ.

– ಡಾ. ಬಿ. ಸಿ. ರಾಜಕುಮಾರ್

# ೧. ಕಾವ್ಯ
# ಚಿತ್ರ ಕೆತ್ತಿದ ಕದನ

**– ಪ್ರತಿಭಾ ನಂದಕುಮಾರ್**

ಮೈ ತುಂಬಾ ಹೊದ್ದುಕೊಂಡು ಮನದ ತುಂಬಾ ತುಂಬಿಕೊಂಡದ್ದನ್ನು
ನೋಡದೇ
ಹರಿವ ಗಾಳಿಯಲ್ಲಿ ಹಾರಿಹೋಗುವ ಕೂದಲ ಸೆಳೆ ಕಂಡು

ಚಾಡಿ ಹೇಳುತ್ತಾರೆ ಸಾಕ್ಷಾತ್ ಸಾಕ್ಷಿಯೆನ್ನುವಂತೆ

ಹೇಗೆ ಇಳಿಯಿತು ಧರೆಗೆ ಗ್ರೀಷ್ಮದ ಎಲೆ
ಅದಕ್ಕೆ ಸುತ್ತಿ ಮೆಟ್ಟಿಲೇರುವ ತವಕವಿಲ್ಲ
ಎದುರು ಕೂತವರ ಎದೆಯಲ್ಲಿ ಕಂಪನವಿಲ್ಲ
ಇಲ್ಲಿ ಸೀಳುತ್ತಿದೆ ನೆಲ, ಕುಸಿಯುತ್ತಿದೆ ಪಾತಾಳ

ಮುಂಜಾನೆ ಕಣ್ಣು ತೆರೆದರೆ ದಿನ ಗಾಣದಲ್ಲಿ ದುಡಿದರೆ
ತುತ್ತು ನುಂಗಿದರೆ ಇರುಳು ಮಲಗುವ ಮುನ್ನ ಕಣ್ಣೊಳಗೆ ತುಂಬಿ
ಉಸಿರಿಗೆ ಅಜ್ಞಾಪಿಸಿ ಎದೆ ಬಡಿತಕ್ಕೆ ಕಲಿಸಿ ಹೆಜ್ಜೆಗೆ ನಲಿಯುವ ನಾಟ್ಯ
ಒಲಿದಂತೆ ಹಾಡಿದರೆ ಸರಾಗ ಅರ್ಚಿಸಿದರೆ ಸಹಸ್ರನಾಮ ಒಳಗೆ
ಇಳಿಯುವ ನಿಮ್ಮ ಕಾಣದ ಕಣ್ಣೀರು
ನಕ್ಕರೆ ನಗೆಮುಖದ ನೆನಪು ಆಹಾ ಎಂಥ ಸವಿಮಾತು

ಇನ್ನು ಚಿತ್ರ ತೋರಬೇಕೇ ಸತಿ,
ಚಿತ್ರಪಟದ ರಾವಣನ ಬರೆಯುವ ಸೀತೆ ನೋಡಿಲ್ಲ
ಅವನ ಕಾಲಬೆರಳು ಹೊರತು ಬೇರೇನನ್ನೂ
ಆದರೆ ಮೂಡುತ್ತದೆ ಲೇಖನಿಯಲ್ಲಿ
ಸುಂದರಾಂಗನ ಸೌಂದರ್ಯ, ಹತ್ತು ತಲೆಯ ಮಿದುಳು
ಇನ್ನು ಫ್ರಾಯ್ಡ್‌ನನ್ನೂ ಮೀರಿಸಿದ ಕಾಮನೆಗಳ ಗಂಟು ಕಟ್ಟಿದ
ಸಾಧಕನ ಹಠಯೋಗ ಪ್ರೇತ ನಿಶ್ಚಲ

ಹೇ ಯಾತ್ರಿ ಯಾರು ಕಿವಿ ಊದಿದರು ನನ್ನ ಒಳಾಂಗಣದಲ್ಲಿ
ಮಂಡಲದ ನಾಗವಿದೆಯೆಂದು ಅದರ ಪೂತ್ಕಾರದಲ್ಲಿ ವಿಷವಿದೆಯೆಂದು?
ಅಲ್ಲಿ ಪಾರಿಜಾತದ ಕೇಸರಿ ಬಿಳಿಯೊಳಗೆ ನವಿರು ಗಂಧ
ಮುಟ್ಟಿದರೆ ಮಾಸುವ ಸೂಕ್ಷ್ಮ ಪದರದೊಳಗೆ ಶಿವಧ್ಯಾನ

ನನ್ನ ಕರಸ್ಥಲದಲ್ಲಿ ನೆಲೆಸಿದ ಬಳಿಕ ಎದೆಯೊಳಗೆ ಹಚ್ಚೆಯಾದ ಬಳಿಕ
ಚಿತ್ತದೊಳಗೆ ಚಿತ್ರ ಕೆತ್ತಿದ ಬಳಿಕ ಕಾಲ ಗುರುತಲ್ಲಿ ಕದನ ಸಾರಿ ಬಳಿಕ
ಹೆಣ್ಣು ಗಂಡಲ್ಲ ನಾನು ನೀವು ಕನ್ನಡಿಯೊಳಗೆ ಪ್ರತಿಫಲವಿಲ್ಲದಾಗಿ ಬಯಲಾಗಿ
ಶೂನ್ಯದ ತೆಕ್ಕೆಯಲ್ಲಿ ಹಂಬಲದ ಮಡಿಲಲ್ಲಿ ಕನಸಿನಲ್ಲಿ ಲಲ್ಲೆಮಾತುಗಳಾಗಿ
ನಿಮ್ಮ ಜಾರಿಕೆಯ ಧಾಟಿ ತೋರಿಕೆಯ ಸಾಟಿ ಚುಚ್ಚಿ ಚುಚ್ಚುವ,
ಹರಿದು ನೋಯಿಸುವ
ತುಳಿದು ಸೋಲಿಸುವ ನನ್ನ ಒಳತೊಡೆಯ ಚರ್ಮ ಸುಲಿದು
ಚಪ್ಪಲಿಯ ಮಾಡಿಕೊಳ್ಳುವ
ನಿಮ್ಮ ಪರೀಕ್ಷೆಯ ಮುಗಿಸಿದ್ದರೆ ಇನ್ನು ನಾವು ಉಭಯ ಕುಶಲೋಪರಿ
ಕೇಳಬಹುದೇ
ಕಂಡವರ ಕುಹಕ ಪಕ್ಕಕ್ಕಿಟ್ಟು ಕಣ್ಣಲ್ಲಿ ಕಣ್ಣಿಟು ನೋಡಬಹುದೇ
ಚಿತ್ರ ತೋರಿಸಿ ವಶವಾದನೆನ್ನುವ ಹಂಗಿಲ್ಲದವಳನ್ನು
ಎದೆ ಬಗಿದು ಬಿಚ್ಚಿ ತೋರಿಸೆಂದು ಕೇಳಬಹುದೇ
ಸಾವಿನ ಮನೆಯ ಹೊಸಿಲು ತುಳಿದವಳನ್ನು
ಸಾಸಿವೆಯ ಬೇಡುವರ ತಕ್ಕಡಿಯಲ್ಲಿ ತೂಗಬಹುದೇ

ಕೃಪೆಯ ಒಲೆಯಲ್ಲಿ ಬೇಯಿಸಿ ಗದರಿಕೆಯ ಒರಳಿನಲ್ಲಿ ಆಡಿಸಿ
ಹೇಗೆ ಹಿಂಡುತ್ತೀರಿ ಮತ್ತೆ ಒಳಗಿನ ಪ್ರೀತಿರಸದ ಪರಿವೆಯಿಲ್ಲದ ಪರವಶತೆಯ
ಪರಿಚಯವಿಲ್ಲದೆ ಹೇಗೆ ಸೂಚಿಸುತ್ತೀರಿ ಧ್ಯಾನಿಸು ಪಠಿಸುತ್ತೀರಿ ಪೂಜಿಸು ಕೊನೆಗೆ
ಎಲ್ಲವೂ ವಿಫಲವೆಂದು ನೀರಲ್ಲಿ ಬಿಟ್ಟು ಚಿತೆಯಲ್ಲಿ ಸುಟ್ಟು ಗಾಳಿಯಲ್ಲಿ ವಿಸರ್ಜಿಸಿ
ನಾನು ಸುಮ್ಮನೇ ಹೃದಯ ಹಿಡಿದು ಹಿಡಿಯಲ್ಲಿ
ಚಳಕು ನಡಿಗೆಯಲ್ಲಿ ತುಂಬಿಬರುವ ಕಣ್ಣಲ್ಲಿ ಹೊರನಡೆಯುವಾಗ

ಅವರ ನಾಲಿಗೆಯೇ ಅವರ ಕೊಲ್ಲದಿದ್ದರೆ
ನನ್ನ ಕೊರಳಾಣೆ ನನ್ನ ದೇವನ ಪಾದದಾಣೆ ❑

# ೨. ಕನ್ನಡ ಮೇಘದೂತ

**– ಡಾ. ದ. ರಾ. ಬೇಂದ್ರೆ**

ಬ್ರಹ್ಮ – ಹೃದಯದಲಿ ಜನಿಸಿದಿಚ್ಛೆ ಕೊನೆಗಾಣಲೆಂದು ಬಾಳಿ
ಕಂಡ ಕಡೆಗು ಶತರೂಪೆಯಲ್ಲಿ ಮಧು–ರೂಪ–ರೂಪ ತಾಳಿ ॥
ಜಗದ ತಂದೆ–ತಾಯಿಯರ ಕಂದ ಅವತರಿಸೆ ಜೀವನಾಗಿ
ಬಂತು ಪೂರ್ವದಲಿ, ದೇವ–ಕಾಮವೇ; ಕಾಮ–ದೇವನಾಗಿ ॥

ರತಿಯನಗಲಿಸಿದರಯ್ಯೊ ಪಾಪಿಗಳು ಕಾಮವನ್ನು ರಮಿಸಿ
ಶಿವನ ನೇತ್ರಕಾಹುತಿಯ ಕೊಟ್ಟರೋ ಒಳಿತು ತಪ್ಪ ಕ್ಷಮಿಸಿ ॥
ರತಿಯ ವಿರಹದಲಿ ಬೆಂದ ಕಾಮ; ಎಚ್ಚತ್ತ ಭೂತಪತಿಯು
ಸತಿಯ ಸರ್ವ–ಮಾಂಗಲ್ಯಕಾಗಿ ಅಳಬೇಕೋ, ಪಾಪ ! ರತಿಯು ॥

ವಿರಹಪೂತರತಿ ಜೀವ ಮೂಲಸತಿ ಚಿತ್ತರಂಗದಲ್ಲಿ
ಸಾಂಗವಾಗಿ ಮೈಗೂಡಿಕೊಂಡಳೊ ಆ ಅನಂಗನಲ್ಲಿ ॥
ಋತುವಿನೊಂದು ಪ್ರೇರಣೆಗೆ ಕೂಡುವದು ಬಲ್ಲದೇನು ಪಶುವು?
ಪ್ರೌಢರತಿಯ ಕೈಕೂಸು ಆಗಿ ಬೆಳೆದಿಹುದು ಕಾಮ–ಶಿಶುವು ॥

ತನ್ನ ಕಿಚ್ಚಿನೊಳೆ ಬೆಂಕಿ ಸುಟ್ಟು ಬೆಳಕಾಗಿ ಮಿಂಚಬಹುದು
ಮೂಲ ಕಾಮದಲಿ ವಿರಹ ಬೆಳೆದು ಸುಪ್ರೇಮವರಳಲಹುದು
ಜನ್ಮಜಾತ ಕುತುಕಕ್ಕೆ ರಮ್ಯ ತವನಿಧಿಯ ಹಾಗೆ ಭವ್ಯ
ಸತ್ಯಕಾಗಿ ನೀರಡಿಸಿ ನಿಂತ ಸೌಂದರ್ಯದಂತೆ ದಿವ್ಯ.

ಅನ್ನ ಪ್ರಾಣಗಳ ಮಿಥುನದಂತೆ ಮೈ ಎರಡು ಕಲೆತು ಬೆರೆತು
ಮನದ ಕಾವಿನಲಿ ಕಾಮವಾಗಿ ಮನದಾಚೆಗೇನೋ ಅರಿತು ॥
ಚಿತ್ತದಲ್ಲಿ ನಿಷ್ಕಾಮರತಿಯು ರಸಪಾಕವಾಗಿ ನಿಂತು
ಧಾರೆಗೆಡದೆ ಭಗವಂತನಲ್ಲಿ ಚಿರಭಕ್ತಿಯಾಗಿ ಬಂತು ॥

ಬ್ರಹ್ಮದಿಂದ ಅಗಲಿಸಿತು ಮಾಯೆ ಆ ಬ್ರಹ್ಮಕದುವೆ ಸೇತು
ಬೀಜವೊಡೆಯೆ, ಆ ಬೀಜಪಡೆಯೆ ಬರುವಂತೆ ಬೀಜ ಹೂತು ॥
ಇಹುದು ಎಂದರದು ಅಹುದು ಇದಿರು : ಇದು ಅಲ್ಲವೆಂದರಿಲ್ಲ
ದೇವಮಾಯೆ ಅದರಾಟ ಮಾಟಗಳ ಬಲ್ಲನೊಬ್ಬ ಬಲ್ಲ

ಭಿನ್ನ ದೇಹದಲಿ ಏಕಜೀವ ಕರಗಿ ಮಾಗಿ
ಯಾರೊ ಮೋಹದಲಿ, ಯಾರೊ ಊಹೆಯಲ್ಲಿ, ಯಾರೊ
ಯೋಗಿಯಾಗಿ॥
ಸವಿಯನುಣ್ಣುವರು ಬಾಳನೆಲೆಯ ಬಗೆಬಗೆಯ ಜಾವದಲ್ಲಿ
ಕಾಮಿನೋವಿನಲಿ, ಕವಿಯ ಭಾವದಲಿ, ಭಕ್ತ ಜೀವದಲ್ಲಿ ॥

ಕಾಮತೃಪ್ತಿಯಲಿ ಸ್ನೇಹಸುಪ್ತಿಯಲಿ ಒಬ್ಬ ಮೈಯ್ಯನುಣಿಸೆ
ಭಾವದೀಪ್ತಿಯಲಿ, ಛಂದಮಾಯೆಯಲಿ ಒಬ್ಬ ಮಾತ ಕುಣಿಸೆ ॥
ತನ್ನಜೀವತಾದಾತ್ಮ್ಯ ಹೊಂದದೇ ತಣಿಸಲಾರನೊಬ್ಬ
ಯಾರಿಗೇತರಲಿ ಜೀವ ಅದುವೆ ಸವಿ : ಅವರಿಗದುವೆ ಹಬ್ಬ॥

ಕಾಮಿ ಬಗ್ಗುವನು, ದೇಹಿ ಎಂದು ಮೋಹದಲಿ ಕಾಲಿಗಡಿಸಿ
ಕವಿಯು ಒಗ್ಗುವನು ತನ್ನನಂಗ ಭಾವಕ್ಕೆ ಮಾತುತೊಡಿಸಿ॥
ಭಕ್ತ ಹಿಗ್ಗುವನು ತನ್ನ ಜೀವ ಹಸಮಾಡಿ ದೇವನಾಗಿ
ಒಬ್ಬನೊಲಿಸುತಿಹ ಒಂದೆ ನೂಲಿನಲಿ ಎಲ್ಲ ಕಾವನಾಗಿ ॥

ಮಣ್ಣು–ಹೆಣ್ಣು ಬಾನೊಡೆಯನಿಂದ ಅಗಲಿಹಳನಾದಿಯಿಂದ
ವಿರಹಬವಣೆಯಲಿ ತಿರುಗೆ ತಿರುಗುವಳು ಹೊತ್ತುಸುತ್ತಿನಿಂದ
ಕಣ್ಣನೀರು ಕಡಲಾಗಿ ಕಾದು ಉಗಿಯಾಗಿ ಮೋಡವಾಗಿ
ಎದೆಗೆ ಉದುರೆ ಬಾನಿಂದ, ನವಿರುವಳು ಹೃದಯ ಹಚ್ಚನಾಗಿ ॥

ಮೂರು ಮೈಯ್ಯ ಮುಪ್ಪುರಿಯ ಒಲವು ಕಿಚ್ಚಾಗಿ ಕುಲುಮೆಯಂತೆ
ಕಾಮ ಕಾದು ಉಕ್ಕಿತು ಪ್ರೇಮ, ತಂತನದ ನಲುಮೆಯಂತೆ ॥
ಆಕೆಗಾತ ಮೈ ಉಸಿರು, ಉಸಿರ ಮೈಯಾಗೆ ಆತಗಾಕೆ
ಕನಸುಮನಸಿನಲಿ ಕಾಂತರಾಗೆ ಏಕಾಂತ ಬೇರೆ ಬೇಕೆ ॥

ಮೈಯ ಮಲೆಯ ತಲೆಯಲ್ಲಿ ಎಲ್ಲಿ ಅಸರಂತ ದೇವಲೀಲೆ
ಬೈತಲಂತೆ ಮಿಂಚಾಡೆ ನಡುವೆ, ಹೆಳಲಾಗೆ ಮೇಘಮಾಲೆ ॥
ವಿಂಧ್ಯಶಿಖರದಲೆ ಯಕ್ಷಚಿತ್ತ ಅಲಕೆಯನು ಚಿತ್ರಿಸಿಹುದು
ದೇವಜಾತಿ ಕೆಳಗಿಳಿದರೇನು, ಅದು ಬಾನ ಹತ್ತಿರಿಹುದು ॥

ಈ ಯಕ್ಷನಕ್ಷಿಗಳು ಪಕ್ಷಿಯಂತೆ ಹಾರಿದವು ಗಾಳಿಯಲ್ಲಿ
ಸಿಗಲಿಲ್ಲ ತಾವು ಜಗದಗಲ ಬೀಸಿದಾ ನಯನಜಾಲದಲ್ಲಿ ॥
ಶೃಂಗಾರ–ತೀರ್ಥದಲಿ ಮಿಂದು ಚಿತ್ತ ವೈಧರ್ಭಿ ರೀತಿಯಾಗಿ
ಅಂತೆಯೇ ಬಂತು ಗಾಂಧರ್ವ ಪ್ರೀತಿ ಗಾಂಧರ್ವ ಗೀತಿಯಾಗಿ ॥

ಜಿವವೇಸು ಭವಚಕ್ರ ತಿರುಗಿ ಮರೆತೀತು ಆತ್ಮತತ್ತ್ವ
ಮರ್ತ್ಯಕಿಳಿದರೂ ಯಕ್ಷ ಮುಳುಗುವನೇ? ಒಳಗೆ ದಿವ್ಯಸತ್ತ್ವ॥
ಅಲಕೆಯಲ್ಲಿ ಕೈಲಾಸದೆಡೆಗೆ ತಾ ವಹಿಸಿ ಸಖನ ಚಿಂತೆ
ಸಾಕ್ಷಿಯಾಗಿ ಆ ಯಕ್ಷಿ ತಪಿಸುತಿರೆ ಅಂತರಾತ್ಮನಂತೆ॥

ಮೈಯ್ಯ ಉರಿಗೆ ಬಗೆ ಉಗಿಯು ಹೊತ್ತಿ ನಿಟ್ಟುಸಿರಿನೊಡನೆ ಏರಿ
ಕಣ್ಣು–ಮಂಜು ಕಂಬನಿಯು ತುಂಬಿ ಮುನ್ನೆನಹು ಮಿಂಚು ಸೇರಿ॥
ಗುಡುಗೆ ಗುಡುಗುತಿರೆ ವೈರಿ–ವಿಧಿಯ ಕಾಟಕ್ಕೆ ಎದೆಯು ತಾನು
ವಿರಹಿ ಹೃದಯದುದ್ಗಾರಸಾರವೇ ಮೇಘವಲ್ಲದೇನು? ॥

❑

# ೩. ಕಥೆ
# ದಾಹ

**– ಪಿ. ಲಂಕೇಶ್**

“ನನಗೆ ಏನು ಹೇಳಬೇಕೆಂಬುದೇ ಗೊತ್ತಾಗುತ್ತಿಲ್ಲ. ಎಲ್ಲರೂ ಸತ್ತಾಗ ಹೇಳುವಂತೆ ಅಯ್ಯೋ ಅನ್ನಲಿಕ್ಕಾಗಲಿ, ಅಳುವುದಕ್ಕಾಗಲಿ ಆಗುತ್ತಿಲ್ಲ. ನಾನು ಅಳುವುದನ್ನು ನೋಡಿದ್ದರೆ ಸರೋಜಮ್ಮ ನಕ್ಕು ’ಛೆ ಸುಮ್ನಿರಿ, ನೀವು ಅತ್ತರೆ ಚೆನ್ನಾಗಿ ಕಾಣಲ್ಲ’ ಅನ್ನುತ್ತಿದ್ದರು. ಸರೋಜಮ್ಮ ನಿಮ್ಮ ಪತ್ನಿ ಮಾತ್ರ ಆಗಿರಲಿಲ್ಲ; ಗೆಳತಿಯೂ ಆಗಿದ್ದರು. ಮಾತನ್ನು ಮೀರಿದ ಸ್ನೇಹ ನಿಮ್ಮದಾಗಿತ್ತು. ನಮ್ಮ ಮನೆಯೆದುರು ಹೊತ್ತು ಮೂಡುವುದಕ್ಕೆ ಮುಂಚೆ ಮಂಜಿನಲ್ಲಿ, ಮಬ್ಬಿನಲ್ಲಿ, ನಸುಗತ್ತಲಲ್ಲಿ, ಜಡಿ ಮಳೆಯಲ್ಲಿ ನೀವಿಬ್ಬರೂ ನಡೆದು ಬರುವುದನ್ನು ನೋಡಿ ಸ್ನೇಹವೆಂದರೆ ಹೀಗಿರಬೇಕು ಎಂದುಕೊಳ್ಳುತ್ತಿದ್ದೆವು. ಸತ್ತರೆ, ಅಕಾಲ ಮೃತ್ಯುವಿಗೆ ಈಡಾದರೆ ಹೇಳುವುದಕ್ಕೆ ಮಾತುಗಳೆಲ್ಲಿ? ಸಾವಿನ ಬಗ್ಗೆ ಹೇಳುವುದಕ್ಕೆ ಮಾತುಗಳೆಲ್ಲಿ? ಸಾವಿನ ಬಗ್ಗೆ ಹೇಳುವುದಕ್ಕೆ ಮನುಷ್ಯರಲ್ಲಿ ಏನು ಉಳಿದಿದೆ?”

ಹೀಗೆ ಹೇಳುತ್ತಲೇ ಇದ್ದ ನಾಗರಾಜ

’ಕೂತ್ಕೋ’ ಅಂದೆ, ಕೂಡಲೆ ನೆನಪಾಯಿತು, ಕೂತ್ಕೊಳ್ಳಿ ಅನ್ನಬೇಕಾಗಿತ್ತು. ಯಾಕೆಂದರೆ ಈ ನಾಗರಾಜನನ್ನು ನಾನೆಂದೂ ಏಕವಚನದಲ್ಲಿ ಕರೆದಿರಲಿಲ್ಲ. ಅವನು ನನ್ನ ಕುಟುಂಬವನ್ನು ಚೆನ್ನಾಗಿ ಬಲ್ಲವನಂತೆ ಆತ್ಮೀಯವಾಗಿ, ಪ್ರೀತಿಯಿಂದ ಮಾತಾಡಿದ್ದರಿಂದ ಹಾಗೆ ಏಕವಚನ ತಾನಾಗಿಯೇ ಬಂದಿತ್ತು. ಒಳ್ಳೆಯವನು, ಈತ ಅರಣ್ಯ ಇಲಾಖೆಯಲ್ಲಿ ಅಧಿಕಾರಿಯಾಗಿದ್ದರು ಲಂಚ ತಿಂದಿರುವ ಪುಕಾರುಗಳಿದ್ದರೂ ಈತನ ಮೊದ್ದುತನ, ಗೊತ್ತಿಲ್ಲದ್ದನ್ನು ಹೇಗೋ ಹೇಳಿಬಿಡುವ ಚಾಲೂಕಿನಿಂದ ನನಗೆ ಅನೇಕ ಸಲ ವಿಸ್ಮಯವಾಗಿತ್ತು, ನಾನು ಹೇಳಿದೆ;

“ನಾನವತ್ತು ನನ್ನ ಕಛೇರಿಯಿಂದ ಬೇಗ ಬಂದೆ. ದಿನವೆಲ್ಲ ಫೈಲುಗಳು, ತರಲೆ ಸಹಾಯಕರ ಕನ್‌ಫ್ಯೂಶನ್‌ಗಳು, ಮೇಲಧಿಕಾರಿ ಚೆನ್ನಪ್ಪನ ವಿಚಿತ್ರ

ಅನುಮಾನಗಳಿಂದ ತಲೆನೋವು ಬಂದಿತ್ತು. ಇವೆಲ್ಲ ಸಾಲದೆಂಬಂತೆ ಸಾರ್ವಜನಿಕರ ಉದ್ಧಟತನ, ಸಲ್ಲದ ಕತೆ ಹೇಳಿಕೊಂಡು ಬಂದು ಅನುಮಾನದಿಂದಲೇ ಎತ್ತುವ ಮಾತುಗಳು; ಕೈಬಿಸಿ ಮಾಡುವುದಕ್ಕೆಂದು ಸುತ್ತಿಬಳಸೀ ಆಡುವ ಮಾತುಗಳು.. ಕೆಲವೊಮ್ಮೆ ನಗೆ ಬರುತ್ತದೆ... ಅವತ್ತು ಬೇಗ ಬಂದೆ. ಗೇಟಿನ ಹತ್ತಿರ ಬರ್ತಿದ್ದೆ ಹಾಗೆ ಚೀತ್ಕಾರ ಕೇಳಿಸಿತು. ಸರೋಜ ಕಂಠ. ದಿಗಿಲಿನಿಂದ ಓಡಿಹೋಗಿ ಬಾಗಿಲು ಬಡಿದೆ; ದೊಡ್ಡ ಅಳು, ಬೆಂಕಿ ಸುಟ್ಟ ವಾಸನೆ, ಬಾಗಿಲಿಗೆ ಜೋರಾಗಿ ಒದ್ದೆ. ಅಗಳಿ ಹಾಕಿರಲಿಲ್ಲ. ಉರಿಯುವ ಬಟ್ಟೆಯೊಂದಿಗೆ ಕಮರಿ ಬಿದ್ದಿದ್ದಳು. ಪಕ್ಕದ ಮನೆಯವರನ್ನು ಕೂಗಿದೆ, ಕೆಲಸದ ಹುಡುಗಿ ಓಡಿಬಂದಳು. ಇನ್ನೊಂದು ಪಕ್ಕದಿಂದ ಮಣಿ ಬಂದರು. ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿ ಜೀವ ಹೊರಟುಹೋಗಿತ್ತು. ಕೂಡಲೆ ಮಗಳು ಶಾಂತಿಗೆ ಫೋನ್ ಮಾಡಿದೆ. ಆಗಬಾರದ್ದು ಆಗಿಹೋಗಿತ್ತು. ಮಗಳಿಗೆ ಯಾವ ಮಾತಲ್ಲಿ ತಿಳಿಸದೆ ಎನ್ನುವುದೇ ಮರೆತುಹೋಗಿದೆ”.

ಅಷ್ಟರಲ್ಲಿ ನಾಗರಾಜನ ಜೊತೆಯಲ್ಲಿ ನಾಲ್ವರು ಕೂತಿದ್ದರು. ಅವರಲ್ಲಿ ಒಬ್ಬ ಗೋಪಾಲ; ನನ್ನ ಜೊತೆಯಲ್ಲಿ ಕಾಲೇಜಿನಲ್ಲಿ ನಾಟಕಗಳಲ್ಲಿ ಪಾರ್ಟು ಮಾಡುತ್ತಿದ್ದವನು. ಈಗ ಅದ್ಯಾವುದೋ ಜಾಹೀರಾತು ಕಂಪನಿಯಲ್ಲಿ ಡಿಸೈನರ್, ಇನ್ನೊಬ್ಬ ನಮ್ಮ ಆಫೀಸಿನ ಕೇಸ್‌ವರ್ಕರ್ ರಾಮಯ್ಯ. ಇನ್ನೊಂದು ವ್ಯಕ್ತಿ ನಮ್ಮ ಟೈಪಿಸ್ಟ್ ಮೀರಾ, ಆಕೆಯ ಜೊತೆಯಲ್ಲಿದ್ದವಳು ಯಾರೆಂದು ಗೊತ್ತಿರಲಿಲ್ಲ.

“ಇವರು ಹೆಸರು ಪದ್ಮಾ ಸಾರ್. ಚೆನ್ನಪಟ್ಟಣದ ಹೈಸ್ಕೂಲಲ್ಲಿ ಟೀಚರ್ ಆಗಿದ್ದಾರೆ”

“ಯಾವ ಸಬ್ಜೆಕ್ಟ್ ಟೀಚ್ ಮಾಡ್ತೀರಾ?”

“ಕನ್ನಡ, ಇಂಗ್ಲಿಷ್ ಸಾರ್”,

ಆಕೆ ಕೂಡ ನನ್ನ ಹೆಂಡತಿಯ ಸಾವಿನಿಂದ ತುಂಬ ನೊಂದಿರುವವಳಂತೆ ಕೂತಿದ್ದಳು. ನೋಡಲು ಚೆನ್ನಾಗಿದ್ದ ಹುಡುಗಿ ಉದ್ದಕ್ಕೆ ಮುಖಮಾಡಿಕೊಂಡು ನನ್ನ ದುರಂತವವನ್ನೆಲ್ಲ ಹೊತ್ತವಳಂತೆ

ಕಾಣುವುದನ್ನು ನೋಡಿ ನಗೆಬಂತು. ಮತ್ತೆ ಅವಳ ಮುಖ ನೋಡಿದೆ. ನನ್ನನ್ನು ನೋಡುತ್ತಿದ್ದವಳು ನೆಲಕ್ಕೆ ಕಣ್ಣು ತಿರುಗಿಸಿ ಕೂತಳು; ಅವಳ ಕಣ್ಣಲ್ಲಿ ನೀರು ಬಂದಂತಿತ್ತು. ಅವಳು ತೀರಾ ಮೋಜಾಗಿ ಕಾಣಿಸತೊಡಗಿದಳು. ಆಕೆ ಯಾವುದೋ ಕೆಲಸಕ್ಕೆ ಬಂದಿರುವುದು ನನಗೆ ಗೊತ್ತಿತ್ತು; ವರ್ಗಾ ಇರಬಹುದು, ಯಾವುದಾದರೂ ದೂರು ಇರಬಹುದು, ಬಾಯಿಗೆ ಬಂದ ಪ್ರಶ್ನೆ ಹಾಗೇ ಉಳಿಸಿಕೊಂಡೆ. ಮೀರಾ ನನ್ನ ಸರೋಜಾ ಬಗ್ಗೆ ಮಾತಾಡುತ್ತಿದ್ದಳು.

ನಾಗರಾಜ ಏಳುವಂತೆ ಕಾಣಲಿಲ್ಲ. ಪದ್ಮಾ ಕೂಡ ತನ್ನ ವರ್ಗ, ದೂರು ಇತ್ಯಾದಿ ವಿಚಾರ ಎತ್ತಲಿಲ್ಲ.

ನನ್ನ ಮೇಲಧಿಕಾರಿ ಚೆನ್ನಪ್ಪ ನನ್ನ ಗೋಳಿನ ಕತೆಯನ್ನು ಕೇಳಿ ಕರೆಸಿಕೊಂಡ, ನಾನು ರಜೆ ಹಾಕಿದ್ದರೂ ಹೋದೆ. “ಅಲ್ರಿ ಬಸು, ಇಂಥ ಒಂದು ಟ್ರಾಜಿಡಿ ಆದ ಕೂಡ್ಲೆ ನನಗೆ ನನಗೆ ತಿಳಿಸಬೇಡ್ವೇನ್ರಿ, ಪೋಸ್ಟ್‌ಮಾರ್ಟಂ ಮುಂತಾದ ರಗಳೆಯೆಲ್ಲ ಸಲೀಸಾಗಿ ಮುಗೀತಲ್ಲ ಸದ್ಯ. ನಿಮ್ಮ ಮಗಳು ತುಂಬ ಸಂಕಟಪಟ್ಟುಕೊಂಡಿರಬೇಕಲ್ಲ? ಏನಾಯ್ತು ನಿಜ ಹೇಳಿ–ನೀವು ನೋಡಿದಾಗ ಇನ್ನೂ ಜೀವ ಇತ್ತ?”

“ಜೀವ ಇತ್ತು , ನನ್ನನ್ನೇ ನೋಡ್ತಾ ಇದ್ಲು. ಮೈಯಲ್ಲ ಸುಟ್ಟುಹೋಗಿತ್ತು. ಉಳಿದುಕೊಳ್ಳಬಹುದು ಅಂತ ಆಸ್ಪತ್ರೆಗೆ ತೆಗೆದುಕೊಂಡು ಹೋದ್ವಿ. ಆದರೆ ದಾರಿಯಲ್ಲೇ ಸತ್ತುಹೋದ್ಲು.”

“ಅಡಿಗೆ ಮಾಡುವಾಗ ಬೆಂಕಿ ಹತ್ತಿಕೊಂಡಿರಬಹುದೆ?”

“ಹೌದು, ಚಪಾತಿ ಹಂಚಿನ ಮೇಲೇ ಇತ್ತು–ಗ್ಯಾಸ್ ಉರೀತಾನೆ ಇತ್ತು” ಅಂದೆ.

ಸಣ್ಣ ಮನುಷ್ಯ ಚೆನ್ನಪ್ಪ. ಅಂದ, “ತುಂಬ ಕಷ್ಟ ಕಂಡ್ರಿ. ಎರಡು ವರ್ಷದಲ್ಲಿ ಎರಡು ವರ್ಷದಲ್ಲಿ ಎರಡು ಬರ್ನಿಂಗ್ ಕೇಸ್‌ಗಳು–ನಮ್ಮ ಆಫೀಸಿಗೆ ಸಂಬಂಧಿಸಿದ ಕೇಸ್‌ಗಳು. ಆ ಸೆಲ್ವಿಯಾ ಮನೆಯವರ ಸುದ್ದಿ ಏನಾದ್ರೂ ಗೊತ್ತಾಯ್ತಾ.”

“ಏನೂ ಗೊತ್ತಾಗ್ತಿಲ್ಲ ಸಾರ್” ಅಂದೆ.

ಅವತ್ತು ಬೆಳಿಗ್ಗೆ ಬೇಗ ಎದ್ದೆ ಮಾರ್ಚ್ ತಿಂಗಳ ಶುಭ್ರ ಬೆಳಗು. ಆಗತಾನೆ ಹೊತ್ತು ಮೂಡಿತ್ತು. ಚಳಿಗಾಲದ ಜೊತೆಗೇ ಹೊರಟುಹೋಗಿದ್ದ ಮಂಜು ತನ್ನ ಗುಂಗುರುಗಳನ್ನು ಮಾತ್ರ ಆಕಾಶದ ಅಂಚಿನಲ್ಲಿ ಬಿಟ್ಟುಹೋಗಿತ್ತು. ದಿನಪತ್ರಿಕೆಗಳು ಕೂಡ ನೆನಪಾಗಲಿಲ್ಲ. ಮನೆಯೆದುರಿನ ತೋಟದಲ್ಲಿ ಅಡ್ಡಾಡತೊಡಗಿದೆ. ಕಳೆದ ಒಂದು ವಾರವೆಲ್ಲ ನಡೆದದ್ದು ಕ್ರಮೇಣ ನೆನಪಾಗತೊಡಗಿತು. ಮಗಳು ಶಾಂತಿ ಗಂಡನ ಮನೆಗೆ ಮೈಸೂರಿಗೆ ಹೊರಟುಹೋಗಿದ್ದಳು. ಅವಳು ಒಮ್ಮೆಯೂ ತನ್ನ ಸರೋಜಗಳಿಗಾದದ್ದರ ವಿವರ ಕೇಳಿರಲಿಲ್ಲ. ಅದು ಸ್ವಲ್ಪ ಆತಂಕ ಮೂಡಿಸಿದ್ದರು ಕಿರಿಕಿರಿಯನ್ನೇನೂ ಉಂಟು ಮಾಡಿರಲಿಲ್ಲ. ಆದರೆ ನನ್ನನ್ನ ಬಲ್ಲ ಎಲ್ಲರೂ ನನ್ನ ನೋವಿನ ಬಗ್ಗೆ ಕೇಳುತ್ತ, ಸಂತಾಪ ಸೂಚಿಸುತ್ತ ನನ್ನಲ್ಲಿ ವಿಚಿತ್ರ ಅಳುಕು ಮೂಡಿಸಿದ್ದರು. ನನಗಿಂತಲೂ ನನ್ನ ದುರಂತ ಕೇಳಿದವರಲ್ಲೇ ಹೆಚ್ಚು ದುಗುಡ ಇದ್ದರು ಕಂಡು ನನ್ನ ನಾಲಗೆ ಸಡಿಲಗೊಂಡಿತು. ಸರೋಜಗಳಿಗೆ ಬೆಂಕಿ ಹತ್ತಿಕೊಂಡ ಬೆಳಿಗ್ಗೆ ನಾವು ಮಾತಾಡಿದ್ದನ್ನು ಹೇಳಿದೆ; ಸರೋಜ ಅದೇಕೋ ಅವತ್ತು ನಮ್ಮ ಸಂಸಾರವನ್ನು ನೆನಸಿಕೊಂಡಿದ್ದಳು; ಶಾಂತಿ ಚಿಕ್ಕವಳಿದ್ದಾಗ ಗಿಡಗಳಿಗೆ ನೀರು ಹಾಕುತ್ತಿದ್ದುದನ್ನು, ನೀರು ಕೂಡ ಸರಿಯಾಗಿ ದೊರೆಯದ ಪುಟ್ಟ ಬಾಡಿಗೆ ಮನೆಯಲ್ಲಿದ್ದುದನ್ನು, ಪ್ರತಿ ತಿಂಗಳು ಇಪ್ಪತ್ತನೆ ತಾರೀಖಿನಿಂದ ಕಾಫಿಪುಡಿಗೆ ಚಿಲ್ಲರೆ ಕೂಡ ಇಲ್ಲದಿದ್ದುದನ್ನು ನೆನಸಿಕೊಂಡು ನಕ್ಕಳು. ಈ ಸಲದ ರಜೆಯಲ್ಲಿ ಇಬ್ಬರೂ ಶಾಂತಿಯನ್ನು ಕರೆದುಕೊಂಡು ಕನಿಷ್ಠ ಶ್ರೀರಂಗಪಟ್ಟಣದ ಹತ್ತಿರದ ರಂಗನತಿಟ್ಟಿಗೆ ಹೋಗಬೇಕೆಂದು ಹೇಳಿದಳು. ಇವನ್ನೆಲ್ಲ ಸಂತಾಪಕರಿಗೆ ಹೇಳಿದ್ದೆ. ಹೇಳುತ್ತ ಹೇಳುತ್ತ ನಿಜಕ್ಕೂ ಸರೋಜ ಹೇಳಿದ್ದೇನು, ನಾನು ಕಲ್ಪಿಸಿಕೊಂಡು ಹೇಳುತ್ತಿದ್ದುದೇನು ಎಂಬುದನ್ನೆ ಮರೆತು ಹೇಳತೊಡಗಿದೆ, ಕೇಳುವವರ ಮನಸ್ಸು ಇನ್ನೂ ಕರಗಿತು. ಆದರೆ ನಾನು ಹೇಳಿದ್ದರಲ್ಲಿ ಸುಳ್ಳು ಇದ್ದಂತಿರಲಿಲ್ಲ; ನಮ್ಮ ಸಂಸಾರದ ಒಟ್ಟಾರೆ ಧೋರಣೆಗೆ ಹೊಂದಿಕೊಳ್ಳುವಂತೇ ಇತ್ತು. ನನ್ನ ಸಹಪಾಠಗಳಾಗಿದ್ದವರು ನನ್ನೊಂದಿಗೆ ಶಿಕ್ಷಣ ಇಲಾಖೆಯಲ್ಲಿ ಧಾರವಾಡ, ರಾಯಚೂರುಗಳಲ್ಲಿ ಕೆಲಸ ಮಾಡಿದ್ದವರು ಬಂದರು. ಅವರಿಗೆ ನನ್ನನ್ನು ನೋಡುವ ಅವಕಾಶ. ಹಳೆಯದನ್ನು ನೆನೆದುಕೊಳ್ಳುವ ಆಶೆ. ಮೇಲಾಧಿಕಾರಿಯಾದ ನನ್ನಲ್ಲಿ ಒಳ್ಳೆಯ ಭಾವನೆ ಹುಟ್ಟಿಸುವ ಗೀಳುಗಳೆಲ್ಲ ಇದ್ದವು. ಅವರಲ್ಲಿ ನನ್ನ ಸರೋಜಳ ಒಳ್ಳೆಯ ಗುಣಗಳನೆಲ್ಲ ಚರ್ಚಿಸಿದೆ, ಇಪ್ಪತ್ತು ವರ್ಷಗಳ ನಮ್ಮ ಸಂಸಾರದಲ್ಲಿ ಆಕೆ ಹೇಗೆ ತನ್ನ ಮನಸ್ಸು ತಿಳಿದುಕೊಳ್ಳುತ್ತಿದ್ದಳು. ನಮ್ಮಿಬ್ಬರ ಬದುಕು ಹೇಗೆ ಪರಸ್ಪರ ಅವಲಂಬಿಸಿತ್ತು ಎಂದು ವರ್ಣಿಸಿದೆ. ಧಾರವಾಡದ ಹತ್ತಿರದ ಶ್ರೀಮಂತ ಕುಟುಂಬದ ಸರೋಜಳ ನಿಷ್ಠುರತೆ, ಪ್ರಾಮಾಣಿಕತೆ, ಮಾನವೀಯತೆಯನ್ನೆಲ್ಲ ಹೇಳಿದೆ.

ಯಾಕೆ ಹಾಗೆ ಹೇಳುತ್ತಿದ್ದೆ ಎಂದು ಕೇಳಿಕೊಳ್ಳುವ ತಂಟೆಗೆ ಹೋಗದಿದ್ದುದು ನೆಮ್ಮದಿ ತಂದಿತ್ತು; ಈ ನೆಮ್ಮದಿಯೇ ನಗೆ ತಂದಿತ್ತು. ವ್ಯಂಗ್ಯವನ್ನು ಕೂಡ.

ಬೆಳಗು ಬಲಿಯುತ್ತಿದ್ದ ಸಮಯ. ದೂರದಲ್ಲಿ ಸುಂದರ ಹೆಣ್ಣೊಬ್ಬಳು ರಸ್ತೆಯಲ್ಲಿ ನಡೆದು ಬರುತ್ತಿದ್ದುದು ಕಾಣಿಸಿತು. ಕ್ರಮೇಣ ಆಕೆ ನಮ್ಮ ಟೈಪಿಸ್ಟ್ ಮೀರಾ ಜೊತೆಗೆ ಬಂದಿದ್ದ ಟೀಚರ್ ಪದ್ಮ ಎಂದು ಗೊತ್ತಾಯಿತು. ಆಕೆ ನಡೆಯುವುದನ್ನು ನಾನು ನೋಡಿರಲಿಲ್ಲ; ಹೆಣ್ಣಿನ ಅರ್ಧ ಸೌಂದರ್ಯ ಆಕೆಯ ನಡಿಗೆಯಲ್ಲಿ, ಎಂದುಕೊಂಡೆ. ಆಕೆಯ ನಡತೆಯಲ್ಲಿ ಎನ್ನುವ ವಯಸ್ಸಲ್ಲವೇ– ಎಂದು ನೋಡಿದೆ. ಹತ್ತಿರ ಬಂದಿದ್ದಳು. ಆಕೆ ಎಲ್ಲಿಗೋ ಹೋಗುತ್ತಿರಬಹುದು ಎಂದು ಬೇರೆ ಕಡೆಗೆ ತಿರುಗಿ ನೋಡತೊಡಗಿದೆ. ಆದರೆ ಪದ್ಮ 'ನಮಸ್ಕಾರ ಸರ್' ಎಂದು ಗೇಟಿನ ಬಾಗಿಲು ತೆಗೆದು ಒಳಬಂದಳು. ಬೆಳಗಿನ ಹೊಳಪಿನಲ್ಲಿ ಅವಳ ಮುಖ ಗಂಭೀರವಾಗಿ, ಅಂದವಾಗಿತ್ತು. ಆಗತಾನೆ ಸ್ನಾನ ಮಾಡಿದಂತಿದ್ದ ಆಕೆಯ ಮೈ ಸಂತೋಷ ಉಡ್ಕಸುತ್ತಿತ್ತು. ಅವಳ ಮನಸ್ಸು ಪ್ರಶಾಂತವಾದಂತಿತ್ತು. 'ನಮಸ್ಕಾರ ಬನ್ನಿ, ಏನು ವಿಶೇಷ?" ಎಂದೆನಾದರೂ ಆಕೆ ಇವತ್ತು ಖಂಡಿತವಾಗಿಯೂ ತನ್ನ ವರ್ಗ, ಬಡ್ತಿಯ ವಿಚಾರಕ್ಕಾಗಿಯೇ ಬಂದಿದ್ದಾಳೆಂದು ನನ್ನ ಮನಸ್ಸು ಎಚ್ಚರಿಸತೊಡಗಿತು.

"ನನ್ನ ಅಮ್ಮನಿಗೆ ನಿಮ್ಮ ವೈಫ್ ತುಂಬ ಗೊತ್ತಂತೆ ಸಾರ್; ಸರೋಜ ಬಗ್ಗೆ ಬಹಳ ಹೇಳ್ತಿದ್ದರು. ನಿಮ್ಮನ್ನು ಮತ್ತೊಮ್ಮೆ ನೋಡಬೇಕೆನ್ನಿಸಿತು, ಬಂದೆ. ನಿಮಗೆ ತುಂಬ ತೊಂದರೆ ಆಯಿತ?" ಅಂದಳು.

ಅವಳ ಮಾತಿನ ಧಾಟಿಯಿಂದ ನನ್ನ ಮನಸ್ಸಿನಲ್ಲಿ ಅನುಮಾನ ಗಳನ್ನಿಟ್ಟುಕೊಳ್ಳುವುದು ಸಣ್ಣತನವೆನ್ನಿಸಿ "ನೀವು ವರ್ಗಾಗಿರ್ಗಾ ಅಂತ ಒಳ ಉದ್ದೇಶದಿಂದ ಬಂದಿಲ್ಲ ಅಲ್ಲವಾ?" ಅಂದೆ.

ಅವಳು ತಲೆಯಲ್ಲಾಡಿಸಿ ನಿರಾಕರಿಸಿದಳು.

ಅಷ್ಟರಲ್ಲಿ ಒಳಗಡೆ ಇದ್ದೆವು. ಪದ್ಮಾಳ ಗಾಂಭೀರ್ಯ, ಅನುಕಂಪೆ ಕಂಡು ಕರಗಿಹೋದೆ. "ನಾನು ನಿಮಗೆ ಕಾಫಿ ಮಾಡಬಹುದಾ? ನಿಮ್ಮ ಕೆಲಸದವಳು ಇನ್ನೂ ಬಂದಿಲ್ಲ ಅಲ್ಲವಾ?" ಎಂದು ಕಾಫಿ ಮಾಡಲು ಎದ್ದೇಬಿಟ್ಟಳು, ಬೇಡ ಅನ್ನಲಾರದೆ ಅವಳನ್ನೇ ನೋಡುತ್ತಾ ಕೂತೆ.

"ಪದ್ಮ. ನಾನು ಮಾತಾಡ್ತೇನೆ. ತುಂಬ ಬೋರಾದ್ರೆ ಸಾಕು ಅಂತ ಹೇಳು" ಎಂದು ಸಣ್ಣ ಧ್ವನಿಯಲ್ಲಿ ಹೇಳಿದೆ.

"ಏನಂದ್ರಿ?" ಅಂದಳು.

"ಏನಿಲ್ಲ " ಎಂದು, "ಬಾ ಇಲ್ಲಿ ಪದ್ಮ. ಕಾಫಿ ಮಾಡೋದು ಬೇಡಾ, ನಾನು ಹೊರಗಡೆ ಹೋಗಿ ಬಹಳ ದಿನ ಆಯಿತು. ಬಂದವರೊಂದಿಗೆ ಬರೀ ಮಾತಾಡೋದೆ ಆಗಿದೆ. ಇವತ್ತು ನನ್ನ ಕಾರಲ್ಲಿ ಸುತ್ತಾಡಲು ಹೋಗೋಣ" ಅಂದೆ.

ಪದ್ಮಾ ಬೇಡ ಅನ್ನಲಿಲ್ಲ. ಇವಳಲ್ಲಿ ನಾನು ವಿಶ್ವಾಸ ಮೂಡಿಸಿದ್ದೆನೆ? ಅಥವಾ ನನ್ನ ನೋವಿನ ಅಧ್ಯಾಯ ಇವಳಲ್ಲಿ ನನ್ನ ಬಗ್ಗೆ ಅನುಕಂಪೆಯೊಂದಿಗೆ ವಿಶ್ವಾಸವನ್ನೂ ಮೂಡಿಸಿತ್ತೆ? ಈಕೆ ಯಾವ ಬಗೆಯ ಹುಡುಗಿ? ಟೈಪಿಸ್ಟ್ ಮೀರಾ ಜೊತೆಗೆ ಬಂದ ಈಕೆ ಒಬ್ಬಳೇ ಬಂದು ನನಗೆ ಸಮಾಧಾನ ತರಲು, ಸಾಂತ್ವನಗೊಳಿಸಲು ಕಾರಣವಾದದ್ದು ಯಾವ ಬಗೆಯ ಕುತೂಹಲ?

"ಪದ್ಮಾ, ನನ್ನ ಮಗಳು ಶಾಂತಿ ತನ್ನ ತಾಯಿ ತೀರಿಕೊಂಡ ಕೂಡ್ಲೆ ಬಂದು ಐದು ದಿನ ಇದ್ದಳು. ಒಂದು ದಿನವೂ ಹೆಚ್ಚು ಮಾತಾಡಲಿಲ್ಲ. ಆಕೆ ನನ್ನನ್ನು ಟೀಕಿಸಿದ್ದಾರೆ. ಕನಿಷ್ಠ ತಾನು ಬಲ್ಲ ಸಂಗತಿಗಳ ಆಧಾರದ ಮೇಲೆ ನನ್ನನ್ನು ಬೈದಿದ್ದರೆ ನನಗೆ ನೆಮ್ಮದಿಯಾಗ್ತಿತ್ತು" ಅಂದೆ. ಪದ್ಮಾ ಕೇಳುತ್ತ, ನನ್ನತ್ತ ನೋಡಿದಳು. ತನ್ನ ಗ್ರಹಿಕೆಯನ್ನು ಮೀರಿದ್ದು ತನ್ನನ್ನು ಎದುರಿಸುತ್ತಿದ್ದುದು ಆಕೆಯಲ್ಲಿ ಆತಂಕ ಮೂಡಿಸಿರಬಹುದು; ಬೆಚ್ಚಿಬೀಳಿಸಿರಬಹುದು, ಆದ್ದರಿಂದ ನಕ್ಕು ಅವಳನ್ನು ಅನಗತ್ಯವಾಗಿ ಕಲಕಲಾರದ ವಿಷಯ ಹೇಳತೊಡಗಿದೆ; ನಾನು ಮತ್ತು ಸರೋಜ ನಡೆಸಿದ ಸಂಸಾರ ಎಲ್ಲರ ಸಂಸಾರದಂತೆಯೇ ಇತ್ತು. ಆದರೆ ಸರೋಜ ವಿಚಿತ್ರ ಗಾಂಭೀರ್ಯದ ಹುಡುಗಿಯಾಗಿದ್ದಳು. ನಾನು ಹುಡುಗುಡುಗಾಗಿ ಇರುತ್ತಿದ್ದೆ. ಮದುವೆಯಾದ ಹೊಸದರಲ್ಲಿ ಅವಳೆದುರು ಕುಣಿದುಕುಪ್ಪಳಿಸುತ್ತಿದ್ದೆ. ಪ್ರೇಮಕ್ಕೆ ಹೋಲಿಸಿದರೆ ಮದುವೆಯ ಬೇಸರ, ನಿರರ್ಥಕತೆಯನ್ನು ಕುರಿತು ಅವಳೆದುರು ಚೀರುತ್ತಿದ್ದೆ. ಅವಳು ಅದರಿಂದ ಅಪ್ಸೆಟ್ ಆಗುತ್ತಿರಲಿಲ್ಲ; ತನ್ನ ಸ್ಮಿತದ, ಸಿಹಿಯಾದ ನಗೆ ನಕ್ಕು ಸುಮ್ಮನಾಗುತ್ತಿದ್ದಳು. ಅವಳು ಹಾಗೆ ನಕ್ಕಾಗ ನನ್ನ ಸಂಸಾರದ

ಗಾಂಭೀರ್ಯ, ಆಳವಾದ ಪ್ರೀತಿ ಕಂಡು ಹೆಮ್ಮೆಪಡುತ್ತಿದ್ದೆ. ಆಗ ನನಗೆ ಬರುತ್ತಿದ್ದುದು ಇನ್ನೂರೈವತ್ತು ರೂಪಾಯಿ ಸಂಬಳವಾದರೂ ನನ್ನ ಶ್ರೇಷ್ಠತೆಯ ಬಗ್ಗೆ ಹೆಮ್ಮೆಪಡುತ್ತಿದ್ದೆ. ಶಾಂತಿ ಹುಟ್ಟಿದಾಗ ಎಷ್ಟು ಖುಷಿಯಾಗಿತ್ತು! ಅವಳು ಸ್ಕೂಲಿಗೆ ಸೇರಿದಳು. ಪುಟ್ಟ ಹುಡುಗಿ, ನಮ್ಮ ದೃಷ್ಟಿಯಲ್ಲಿ ವಿಶ್ವಸುಂದರಿ, ಅತ್ಯುತ್ತಮ ಹುಡುಗಿ ಆಕೆ. ಒಂದು ದಿನ ಆಕೆ ತಾನು ಸ್ಕೂಲಲ್ಲಿ ಓಟದ ಸ್ಪರ್ಧೆಯಲ್ಲಿ ಭಾಗವಹಿಸುವುದಾಗಿ ಹೇಳಿ ನಾವಿಬ್ಬರೂ ಬರಲೇಬೇಕೆಂದು ಹಟ ಹಿಡಿದಳು. ಆಕೆ ಹೇಳುವುದನ್ನು ನೋಡಿದರೆ ಓಟದಲ್ಲಿ ಗೆಲ್ಲುವುದಾಗಿ ತಿಳಿದುಹೋದೆವು. ಆಕೆ ಓಟದಲ್ಲಿ ಕೊನೆಯವಳಾಗಿ ಬಂದಳು. ನಾನು ನೋವಿನಿಂದ ನಕ್ಕು ಬದುಕಿನ ವಾಸ್ತವತೆಯ ಬಗ್ಗೆ, ಈ ಜಗತ್ತಿನಲ್ಲಿರುವ ಎಲ್ಲ ತಂದೆ ತಾಯಿಯರ ಭ್ರಮೆಯ ಬಗ್ಗೆ ಯೋಚಿಸಿದೆ..."

"ಇದೆಲ್ಲ ಯಾಕೆ ಹೇಳ್ತೀರಿ?" ಎಂದು ನನ್ನ ಮಾತು ಮೆಚ್ಚುತ್ತಲೇ ತಮಾಷೆಯಾಗಿ ಮಾತಾಡಿದಳು ಪದ್ಮಾ. ಅಷ್ಟರಲ್ಲಾಗಲೇ ಬೆಂಗಳೂರಿನ ಎರಡು ಉದ್ಯಾನವನದ ಸುತ್ತ ತಿರುಗಾಡಿ ಹೋಟೇಲೊಂದರಲ್ಲಿ ಕಾಫಿ ಕುಡಿಯುತ್ತ ಕೂತಿದ್ದೆವು. ಪದ್ಮಾ ನನ್ನ ಮನಸ್ಸು ಹಗುರ ಮಾಡಿ ಎದುರು ಕೂತು ಮಗುವಿನಂತೆ ಕೇಳುತ್ತಿದ್ದಳು. ಇಷ್ಟಗಲ ಕಣ್ಣಗಲಿಸಿ ಮಾತು ಕೇಳುತ್ತ, ತನ್ನ ಹರೆಯದ ಎದೆಯಲ್ಲಿ ಹರಿವ ಭಾವನೆಗಳನ್ನು ಮುಚ್ಚಿಡಲಾಗದೆ ಪದ್ಮಾ, "ಹೇಳಿ, ಎಲ್ಲ ಹೇಳಿ" ಅಂದಳು.

"ಮನುಷ್ಯ ಮೂಲಭೂತವಾಗಿ ನೀಚ" ಎಂದು ಮಾತು ಮುಂದುವರೆಸುತ್ತಿದ್ದಂತೆ "ಅದರಲ್ಲಿ ಹೆಂಗಸರೂ ಸೇರ್ತಾರಾ" ಅಂದಳು ಪದ್ಮ. ಅವಳೇನಾದರೂ ಅರ್ಥಮಾಡಿಕೊಳ್ಳಲಿ ಎಂದು, ಆಕೆಯ ಎಳೆಯ ಮನಸ್ಸು ನೋಯಿಸಬಾರದೆಂದು ನಕ್ಕು ಹೇಳತೊಡಗಿದೆ. "ನಮ್ಮ ಮಕ್ಕಳು ಇತರರ ಮಕ್ಕಳಿಗಿಂತ ಹೆಚ್ಚಲ್ಲ. ನಮ್ಮ ಸಂಸಾರ ಇತರರ ಸಂಸಾರಕ್ಕಿಂತ ಶ್ರೇಷ್ಠವಲ್ಲ ಅನ್ನುವುದನ್ನು ನಾವು ಯಾರೂ ಒಪ್ಪುವುದಿಲ್ಲ. ಒಂದಲ್ಲ ಒಂದು ಬಗೆಯ ಶ್ರೇಷ್ಟತೆಗಾಗಿ ನಾವು ಪ್ರಯತ್ನಿಸುತ್ತಲೇ ಇರ್ತೇವೆ. ಈ ಶ್ರೇಷ್ಟತೆಯನ್ನು ನಮ್ಮ ಪಾಪಗಳಲ್ಲೂ ಕಾಣಲು ಪ್ರಯತ್ನಿಸುತ್ತೇವೆ. ನನ್ನ ಹುಡುಗುತನದ ಹುಮ್ಮಸ್ಸಿನಲ್ಲಿ ಒಂದು ದಿನ ಘೋರ ರೀತಿಯ ಕ್ಲಬ್ಬೊಂದಕ್ಕೆ ಹೋದೆ. ಅದಕ್ಕೆ ಅನುಭವದ ಬಗ್ಗೆ ನನ್ನ ದಾಹ ಮಾತ್ರ ಕಾರಣವಾಗಿತ್ತು.

ಗೆದ್ದೆ. ಮತ್ತೆ ಸೋತೆ. ಮನೆಗೆ ಬಂದಾಗ ಕ್ಲಬ್ಬಿನಲ್ಲಿ ಆದದ್ದರ ಬಗ್ಗೆ ಪೂರ್ತಿಯಾಗಿ ಸರೋಜಳಿಗೆ ಹೇಳುವುದು ಸಾಧ್ಯವಿತ್ತು; ಹೇಳಿದರೂ ಅದನ್ನು ನಯಗೊಳಿಸುತ್ತಿದ್ದೆನಾದ್ದರಿಂದ ಹೇಳಲಿಲ್ಲ; ನನ್ನ ಗುಟ್ಟಿನಿಂದ ಅಪಾಯವೇನೂ ಆಗಲಿಲ್ಲ. ಸಂಸಾರ ಹಾಗೇ ಸಹಜವಾಗಿ ನಡೆಯುತ್ತಲೇ ಇತ್ತು. ಅಷ್ಟರಲ್ಲಿ ನಾನು ನನ್ನ ದಾಹಕ್ಕೆ ಹೊಂದಿಕೊಳ್ಳತೊಡಗಿದ್ದೆ. ಒಮ್ಮೆ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದ್ದ ತುಮಕೂರಿನ ಟೀಚರ್ ಒಬ್ಬಳು ಬಂದಳು. ಅವಳ ಹೆಸರು ಸೆಲ್ವಿಯಾ. ಮುಗ್ಧ ಹುಡುಗಿ. ಮೊನ್ನೆ ಮೀರಾ ಜೊತೆಗೆ ನಿನ್ನನ್ನು ನೋಡಿದಾಗ ನೆನಪಾಯಿತು. ಆಕೆ ಕೇಳಲು ಬಂದದ್ದು ಸಣ್ಣ ಉಪಕಾರ. ಅವಳ ಹೆಸರು ಕೇಳಿದೆ. ಅವಳನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದವರ ಹೆಸರು ಕೇಳಿದೆ. ಅವರೆಲ್ಲರನ್ನೂ ಹದ್ದುಬಸ್ತಿನಲ್ಲಿಟ್ಟು ಅವಳಿಗೆ ವರ್ಗಾ ಮಾಡಿಸುವ ಭರವಸೆ ನೀಡಿದೆ. ಅವಳು ಆನಂದದಿಂದ ಹೋದಳು. ಆದರೆ ಮನುಷ್ಯ ಎಂಥ ನೀಚ ಪದ್ಮಾ! ಅದು ಭರವಸೆಯಾಗಿಯೇ ಉಳಿಯಿತು.

"ಆಕೆಯ ವರ್ಗಾ ಆಗಲಿಲ್ಲ. ಬ್ಲಾಕ್‌ಮೇಲ್ ಮಾಡುವವರಿಂದ ಆಕೆಗೆ ಆಗಿದ್ದ ಆತಂಕ ತಪ್ಪಲಿಲ್ಲ. ಅದು ನನಗೆ ಗೊತ್ತಿತ್ತು. ಆಕೆ ಮತ್ತೆ ಬರುವುದು ಕೂಡ ನನಗೆ ಗೊತ್ತಿತ್ತು, ಬಂದಳು. ಅವಳು ಬಂದೊಡನೆ ಅವಳು ತನ್ನ ಕಷ್ಟ ಹೇಳಿಕೊಳ್ಳುವುದಕ್ಕೆ ಮುಂಚೆಯೇ ನನ್ನ ಕಷ್ಟ ಹೇಳಿಕೊಂಡೆ. ಕೆಟ್ಟು ಹೋಗಿರುವ, ಕೊಳೆತು ಹಾಳಾಗಿರುವ ವ್ಯವಸ್ಥೆಯಲ್ಲಿ ಒಂದೇ ಒಂದು ಒಳ್ಳೆಯ ಕೆಲಸ ಮಾಡುವುದು ಎಷ್ಟು ಕಷ್ಟ ಎಂದು ಹೇಳಿಕೊಂಡೆ. ನಾನು ಹೇಳುವ ರೀತಿಯಿಂದಲೇ ಸೆಲ್ವಿಯಾ ಮನಸೋತಿದ್ದಳು. ದುಷ್ಟಜಂತುಗಳಿಂದ ಸ್ಥಿರಗೊಂಡಿದ್ದ ಆಕೆಯ ಮನಸ್ಸು ನೆಮ್ಮದಿ ಪಡೆದಿತ್ತು; ಬಲೆಯಲ್ಲಿ ಸಿಕ್ಕಿಹಾಕಿಕೊಂಡ ಜೀವ ನನ್ನ ಬಲೆಯನ್ನು ಸೇರತೊಡಗಿತ್ತು. ಸೆಲ್ವಿಯಾ ನನ್ನವಳಾಗಿದ್ದಳು. ಆಕೆಯ ಮೃದುಮನೋಹರ ದೇಹಕ್ಕೆ ನಾನು ಸುಖ ತಂದೆ, ಅವಳಿಗೆ ವರ್ಗಾ ಆಯಿತು. ಅವಳನ್ನು ಪೀಡಿಸುತ್ತಿದ್ದವರಿಂದ ಬಿಡುಗಡೆಯಾಯಿತು. ಈ ಸಂಕೀರ್ಣ ಸ್ಥಿತಿಯೇ ನನ್ನಲ್ಲಿ ವ್ಯಂಗ್ಯ, ಹೆದರಿಕೆ ಹುಟ್ಟಿಸಿತು. ಯಾವುದೇ ತೊಂದರೆ ಕೊಡದೆ, ಬೆದರಿಕೆ ಹಾಕದೆ ನಾನು ಯಶಸ್ವಿಯಾಗಿದ್ದೆ. ಬದುಕಿನ ಸೂಕ್ಷ್ಮಾತಿಸೂಕ್ಷ್ಮ ತಂತುಗಳನ್ನು ಬಲ್ಲ ನಾನು ಆವತ್ತು ಜಗತ್ತು ಗೆದ್ದವನ ಹುರುಪಿನಿಂದ ಕ್ಲಬ್ಬಿಗೆ ಹೋದೆ. ಅಲ್ಲಿಯ ಹೊಗೆ, ಜೂಜು, ಮದ್ಯಗಳೆಲ್ಲ ನನ್ನ ಶ್ರೇಷ್ಠತೆಗೆ ಕುಮ್ಮಕ್ಕು ಕೊಟ್ಟಂತಿತ್ತು; ಮತ್ತೇರಿದ ಗಳಿಗೆಯಲ್ಲಿ ನಾನು ಪ್ರವೇಶಿಸಿದ್ದ ಹೊಸ ವಾಸ್ತವತೆಯ ವರ್ಣರಂಜಿತ ಲೋಕ

ನನ್ನ ಆತ್ಮವನ್ನು ಮುತ್ತಿಕೊಳ್ಳತೊಡಗಿತು. ಕ್ಲಬ್ಬಿನಿಂದ ಹೊರಟು ಮನೆಯನ್ನು ತಲುಪಿದಾಗ ನನ್ನ ವಾಸ್ತವತೆ ಮನೆಯನ್ನೆಲ್ಲ ತುಂಬಿತ್ತು. ಸರೋಜ ಏನನ್ನೂ ಹೇಳಲಿಲ್ಲ. ಸಹಜವಾಗಿಯೇ ಇದ್ದಳು. ಅವಳು ಅವತ್ತು ನಾವು ಕೈಗೊಳ್ಳಬೇಕಾದ ಪ್ರವಾಸ, ಪಿಕ್‌ನಿಕ್‌ಗಳ ಬಗ್ಗೆ ಮಾತಾಡಿದ್ದರೆ ಅಲ್ಲಿ ನಾನು ವ್ಯಂಗ್ಯವನ್ನು ಕಾಣಬಹುದಿತ್ತು; ನನಗೆ ಎಚ್ಚರಿಕೆ ಕೂಡ ಆಗುತ್ತಿತ್ತು. ಆದರೆ ಆಕೆ ಏನನ್ನೂ ಹೇಳಲಿಲ್ಲ. ಮಗ್ಗುಲಲ್ಲಿ ಸುಮ್ಮನೆ ಮಲಗಿದ್ದಳು. ಅವಳು ಕಣ್ಣುಬಿಟ್ಟುಕೊಂಡು ಮಲಗಿದ್ದಾಳೋ ನಿದ್ರಿಸುತ್ತಿದ್ದಾಳೋ ಎಂದು ನೋಡುವ ಧೈರ್ಯ ಕೂಡ ನನಗಿರಲಿಲ್ಲ. ನಿದ್ರೆ ಮಾಡಲು ಯತ್ನಿಸಿದೆ. ಅವತ್ತಿನ ಬೆಳಿಗ್ಗೆ ಒಂದು ವಿಷಯದಲ್ಲಿ ಮಾತ್ರ ಅಸಹಜವಾಗಿತ್ತು. ನಾನು ಹಾಸಿಗೆಯಿಂದ ಎದ್ದು ನೋಡಿದರೆ ನಾನು ಕ್ಲಬ್ಬಿನಲ್ಲಿ ಗೆದ್ದು ತಂದಿದ್ದ ಹಣವೆಲ್ಲ ಟೇಬಲ್ ಮೇಲೆ ಇತ್ತು. ಅದು ಅಲ್ಲಿಗೆ ಹೇಗೆ ಬಂತು ಎಂದು ಯೋಚಿಸುವ ಶಕ್ತಿ ಕೂಡ ನನ್ನಲ್ಲಿ ಇರಲಿಲ್ಲ.

"ಇದನ್ನೆಲ್ಲ ನಾನು ಸರೋಜ ಹೊರಟುಹೋದ ಮೇಲೆ ಹೇಳುತ್ತಿದ್ದೇನೆ. ಇದ್ದಾಗ ಹೇಳುವ ಸತ್ಯಕ್ಕೂ ಸತ್ತಮೇಲೆ ಹೇಳುವ ಸತ್ಯಕ್ಕೂ ಇರುವ ವ್ಯತ್ಯಾಸ ಕಂಡು ಬೆರಗಾಗುತ್ತದೆ. ನನಗೂ ಸರೋಜಳಿಗೂ ನಡುವೆ ತಣ್ಣನೆಯ ಪ್ರವಾಹವೊಂದು ಹರಿಯತೊಡಗಿರಬೇಕು. ಆಕೆ ಎಂದಿನಂತೆ ಸುಮ್ಮನಿದ್ದಳು, ಆದರೆ ಬದುಕಿನ ವಾಸ್ತವತೆ ಕಂಡ ಆಕೆಗೆ ಹೇಗೋ ಸೆಲ್ವಿಯಾ ಸತ್ತುಹೋದ ಸುದ್ದಿ ಗೊತ್ತಾಗಿತ್ತು. ಆಕೆ ಕೂಡ ಗಂಡನ ಮನೆಯಲ್ಲಿ ಸುಟ್ಟುಕೊಂಡು ಸತ್ತುಹೋಗಿದ್ದಳು. ಆಕೆಯ ಸಾವು ಸಹಜವೋ ಅಸಹಜವೋ ಎಂಬುದು ನನಗೆ ಮಾತ್ರ ಗೊತ್ತಿತ್ತು."

"ಹಾಗಾದ್ರೆ ಸತ್ಯ ಹೇಳಲು ತೊಂದರೆ ಏನು?" ಎಂದಳು ಪದ್ಮಾ. ನನ್ನ ಬಗ್ಗೆ ಪದ್ಮಳಲ್ಲಿ ತಾತ್ಸಾರ ಮೂಡುತ್ತಿರುವಂತೆ ಕಾಣತೊಡಗಿತ್ತು. ಅದು ನಾನು ಅವಳಲ್ಲಿ ಉದ್ದೇಶಪೂರ್ವಕವಾಗಿ ಮೂಡಿಸುತ್ತಿದ್ದ ತಾತ್ಸಾರವೆಂಬುದು ನನಗೆ ಗೊತ್ತಿತ್ತು. ಅಧಿಕಾರಿಯೊಬ್ಬನ ಕುಟುಂಬದಲ್ಲಿ ಆದ ದುರಂತ ಮತ್ತು ಒಳ್ಳೆಯ ಮನುಷ್ಯನೊಬ್ಬನಿಗೆ ಆದ ಆಘಾತ ಎಂದು ಮಾತ್ರ ತಿಳಿದು ಆಕೆ ನನಗೆ ಅಂಟಿಕೊಳ್ಳುವುದು ಬೇಡವಾಗಿತ್ತು. ಅಲ್ಲದೆ ಎಲ್ಲ ಸಂಬಂಧಗಳೂ ಭಾರವಾಗುತ್ತಿರುವಂತೆ ನನಗನ್ನಿಸತೊಡಗಿತ್ತು. ಆದ್ದರಿಂದ, "ಏಳು ಪದ್ಮ, ನಿನ್ನ ಮನೆ ತೋರಿಸು, ನಿನ್ನನ್ನು ಬಿಟ್ಟು ಹೋಗ್ತೇನೆ" ಎಂದು ಎದ್ದೆ.

"ನೀಚನಾದ ಮನುಷ್ಯನಲ್ಲಿನ ಪಾಪಪ್ರಜ್ಞೆ ವಿಚಿತ್ರ" ಅಂದೆ. "ಸಾವು ಎಂಥ ತಣ್ಣನೆಯ, ಎಲ್ಲವನ್ನೂ ಮುಗಿಸಿಬಿಡುವ, ನಮ್ಮನ್ನು ಬದುಕಿನ

ವಿವರಗಳ ಬಗ್ಗೆ ಚಿಂತಿಸಿ ನಿಡುಸುಯ್ಯುವಂತೆ ಮಾಡುವ ಘಟನೆ ಪದ್ಮಾ..." ಅಂದೆ.

ಪದ್ಮಾ ನನ್ನ ತೋಳಿಗೆ ತೋಳು ತಾಗಿಸಿ ಭಯಗೊಂಡಂತೆ ಕೂತಿದ್ದಳು.

"ನಿಜ ಹೇಳುತ್ತೇನೆ. ಸರೋಜಳ ಸಾವಿಗೆ ನಾನು ಕಾರಣನಲ್ಲ" ಅಂದೆ

"ಅದು ಗೊತ್ತು. ಯಾಕೆ ಹಾಗೆ ಹೇಳ್ತೀರಿ?" ಅಂದಳು.

"ಆದರೆ ಎಲ್ಲ ಪಾತಕಗಳನ್ನೊಳಗೊಂಡ ಆತ್ಮಗಳೂ ಒಳ್ಳೆಯ ಜೀವಗಳನ್ನು ಕೊಲ್ಲುತ್ತದೆ. ಅದೇ ನನ್ನ ಅಳುಕು. ಸೆಲ್ವಿಯ ಜೊತೆಗಿನ ನನ್ನ ಸಂಬಂಧ ಎಂದೂ ಕಲುಷಿತಗೊಂಡಿರಲಿಲ್ಲ. ನಾನು ಎಲ್ಲಿ ನಿಂತು ಹೇಳೆಂದರೂ ಹೇಳಬಲ್ಲೆ, ನಮ್ಮದು ಪರಿಶುದ್ಧ ಪ್ರೇಮ. ಆದರೆ ಅದು ವಿಚಿತ್ರ ದಾಹದ ಫಲ ಕೂಡ", ಎಂದು ನಗತೊಡಗಿದೆ. ಆಳವಾದ ನೀರಿನಲ್ಲಿ ಬಿದ್ದು ಜೀವಕ್ಕಾಗಿ ಒದ್ದಾಡುತ್ತಿದ್ದಾಗ ನಗುತ್ತಿದ್ದವನಂತೆ ಆಕೆಗೆ ಕಾಣಿಸಿರಬೇಕು, ಪದ್ಮಾ ನಗಲಿಲ್ಲ. "ನಾನು ನನ್ನ ಸರೋಜಾ ಸಾವಿನ ಬಗ್ಗೆ ಹೇಳುತ್ತಾ ಹೇಳುತ್ತಾ ಅನೇಕ ಹೊಸ ಸಂಗತಿಗಳನ್ನು ಸೇರಿಸಿದ್ದೇವೆ. ಅನೇಕರು ಕೇಳಿದಾಗ ಆಕೆಯ ಚೀತ್ಕಾರ ಕೇಳಿಸಿತು ಅಂದೆ. ಮತ್ತೆ ಕೆಲವರಿಗೆ ಫೋನಿನಲ್ಲಿ ಕೂಗಿಕೊಂಡಳು ಅಂದೆ, ನಡುಮನೆಯಲ್ಲಿ ಬಿದ್ದಿದ್ದಳು ಅಂದೆ, ನಾನು ಮನೆಗೆ ಹೋಗುವ ಹೊತ್ತಿಗೆ ಜನರೆಲ್ಲ ಸೇರಿಕೊಂಡು ಬೆಂಕಿ ಆರಿಸಿದ್ದರೂ ಆಕೆ ಸತ್ತು ಹೋಗಿದ್ದಳು ಅಂದೆ. ನನ್ನ ದುಃಖ ಅವರೆಲ್ಲರಲ್ಲಿ ಆದರ್ಶ ಸಂಸಾರದ ಚಿತ್ರ ಮೂಡಿಸಿತ್ತು. ಆದರೆ ನನ್ನ ದುರಂತ ಅದರಲ್ಲಿ ಒಬ್ಬರಿಗೂ ಎಚ್ಚರಿಕೆ ನೀಡಿರಲಿಲ್ಲ. ಅದಕ್ಕೇ ಹೇಳಿಬಿಡುತ್ತಿದ್ದೇನೆ; ನನಗೆ ನಮ್ಮ ಮೇಲೆ ಈಗ ಸಾಗುತ್ತಿರುವ ನೆರಳು ಕೂಡ ಪೋಲೀಸನಂತೆ, ನ್ಯಾಯಾಧೀಶನಂತೆ ಈಗ ತೋರುತ್ತಿವೆ. ಎಲ್ಲ ಸತ್ತ ಜೀವಗಳ ಬಗ್ಗೆ, ಎಲ್ಲ ದುರಂತಕ್ಕೀಡಾದ ಆತ್ಮಗಳ ಬಗ್ಗೆ ನನ್ನಲ್ಲಿ ಅಳುಕು, ಪಾಪಪ್ರಜ್ಞೆ ಮೂಡುತ್ತಿದೆ; ಈ ನನ್ನ ನೋವಾದರೂ ನನ್ನನ್ನು ರಕ್ಷಿಸಬಹುದೆ?"

"ಕಾರ್ ನಿಲ್ಲಿಸ್ತೀರಾ" ಅಂದಳು ಪದ್ಮ. ನನ್ನ ಕತೆ ಆಳದಲ್ಲಿ ತಡಕಾಡುತ್ತಿದ್ದ ನಾನು ಬ್ರೇಕ್ ಒತ್ತಿದೆ. ಆಕೆ ಕೂಡಲೆ ಇಳಿಯಲಿಲ್ಲ. ಅವಳ ಮುಖ ನೋಡಲು ಅಂಜಿ ಸುಮ್ಮನೆ ಕೂತೆ. ಆಕೆಯಲ್ಲಿ ಅನುಕಂಪ ಇದೆಯೋ, ಅಥವಾ ಭಯವೆ, ತಾತ್ಸಾರವೆ? ನನ್ನ ಕತೆಯನ್ನು ನಾನು

ಅವಳ ಮೇಲಧಿಕಾರಿಯಂತೆ ಹೇಳಿದ್ದೇನೆಯೇ, ಬರೀ ಮನುಷ್ಯನಂತೆಯೇ ಅಥವಾ ಮನವೊಲಿಸುವ ಪ್ರೇಮಿಯಂತೆಯೇ? 'ಬರ್ತೀನಿ' ಎಂದು ಅವಳು ಹೇಳಿದ್ದು ಕೇಳಿಸಿತು. ತನ್ನ ಸುಂದರ, ಯೌವನದ ಮೈಯನ್ನು ಹಕ್ಕಿಯಷ್ಟು ದಕ್ಷತೆಯಿಂದ ಹತೋಟಿಗೆ ತೆಗೆದುಕೊಂಡು ಇಳಿದಳು. ನನ್ನ ನಿರೀಕ್ಷೆಯನ್ನು ಮೀರಿ ನನ್ನ ಕೈಒತ್ತಿದಳು. ಎದುರಿಗೆ ರಸ್ತೆ ನೋಡುತ್ತಿದ್ದ ನಾನು ಅವಳತ್ತ ತಿರುಗಿದೆ. ಅವಳು ನಗುತ್ತಿರಲಿಲ್ಲ. ಅವಳ ಮುಖದಲ್ಲಿ ಯಾವ ಭಾವನೆಯೂ ಇರಲಿಲ್ಲ.

ಕಾರಿನಿಂದ ತಿರುಗಿ ಮನೆಯತ್ತ ಸರಸರ ಹೋಗುವಾಗ ಅವಳನ್ನು ನನ್ನ ಕಣ್ಣು ಹಿಂಬಾಲಿಸಿದವು. ಹಿಂದುಗಡೆಯಿಂದ ಸೆಲ್ವಿಯಾ, ಸರೋಜಾ ಇಬ್ಬರನ್ನೂ ಹೋಲುವ ನಡಿಗೆಯ ಪದ್ಮಾ ನಿಂತು ಸ್ನೇಹದಿಂದಲೇ ಕೇಳಿದಳು, "ನಾಳೆ ಬೆಳಿಗ್ಗೆ ಎಂಟಕ್ಕೆ ಬರಲಾ?"

ನಾನು ಯೋಚಿಸಿದೆ, "ಬೇಡ, ನಾನು ಊರಲ್ಲಿರೋಲ್ಲ, ನನ್ನ ಮಾತಿನಿಂದ ಬೋರಾಗಿದ್ದರೆ ಕ್ಷಮಿಸು ಮರಿ" ಎಂದು ಹೇಳಿ ಹೊರಟೆ. ಈಗಲಾದರೂ ನನ್ನ ಅನಿಸಿಕೆಯನ್ನು ಆಕೆಗೆ ಸ್ಪಷ್ಟವಾಗಿ ಮುಟ್ಟಿಸಿರಬಹುದು–ಎಂದುಕೊಂಡು ಹಸಿರುಮರಗಳ ನಡುವೆ ಜೋರಾಗಿ ಕಾರು ಬಿಡತೊಡಗಿದೆ.

❑

# ೪. ಓದು ಪತ್ರ
# ಪ್ರಬಂಧ : ಹರೆಯ ಬಂತು ಹರೆಯ

**– ಡಾ. ಮಹಾಬಲೇಶ್ವರ ರಾವ್**

ತಮ್ಮ ತಂದೆ ತಾಯಿಗೆ ಮನಸ್ಸಿಗೆ ರೇಜಿಗೆ ಉಂಟು ಮಾಡುವ ಸಂಗತಿ ಯಾವುದು ಎಂಬುದು ಹದಿಹರೆಯದವರಿಗೆ ತಿಳಿದಿರುತ್ತದೆ. ನಾವು ಸ್ವಚ್ಛತೆಗೆ ಬೆಲೆ ಕೊಟ್ಟರೆ ಅವರು ಗಲೀಜಾಗಿರುತ್ತಾರೆ. ಪ್ರತಿನಿತ್ಯ ಸ್ನಾನ ಮಾಡುವುದಿಲ್ಲ. ಕೊಳೆ ಕೊಳೆ ಬಟ್ಟೆ ತೊಟ್ಟುಕೊಳ್ಳುತ್ತಾರೆ. ಅಥವಾ ಹರಿದ ಲಂಗ ಹಾಕಿಕೊಳ್ಳುತ್ತಾರೆ. ನೆಟ್ಟಗೆ ತಲೆ ಬಾಚಿಕೊಳ್ಳುವುದಿಲ್ಲ. ಸಭ್ಯ ಶಿಷ್ಟಾಚಾರಗಳಿಗೆ ನಾವು ಒತ್ತು ಕೊಟ್ಟರೆ ಅವರು ಎಲ್ಲರ ಎದುರಿಗೆ ಗಟ್ಟಿಯಾಗಿ ತೇಗುತ್ತಾರೆ, ಆಕಳಿಸುತ್ತಾರೆ, ಉಣ್ಣುವಾಗ ಸಶಬ್ಧವಾಗಿ ತಿನ್ನುತ್ತಾರೆ. ಕುರ್ಚಿ ಎಳೆದು ಸದ್ದು ಮಾಡುತ್ತಾರೆ.  ನಾವು ಸಭ್ಯ ಭಾಷೆಯಲ್ಲಿ ಮಾತನಾಡಿದರೆ ಅವರು ಸೊಂಟದ ಕೆಳಗಿನ ಪದಗಳನ್ನು ಬಳಸಬಹುದು. ನಾವು ಶಾಂತಿ ಪ್ರಿಯರಾದರೆ ಅವರು ನೆರೆಮನೆಯ ಹುಡುಗರ ಜೊತೆ ಕಾಲು ಕೆರೆದು ಜಗಳ ಆಡಬಹುದು ಅಥವಾ ರೇಗಿಸಬಹುದು. ನಮ್ಮ ಹುಡುಗರು ಒಳ್ಳೆಯ ಅಂಕಗಳನ್ನು ಗಳಿಸಬೇಕೆಂದು ನಾವು ಅಪೇಕ್ಷಿಸಿದರೆ ಅವರು ತರಗತಿಯ ತಳಭಾಗದಿಂದ ಮೇಲಕ್ಕೇ ಎದ್ದು ಬರುವುದಿಲ್ಲ.

ಗಾಬರಿ, ಹತಾಶೆ ಹಾಗೂ ಆತಂಕಕ್ಕೆ ಒಳಗಾದ ಹೆತ್ತವರು ಊಹಿಸಬಹುದಾದ ರೀತಿಯಲ್ಲಿ ಇದಕ್ಕೆಲ್ಲ ಪ್ರತಿಕ್ರಿಯೆ ನೀಡುತ್ತಾರೆ. ಅವರ ಜೊತೆ ಬಿಗಿಯಾಗಿ ಸ್ಟ್ರಿಕ್ಟಾಗಿ ನಡೆದುಕೊಳ್ಳುತ್ತಾರೆ. ಅದು ವಿಫಲವಾದರೆ ಕರುಣೆ ತೋರುತ್ತಾರೆ. ಸಾಮ ದಾನ ಭೇದ ದಂಡ ಉಪಾಯಗಳೆಲ್ಲ ನಿಷ್ಫಲವಾದಾಗ ಯಾಕೆ ಹೀಗಾಗುತ್ತಿದೆ?ಎಂದು ಕಾರಣ ಹುಡುಕುತ್ತಾರೆ. ಬುದ್ಧಿ ಮಾತು ಹೇಳಿದ್ದನ್ನು ಹದಿಹರೆಯದವರು ಕೇಳದಿದ್ದರೆ ಬೈಗುಳ, ನಿಂದನೆ, ಅಣಕ ಶುರುವಾಗುತ್ತದೆ. ಆ ಬಳಿಕ ಹೆದರಿಕೆ, ಬೆದರಿಕೆ, ಶಿಕ್ಷೆ! ಇದು ಒಂದು ಅರ್ಥದಲ್ಲಿ ಪರಸ್ಪರ ಹತಾಶೆಗೆ ಒಳಪಡಿಸುವ ಸಮಾಜದ ಕಾರ್ಯ ವೈಖರಿ!

ಹದಿಹರೆಯದವರ ಜೊತೆಗಿನ ವ್ಯವಹಾರಗಳಲ್ಲಿ ಹೆತ್ತವರು ಶಾಂತಿ, ನೆಮ್ಮದಿ, ಹಾಗೂ ಗೌರವದಿಂದ ಬದುಕುವುದು ಹೇಗೆ? 'ತಾಳಿದವನು ಬಾಳಿಯಾನು' ಎಂಬ ಈ ಗಾದೆ ಮಾತು ಹಿರಿಯರಿಗೆ ಪಥ್ಯವಾಗಬೇಕು.

ಹದಿಹರೆಯ ಪ್ರತಿಯೊಬ್ಬರ ಜೀವನದಲ್ಲೂ ಮಧುರ ಕಾಲ, ಬಾಲ್ಯಾವಸ್ಥೆ ದಾಟಿ ಯೌವನಕ್ಕೆ ಕಾಲಿಡುವಾಗ ವಯೋಸಹಜವಾದ ಪರಿವರ್ತನೆಗಳಾಗುತ್ತವೆ. ಮನಸ್ಸು ಕಡಿವಾಣವಿಲ್ಲದ ಕುದುರೆಯಂತೆ ಹಾರಾಡಬಯಸುತ್ತದೆ. ಆಗ ಸರಿಯಾದ ಮರ್ಗದಲ್ಲಿ ಮುನ್ನಡೆದರೆ ಅದ್ಭುತವನ್ನೇ ಸಾಧಿಸಬಹುದು.

ಕಿಡಿಯಪ್ಪ ಒಂದು ದಿನ ಶಾಲೆಯಿಂದ ಮನೆಗೆ ಬಂದವನು ಚಾವಡಿಯ ಮೆಟ್ಟಲೇರಿ ಬರುತ್ತಿದ್ದಾಗ ತೊಟ್ಟಕೊಂಡ ಪೈಜಾಮ ಕಾಲಿಗೆ ಸಿಕ್ಕಿ ಧಡಾರನೆ ಬಿದ್ದುಬಿಟ್ಟ. ಅಲ್ಲೇ ಕುಳಿತಿದ್ದ ಅಜ್ಜ "ಎಂಥಾ ಮಾರಾಯ ನಿನ್ನ ಇಚಾರ?" ಎಂದಷ್ಟೇ ನುಡಿದರು. ಹುಡುಗ ಬಿರಬಿರನೆ ಕೊಠಡಿಗೆ ಹೋಗಿ ಪೈಜಾಮ ಕಳಚಿ ಮುದ್ದೆ ಮಾಡಿ ಅಡುಗೆಮನೆಗೆ ಧಾವಿಸಿ ಉರಿಯುತ್ತಿರುವ ಒಲೆಗೆ ಎಸೆದು ಬಿಟ್ಟ! ಕಣ್ಮುಚ್ಚಿ ತೆರೆಯುವುದರೊಳಗೆ, "ಇದೇನು?" ಎಂದು ಹೇಳುವುದರೊಳಗೆ, ಎಲ್ಲ ನಡೆದುಹೋಯಿತು.

ನಮ್ಮ ನಾಯಕ ಕಿಡಿಯಪ್ಪನನ್ನು ಕಂಡು ಮಾತಾಡಿಸಿಕೊಂಡು ಹೋಗಲು ಅಜ್ಜನ ಮನೆಗೆ ತಂದೆ ಬಂದರು. ತಂದೆಯ ಜೊತೆಗೆ ಏನೋ ವಿರಸ. ಹುಡುಗ ಉಪ್ಪರಿಗೆಗೆ ಹೋಗಿ ಕೊಠಡಿಯ ಬಾಗಿಲು ಹಾಕಿಕೊಂಡವನು ಮತ್ತೆ ಹೊರಗೆ ಬಂದದ್ದೇ ತಂದೆಯ ನಿರ್ಗಮನದ ಬಳಿಕ!

ಆಕೆ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿನಿ. ಕನ್ನಡದಲ್ಲಿ ಕಡಿಮೆ ಅಂಕ ಬಂದದ್ದಕ್ಕೆ ಶಿಕ್ಷಕರು ಕಟಕಿಯ ಮಾತನ್ನಾಡಿದರು. ಹುಡುಗಿ ಅಂದು ಮನೆಗೆ ಹೋಗಲಿಲ್ಲ. ಮನೆಯವರು ಕಳವಳಗೊಂಡರು. ಪೊಲೀಸರಿಗೆ ದೂರು ನೀಡಿದರು. ಸ್ನೇಹಿತೆಯರನ್ನು ವಿಚಾರಿಸಿದರು. ಮರುದಿನ ನೋಡುವಾಗ್ಗೆ ಊರ ಕೆರೆಯಲ್ಲಿ ಹುಡುಗಿಯ ಹೆಣ ತೇಲುತ್ತಿತ್ತು.

ಪದವಿಪೂರ್ವ ಹಂತದ ವಿದ್ಯಾರ್ಥಿಯೋರ್ವನ ಹಸ್ತಾಕ್ಷರ ಪುಸ್ತಕದಲ್ಲಿ ಎಲ್ಲೆಲ್ಲೂ ಚಿತ್ರನಟ ಶಾರುಖ್‌ಖಾನ್ ಚಿತ್ರಗಳೇ!

ಈ ಎಲ್ಲವೂ ಹದಿಹರೆಯ ಒದಗಿ ಬಂದಿದೆ ಎಂಬುದರ ಲಕ್ಷಣಗಳು. ಸುಮಾರಾಗಿ ಹನ್ನೆರಡರಿಂದ ಹದಿನೆಂಟು–ಹತ್ತೊಂಬತ್ತರ ಪ್ರಾಯವನ್ನು 'ಹದಿಹರೆಯ', ಕೌಮಾರ್ಯಾವಸ್ಥೆ ಎಂದು ಕರೆಯುತ್ತಾರೆ. ಇದು ಹುಡುಗ ಹುಡುಗಿಯರ ಬಾಳಿನ 'ವಸಂತಕಾಲ'. ಬದುಕಿನ ಅತ್ಯಂತ ಮಹತ್ತ್ವದ ಘಟ್ಟ.

ಬಾಳಿನಲ್ಲಿ ವಿಚಿತ್ರ ಏರುಪೇರುಗಳಾಗುವ, ಬಿರುಗಾಳಿಯ ಕಾಲ. ಒಂದರ್ಥದಲ್ಲಿ ಹದಿಹರೆವು ಸಂಕ್ರಮಣ ಕಾಲ. ವ್ಯಕ್ತಿ ಇತ್ತ ಮಗುವೂ ಅಲ್ಲ ಅತ್ತ ಪ್ರೌಢನೂ ಅಲ್ಲ. ಪ್ರೌಢತೆ ರೂಪುಗೊಳ್ಳುತ್ತಿರುವ ಆದರೆ ಮಕ್ಕಳಾಟಿಕೆ ಇನ್ನೂ ಉಡುಗಿರದ ಒಂದು ವಿಚಿತ್ರ ಹಂತ; ಗೊಂದಲಕಾರಿಯಾದ ತ್ರಿಶಂಕು ಸ್ಥಿತಿ. ಅಸಮತೋಲ ಹಾಗೂ ಅತಂತ್ರ ಅವಸ್ಥೆ. ವಿವಿಧ ಸಾಂಸ್ಕೃತಿಕ ಹಿನ್ನಲೆಗಳು ಮತ್ತು ಸಾಮಾಜಿಕ ಆರ್ಥಿಕ ಸಂದರ್ಭಗಳಲ್ಲಿ ಹದಿಹರೆಯವು ಕೊಂಚ ಬೇಗನೆ ಅಥವಾ ತಡವಾಗಿ ಕಾಣಿಸಿಕೊಳ್ಳಬಹುದು.

ಹದಿಹರೆಯದ ಹುಡುಗ ಹುಡುಗಿಯರಲ್ಲಿ ಅನೇಕ ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕ ಪರಿವರ್ತನೆಗಳಾಗುತ್ತವೆ. ದೈಹಿಕ ಬದಲಾವಣೆಗಳು ಅತ್ಯಂತ ತ್ವರಿತಗತಿಯಲ್ಲಿ ಆಗುತ್ತವೆ. ಈ ಹಂತದಲ್ಲಿ ವ್ಯಕ್ತಿಗಳು ಲೈಂಗಿಕ ಪಕ್ವತೆಯನ್ನು ಸಂಪಾದಿಸಿ ಸಂತಾನೋತ್ಪತ್ತಿಯ ಶಕ್ತಿ ಗಳಿಸುತ್ತಾರೆ. ಅಮೇರಿಕದಂಥ ದೇಶಗಳಲ್ಲಿ ಈ ಪ್ರಾಯದಲ್ಲಿ 'ಡೇಟಿಂಗ್' ಆರಂಭವಾಗುತ್ತದೆ. ಪಿಟ್ಯುಟರಿ ಹಾಗೂ ಥೈರಾಯ್ಡ್ ಗ್ರಂಥಿಗಳು ಸ್ರವಿಸುವ ಅಂತಃಸ್ರಾವಗಳಿಂದಾಗಿ ಹಲವು ಬದಲಾವಣೆಗಳು ಕಂಡು ಬರುತ್ತವೆ. ಸಂತಾನೋತ್ಪತ್ತಿಯ ಅಂಗಗಳು ಬಲಿಷ್ಠವಾಗುತ್ತವೆ. ಹೆಣ್ಣು ಮಕ್ಕಳಲ್ಲಿ ಋತುಚಕ್ರ ಆರಂಭವಾಗುತ್ತದೆ. ಹುಡುಗರ ವೃಷಣಗಳು ಬೆಳೆಯುತ್ತವೆ. ವೀರ್ಯಾಣುಗಳ ಉತ್ಪಾದನೆ ಆರಂಭವಾಗುತ್ತದೆ. ಸ್ಖಲನ ಕ್ರಮ ಶುರುವಾಗುತ್ತದೆ. ಹೆಣ್ಣುಮಕ್ಕಳ ಸ್ತನಭಾಗ ಬಲಿಯುತ್ತದೆ. ಹುಡುಗರ ದನಿ ಗಡುಸಾಗುತ್ತದೆ. ಗಡ್ಡ ಮೀಸೆ ಕ್ರಮೇಣ ಮೂಡುತ್ತದೆ. ಸ್ನಾಯುಗಳು ಬಲಿಯುತ್ತವೆ. ಹುಡುಗ ಹುಡುಗಿಯರು ಬೇಸಿಗೆ ರಜೆ ಮುಗಿಸಿ ಮಳೆಗಾಲಕ್ಕೆ ಕಾಲಿಡುವ ಹೊತ್ತಿಗೆ ಎತ್ತರ ಹಾಗೂ ತೂಕದಲ್ಲಿ ಗಮನಾರ್ಹ ಪಲ್ಲಟಗಳಾಗುತ್ತವೆ. 'ವಿಪರೀತ ಶಕ್ತಿ' – 'ಮಿಗತೆ ಶಕ್ತಿ' ಉತ್ಪನ್ನವಾಗುತ್ತದೆ. ಹೀಗಾಗಿ ಈ ಪ್ರಾಯದಲ್ಲಿ ಸಚಿನ್ ತೆಂಡೂಲ್ಕರ್, ಬೋರಿಸ್ ಬೆಕರ್, ಮಾರ್ಟಿನಾ ಹಿಂಗಿಸ್, ಕ್ಯಾಪ್ರಿಯಾಟಿ, ಗ್ರಾಫ್ 'ಹದಿಹರೆಯದ ಅಚ್ಚರಿಗಳು' ಕ್ರೀಡಾರಂಗಕ್ಕೆ ದಾಳಿಯಿಡುತ್ತಾರೆ. ದೈಹಿಕ ಬದಲಾವಣೆಗಳು ಹದಿಹರೆಯದಲ್ಲಿ ಆತಂಕ, ಅಚ್ಚರಿ, ಕಳವಳವುಂಟು ಮಾಡುತ್ತವೆ. ಹೀಗಾಗಿ ಹೆಣ್ಣುಮಕ್ಕಳು ಕ್ರಮೇಣ ಮಾತು ಕಡಿಮೆ ಮಾಡಿ ಹುಡುಗರಿಂದ ದೂರ ಸರಿಯುತ್ತಾರೆ. ಲಜ್ಜೆಯ ಪ್ರಮಾಣ ಹೆಚ್ಚುತ್ತದೆ. ಹುಡುಗ–ಹುಡುಗಿಯರಲ್ಲಿ ವಿಧೇಯತೆ ಹಿಂದೆ ಸರಿದು ಬಂಡುಕೋರತನ ಅಥವಾ ಆಕ್ರೋಶ

ವರ್ಧಿಸುತ್ತದೆ. ಅವರು ತಮ್ಮ ದೇಹದಲ್ಲಾದ ಪರಿವರ್ತನೆ ಬಗೆಗೇ ಹೆಚ್ಚು ಹೆಚ್ಚು ಚಿಂತಿತರಾಗುತ್ತಾರೆ.

**ಸಾಮಾಜಿಕ ಭಾವನಾತ್ಮಕ ವಿಕಾಸ**

ಹದಿಹರೆಯದಲ್ಲಿ ಹುಡುಗ ಹುಡುಗಿಯರಲ್ಲಿ ಭಾವಾತಿರೇಕ ಹಾಗೂ ಭಾವತೀವ್ರತೆ ವಿಶೇಷವಾಗಿ ಕಂಡುಬರುತ್ತದೆ. ತಂದೆ ತಾಯಿಗಳ ಜೊತೆ, ಗೆಳೆಯರ ಜೊತೆ ಕೆಲವೊಮ್ಮೆ ಬಿಕ್ಕಟ್ಟು ಜಗಳ ಉಂಟಾಗುವುದು ಸ್ವಾಭಾವಿಕ. ಈ ವಯಸ್ಸಿನಲ್ಲಿ ವ್ಯಕ್ತಿಗಳಿಗೆ ತಮ್ಮ ಭಾವನೆಗಳ ನಿಯಂತ್ರಣ ಕಷ್ಟಸಾಧ್ಯವಾಗುತ್ತದೆ. ಅವರು ಬೇಗನೆ ಭಾವ ತುಮುಲಕ್ಕೆ, ಆಕ್ರೋಶಕ್ಕೆ, ಆವೇಶಕ್ಕೆ ತುತ್ತಾಗುತ್ತಾರೆ. ಈ ಹಂತದಲ್ಲಿ ಅವರಲ್ಲಿ ತಮ್ಮ ದೇಹದ ಬಗೆಗೆ ವಿಶೇಷ ಆಸಕ್ತಿ ಮೂಡುತ್ತದೆ. ಕನ್ನಡಿಯ ಮುಂದೆ ಬಹು ಹೊತ್ತು ಕುಳಿತು ತಮ್ಮನ್ನೇ ತಾವು ನೋಡುವ, ತಮ್ಮನ್ನೇ ತಾವು ಆರಾಧಿಸುವ, ಸ್ವಸುಖ ಲೋಲುಪತೆ ಮೂಡುತ್ತದೆ. ಗಂಡು ಹೆಣ್ಣಿನ ಬಗ್ಗೆ, ಹೆಣ್ಣು ಗಂಡಿನ ಬಗ್ಗೆ ಆಸಕ್ತಿ ತಳೆಯುವ, ಒಬ್ಬರನ್ನೊಬ್ಬರು ಪ್ರೇಮಿಸುವ ಸಂದರ್ಭಗಳು ಹೇರಳ. ಚಂದವಾಗಿ ಕಾಣಬೇಕೆಂಬ 'ಪ್ರದರ್ಶನ ಪ್ರವೃತ್ತಿ' ಎದ್ದು ಕಾಣುತ್ತದೆ, ಸುಖಭೋಗಗಳಲ್ಲಿ ಅಧಿಕ ಆಸಕ್ತಿ ತಳೆಯುವ ಹದಿಹರೆಯದವರು ಹಗಲು ಕನಸು ಕಾಣುವುದಲ್ಲಿ ಮಗ್ನರಾಗುತ್ತಾರೆ. ವ್ಯಕ್ತಿ ಪೂಜೆಗೆ ಮಹತ್ವ ನೀಡುತ್ತಾರೆ.

ಈ ಹಂತದಲ್ಲಿ ಅವರಲ್ಲಿ ಲೈಂಗಿಕ ಆಸಕ್ತಿ ಜಾಗೃತವಾಗುತ್ತದೆ. ಲೈಂಗಿಕ ವಿಚಾರಗಳನ್ನು ತಿಳಿದುಕೊಳ್ಳುವ ಪ್ರವೃತ್ತಿ ಹಾಗೂ ಕುತೂಹಲ ಹೆಚ್ಚುತ್ತದೆ. ಅನೇಕರಲ್ಲಿ ಸ್ವಪ್ನ ಸ್ಖಲನ, ಹಸ್ತಮೈಥುನ ಹಾಗೂ ಕಾಮಪ್ರಚೋದಕ ಸಾಹಿತ್ಯವಾಚನ ಕಂಡುಬರಬಹುದು.

ಹದಿಹರೆಯದ ಆರಂಭದಲ್ಲಿ ಚಿಂತನಮಂಥನ ಮಾಡುವ ಪ್ರವೃತ್ತಿ ಮೊಳಕೆಯೊಡುತ್ತದೆ. ತನ್ನ ಮನದಲ್ಲಿ ಏನು ನಡೆಯುತ್ತಿದೆ, ತಾನೇನು ಮಾಡುತ್ತಿರುವೆ ಎಂಬ ಅಂತರವಲೋಕನ ಶಕ್ತಿ ಜಾಗೃತವಾಗುತ್ತದೆ. ಹದಿಹರೆಯದವರು ತಮ್ಮನ್ನು ತಾವು ಕನ್ನಡಿಯಲ್ಲಿ ಬಹು ಹೊತ್ತು ವೀಕ್ಷಿಸುವಂತೆ ತಮ್ಮ ಮನದ ಕನ್ನಡಿಯಲ್ಲಿ ಬಹುಕಾಲ ಕಂಡು ತಮ್ಮ ಬಗ್ಗೆ ತಾವೇ ವ್ಯಾಖ್ಯಾನ ಮಾಡುವ ಶಕ್ತಿ ಗಳಿಸುತ್ತಾರೆ. ತಮ್ಮ ಆಲೋಚನೆ,

ಭಾವನೆ ಹಾಗೂ ವರ್ತನೆ ನಡುವೆ ವ್ಯತ್ಯಾಸಗಳಿವೆ ಎಂಬುದು ಅರಿವಿಗೆ ಬರುತ್ತದೆ. ತಮ್ಮ ಬಗ್ಗೆಯೇ ಅವರಿಗೆ ಅತೃಪ್ತಿ ಮೊಳೆಯಬಹುದು. ತಮ್ಮ ವೈಯಕ್ತಿಕ ಇಷ್ಟಾನಿಷ್ಟಗಳನ್ನು ವ್ಯಕ್ತಿತ್ವದ ಗುಣಲಕ್ಷಣಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ ಇತರರೊಂದಿಗೆ ಚರ್ಚೆ ಮಾಡಿ ಸಾಧ್ಯವಾದಲ್ಲಿ ತಮ್ಮನ್ನು ತಾವು ತಿದ್ದಿಕೊಳ್ಳಲು ಯತ್ನಿಸುತ್ತಾರೆ.

ತಾವು ಜಗತ್ತನ್ನು ನೋಡುವ ಬಗೆಯಲ್ಲೇ ಇತರರೂ ನೋಡುವರೇ ಇಲ್ಲವೆ ಎಂಬುದನ್ನು ತಿಳಿದುಕೊಳ್ಳಲು ಹದಿಹರೆಯದವರು ಕುತೂಹಲಿ ಗಳಾಗಿರುತ್ತಾರೆ. ಬೇರೆಯವರಿಗಿಂತ ತಾವೆಷ್ಟು ಭಿನ್ನ ಎಂಬುದನ್ನು ಗುರುತಿಸಿಕೊಳ್ಳುತ್ತಾರೆ. "ಯಾರು?" "ಏನು?" ಎಂಬಂಥ ಪ್ರಶ್ನೆಗಳು ಈಗ ಅವರ ವ್ಯಕ್ತಿತ್ವ ವಿಕಾಸದ ಮುಖ್ಯ ಮೈಲುಗಲ್ಲುಗಳಾಗಿರುತ್ತವೆ. ಸ್ವಾಯತ್ತೆ, ಸ್ವಯಂ ನಿರ್ಧಾರ, ಅಸ್ಮಿತೆ, ಸಮೂಹ ವಿಧೇಯತೆ, ಅನುಮೋದನೆ, ಪರಸ್ಪರ ವ್ಯಕ್ತಿಗತ ಸಂಬಂಧಗಳು, ಆತ್ಮೀಯತೆ, ಸಮೂಹ ಸಂಬಂಧಗಳು, ಸರೀಕರೊಡನಾಟ ಮುಂತಾದ ಲಕ್ಷಣಗಳು ವಿಕಾಸದ ಹಂತದಲ್ಲಿ ಕಂಡು ಬರುತ್ತವೆ.

**ಬೌದ್ಧಿಕ ವಿಕಾಸ**

ಹದಿಹರೆಯದಲ್ಲಿ ಬೌದ್ಧಿಕ ವಿಕಾಸ ತೀವ್ರ ಗತಿಯಲ್ಲಿ ನೆರವೇರುತ್ತದೆ. ಮಾನಸಿಕ ವಿಕಾಸದ ಕೆಲವು ಲಕ್ಷಣಗಳು ಈ ಹಂತದಲ್ಲಿ ಕಂಡುಬರುತ್ತವೆ.

೧. ಹದಿಹರೆಯದ ಹುಡುಗ ಹುಡುಗಿಯರು ಪರಿಕಲ್ಪನೆಗಳನ್ನು ಆಧರಿಸಿ ಅಮೂರ್ತ ರೀತಿಯಲ್ಲಿ ಸಾಧಾರಣೀಕರಣಗಳನ್ನು ರೂಪಿಸಬಲ್ಲರು.

೨. ವಿವಿಧ ಘಟಕ ಉಪಘಟಕಗಳ ನಡುವಣ ಪರಸ್ಪರ ಸಂಬಂಧ ತಿಳಿಯುತ್ತದೆ. ಪರಿಣಾಮವಾಗಿ ಸಮಸ್ಯಾ ಪರಿಹಾರ ಹಾಗೂ ಗ್ರಹಿಕೆಯ ಶಕ್ತಿ ವರ್ಧಿಸುತ್ತದೆ.

೩. ಹೆಚ್ಚು ಅಮೂರ್ತವಾಗಿ ಆಲೋಚಿಸುವ ಸಾಮರ್ಥ್ಯಗಳಿಸುತ್ತಾರೆ.

೪. ಶಬ್ದಕೋಶದ ಅಭಿವೃದ್ಧಿಯ ದೆಸೆಯಿಂದಾಗಿ ಸ್ಮರಣ ಶಕ್ತಿ ಹೆಚ್ಚುತ್ತದೆ. ದೀರ್ಘ ಕಾಲೀನ ಸ್ಮೃತಿ ಭಂಡಾರ ವಿಸ್ತಾರವಾಗುತ್ತದೆ.

ಭೂತ, ವರ್ತಮಾನ ಹಾಗೂ ಭವಿಷ್ಯದ ಕಲ್ಪನೆಯು ಅವರಿಗೆ ಈಗ ಸ್ಪಷ್ಟವಾಗುತ್ತದೆ.

೫. ರಾಷ್ಟ್ರೀಯ, ಅಂತರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ತಮ್ಮದೇ ಆದ ಪರಿಹಾರಗಳನ್ನು ಸೂಚಿಸಬಲ್ಲರು. ವೈಜ್ಞಾನಿಕ ಕಲ್ಪನಾಶಕ್ತಿ ಬಳಸಿಕೊಂಡು ದೈನಂದಿನ ಸಮಸ್ಯೆಗಳಿಗೆ ಸ್ವತಂತ್ರವಾದ ಪರಿಹಾರಗಳನ್ನು ಹೇಳಬಲ್ಲರು.

೬. ಪ್ರಾಥಮಿಕ ಶಾಲೆಗಳ ಕಿರಿಯ ತರಗತಿಗಳಲ್ಲಿ ಮಕ್ಕಳು ಬೆದರಿಕೆ, ಭಯ ಹಾಗೂ ಬೆರಗಿನಿಂದಾಗಿ ಸುಮ್ಮನೆ ಕುಳಿತಿರುತ್ತಾರೆ. ಪ್ರೌಢಶಾಲೆ ಹಾಗೂ ಪದವಿಪೂರ್ವ ಹಂತಗಳಲ್ಲಿ ತರಗತಿಗಳಲ್ಲಿ ಸದಾ ಗದ್ದಲದ ವಾತಾವರಣ, ಕಾರಣ ಹದಿಹರೆಯದಲ್ಲಿ ಹುಡುಗ ಹುಡುಗಿಯರ ಪರಸ್ಪರ ಸಂವಹನ ಶಕ್ತಿ ತೀವ್ರಗೊಂಡಿರುತ್ತದೆ.

೭. ಹದಿಹರೆಯದವರಿಗೆ ಭವಿಷ್ಯದ ಬಗ್ಗೆ ತೀರ್ಮಾನ ಕೈಗೊಳ್ಳುವ ಶಕ್ತಿ ಈ ಹಂತದಲ್ಲಿ ಒದಗುತ್ತದೆ. ಅವರು ವಾಸ್ತವ ಹಾಗೂ ಆದರ್ಶದ ನಡುವಣ ಅಂತರ ಗುರುತಿಸಿ ಸ್ವತಂತ್ರ ನಿರ್ಧಾರ ಕೈಗೊಳ್ಳುವ ಶಕ್ತಿ ಸಂಪಾದಿಸುತ್ತಾರೆ.

೮. ಮಕ್ಕಳು ನೈತಿಕ ಮೌಲ್ಯಗಳನ್ನು ಕಮಕ್ ಕಿಮಕ್ ಎನ್ನದೇ ಒಪ್ಪಿಕೊಂಡು ಬಿಡುತ್ತಾರೆ. ಆದರೆ ಕುಮಾರ ಕುಮಾರಿಯರು ನೈತಿಕ ವಿಧಿ ನಿಷೇಧಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ ಕಸಿವಿಸಿಗೊಳಿಸುವ ಹಲವಾರು ಪ್ರಶ್ನೆಗಳನ್ನು ಕೇಳುತ್ತಾರೆ. “ಏಕೆ”? ಎಂಬ ಪ್ರಶ್ನೆ ಇಲ್ಲಿ ಬಲವಾಗುತ್ತದೆ. ಸರಿ ತಪ್ಪುಗಳ ಪ್ರಜ್ಞೆ ಬಲಿಯುತ್ತದೆ.

## ನೈತಿಕ ವಿಕಾಸ

ಕಾನೂನುಗಳನ್ನು, ನಿಯಮಗಳನ್ನು ಜನ ಉಲ್ಲಂಘಿಸಿದಾಗ ಮತ್ತು ಕೆಲವೊಮ್ಮೆ ನಿಯಮಗಳು ಕೆಲವೇ ಕೆಲವರಿಗೆ ಅನ್ವಯಗೊಂಡಾಗ ಹದಿಹರೆಯದವರು ಹೈರಾಣಾಗುತ್ತಾರೆ. ’ಅದೇಕೆ ಹಾಗೆ?’ ಎಂದು ಪ್ರಶ್ನಿಸುತ್ತಾರೆ. ‘ಆಡುವುದು ಒಂದು, ಮಾಡುವುದು ಮತ್ತೊಂದು’ ಅವರ ಪಾಲಿಗೆ ನುಂಗಲಾರದ ತುತ್ತು.

ಹದಿಹರೆಯದವರು ಕೋಲ್‌ಬರ್ಗ್ ಅವರು ಪ್ರತಿಪಾದಿಸಿದ ಸಾಂಪ್ರದಾಯಿಕ ನೈತಿಕತೆ ಹಂತದಲ್ಲಿರುತ್ತಾರೆ. ಈ ಹಂತದಲ್ಲಿ ಅವರು ನೈತಿಕವಾಗಿ ಬೇರೆಯವರು ಉತ್ತಮ ಎಂದು ಎಂದು ಹೇಳಿದ್ದನ್ನು ಸ್ವೀಕರಿಸುತ್ತಾರೆ ಅಥವಾ ನಿರಾಕರಿಸುತ್ತಾರೆ. ಕುಟುಂಬ ಹಾಗೂ ಸ್ನೇಹಿತರು ಸೂಚಿಸಿದ ನೈತಿಕ ಮೌಲ್ಯಗಳನ್ನು ಸ್ವೀಕರಿಸಿ ವ್ಯವಸ್ಥೆಯನ್ನು ಕಾಪಾಡುತ್ತಾರೆ. ಹದಿಹರೆಯದ ಉತ್ತರಾರ್ಧದಲ್ಲಿ ಸ್ನೇಹಿತರು ಅಥವಾ ಕುಟುಂಬಕ್ಕಿಂತ ಮುಖ್ಯವಾಗಿ ಸಾಮಾಜಿಕ ವ್ಯವಸ್ಥೆ ಹೇಗೆ ಪರಿಭಾವಿಸುತ್ತಾರೋ ಹಾಗೆ ನಡೆದುಕೊಳ್ಳಬಯಸುತ್ತಾರೆ. ಸಾಮಾಜಿಕ ಕಟ್ಟುಕಟ್ಟಳೆಗಳನ್ನು ಪಾಲಿಸಲು ಇಚ್ಛಿಸುತ್ತಾರೆ. ಇವರಲ್ಲಿ ಕೆಲವರು ವಯಸ್ಕ ಹಂತಕ್ಕೆ ದಾಟುವಾಗ ತಮ್ಮದೇ ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಂಡು ಸಾಮಾಜಿಕ ವ್ಯವಸ್ಥೆಯನ್ನೂ ಧಿಕ್ಕರಿಸಬಹುದು. ಆದರೆ ಅಂಥವರ ಸಂಖ್ಯೆ ತೀರ ನಗಣ್ಯ.

"ಹನುಮದ್ವಿಕಾಸಕ್ಕೆ ಇಲ್ಲ ಎಲ್ಲೆ" ಇದು ಕವಿ ಎಂ. ಗೋಪಾಲಕೃಷ್ಣ ಅಡಿಗರು 'ವರ್ಧಮಾನ' ಕವಿತೆಯಲ್ಲಿ ಯುವಜನಾಂಗದ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯ ಕಪಿವರ ಹನುಮಂತ ಅಣುವಾಗಬಲ್ಲ, ಮಹತ್ತಾಗಬಲ್ಲ, ಸ್ಥೂಲವಾಗಬಲ್ಲ. ಅಂತೆಯೇ ಹದಿಹರೆಯರವರ ವಿಕಾಸಕ್ಕೆ ಇತಿಮಿತಿಗಳಿಲ್ಲ ಅವರನ್ನು ಅರಿತು ಒಂದು ಸೂಕ್ತ ಆವರಣ ಸೃಷ್ಟಿಸುವ ಹೊಣೆ ಹಿರಿಯರ ಮೇಲಿದೆ. ಹದಿಹರೆಯದವರು ಕೂಡ ವಿಕಾಸದ ಹಂತದಲ್ಲಿ ತಾವು ನಿರ್ವಹಿಸಬೇಕಾದ ಕಾರ್ಯಗಳನ್ನು ಚೆನ್ನಾಗಿ ಅರಿತು ಆಚರಿಸಬೇಕು. ಇದರಿಂದ ಅವರ ಬಾಳಿನಲ್ಲಿ ಸಂತಸ, ಯಶಸ್ಸು ತುಂಬಿಕೊಳ್ಳುತ್ತದೆ. ಈ ಕಾರ್ಯಗಳನ್ನು ನಿರ್ವಹಿಸಲು ಅಸಮರ್ಥರಾದರೆ ಹತಾಶೆ ಉಂಟಾಗುತ್ತದಲ್ಲದೆ ವಿಕಾಸದ ಮುಂದಿನ ಹಂತದಲ್ಲೂ ತೊಂದರೆಗಳು ಉದ್ಭವಿಸುತ್ತದೆ.

**ಸಮಸ್ಯೆಗಳ ಮೂಟೆ**

ಬಾಲ್ಯದಿಂದ ಕೌಮಾರ್ಯದೆಡೆಗೆ ಸಾಗಿ ಪ್ರೌಢರಾಗುವ ಹಂತದಲ್ಲಿರುವ ಹದಿಹರೆಯದವರು ಎದುರಿಸುವ ಸಮಸ್ಯೆಗಳು ಹತ್ತು ಹಲವಾರು.

ಮನೆ ಹಾಗೂ ಶಾಲೆಗಳಲ್ಲಿ ಇತರರ ಜೊತೆ ಹೊಂದಿಕೊಳ್ಳಲು ಒದ್ದಾಡುತ್ತಾರೆ. ಮನೆಯಲ್ಲಿ ಹೆತ್ತವರ ಬಿಗಿ ಧೋರಣೆ, ಕಠೋರ ಶಿಸ್ತು,

ನಿರ್ಬಂಧ, ಆಯ್ಕೆಗೆ ಅವಕಾಶ ನೀಡದಿರುವುದು. ಸ್ವತಂತ್ರ ನಿರ್ಧಾರ ಕೈಗೊಳ್ಳುವುದಕ್ಕೆ ಅಡ್ಡಿ ಬರುವುದು, ಪ್ರತಿಯೊಂದರಲ್ಲೂ ಮೂಗು ತೂರಿಸುವುದು, ಸ್ನೇಹಿತರಂತೆ ನಡೆಸಿಕೊಳ್ಳದಿರುವುದು, ಅತಿಯಾದ ಒತ್ತಡ ಹೇರುವುದು, ಸದಾ ಬೈದು ಭಂಗಿಸುವುದು ಮುಂತಾದ ಹೆತ್ತವರ ನಡತೆಯ ವಿರುದ್ಧ ಅವರು ಬಂಡೇಳುತ್ತಾರೆ. ರೋಸಿ ಹೋಗಿ ಮನೆಬಿಟ್ಟು ಓಡಿಹೋದರೂ ಹೋಗಬಹುದು. ಕೆಲವೊಮ್ಮೆ ಆತ್ಮಹತ್ಯೆಗೂ ಮನ ಮಾಡಬಹುದು. ತಂದೆ ತಾಯಿಗಳ ವರ್ತನೆಯಿಂದ ಬೇಸತ್ತ ಕೆಲವು ಹುಡುಗರು ಮಾದಕ ದ್ರವ್ಯವ್ಯಸನಿಗಳೂ ಭೂಗತ ಜಗತ್ತಿನ ದೊರೆಗಳ ಬಂಟರೂ ಅಪರಾಧಿಗಳೂ ಆಗಬಹುದು.

ಶಾಲೆಯಲ್ಲೂ ಶಿಕ್ಷಕರ ಬಿಗಿವರ್ತನೆ ಮತ್ತು ಅಶಿಸ್ತು ಅವರಿಗೆ ಹಿಡಿಸದು, ದಿನವಿಡೀ ಸುಮ್ಮನೆ ಕುಳಿತು ಪಾಠ ಕೇಳುವುದೆಂದರೆ ಬೇಸರ. ಶಿಕ್ಷಕರ ಪಕ್ಷಪಾತಿ ಧೋರಣೆಯೂ ಕೋಪ ಬರಿಸುತ್ತದೆ. ಶಿಕ್ಷಕರು ಬಿಗಿಯಾದಷ್ಟೂ ಇವರು ಹಟಮಾರಿಗಳಾಗುತ್ತಾರೆ.

ಭವಿಷ್ಯದಲ್ಲಿ ಅನಿಶ್ಚಿತತೆ, ನಿರುದ್ಯೋಗ, ಬಡತನ ಅಥವಾ ಕೈತುಂಬ ಹಣ ಇವೂ ಅವರನ್ನು ಕಾಡುತ್ತವೆ.

“ನಾನು ಯಾರು? ನನ್ನ ಪಾತ್ರವೇನು? ನಾನು ಮಗುವಲ್ಲ. ಹಾಗಾದರೆ ಪ್ರೌಢನೇ? ಪ್ರೌಢನೆಂದು ಹಿರಿಯರು ತಿಳಿಯುತ್ತಿಲ್ಲ. ಹಾಗಾದರೆ ಮಗುವೇ?” ಈ ಬಗೆಯ ತಮ್ಮ ಪಾತ್ರದ ಬಗೆಗಿನ ದ್ವಂದ್ವ ಅಥವಾ ಬಿರುಕು ಕಂಡು ಗೊಂದಲಕ್ಕೆ ಈಡಾಗುತ್ತಾರೆ. ತಮ್ಮ ಕನಸುಗಳು ಹಾಗೂ ಹೆತ್ತವರ ನಿರೀಕ್ಷೆಗಳ ನಡುವಣ ತಾಕಲಾಟದಿಂದ ನಲುಗುತ್ತಾರೆ. ತಮ್ಮ ಭಾವಾತಿರೇಕ, ಕೋಪಾವೇಶ, ದುಃಖ–ದುಮ್ಮಾನಗಳಿಗೆ ಏನು ಕಾರಣ ಎಂದು ಅರಿಯಲಾಗದೆ ಮತ್ತಷ್ಟು ಖಿನ್ನರೂ ಆಗುತ್ತಾರೆ.

ಲೈಂಗಿಕ ಕುತೂಹಲ ತಣಿಸುವ ವೈಜ್ಞಾನಿಕ ಮಾಹಿತಿ ಅವರಿಗೆ ಲಭ್ಯವಿಲ್ಲ. ಹೆತ್ತವರ ಹಾಗೂ ಶಿಕ್ಷಕರ ಜೊತೆ ಈ ಬಗ್ಗೆ ಮುಕ್ತ ಸಂವಾದ ನಡೆಸಲು ಅವಕಾಶವಿಲ್ಲದಿರುವುದರಿಂಧ ಕದ್ದುಮುಚ್ಚಿ ಅಶ್ಲೀಲ ಸಾಹಿತ್ಯ ಓದಿ ‘ವಿಕೃತ ಚಿಂತನ’ವನ್ನು ರೂಪಿಸಿಕೊಳ್ಳುತ್ತಾರೆ. ವೀರ್ಯಸ್ಖಲನ, ಹಸ್ತಮೈಥುನ ಇವೆಲ್ಲ ಅಪರಾಧವೆಂದು ಭಾವಿಸಿ ಮತ್ತಷ್ಟು ಕೀಳರಿಮೆ

ಬೆಳೆಸಿಕೊಳ್ಳುತ್ತಾರೆ. ಅನ್ಯಲಿಂಗಿಗಳನ್ನು ಆಕರ್ಷಿಸುವ ಶಕ್ತಿ ತನ್ನಲಿಲ್ಲ ಎಂದು ಕೆಲವರು ಕ್ರಮೇಣ 'ಹಿಂಸಾನಂದಿ'ಗಳೂ ವಿಕೃತಕಾಮಿಗಳೂ ಆಗಬಹುದು.

ಹುಡುಗರು ದಾರಿ ತಪ್ಪುತ್ತಿದ್ದಾರೆ, ಅವಿಧೇಯರಾಗುತ್ತಿದ್ದಾರೆ ಎಂದು ಹಿರಿಯರು ಭಾವಿಸುವುದು, ಹಿರಿಯರು ತಮ್ಮನ್ನು ಸಹಾನುಭೂತಿಯಿಂದ ನೋಡುತ್ತಿಲ್ಲ ಎಂದು ಕಿರಿಯರು ಭಾವಿಸುವುದು – ಈ ತಪ್ಪು ಕಲ್ಪನೆಯಿಂದಾಗಿ 'ತಲೆಮಾರುಗಳ ಅಂತರ'ವುಂಟಾಗಿ ಹದಿಹರೆಯದವರು ತಳಮಳಗೊಂಡು ಸುಲಭದಲ್ಲಿ ಸಾಂತ್ವನ ಲಭಿಸುವ ಅಗ್ಗದ ರಂಜನೆಗೆ ಬಲಿಯಾಗುವ ಸಾಧ್ಯತೆಗಳೂ ಇವೆ.

ಹದಿಹರೆಯದವರು ಅನುಭವಿಸುತ್ತಿರುವ ಮೂರು ಮುಖ್ಯ ಸಮಸ್ಯೆಗಳೆಂದರೆ ಮಾದಕ ದ್ರವ್ಯ ಸೇವನೆ, ಭಾವ ತುಮುಲ ಹಾಗೂ ಆತ್ಮಹತ್ಯೆ.

ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶಗಳಲ್ಲಿ ಪ್ರೌಢಶಾಲಾ ಹಾಗೂ ಪದವಿಪೂರ್ವ ಹಂತದ ವಿದ್ಯಾರ್ಥಿಗಳಲ್ಲಿ ಮಾದಕ ದ್ರವ್ಯ ಹಾಗೂ ಉದ್ದೀಪನದ್ರವ್ಯ ಸೇವನೆ ಆಘಾತಕಾರವಾದ ರೀತಿಯಲ್ಲಿ ವರದಿಯಾಗುತ್ತಿದೆ. ಸಾಮಾಜಿಕ ಹೊಂದಾಣಿಕೆಯಿಲ್ಲದ ಹದಿಹರೆಯದವರು ನಿರಂತರವಾಗಿ ಈ ಮಾದಕದ್ರವ್ಯ ಸೇವನೆ ಮಾಡಿದರೆ, ಹೊಂದಾಣಿಕೆ ಇರುವವರು ಆರಂಭದಲ್ಲಿ ಪ್ರಯೋಗ ಮಾಡಿ ನೋಡುವ ಕುತೂಹಲದಿಂದ ಈ ವ್ಯಸನಕ್ಕೆ ಬಲಿ ಬೀಳುತ್ತಿದ್ದಾರೆ. ಮಾದಕದ್ರವ್ಯ ಸೇವನೆಯಿಂದ ಮನಸ್ಸು ಹಗುರವಾಗುತ್ತದೆ. ಸ್ಫೂರ್ತಿ ಲಭಿಸುತ್ತದೆ, ಅಧಿಕ ಶಕ್ತಿ ಲಭಿಸುತ್ತದೆ ಎಂಬ ಹುಚ್ಚು ಕಲ್ಪನೆಗಳಿಗೆ ಬಲಿಯಾಗಿ ಹದಿಹರೆಯದವರು ಈ ದ್ರವ್ಯಗಳ ದಾಸರಾಗುವ ಅಪಾಯವಿದೆ. ಒಮ್ಮೆ ಈ ಚಟಕ್ಕೆ ಬಲಿ ಬಿದ್ದರೆಂದರೆ ಅದರಿಂದ ಹೊರಬರುವುದು ಕಠಿಣ ಮತ್ತು ಮಾದಕ ದ್ರವ್ಯಕ್ಕೆ ಅಂಟಿಕೊಂಡವರು ಅದಿಲ್ಲದಿರುವಾಗ ಕೊಲೆ ಸುಲಿಗೆ, ಹಿಂಸೆಗೂ ಹೇಸುವುದಿಲ್ಲ.

ಹದಿಹರೆಯದಲ್ಲಿ ಹುಡುಗರು ಹುಡುಗಿಯರು ಭಾವ ತುಮುಲಕ್ಕೆ ಒಳಗಾಗುತ್ತಾರೆ. ಹದಿಹರೆಯದ ಹುಡುಗ ಹುಡುಗಿಯರು ಇರುವ ಕುಟುಂಬಗಳಲ್ಲಿ ತರ್ಕ, ಜಗಳ, ವಿರಸ ತಪ್ಪಿದ್ದಲ್ಲ. ತಮ್ಮ ಅಸ್ಮಿತೆಯನ್ನು ಕಂಡುಕೊಳ್ಳುವ ಭರದಲ್ಲಿ ಹದಿಹರೆಯದವರು ತಂದೆ ತಾಯಿಗಳನ್ನು

ಅವಲಂಬಿಸದೆ ಸ್ವತಂತ್ರರಾಗಲು ಬಯಸುತ್ತಾರೆ. ಆದರೆ ಅನೇಕ ವಿಷಯಗಳಲ್ಲಿ ಅವರು ತಂದೆ ತಾಯಿಗಳ ಭದ್ರ ಕೋಟೆಯಲ್ಲಿ ಸೆರೆಯಾಳುಗಳಾಗಿ ವಿಹ್ವಲಗೊಳ್ಳುತ್ತಾರೆ. ಈ ಭಾವ ಕೋಲಾಹಲ ಸುಮಾರು ೧೬ ಅಥವಾ ೧೭ರ ಪ್ರಾಯದಲ್ಲಿ ತಹಬಂದಿಗೆ ಬಂದೀತು. ೧೮ರ ಹರೆಯದಲ್ಲಿ ಅದು ಕ್ರಮೇಣ ಮಾಯವಾಗುತ್ತದೆ.

ಬಹಳಷ್ಟು ಹದಿಹರೆಯದವರು ವಿಶೇಷವಾದ ತಲ್ಲಣಕ್ಕೆ ಒಳಗಾಗದಿದ್ದರೂ ಮಾನಸಿಕವಾದ ಒಳತೋಟಿಗೆ ತುತ್ತಾಗುತ್ತಾರೆ. ಕೆಲವು ಸಲ ಈ ಸಮಸ್ಯೆ ಉಲ್ಬಣಾವಸ್ಥೆ ಮುಟ್ಟಿ ಆತ್ಮಹತ್ಯೆಯಲ್ಲಿ ಕೊನೆಗೊಳ್ಳುತ್ತದೆ. ಅಮೆರಿಕದಲ್ಲಿ ಹದಿಹರೆಯದವರ ಸಾವಿಗೆ ಪ್ರಬಲ ಮೂರು ಕಾರಣಗಳಲ್ಲಿ ಆತ್ಮಹತ್ಯೆಯೂ ಒಂದು. ಇಂದು ಭಾರತದಲ್ಲೂ ಪ್ರಾಥಮಿಕ ಶಾಲಾ ೫ನೆಯ ತರಗತಿಯ ಹುಡುಗಿಯಿಂದ ಹಿಡಿದು ಪ್ರವೇಶ ಪರೀಕ್ಷೆಯಲ್ಲಿ ವಿಫಲನಾದ ವಿದ್ಯಾರ್ಥಿ ತನಕ ಬೇರೆ ಬೇರೆ ಕಾರಣಗಳಿಗಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಕರಣಗಳು ಗಣನೀಯವಾಗಿ ಹೆಚ್ಚಾಗಿವೆ. ಕಳೆದ ಎರಡು ದಶಕಗಳಲ್ಲಿ ಇದು ಅಗಾಧ ಪ್ರಮಾಣದಲ್ಲಿ ಬೆಳೆದಿದೆ.

ಹದಿಹರೆಯದ ಬೆಚ್ಚಗಿನ ಕುಡಿಗಳೇಕೆ ತಮ್ಮನ್ನು ತಾವು ಕೊಂದುಕೊಳ್ಳುತ್ತಾರೆ? ಕಾರಣಗಳು ಹಲವು. ದುಃಖ, ಖಿನ್ನತೆ, ಕೈಸೋತ ಭಾವ, ಹತಾಶೆ, ಅಸಹಾಯಕತೆ, ಭರವಸೆ ಶೂನ್ಯ ಸ್ಥಿತಿ, ತಾನು ನಿರುಪಯುಕ್ತನೆಂಬ ಭಾವನೆ ಇತ್ಯಾದಿ ಕಾರಣಗಳಿಂದಾಗಿ ಆತ್ಮಹತ್ಯೆಗಳು ನಡೆಯುತ್ತವೆ. ಮತ್ತೆ ಕೆಲವರು ತಮ್ಮ ನಿರೀಕ್ಷೆಯಂತೆ ಎಲ್ಲವೂ ಕರಾರುವಾಕ್ಕಾಗಿ ಪರಿಪೂರ್ಣವಾಗಿ ಆಗಬೇಕೆಂದು ಬಯಸುವವರು. ತಮ್ಮ ನಿರೀಕ್ಷೆಯಂತೆ ಆಗದಿದ್ದಾಗ ಆತ್ಮಹತ್ಯೆಯೊಂದೇ ದಾರಿಯೆಂದು ಅವರಿಗೆ ಕಾಣುತ್ತದೆ.

ಹೊಂದಾಣಿಕೆ ಸಮಸ್ಯೆಗಳು, ಕೌಟುಂಬಿಕ ಹಿನ್ನಲೆ, ಹೆತ್ತವರು ಮತ್ತು ಮಕ್ಕಳ ನಡುವಿನ ಸುದೀರ್ಘ ಜಗಳ ಕೂಡ ಇದಕ್ಕೆ ಕಾರಣ. ಜಗಳಗಳ ಕಾರಣದಿಂದ ಶಾಲೆ ತಪ್ಪಿಸುವುದು, ಸುಳ್ಳು ಹೇಳುವುದು, ಕದಿಯುವುದು, ಹೊಡೆದಾಟ, ಬಡಿದಾಟ, ಆರಂಭವಾಗುತ್ತದೆ. ಇದು ಆವೇಶದ ಪರಾಕಾಷ್ಠ ಸ್ಥಿತಿ ತಲುಪುತ್ತದೆ. ಆತ್ಮಹತ್ಯೆ ಮಾಡಿಕೊಳ್ಳುವ ಇರಾದೆ ಉಳ್ಳ ಹದಿಹರೆಯದವರ ಮಾತು ಹಾಗೂ ವರ್ತನೆಯಲ್ಲಿ ಈ ಕುರಿತಾದ

ಸುಳಿವುಗಳು ಯಾವುದೆಂದರೆ ಶಾಲೆಯ ಪಾಠ ಪ್ರವಚನಗಳಿಗೆ ಸಂಬಂಧಿಸಿದ ಕೆಲಸ ಕಾರ್ಯಗಳಿಗೆ ಹಿನ್ನಡೆ, ಮನೆಬಿಟ್ಟು ಓಡಿ ಹೋಗುವಿಕೆ, ಪದೇ ಪದೇ ತನಗೆ ತಾನೇ ಗಾಸಿ ಮಾಡಿಕೊಳ್ಳುವುದು, ಹಸಿವು, ಹೊಟ್ಟೆಬಾಕತನ, ಸ್ನೇಹಿತರು ಹಾಗೂ ಸರೀಕರಿಂದ ದೂರಸರಿದು ಒಂಟಿಯಾಗಿರುವಿಕೆ, ನಿದ್ರಾಹೀನತೆ, ಖಿನ್ನತೆಯ ಲಕ್ಷಣಗಳು, ಸಣ್ಣ ಕಾರಣಕ್ಕೂ ಧಾರಾಕಾರ ಅಳುವುದು, ನಾನು ಸಾಯ್ತೇನೆ, ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ" ಎಂದು ಹೆದರಿಸುವುದು, ತನ್ನ ವಸ್ತುಗಳನ್ನು ಬೇರೆಯವರಿಗೆ ಕೊಟ್ಟುಬಿಡುವುದು ಇತ್ಯಾದಿ.

ಕೆಲವೊಮ್ಮೆ ಇವು ಯಾವುವೂ ವ್ಯಕ್ತವಾಗುವುದಿಲ್ಲ. ವ್ಯಕ್ತಿ ದಿಢೀರನೆ ಆತ್ಮಹತ್ಯೆ ಮಾಡಿಕೊಂಡು ಬಿಡಬಹುದು. ಕೆಲವರಲ್ಲಿ ಮೇಲೆ ಹೇಳಿದ ಲಕ್ಷಣಗಳು ಕಾಣಿಸಿಕೊಂಡರೂ ಆತ್ಮಹತ್ಯೆ ಮಾಡಿಕೊಳ್ಳದಿರಬಹುದು. ಆದರೂ ಆತ್ಮಹತ್ಯೆಗೆ ಸಂಬಂಧಿಸಿದ ಲಕ್ಷಣಗಳು ಕಾಣಿಸಿಕೊಂಡರೆ ಹಿರಿಯರು ಅದನ್ನು ಕಡೆಗಣಿಸಬಾರದು. "ಸಾಯ್ತೀಯಾ ಸಾಯಿ; ಯಾರು ಹೆದರ್‍ತಾರೆ ಅಂತಬೇಕಲ್ಲ" ಎಂಬಂಥ ಮಾತುಗಳನ್ನಾಡಬಾರದು. ಬದಲಾಗಿ ಸಂಬಂಧ ಪಟ್ಟವರನ್ನು ಮನೋಚಿಕಿತ್ಸಕರ ಬಳಿಗೆ ಕರೆದೊಯ್ದು ಸೂಕ್ತ ಪರಿಣಿತ ಸಲಹೆ ಕೊಡಿಸುವುದು ಉತ್ತಮ. ಆತ್ಮಹತ್ಯೆ ಮಾಡಿಕೊಳ್ಳಲು ಹೋಗಿ ವಿಫಲರಾದವರನ್ನು ಹೀನಾಯವಾಗಿ ನೋಡದೆ ಸಾಂತ್ವನ ತುಂಬುವುದು, ಭರವಸೆ ಮೂಡಿಸುವುದು, ಈ ಬದುಕು ಬದುಕಲು ಯೋಗ್ಯವಿದೆ ಎಂಬ ಭಾವನೆಗಳನ್ನು ಬೆಳೆಸುವುದು ಮುಖ್ಯ.

### ಹದಿಹರೆಯದವರಿಗೆ ಹಿರಿಯರ ನೆರವು – ಮಾರ್ಗದರ್ಶಿ ಸೂತ್ರಗಳು

ಹದಿಹರೆಯದವರ ಅತೃಪ್ತಿ ಹಾಗೂ ಚಡಪಡಿಕೆಯನ್ನು ಒಪ್ಪಿಕೊಳ್ಳೋಣ. ಹದಿಹರೆಯವೆಂಬುದು ಯಾವಾಗಲೂ ಆನಂದದಾಯಕ ಅನುಭವ ವಾಗಬೇಕಾಗಿಲ್ಲ. ಅದು ಅನಿಶ್ಚಿತತೆ, ಸ್ವಸಂದೇಹ ಹಾಗೂ ಹೆಣಗಾಟಗಳ ಅವಧಿಯೂ ಹೌದು. ವೈಯಕ್ತಿಕ ನೋವು ಹಾಗೂ ಸಾಮಾಜಿಕ ಸೆಳೆತಗಳ ಒಂದು ಕಾಲಘಟ್ಟ ಇದು. ದ್ವಂದ್ವ ಅನಿಯತತೆ ಹಾಗೂ ಅನಿಶ್ಚಿತತೆ ಈ ಪ್ರಾಯದಲ್ಲಿ ತೀರ ಸಹಜ. "ನಿನ್ನ ಸಮಸ್ಯೆ ಏನು? ಯಾಕೆ ಒಂದೇ ಕಡೆ ನೀನು ಕೂತ್ಕೊಳ್ಳೋದಿಲ್ಲ? ಏನಾಯ್ತು?" ಎಂದು ಹದಿಹರೆಯದ ಹುಡುಗನನ್ನು ಪ್ರಶ್ನಿಸಿ ಪ್ರಯೋಜನವಿಲ್ಲ. ಈ ಬಗೆಯ ಪ್ರಶ್ನೆಗಳಿಗೆ ಅವನಲ್ಲಿ ಉತ್ತರಗಳಿಲ್ಲ.

ಉತ್ತರ ತಿಳಿದಿದ್ದರೂ "ನೋಡಿ ಅಪ್ಪಾ, ನನ್ನ ಮನದೊಳಗೆ ಒಂದು ಯುದ್ಧವೇ ನಡೀತಿದೆ. ಅವೈಚಾರಿಕ ತುಡಿತಗಳಿಗೆ ಸಿಲುಕಿ ನನ್ನ ಮನ ಹೋಳಾಗುತ್ತಿದೆ. ಅಸಹಜವಾದ ಕಾಮನೆಗಳಿಂದ ನನ್ನ ಎದೆ ಹೊತ್ತಿ ಉರಿಯುತ್ತಿದೆ" ಎಂದು ಆತ ಹೇಳಲಾರ.

ಹದಿಹರೆಯದ ಹುಡುಗ–ಹುಡುಗಿಯರ ಅಗತ್ಯಗಳು ಅತ್ಯಂತ ತುರ್ತಿನದ್ದಾಗಿರುತ್ತವೆ. ಅವನ್ನು ಆ ಗಳಿಗೆಯಲ್ಲೇ ಈಡೇರಿಸಿಕೊಳ್ಳಬೇಕೆಂದು ಬಯಸುತ್ತಾರೆ. ಹಾಗೆ ಆಗದೇ ಹೋದಾಗ ಹತಾಶರಾಗುತ್ತಾರೆ. ಹಸಿವು ಮತ್ತು ನೋವನ್ನು ನಾವು ಅನುಭವಿಸುವುದು, ಆದರೆ ಪದಗಳಲ್ಲಿ ಬಣ್ಣಿಸಲಾರೆವು, ಅಂತೆಯೇ ಹದಿಹರೆಯದವರ ಒಳಮನಸ್ಸಿನ ತಾಕಲಾಟಗಳು ವರ್ಣನೆಗೆ ನಿಲುಕದವು. ಹೆತ್ತವರು ಅವರ ಚಡಪಡಿಕೆ, ಚಂಚಲತೆಗಳನ್ನು ಸಹಿಸಿಕೊಳ್ಳಬೇಕು. ಅವರ ಅತೃಪ್ತಿಗಳನ್ನು ಅನುಮೋದಿಸಬೇಕು. ಅವರ ಮೇಲೆರಗಿಬೀಳದೆ ತಾಳ್ಮೆಯಿಂದ ಇದನ್ನು ಸಾಧಿಸಬಹುದು.

## ಅವರ ಅನನ್ಯ ಹೆಣಗಾಟಗಳನ್ನು ಕ್ಷುಲ್ಲಕವೆಂದು ಹೇಳಬೇಡಿ

ತಮ್ಮನ್ನು ಈ ಕೂಡಲೆ ಅರ್ಥಮಾಡಿಕೊಳ್ಳಬೇಕೆಂದು ಹದಿಹರೆಯ ದವರು ಬಯಸುವುದಿಲ್ಲ. ಭಾವ ತುಮುಲಕ್ಕೆ ತುತ್ತಾದಾಗ ಅವರ ಭಾವನೆಗಳು ತೀರ ವಿಲಕ್ಷಣ ವಿನೂತನ ಹಾಗೂ ವೈಯಕ್ತಿಕ ಎಂದು ತೋರುತ್ತದೆ. ಅವರಿಗೆ ಆಗುವ ಹಾಗೆ ಬೇರೆ ಯಾರಿಗೂ ಆಗದೇ ಇರಬಾರದು. "ನಿನ್ನದೇನು ಮಹಾ ಬಿಡು. ನಿನ್ನ ಪ್ರಾಯದಲ್ಲಿ ನನಗೂ ಹೀಗೆ ಆಗಿತ್ತು" ಎಂದು ಹೇಳಿ ತಂದೆ ತಾಯಿ ಅಣಕಿಸಬಹುದು. ಆದರೆ ತಮ್ಮ ತಂದೆ ತಾಯಿಗಳಿಗೆ ತಮ್ಮ ಸಂಕೀರ್ಣ ಭಾವನೆಗಳು ಅರ್ಥವಾಗುತ್ತಿಲ್ಲವಲ್ಲ ಎಂದು ಅವರು ನೊಂದುಕೊಳ್ಳುತ್ತಾರೆ. ಯಾವಾಗ ಹದಿಹರೆಯದ ಹುಡುಗ ಹುಡುಗಿಯರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು ಎಂಬುದು ಹಿರಿಯರ ಪಾಲಿಗೆ ಸುಲಭದ ಕೆಲಸವಲ್ಲ. ವಿಷಾದದ ಸಂಗತಿ ಎಂದರೆ ನಾವೆಷ್ಟೇ ವಿವೇಕಿಗಳಾಗಿದ್ದರೂ ಅವರ ಮನದಾಳದ ಭಾವನೆಗಳನ್ನು ಪೂರ್ತಿಯಾಗಿ ಅರಿಯಲಾರೆವು ಮತ್ತು 'ಹಿರಿಯರು ಸರಿ' ಎಂದು ಅವರು ಭಾವಿಸಲಾರರು.

## ಒಪ್ಪಿಗೆ ಹಾಗೂ ಅನುಮೋದನೆಯ ನಡುವಿನ ವ್ಯತ್ಯಾಸ ಅರಿಯಿರಿ

ನಮ್ಮ ಕುಮಾರ ಕುಮಾರಿಯರು ನೂರಾರು ಬಗೆಗಳಲ್ಲಿ ಬಂಡೇಳಬಹುದು. ಒಪ್ಪಿಗೆ ಹಾಗೂ ಅನುಮೋದನೆ, ಸಹಿಷ್ಣುತೆ ಮತ್ತು

ಪರವಾನಿಗೆ ನಡುವಿನ ವ್ಯತ್ಯಾಸವನ್ನು ನಮ್ಮ ಪ್ರತಿಸ್ಪಂದನವು ಬಿಂಬಿಸಬೇಕು. ನಾವು ತುಂಬಾ ಸಹಿಸಿಕೊಳ್ಳಬೇಕು. ಆದರೆ ಅದಕ್ಕೆ ಆತನ ಪರವಾನಿಗೆಯಿಲ್ಲ. ಹದಿಹರೆಯದವರ ಜೊತೆ ಗುದ್ದಾಡಿ ಫಲವಿಲ್ಲ. ಹಿರಿಯರ ಪಾಲಿಗೆ ಸೋಲು ಕಟ್ಟಿಟ್ಟ ಬುತ್ತಿ. ಆದುದರಿಂದ ಹಿರಿಯರು ಆದಷ್ಟು ಸುರಕ್ಷಿತವಾಗಿ ದಡ ಸೇರಬೇಕು. ಹೇಗೆ ಬಂತೋ ಹಾಗೆ ಸ್ವೀಕರಿಸಬೇಕು.

**ಹದಿಹರೆಯದವರ ಭಾಷೆ ಹಾಗೂ ನಡವಳಿಕೆಯನ್ನು ಅನುಕರಿಸಬೇಡಿ**

ಮಕ್ಕಳು ಮಕ್ಕಳೇ, ದೊಡ್ಡವರು ದೊಡ್ಡವರೇ, ಹೀಗೆಯೇ ಇರಬೇಕು. ಆದರೆ ಹದಿಹರೆಯದವರು ಉದ್ದೇಶಪೂರ್ವಕವಾಗಿ ನಮಗಿಂತ ಭಿನ್ನವಾದ ಒಂದು ಜೀವನಶೈಲಿ ಅಳವಡಿಸಿಕೊಳ್ಳುತ್ತಾರೆ. ನಾವು ಅವರ ಶೈಲಿಯನ್ನು ಅನುಕರಿಸಿದರೆ ಇನ್ನಷ್ಟು ವಿರೋಧ ಅವರಿಂದ ವ್ಯಕ್ತವಾಗುತ್ತದೆ. ಇದು ಶ್ರೀಮತಿ ಅನುರಾಧಾ ವ್ಯಕ್ತಪಡಿಸಿದ ಅಭಿಪ್ರಾಯ. "ನಾನು ನನ್ನ ಮಗಳು ಸಂಜೆ ಲೋಕಾಭಿರಾಮವಾಗಿ ಮಾತಾಡ್ತಾ ಕೂತಿದ್ದೆವು. ಅವಳು ತನ್ನ ಗೆಳತಿ ಶೋಭನಾ ಬಗ್ಗೆ ಹೇಳಿದಳು. ಶೋಭನಾಗೆ ಈಚೆಗೆ ಅವಳ ತಾಯಿ ಬಗ್ಗೆ ತುಂಬ ಕೋಪವಂತೆ. ಯಾಕೆಂದ್ರೆ ಅವಳ ತಾಯಿಗೆ ಈಗ ಪ್ರಾಯ ಐವತ್ತು. ಆದ್ರೆ ಅವಳು ಶೋಭನಾ ಡ್ರೆಸ್ ಮಾಡ್ಕೊಂಡ ಹಾಗೆ ಡ್ರೆಸ್ ಮಾಡ್ತಾಳೆ. ಲಿಪ್‌ಸ್ಟಿಕ್ ಅದೂ ಇದೂ ಬಳಸ್ತಾಳೆ. ತಾಯಿ ಮಗಳು ಇಬ್ಬರೂ ಶಾಪಿಂಗ್ ಹೊರಟ್ರೆ 'ಇವರು ನಿಮ್ಮ ಅಕ್ಕನಾ?' ಅಂತ ಕೇಳ್ತಾರೆ ಅಂತ ಶೋಭನಾಗೆ ಸಿಟ್ಟು, ಈಗ ನನ್ನ ಮಗಳು ಹೇಳ್ತಾಳೆ 'ಅಮ್ಮಾ ನೀನಂದ್ರೆ ನನಗಿಷ್ಟ ಯಾಕೆ ಗೊತ್ತ? ನೀನು ಚೆನ್ನಾಗಿ ಡ್ರೆಸ್ ಮಾಡ್ತೀಯಾ. ಒಳ್ಳೆ ತಿಂಡಿ ಮಾಡ್ತಿಯ. ನಿಜ ಹೇಳಬೇಕೆಂದ್ರೆ ನೀನು ಅಮ್ಮನ ಹಾಗೆ ಕಾಣ್ತೀಯಾ. ಅಮ್ಮನ ಹಾಗೆ ನಡ್ಕೊಳ್ತಿಯಾ. ಅಮ್ಮನ ಹಾಗೆ ಮಾತಾಡ್ತಿಯಾ, ನೀನೇ ನಿಜವಾದ ಅಮ್ಮ'.

**ಮುಳ್ಳುಗಳು ಬೇಡ**

ಸಾಮಾನ್ಯವಾಗಿ ಹೆತ್ತವರು ತಮ್ಮ ವಿಧಾನಗಳನ್ನು ಗುಣಮಟ್ಟಗಳನ್ನು ಮಕ್ಕಳ ಮೇಲೆ ಹೇರುತ್ತಾರೆ. ಪದೇ ಪದೇ ತಮ್ಮ ಮಕ್ಕಳನ್ನು ತಿದ್ದುತ್ತಲೇ

ಇರುತ್ತಾರೆ. ಹದಿಹರೆಯದ ತಮ್ಮ ಮಕ್ಕಳ ನಡತೆಯಲ್ಲಿ ಕಂಡುಬರುವ ಸಣ್ಣಪುಟ್ಟ ಕುಂದುಕೊರತೆಗಳನ್ನು ಎತ್ತಿ ಆಡುತ್ತಲೇ ಇರುತ್ತಾರೆ. ಹೀಗೆ ಮಾಡುವುದು ಅವರ ಒಳ್ಳೆಯದಕ್ಕೇ, ನಾಳೆ ಅವರು ಒಳ್ಳೆಯರಾಗಬೇಕು ಎಂಬ ಕಾರಣಕ್ಕೆ ಎಂಬ ಸಮರ್ಥನೆಯನ್ನು ನೀಡುತ್ತಾರೆ. ಈ ಬಗೆಯ ಪ್ರಾಮಾಣಿಕತೆ ಹೆತ್ತವರು ಹಾಗೂ ಹದಿಹರೆಯದವರ ನಡುವಣ ಸಂಪರ್ಕವನ್ನು ಕಡಿತಗೊಳಿಸುತ್ತದೆ. ಯಾರೇ ಆಗಲಿ ನಮ್ಮ ತಪ್ಪುಗಳನ್ನು ನಮ್ಮ ಮುಖಕ್ಕೆ ಉಗಿದು ಹೇಳಿದರೆ ಅದು ಎಳ್ಳಷ್ಟೂ ಇಷ್ಟವಾಗುವುದಿಲ್ಲ. ಅಂಥದ್ದನ್ನು ನಾವೆಂದೂ ಸಹಿಸಿಕೊಳ್ಳುವುದಿಲ್ಲ. ತಮ್ಮ ವೈಯಕ್ತಿಕ ಕುಂದು ಕೊರತೆಗಳನ್ನು ತಂದೆ ತಾಯಿಗಳು ಎತ್ತಿ ಆಡುವುದು ಹದಿಹರೆಯದವರಿಗಂತೂ ಸುತರಾಂ ಹಿಡಿಸದು, ಆದುದರಿಂದ ಗುಣ ನಡತೆಗಳಲ್ಲಿನ ಕಾಳಿಕೆಗಳ ಬಗ್ಗೆ ಬೆಳಕು ಚೆಲ್ಲುವುದು ಶ್ರೇಯಸ್ಕರವಲ್ಲ, ಬಹಿರಂಗವಾಗಿ ಎಲ್ಲರ ಎದುರಿಗೇ ತಪ್ಪೊಪ್ಪಿಕೊಳ್ಳುವ ಪ್ರಸಂಗಗಳು ಎದುರಾದರೆ ಹದಿಹರೆಯದವರು ತಮ್ಮ ಆಂತರ್ಯದಲ್ಲಿ ಅವುಗಳನ್ನು ತಿದ್ದಿಕೊಳ್ಳಲು ಬಯಸುವುದೇ ಇಲ್ಲ. ತಪ್ಪುಗಳು ಕಂಡುಬಂದಾಗ ಅವರು ಸಂಕಷ್ಟದ ಸ್ಥಿತಿಯಿಂದ ಪಾರಾಗಲು ಹಿರಿಯರು ನೆರವು ನೀಡಬೇಕು. ಅವರ ವ್ಯಕ್ತಿತ್ವ ಹಾಗೂ ಚಾರಿತ್ರ್ಯವನ್ನು ಸದೃಢವಾಗಿ ನಿರ್ಮಾಣ ಮಾಡಬಲ್ಲಂಥ ಸಂಬಂಧಗಳನ್ನು ಹಾಗೂ ಅನುಭವಗಳನ್ನು ಕಟ್ಟಿಕೊಡುವುದು ಹಿರಿಯರಾದ ನಮ್ಮ ಕರ್ತವ್ಯ. ಹದಿಹರೆಯದವರು ತಮ್ಮ ಸಹಜ ಸಾಮರ್ಥ್ಯಗಳಿಗೆ ತಕ್ಕಂತೆ ಬದುಕಲು ಇಂಬು ನೀಡುವುದು ಹಿರಿಯರ ಆದ್ಯ ಕರ್ತವ್ಯ. 'ನೀನು ಹೀಗಾಗಬೇಕು, ಹಾಗಾಗಬೇಕು' ಎಂದು ಪದೇ ಪದೇ ಗಟ್ಟಿಗಂಟಲಿನಲ್ಲಿ ಒದರದೆ ಸಾಧನೆಗೆ ಯೋಗ್ಯವಾದ ಮಾರ್ಗವನ್ನು ಹಿರಿಯರು ಮೌನದಲ್ಲಿ ತೆರೆದು ತೋರಬೇಕು.

### ಚಿಕ್ಕವನೆಂದು ಬಗೆಯದಿರಿ

ಕಿಶೋರಾವಸ್ಥೆಯಲ್ಲಿರುವ ಪ್ರತಿಯೊಬ್ಬ ಹುಡುಗ ಹುಡುಗಿಯರಲ್ಲಿ ಏನಾದರೊಂದು ಕೊರತೆಯಿದ್ದು ಆ ಬಗ್ಗೆ ಅವರು ತುಂಬ ಸೂಕ್ಷ್ಮವಾಗಿರುತ್ತಾರೆ. ಆದರೆ ಸುತ್ತಮುತ್ತಲಿನವರು ಇದನ್ನು ಗಮನಿಸಿ ಗೇಲಿ ಮಾಡುತ್ತಾರೆ, ಅವಹೇಳನ ಮಾಡುತ್ತಾರೆ, 'ಕುಳ್ಳ', 'ಕುಂಬಳಕಾಯಿ', 'ಡೊಳ್ಳ', 'ಲಂಬೂ', 'ಧಡಿಯ', 'ಕರಿಯ', 'ಗಂಡುಬೀರಿ' – ಹೀಗೆಲ್ಲ

ಕರೆಯುತ್ತಾರೆ. ಇಂಥ ಅಡ್ಡ ಹೆಸರುಗಳಿಂದ ಕರೆದಾಗ ಅವರಿಗೆ ಹಿತವೆನಿಸುವುದಿಲ್ಲ. ಒಂದೆರೆಡು ಸಲ ಅವರು ನಕ್ಕರೂ ಅಡ್ಡ ಹೆಸರಿನಿಂದಲೇ ಕರೆಯಲು ಶುರುಮಾಡಿದಾಗ ಖಂಡಿತಕ್ಕೂ ಅವರಿಗೆ ಇಷ್ಟವಾಗುವುದಿಲ್ಲ. ಹೆತ್ತವರು ತಮ್ಮ ಮಕ್ಕಳನ್ನು ಯಾವತ್ತೂ ತಮಾಷೆಗಾಗಿಯೂ ಇಂಥ ಅಡ್ಡ ಹೆಸರುಗಳಿಂದ ಕರೆಯಬಾರದು. ತಂದೆ ತಾಯಿಗಳು ಹೀಗಳೆದಾಗ ಮನಸ್ಸಿನಲ್ಲಿ ಆಳವಾದ ಗಾಯವಾಗುತ್ತದೆ. ಪರಿಣಾಮ ಶಾಶ್ವತ.

ಹೆತ್ತವರು ಹದಿಹರೆಯದವರನ್ನು 'ಚಿಕ್ಕ ಮಗು' ಎಂದು ಪರಿಗಣಿಸಕೂಡದು. ಕೆಲವು ವರ್ಷಗಳ ಹಿಂದೆ ನೀನು ಎಷ್ಟು ಪುಟ್ಟದಾಗಿದ್ದೆ, ಮುದ್ದು ಮುದ್ದಾಗಿದ್ದೆ ಎಂದು ಅವರು ನೆನಪು ಮಾಡಿಕೊಡುತ್ತಾರೆ, ಆದರೆ ಹದಿಹರೆಯದವರಿಗೆ ಹಾಸಿಗೆಯಲ್ಲೇ ಮಲಮೂತ್ರ ಮಾಡಿಕೊಳ್ಳುವ, ಬಾಯಲ್ಲಿ ಬೆರಳಿಟ್ಟು ಚೀಪುವ ಬಾಲ್ಯದ ದಿನಗಳನ್ನು ನೆನೆಯಲು ಮನವಿಲ್ಲ. ಅವರು ತಮ್ಮ ಬಾಲ್ಯ ಮತ್ತು ತಮ್ಮ ಈಗಿನ ಸ್ಥಿತಿಯ ನಡುವೆ ಅಂತರ ಕಾಯ್ದುಕೊಳ್ಳಲು ಬಯಸುತ್ತಾರೆ. ತಾವೀಗ ಚಿಕ್ಕವರಲ್ಲ, ದೊಡ್ಡವರಾಗಿದ್ದೇವೆ ಎಂದು ಭಾವಿಸುತ್ತಾರೆ. ಹೆತ್ತವರು ಈ ಭಾವನೆಯನ್ನು ಗೌರವಸಬೇಕಲ್ಲದೆ "ನೀನಿನ್ನೂ ಚಿಕ್ಕವಳು. ನಿನಗೇನೂ ಗೊತ್ತಾಗೋಲ್ಲ. ನೀನು ಸುಮ್ಮನಿರು" ಎಂದು ಅವರನ್ನು ಚಿಕ್ಕವರನ್ನಾಗಿಸಬಾರದು, ಕಿಶೋರ ಕಿಶೋರಿಯನ್ನು ನಾವು ಹೊಗಳುವುದಿರಲಿ, ಟೀಕಿಸುವುದಿರಲಿ, ಶಿಸ್ತಿಗೆ ಒಳಪಡಿಸುವುದಿರಲಿ – ಏನೇ ಮಾಡಿದರೂ ಅವರು ಈಗ ಚಿಕ್ಕಮಕ್ಕಳಲ್ಲ, ಬಾಲ್ಯದ ಅವಧಿ ಮುಗಿದು ಪ್ರೌಢರಾಗುವ ಹಂತದತ್ತ ಸಾಗುತ್ತಿದ್ದಾರೆ ಎಂಬ ಅರಿವಿನಿಂದಲೇ ವ್ಯವಹರಿಸಬೇಕು.

**ಪರಪುಟ್ಟರನ್ನಾಗಿಸಬೇಡಿ**

ಕಿಶೋರ ಕಿಶೋರಿಯರು ಪರಾವಲಂಬನವನ್ನು ದ್ವೇಷಿಸುತ್ತಾರೆ. ಅವರಿಗೆ ಸ್ವಾತಂತ್ರ್ಯ, ಸ್ವಾಯತ್ತೆ ಬೇಕು. ಆದರೆ ಹದಿಹರೆಯದವರ ಸ್ವಾತಂತ್ರ್ಯವನ್ನು ತಡೆಹಿಡಿದ ತಂದೆ ತಾಯಿಗಳಿಗೆ ನಿರಾಶೆ – ಗೋಳು ತಪ್ಪಿದ್ದಲ್ಲ. ಸ್ವಸಾಮರ್ಥ್ಯವುಳ್ಳವರು ಎಂಬ ಭಾವವನ್ನು ನಾವು ಅವರಲ್ಲಿ ಹೆಚ್ಚು ಹೆಚ್ಚು ಬಿಂಬಿಸಿದಷ್ಟೂ ಅವರು ನಮ್ಮ ಜೊತೆ ಹೆಚ್ಚು ಚೆನ್ನಾಗಿ

ವರ್ತಿಸುತ್ತಾರೆ. ಇಲ್ಲವಾದರೆ ನಮ್ಮನ್ನು ಜನ್ಮೇಪಿ ದ್ವೇಷಿಸುತ್ತಾರೆ. ಓರ್ವ ವಿವೇಕಿಯಾದ ಪಾಲಕ ತನ್ನ ಮಗಳ ಅಥವಾ ಮಗನ ಬೆಳವಣಿಗೆಯ ಗತಿಯನ್ನು ವಿಕಾಸದ ಮಜಲುಗಳನ್ನು ಸಹಾನುಭೂತಿಯಿಂದ ಗಮನಿಸುತ್ತಾನೆ, ಆದರೆ ಮಧ್ಯ ಪ್ರವೇಶಮಾಡುವ ಮನದಿಚ್ಛೆಯನ್ನು ನಿಗ್ರಹಿಸಿಕೊಳ್ಳುತ್ತಾನೆ. ಹದಿಹರೆಯದವರ ಮೇಲಿನ ಕಾಳಜಿ ಹಾಗೂ ಆದರದ ದೆಸೆಯಿಂದಾಗಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಅವರಿಗೆ ತಮ್ಮದೇ ಆಯ್ಕೆಗಳನ್ನು ಮಾಡಿಕೊಳ್ಳಲು ತಮ್ಮದೇ ವಿಚೇಚನಾ ಶಕ್ತಿಯನ್ನು ಬಳಸಿಕೊಳ್ಳಲು ಅನುವು ಮಾಡಿಕೊಡಬೇಕು. ಸ್ವಾತಂತ್ರ್ಯವನ್ನು ಬಿಂಬುಸುವಂಥ ಮಾತುಗಳು ಅವರ ಬಾಯಿಯಿಂದ ಬರಬೇಕು.

"ನೋಡಪ್ಪಾ, ನೀನೇ ಆಯ್ಕೆ ಮಾಡು"

"ನಿನಗೆ ಏನು ಬೇಕು, ನೀನೇ ನಿರ್ಧಾರ ಮಾಡು"

"ನಿನ್ನ ನಿರ್ಧಾರ, ನಿನ್ನ ಆಯ್ಕೆ, ನಮ್ಮದೇನಿಲ್ಲ."

"ನೀನು ಏನು ಆಯ್ಕೆ ಮಾಡ್ತಿಯೋ ಅದೇ ನಮಗೂ ಇಷ್ಟ"

ಪುಟ್ಟ ಮಕ್ಕಳಿಗೆ ಅಪ್ಪ ಅಮ್ಮ "ಆಯ್ತು" "ಎಸ್" ಎಂದುಬಿಟ್ಟರೆ ಬಹಳ ಖುಷಿ. ಆದರೆ ತಮ್ಮ ಬದುಕನ್ನು ರೂಪಿಸುವ ವಿಚಾರದಲ್ಲಿ ಹದಿಹರೆಯದವರು 'ದನಿ' ಮತ್ತು 'ಆಯ್ಕೆ' ಎರಡನ್ನೂ ಅಪೇಕ್ಷಿಸುತ್ತಾರೆ.

**ತಪ್ಪು ತಿದ್ದಲು ಅವಸರವೇಕೆ?**

ನಿಮ್ಮ ಹದಿಹರೆಯದ ಹುಡುಗ ಹುಡುಗಿಯರ ತಪ್ಪುಗಳನ್ನು ನೀವು ತಿದ್ದಲು ಹೋದರೆ ಅವರು ಉಡಾಫೆಯಿಂದ ವರ್ತಿಸುತ್ತಾರೆ. ಅವರನ್ನು ನೀವು ಮುಟ್ಟಲು ಸಾಧ್ಯವಿಲ್ಲ. ಅವರಿಗೆ ಪಾಠ ಕಲಿಸಲು ಸಾಧ್ಯವಿಲ್ಲ. ಯಾರಿಂದಲೂ ಪ್ರಭಾವಕ್ಕೆ ಒಳಗಾಗಬಾರದು ಎಂದು ಅವರು ತೀರ್ಮಾನಿಸಿದಂತೆ ಬದುಕುತ್ತಾರೆ. ತಂದೆ ತಾಯಿ ನೀಡುವ ಸಲಹೆ ಸೂಚನೆ ಉಪದೇಶಗಳನ್ನು ಅವರು ಇಷ್ಟ ಪಡುವುದಿಲ್ಲ. ಸ್ವಯಂ ತಪ್ಪುಗಳನ್ನು ಮಾಡಿ ಆ ತಪ್ಪುಗಳಿಂದ ಪಾಠ ಕಲಿಯಲು ಬಯಸುತ್ತಾರೆ. ಈ ಬಗೆಯ ಕಲಿಕೆಯಲ್ಲೇ ಅವರಿಗೆ ಏನೋ ಒಂದು ಸಮಾಧಾನ ತೃಪ್ತಿ. ಆದರೆ ಉರಿನಾಲಗೆಯ ಅಪ್ಪ ತನ್ನ ಪ್ರಾಯಕ್ಕೆ ಬಂದ ಮಕ್ಕಳಿಗೆ

ವಾಸ್ತವವನ್ನು ಸರಿಯಾಗಿ ಕಲಿಸಬೇಕು. ಏಕೆಂದರೆ ಕೌಟುಂಬಿಕ ಸಂಬಂಧಗಳಲ್ಲಿ ಸತ್ಯವೆಂಬುದುದೊಂದು ಮಾರಕ ಆಯುಧ. ಕರುಣೆಯಿಲ್ಲದ ಸತ್ಯ ಪ್ರೇಮದ ಬುಡಕ್ಕೇ ಕೊಡಲಿ ಏಟು ಹಾಕುತ್ತದೆ. ಕೆಲವು ತಂದೆ ತಾಯಿಗಳು ತಾವು ಎಲ್ಲಿ, ಹೇಗೆ ಮತ್ತು ಯಾಕೆ ಸರಿಯಿದ್ದೇವೆ ಎಂದು ಬಹಳ ವಾದ ಮಾಡುತ್ತಾರೆ. ಆದರೆ ಈ ಬಗೆಯ ತಾರ್ಕಿಕ ಹಠದಿಂದ ಸಂಬಂಧಗಳಲ್ಲಿ ಕಹಿ, ನಿರಾಶೆ ಹಾಗೂ ವ್ಯಗ್ರತೆ ಚಿಗುರೊಡೆಯುತ್ತದೆ. ಪರಸ್ಪರ ವ್ಯತಿರಿಕ್ತ ಮನೋಭಾವಗಳು ತಾಕಲಾಡುವಲ್ಲಿ ವಾಸ್ತವಾಂಶಗಳು ಯಾರ ಮನಸ್ಸಿಗೂ ನಾಟುವುದಿಲ್ಲ.

**ಇರಲಿ ಖಾಸಗಿತನದ ಮುಸುಕು**

ಹದಿಹರೆಯದವರಿಗೆ ಖಾಸಗಿತನವೆಂದರೆ ಇಷ್ಟ. ತಮ್ಮ ಖಾಸಗಿತನದ ಮುಸುಕು ಸರಿಸಿ ತಂದೆ ತಾಯಿಗಳು ಅಲ್ಲಿ ಇಣಿಕಿ ಹಣಿಕಿ ನೋಡುವುದು ಅವರಿಗೆ ಸುತಾರಾಂ ಇಷ್ಟವಿಲ್ಲ. ಹಿರಿಯರಾದ ನಾವು ಅವರ ಖಾಸಗಿತನವನ್ನು ಮಾನ್ಯ ಮಾಡಬೇಕು. ಕೆಲವೊಂದು ವಿಷಯಗಳನ್ನು ಅವರು ನಮ್ಮ ಜೊತೆ ಹೇಳಿಕೊಳ್ಳಲು ಬಯಸುವುದಿಲ್ಲ; ಆದರೆ ಸರೀಕರ ಜೊತೆ ಚರ್ಚಿಸುತ್ತಾರೆ. ಮತ್ತೆ ಕೆಲವು ಸಂಗತಿಗಳನ್ನು ತಮ್ಮ ಅಂತರಂಗದೊಳಗೇ ಕಾಪಿಡುತ್ತಾರೆ. ನಾವು ತಂದೆ ತಾಯಿಗಳು, ಮಕ್ಕಳು ನಮ್ಮಲ್ಲಿ ಯಾವ ಗುಟ್ಟೂ ಮಾಡಬಾರದು, ಎಲ್ಲವನ್ನೂ ಹೇಳಬೇಕು ಎಂದು ನಿರೀಕ್ಷಿಸುವುದು ಮೂರ್ಖತನ. ದುರಂತವೆಂದರೆ ಕೆಲವು ತಂದೆ ತಾಯಿಗಳು ತಮ್ಮ ಹದಿಹರೆಯದ ಮಕ್ಕಳ ಖಾಸಗಿತನಲ್ಲಿ ಅನಗತ್ಯವಾಗಿ ಚೀಲ ಚೆಕ್ ಮಾಡುವುದು, ಸೆಲ್‌ಫೋನ್‌ನಲ್ಲಿ ಯಾವ 'ಮೆಸೇಜ್' ಗಳಿವೆ ಎಂದು ಹುಡುಕುವುದು ಹೀಗೆ ಪತ್ತೇದಾರಿ ಕೆಲಸ ಮಾಡುತ್ತಾರೆ. ತಮ್ಮ ಖಾಸಗಿ ಜೀವನದಲ್ಲಿ ಹಸ್ತಕ್ಷೇಪ ಮಾಡುವುದರಿಂದ ಅವರು ಇರಿಸು ಮುರಿಸುಗೊಳ್ಳುತ್ತಾರೆ. 'ಇವರಿಗ್ಯಾಕೆ ಅಧಿಕ ಪ್ರಸಂಗತನ?" ಎಂದು ಸಿಟ್ಟು ಬರುತ್ತದೆ.

ಉದಾಹರಣೆಗೆ : ನಾನು ನನ್ನ ವಿಸ್ತರಿತ ಹದಿಹರೆಯದಲ್ಲಿದ್ದಾಗ ನನ್ನಪ್ಪ ಆಗಾಗ್ಗೆ ನನ್ನಲ್ಲಿ "ನಿನಗೆಷ್ಟು ಸಂಬಳ ಬರುತ್ತೆ?" ಎಂದು ಕೇಳುತ್ತಿದ್ದರು. ನನಗೆ ವಿಪರೀತ ಕೋಪ ಬರುತ್ತಿತ್ತು. ನಾನು ಪ್ರಶ್ನೆಗೆ ಉತ್ತರವನ್ನೇ

ಕೊಡುತ್ತಿರಲಿಲ್ಲ. ಅವರು ಮತ್ತೆ ಆ ವಿಷಯ ಪ್ರಸ್ತಾಪಿಸುತ್ತಿರಲಿಲ್ಲ. ಕೆಲವು ದಿನಗಳ ಬಳಿಕ ಮತ್ತೆ ಅದೇ ಪ್ರಶ್ನೆ ಅದೇ ಉತ್ತರ!

ಖಾಸಗಿತನ ಗೌರವ ಕೊಡುವುದೆಂದರೆ ನಾವು ಒಂದಿಷ್ಟು ಅಂತರವನ್ನು ಕಾಯ್ದುಕೊಳ್ಳುವುದು. ಇದು ಹೆತ್ತವರಿಗೆ ಕಠಿಣವೆಂದು ತೋರುತ್ತದೆ. ನಮ್ಮ ಮಕ್ಕಳು' ಅವರಿಗೆ ಖಾಸಗಿ ವಿಚಾರ ಏನಿರುತ್ತದೆ? ನಾವೇನು ದೂರದವರಾ? ಸ್ವಂತ ಅಪ್ಪ ಅಮ್ಮ – ನಮ್ಮಲ್ಲೇ ಹೇಳಿಕೊಳ್ಳಲು ಸಂಕೋಚವೇ? ಎಂದೆಲ್ಲ ಪಾಲಕರು ಯೋಚಿಸುತ್ತಾರೆ. ಆದರೆ ಹದಿಹರೆಯದವರೋ "ಹಿರಿಯರ ಜೊತೆ ನಿಂತರೂ ತೀರ ಸಮೀಪ ನಿಲ್ಲಲು ಬಯಸರು" ಎಂಬುದನ್ನು ಗಮನಿಸಬೇಕು. ಆದುದರಿಂದ ನಮ್ಮ ಮನೆಯ ಹದಿಹರೆಯದ ಹುಡುಗಿ ನಮ್ಮದೇ ಪ್ರತಿರೂಪವಾದರೂ ನಮಗಿಂತ ಭಿನ್ನವಾದ ಅನನ್ಯ ವ್ಯಕ್ತಿ ಎಂಬ ಅರಿವು ನಮ್ಮನ್ನು ಕಾಪಾಡಬೇಕು. ಹೆತ್ತವರೇ ಆಗಲಿ, ಹದಿಹರೆಯದವರೇ ಆಗಲಿ, ಒಬ್ಬರು ಇನ್ನೊಬ್ಬರಿಗೆ "ಸೇರಿದವರಲ್ಲ"; ಪ್ರತಿಯೊಬ್ಬರೂ ತನತನಗೆ ಸೇರಿದವನು ಅಥವಾ ಸೇರಿದವಳು ಎಂಬುದು ತಿಳಿದಿರಲಿ.

**ಪ್ರವಚನವನ್ನು ಹೊಡೆದೋಡಿಸಿ**

ಹದಿಹರೆಯದವರಿಗೆ ಹಿರಿಯರ ಉಪದೇಶಗಳೆಂದರೆ ಮಹಾ ಬೋರ್, ಕೊರೆತ. ಚೊರೆ. "ನಮ್ಮಮ್ಮ ದೊಡ್ಡ ಲೆಕ್ಚರ್ ಕೊಡ್ತಾಳೆ. ಅವಳು ಹೇಳುವುದೆಲ್ಲ ದ್ರಾವಿಡ ಪ್ರಾಣಾಯಾಮ. ನಾನೊಂದು ಸಣ್ಣ ಪ್ರಶ್ನೆ ಕೇಳಿದರೆ ಇಷ್ಟುದ್ದ ಉತ್ತರ ಕೊಡ್ತಾಳೆ. ಅದಕ್ಕೆ ಅವಳತ್ರ ಏನು ಕೇಳ್ಲಿಕ್ಕೂ ನಂಗೆ ಇಷ್ಟವಿಲ್ಲ". ರೇಷ್ಮ ಅಮ್ಮನ ಬಗ್ಗೆ ಹೇಳಿದ ಮಾತಿದು. ಶ್ರೀಪತಿ ಫಿಸಿಕ್ಸ್ ಸರ್ ಬಗ್ಗೆ ಏನು ಹೇಳಿದ ಗೊತ್ತಾ? "ಅಯ್ಯೋ ಆ ನಮ್ಮ ಫಿಸಿಕ್ಸ್ ಸರ್ ಹತ್ರ ಹೋಗೋಕೆ ನಂಗೆ ಬೋರ್. ಏನೋ ಒಂದು ಸಣ್ಣ ಪ್ರಶ್ನೆ ಕೇಳ್ತೀನಿ ನಾನು. ಇಷ್ಟುದ್ದ ಮಾತಾಡ್ತಾರೆ. ಮಾತಾಡ್ತಾ ಹೋಗ್ತಾರೆ. ನಾನು ಕೇಳಿತಿದ್ದೀನೋ ಇಲ್ಲವೋ ಅನ್ನೋ ಜ್ಞಾನ ಕೂಡ ಇಲ್ಲ ಅವರಿಗೆ. ಸರಳವಾದ ಒಂದು ವಿಚಾರಾನಾ ಎಷ್ಟು ಕಾಂಪ್ಲಿಕೇಟ್ ಮಾಡಿ ಹೇಳ್ತಾರೆ ಅಂದರೆ ವೇದ ಉಪನಿಷತ್, ರಾಮಾಯಣ ಎಲ್ಲ ಬಂದು ಹೋಗುತ್ತೆ. ಅವರ ಮಾತು ಮುಗೀವಾಗ ನನ್ನ ಹೆಣ ಬೀಳುತ್ತೆ" ರೋಗಿಗಳಿಗೆ ಸಹಾಯ ಮಾಡಬಯಸುವ ವೈದ್ಯ ನೆತ್ತರು ಕಂಡೊಡನೆ ಮೂರ್ಛೆ

ಹೋಗುವುದಾದರೆ ಹೇಗೆ? ನಾವು ಅವರಿಗೆ ಸಹಾಯ ಮಾಡಬೇಕೆಂದಾದರೆ ಅವರ ಮನಸ್ಥಿತಿಗಳನ್ನು, ಭಾವನೆಗಳನ್ನು ಅನುಭೂತಿಯಿಂದ ಅರಿಯಬೇಕು. ಅವರು ಕೋಪದಲ್ಲಿದ್ದರೂ ನಾವು ಕೋಪ ಮಾಡಿಕೊಳ್ಳದೆ ಸಹನೆಯಿಂದ ಆಲಿಸಿ ಆರೈಕೆ ಮಾಡಬೇಕು. ಅದಕ್ಕೆ ಬದಲಾಗಿ "ನಾನು ನಿನ್ನ ಪ್ರಾಯದವನಿದ್ದಾಗ" ಎಂದು ನಮ್ಮ ಹಳೆಯ ಪುರಾಣದ ಕಂತೆ ಬಿಚ್ಚಿದರೆ ಅವರು ಕಿವುಡತನ ಪ್ರದರ್ಶಿಸುತ್ತಾರೆ. ಆಲಸ್ಯ ಮಾಡುತ್ತಾರೆ. ನಮ್ಮ ಮತ್ತು ಅವರ ನಡುವಿನ ತುಲನೆ ಅವರಿಗೆ ಹಿಡಿಸದು. ನಮ್ಮ ಮಾತನ್ನು ಕೇಳುವಷ್ಟು ಕೇಳಿ ಬಳಿಕ "ನಿಮ್ಮ ಕಾಲ ಬೇರೆ, ನಮ್ಮ ಕಾಲ ಬೇರೆ. ನಿಮಗೆ ಆಗ ಏನೂ ಸೌಲಭ್ಯಗಳಿರಲಿಲ್ಲ. ಕಷ್ಟ ಪಟ್ಟಿರಿ. ಈಗಲೂ ನಾವು ನಿಮ್ಮ ಹಾಗೆ ಕಷ್ಟಪಡಬೇಕು ಯಾಕೆ?" ಎಂದು ನಮಗೇ ಪ್ರಶ್ನೆ ಎಸೆದು ಬಾಯಿ ಮುಚ್ಚಿಸುತ್ತಾರೆ.

## ಹಣೆಪಟ್ಟಿ ಹಚ್ಚಬೇಡಿ

ಹೆತ್ತವರಾಗಿ ನಾವು ನಮ್ಮ ಮಕ್ಕಳ ಭೂತ ವರ್ತಮಾನಗಳನ್ನು ಮೌಲ್ಯಮಾಪನ ಮಾಡಿ ಅವರ ಭವಿಷ್ಯದ ಬಗ್ಗೆ ಕಣಿ ಹೇಳುತ್ತೇವೆ. ಸದ್ಯದ ನೆಲೆಗಟ್ಟಿನಲ್ಲಿ ಅವರ ಭವಿಷ್ಯವನ್ನು ಊಹಿಸಿ ಹಣೆಪಟ್ಟಿ ಹಚ್ಚುತ್ತೇವೆ. "ರವಿ ಮಹಾ 'ಹಾಳು ಗೇಡಿ'. ಅವನ ಕೈಲಿ ಯಾವುದೂ ಉಳಿಯುವುದಿಲ್ಲ." "ಯಾಕೆ ಸುಜಾತ ನೀನು ಹೀಗಾದೆ? ಅಂಗಳ ಗುಡಿಸು ಅಂದ್ರೆ ಅದೆಲ್ಲ ನನ್ನ ಕೈಲಿ ಆಗೋಲ್ಲ ಅನ್ತೀಯಾ? ಹೋಗ್ಲಿ ಗಿಡಕ್ಕೆ ನೀರು ಹಾಕು ಅಂದ್ರೆ ಅದೂ ಆಗೋಲ್ಲ ಅಂತೀಯಾ. ಅಡುಗೆ ಮಾಡು ಅಂದ್ರೆ ಬರಲ್ಲ ಅನ್ತೀಯಾ. ಕಲಿಸ್ತೀನಿ ಅಂದ್ರೆ ಇಂಟ್ರೆಸ್ಟೆ ಇಲ್ಲ ಅನ್ತೀಯಾ. ನೀನು ಮಹಾ 'ಸೋಂಭೇರಿ' ಕಣೆ". ಕವಿ ಮಹಾಶಯ', "ನೀನೇನಪ್ಪಾ, ಮೂರ್ಹೊತ್ತೂ ಕವಿತೆ ಬರೀತಾ ಇದ್ದೀಯಾ!" ಈ ಬಗೆಯಲ್ಲಿ ಹಣೆಪಟ್ಟಿ ಹಚ್ಚುವುದು, ಬಿರುದುಗಳನ್ನು ದಯಪಾಲಿಸುವುದು ಅಪಾಯಕಾರಿ. ಅಪ್ಪ ಅಮ್ಮ ನನ್ನನ್ನು ಉಡಾಳ, ಪೋಕರಿ, ತರ್ಲೆ, ಸೋಮಾರಿ ಅಂತ ಹೇಳ್ತಾನೆ ಇರ್ತಾರೆ; ನಾನು ಸುಧಾರಿಸಿದರೂ ಅವರು ಹಾಗೆ ಹೇಳೋದು ತಪ್ಪೋಲ್ಲ. ಅದಕ್ಕೆ ನಾನೂ ಹಾಗೆ ಆಗ್ಬಿಡ್ತೀನಿ ಅಂತ ಅವರು ಅಂದುಕೊಳ್ಳುತ್ತಾರೆ.

## ವ್ಯತಿರಿಕ್ತ ಸಂದೇಶ ನೀಡಬೇಡಿ

ಹೆತ್ತವರು ಪರಸ್ಪರ ವ್ಯತಿರಿಕ್ತವಾದ ಗೊಂದಲಕರ ಸಂದೇಶ ನೀಡದರೆ ಹದಿಹರೆಯದವರು ಗಲಿಬಿಲಿಗೊಳ್ಳುತ್ತಾರೆ. ಕಿಂಕರ್ತವ್ಯ ಮೂಢರಾಗುತ್ತಾರೆ. "ನೀನು ಪಾಂಡಿಚೇರಿಗೆ ಹೋಗುವುದು ನನಗೆ ಖುಷಿಯ ಸಂಗತಿ. ಆದರೆ ನಿನ್ನ ಜೊತೆ ಬರುವವರು ಯಾರು? ಅವರೇನು ಮಾಡ್ತಾರೋ ಅಂತ ನನಗೆ ಭಯ. ನೀನು ವಾಪಾಸು ಬರುವವರೆಗೆ ನನ್ನ ಎದೆ ಢವಢವ ಹೊಡೆದುಕೊಳ್ಳುತ್ತೆ!" ಅಮ್ಮನ ಮಾತು ಕೇಳಿ ಮಾಲಿನಿಗೆ ಆತಂಕ, ಗೊಂದಲ, ಪಾಂಡಿಚೇರಿಗೆ ಹೋಗು ಅಂತಾಳೆ. ಆದರೆ ನಿನಗೇನಾದ್ರೂ ಆದ್ರೆ? ಸ್ನೇಹಿತರು ಏನಾದರೂ ಕೆಟ್ಟದ್ದು ಮಾಡಿದರೆ ಅಂತ ಭಯ ವ್ಯಕ್ತಪಡಿಸ್ತಾಳೆ! ಹೋದ್ರೂ ಕಷ್ಟ ಹೋಗದಿದ್ರೆ "ಸ್ನೇಹಿತರು ಇದಕ್ಕೆಲ್ಲ ಮನೇಲಿ ಪರ್ಮಿಶನ್ ಆಗ್ಬೇಕಾ?" ಅಂತ ಕಿಚಾಯಿಸ್ತಾರೆ. ಏನು ಮಾಡಲಿ? ಅಂತ ಮಾಲಿನಿ ಸ್ವಲ್ಪ ಹೊತ್ತು ತಲೆ ಮೇಲೆ ಕೈಹೊತ್ತು ಕೂತಳು. ಇಂಥ ಗೊಂದಲ ನಿವಾರಣೆ ಮಾಡಲು ಹೆತ್ತವರ ಹೇಳಿಕೆ ನಿಸ್ಸಂದಿಗ್ಧವಾಗಿರಬೇಕು. ಖಡಾಖಂಡಿತ ನಿರ್ಬಂಧ ಅಥವಾ ಹೃತ್ಪೂರ್ವಕ ಅನುಮತಿ ಅಥವಾ ಸ್ವಯಂ ಆಯ್ಕೆಗೆ ಅವಕಾಶ.

## ಭಯೋತ್ಪಾದಕರಾಗಬೇಡಿ

ಹಲವಾರು ತಂದೆ ತಾಯಿಗಳ ದೃಷ್ಟಿಯಲ್ಲಿ ಹದಿಹರೆಯದ ಮಕ್ಕಳು ಪ್ರೌಢರಾಗುವುದೇ ಇಲ್ಲ. ಹೀಗಾದರೆ ಭವಿಷ್ಯದಲ್ಲಿ ಅವರಿಗೆ ಏನು ಆಪತ್ತು ಕಾದಿದೆಯೋ ಎಂಬ ಭಯ. ತಮ್ಮ ಭಯವನ್ನು ಅವರು ಹುಡುಗ ಹುಡುಗಿಯರ ಮನದಲ್ಲಿ ಬಿತ್ತುತ್ತಾರೆ. "ನೋಡು ನೀನು ಬೆಳಿಗ್ಗೆ ಬೇಗ ಎದ್ದು ಓದದೇ ಹೋದ್ರೆ ಈ ಸಲ ಎಸ್.ಎಸ್.ಎಲ್.ಸಿ. ಪಾಸಾದ ಹಾಗೆ."

"ನೀನು ಹೀಗೆ ಆಟ, ನಾಟ್ಕ ಅಂತ ತಿರುಗಾಡ್ತಾ ಇದ್ರೆ ಈ ಸಲ ಸಿಇಟಿಯಲ್ಲಿ ಒಳ್ಳೇ ರ್‍ಯಾಂಕಿಂಗ್ ಸಿಗಲ್ಲ; ಸರಕಾರಿ ಸೀಟು ಸಿಗಲ್ಲ. ಪೇಮೆಂಟ್ ಸೀಟಿಗೆ ದುಡ್ಡಿಲ್ಲ. ಬಿ.ಎಸ್.ಸಿ.ನೇ ಗತಿ."

"ಏನಯ್ಯಾ ನಿನ್ನ ಕೈಬರಹ. ಇಷ್ಟು ಕೆಟ್ಟದಾಗಿದೆ. ನಿನಗೆ ಯಾರೂ ಕೆಲ್ಸ ಕೊಡೋದಿಲ್ಲ."

"ನಿನ್ನ 'ದಿಸ್ ತಿಂಗ್', 'ದಿಸ್ ಗೈ' ಡಬ್ಬ ಇಂಗ್ಲೀಷ್ ಕೇಳಿ ಯಾವ ಐಟಿಬಿಟಿ ಕಂಪನಿಯವ್ರೂ ನಿನಗೆ ಕೆಲ್ಸ ಕೊಡೊಲ್ಲ. ಹೇಗೆ ಬದುಕ್ತೀಯಾ?"

"ಏನಮ್ಮಾ, ನಿನಗೆ ಅನ್ನ ಮಾಡೋಕೆ ಬರಲ್ಲ, ಕಾಫಿ ಮಾಡೋಕೆ ಬರಲ್ಲ. ನಾಳೆ ಮದುವೆ ಆದ್ರೆ ಅತ್ತೆ ಮನೇಲಿ ಹ್ಯಾಗೆ ಜೀವನ ಮಾಡ್ತೀಯಾ ತಾಯಿ?"

ನಾವು ನಮ್ಮ ಕಿಶೋರ ಕಿಶೋರಿಯರನ್ನು ಭವಿಷ್ಯಕ್ಕಾಗಿ ಅಣಿಗೊಳಿಸುವುದು ಅಸಾಧ್ಯ. ವರ್ತಮಾನವನ್ನು ಚೆನ್ನಾಗಿ ಮುಖಾಮುಖಿಯಾಗಲು ಸಹಾಯ ಮಾಡಬಹುದು. ನಾಳಿನ ದಿನದ ಬದುಕಿನಲ್ಲಿ ಎದುರಾಗುವ ಕೆಲವೊಂದು ಅನುಭವಗಳು ತಲ್ಲಣಗೊಳಿಸುವಂಥವುಗಳು. ಪ್ರೇಮಭಂಗವಾಗಬಹುದು. ವಿವಾಹ ಜೀವನ ಮೂರಾಬಟ್ಟೆಯಾಗಬಹುದು; ಕೈಗೆ ಸಿಕ್ಕಿದ ಉದ್ಯೋಗ ಕೈತಪ್ಪಿ ಹೋಗಬಹುದು. ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳು ಬರದೇ ಇರಬಹುದು, ಫೈಲಾಗಬಹುದು. ಇಂಥ ಎಲ್ಲ ಅನುಭವಗಳನ್ನು ಮುಂದಾಗಿ ಊಹಿಸಿ ಅಂತೆಯೇ ಎದುರಿಸಬೇಕು ಎಂದು ಯಾರೂ ತರಬೇತಿ ಕೊಡಲು ಸಾಧ್ಯವಿಲ್ಲ. ಇಂಥ ಸಾಧ್ಯತೆಗಳ ಬಗ್ಗೆ ಹೀಗೆಯೇ ಎಂದು ಊಹಿಸುವುದು ಅರ್ಥಹೀನ. ಉದಾಹರಣೆಗೆ ಪ್ರಣಯನಿರತ ಹುಡುಗನೊಬ್ಬನಿಗೆ "ನೋಡಯ್ಯಾ, ಈ ಪ್ರೀತಿಗೀತಿ ಗ್ಯಾರಂಟಿಯಲ್ಲ. ನಿನ್ನ ಹುಡುಗಿ ಕೈಕೊಟ್ಟರೂ ಕೊಡಬಹುದು. ಈ ಹುಡುಗಿಯರನ್ನು ನಂಬೋಕೆ ಆಗೋಲ್ಲ. ನಾಳೆ ಲವ್ ಫೈಲ್ಯೂರ್ ಆಗ್ಬಹುದು; ಅದಕ್ಕೂ ನೀನು ತಯಾರಿರಬೇಕು" ಎಂದು ಉಪದೇಶಿಸುವುದು ಕ್ರೌರ್ಯವೇ ಸರಿ ಅಥವಾ "ನೀನು ಹಾಗೆಲ್ಲ ಯಾವ ಸ್ನೇಹಿತರನ್ನು ನಂಬಬಾರ್ದು. ಈಗಿನ ಕಾಲ್ದಲ್ಲಿ ಸ್ನೇಹಿತ್ರು ಕೈಕೊಡಬಹುದು. ನಿನ್ ಕಿಸೆ ದುಡ್ಡು ಖಾಲಿ ಆಗುವ ತನಕ ಅವರೆಲ್ಲ ನಿನ್ನ ಜೊತೆ ಇರ್ತಾರೆ. ಆಮೇಲೆ ನೀನು ಒಂಟಿ" ಎಂದು ಹೆದರಿಸುವುದು ಯೋಗ್ಯವಲ್ಲ.

ಹದಿಹರೆಯದವರು ಜೀವನದ ಏಣಿಯ ಒಂದೊಂದೇ ಮೆಟ್ಟಿಲೇರುವಾಗ ಎದುರಾಗುವ ಸಂಕಷ್ಟಗಳನ್ನು ಸ್ವಯಂ ಅನುಭವಿಸುತ್ತಾ ಮುಂದೊತ್ತಬೇಕು. ನಮ್ಮ ಮೌನ ಅಭಿಮಾನವೇ ಅವರಿಗೆ ಶ್ರೀರಕ್ಷೆ. ನಮ್ಮ ಉಪದೇಶಗಳು ಅವರಿಗೆ ತಿರಸ್ಕಾರ ಯೋಗ್ಯ, ವಿವೇಚನೆಯ ಮಾತುಗಳು ಮನಕ್ಕೆ ನಾಟುವುದಿಲ್ಲ. ಮೃದುವಾದ ಎಚ್ಚರಿಕೆಗಳನ್ನು ವೈಯಕ್ತಿಕ

ಅಪಮಾನಗಳೆಂದು ಭಾವಿಸುತ್ತಾರೆ. ಹೆತ್ತವರ ಪ್ರೀತ್ಯಾದರಗಳ ಬೆಚ್ಚನೆಯ ಗೂಡಿನಿಂದ ಹೊರಗೆಬಂದು ಒಂಟಿಯಾಗಿ ಅವರು ತಮ್ಮ ಪಯಣ ಆರಂಭಿಸಬೇಕು. ಕಿರಿಯರ ಬಗೆಗಿನ ವಿಶ್ವಾಸ ಹಾಗೂ ಸಹಿಷ್ಣುತೆಯಿಂದ ಕಾಯುವ ಹಿರಿಯರಿಂದ ಅವರಿಗೆ ಪ್ರಯೋಜನಗಳುಂಟು. ಲಂಗರು ಹಾಕಿ ತಂಗಲು ಬಯಸುವ ನಾವೆಗಳಿಗಾಗಿ ಬಂದರು ಕಾಯುತ್ತಲೇ ಇರುತ್ತದೆ. ಬಳಿ ಬರುವ ನಾವೆಗಳಿಗೆ ತಂಗಲು ಎಡೆ ನೀಡುತ್ತದೆ. ಹದಿಹರೆಯದವ ವಿಷಯದಲ್ಲಿ ಹಿರಿಯರು ಮಾಡಬೇಕಾದುದು ಇದನ್ನೇ, ಇಷ್ಟನ್ನೇ.

❑

# ಭಾಗ ೨ – ಕಾಲ

## ಆಶಯ:

ಕಾಲ ಬದಲಾದಂತೆ, ಪ್ರಕೃತಿಯಲ್ಲಿಯೂ ಬದಲಾವಣೆಯನ್ನು ಕಾಣುತ್ತೇವೆ. ಸಾಮಾಜಿಕ ಬದುಕಿನ ಮನುಷ್ಯ ಮತ್ತು ಅವನ ವ್ಯಕ್ತಿತ್ವ ಇದಕ್ಕೆ ಹೊರತಲ್ಲ. ಇಡೀ ಭೌಗೋಳಿಕ ಜಗತ್ತೇ ಬದಲಾವಣೆಯನ್ನು ಬಯಸುತ್ತದೆ. ಬಯಸುತ್ತದೆ ಎನ್ನುವುದಕ್ಕಿಂತ ಪರಿಸ್ಥಿತಿಯು ಹಾಗೆ ಮಾಡುತ್ತದೆ. ಅಷ್ಟೇಕೆ ಐವತ್ತು ವರ್ಷದ ಬೆಂಗಳೂರು ಇಂದು ಇದ್ದಂತಿಲ್ಲ. ಎಷ್ಟೋ ವಿಷಯಗಳು ಕೆಲವರ ಬದುಕಿನಲ್ಲಿ ಬದಲಾವಣೆ ತಂದುಕೊಟ್ಟರೆ, ಮತ್ತೆ ಕೆಲವರ ಬಾಳಿನಲ್ಲಿ ಉಲ್ಟಾ ಹೊಡೆಯುತ್ತವೆ. ಕಾಲ ಹೇಗೆಲ್ಲಾ ಬದಲಾಗುತ್ತದೆ ಅಲ್ವೇ. ಪ್ರಸ್ತುತ ಕೊರೋನಾವೇ ಸ್ಪಷ್ಟ ಸಾಕ್ಷಿ. ಕೊರೋನಾದಿಂದ ಮನುಷ್ಯ ಸಮಾಜವೇ ತತ್ತರಿಸಿ ಹೋಗಿದೆ. 'ಕಾಲಾಯ ತಸ್ಮೈ ನಮಃ'. ಬದಲಾವಣೆ ಎನ್ನುವುದು ಜಗದ ನಿಯಮವಲ್ಲವೇ?

ಪ್ರಸ್ತುತ ಭಾಗದ ಮಳೆಗಾಲ, ಪಯಣ, ಕಾಲ, ಯಶಸ್ಸಿನ ಮೂರು ದ್ವಾರಗಳು – ಇವುಗಳನ್ನು ಕೂಡ ಈ ಹಿನ್ನಲೆಯಲ್ಲಿಯೇ ನೋಡಿದರು ನೋಡಬಹುದು. 'ಮಳೆಗಾಲ' ಕವಿತೆ ಮಳೆಯ ಮೂಲಕ ಪ್ರಕೃತಿಯಲ್ಲಿನ ಸಮೃದ್ಧತೆಗೆ ಸಾಕ್ಷಿಯಾದರೆ, ಪಯಣದಲ್ಲಿ ತೊಡಗಿಸಿಕೊಂಡ ವ್ಯಕ್ತಿಯಲ್ಲಿನ ಏನೆಲ್ಲಾ ತಳಮಳಗಳನ್ನು 'ಪಯಣ' ಕತೆ ನಿರೂಪಿಸುತ್ತದೆ. ಹಾಗೆಯೇ ಏನೆಲ್ಲಾ ಸಾಧಿಸಬೇಕು ಎಂದುಕೊಂಡಿದ್ದ ಒಂದು ಹೆಣ್ಣಿನ ಶಕ್ತಿ ಸಾಮರ್ಥ್ಯವೆಲ್ಲವೂ ಕ್ಲರ್ಕ್ ಒಬ್ಬನ, ತನ್ನನ್ನು ಕುರಿತ ಆಕಸ್ಮಿಕ ಹಾಗೂ ಅನಿರೀಕ್ಷಿತ ನುಡಿಗಳು ತನ್ನನ್ನು ತಬ್ಬಿಬ್ಬಾಗುವಂತೆ ಮಾಡಿದ ಸ್ವರೂಪವನ್ನು 'ಕಾಲ' ಕತೆ ಸ್ಪಷ್ಟಪಡಿಸಿದೆ, ತಮ್ಮ ಪ್ರೀತಿಯ ವಿಷಯದ ಅಧ್ಯಯನ, ಚಿಂತನೆಗಳಲ್ಲಿ ತಮ್ಮನ್ನು ಸಮರ್ಪಿಸಿಕೊಂಡು ಭೌತಿಕವಾದ ದೇಹ ದುರ್ಬಲಗೊಂಡರೇನಂತೆ, ಬೌದ್ಧಿಕ ಪ್ರತಿಭೆ ಅಪಾರವಾದುದು ಎಂಬುದನ್ನು ಸಾಧಿಸಿ ತೋರಿಸಿದ ಮತ್ತು ಆ ಮೂಲಕ 'ಕೃಷ್ಣವಿವರ' (ಕಪ್ಪು ರಂಧ್ರ)ವನ್ನು ಸಿದ್ಧಾಂತದ ಮೂಲಕ ನಿರೂಪಿಸಿದ ಸ್ಟೀಫನ್ ಹಾಕಿನ್ಸ್‌ರವರ ಯಶೋಗಾಥೆಯನ್ನು 'ಯಶಸ್ಸಿನ ಮೂರು ದ್ವಾರಗಳು' ಲೇಖನ ಸ್ಪಷ್ಟಪಡಿಸುತ್ತದೆ.

ಈ ಎಲ್ಲವನ್ನೂ 'ಕಾಲ'ದ ಹಿನ್ನಲೆಯಲ್ಲಿ ನೋಡಬೇಕು.

– ಡಾ. ಕೆ. ಪುಟ್ಟಸ್ವಾಮಿ

# ೧. ಕಾವ್ಯ
# ಮಳೆಗಾಲ

**– ಪು.ತಿ. ನರಸಿಂಹಾಚಾರ್**

(ಶ್ರೀಮತ್ ಭಾಗವತದಿಂದ ಅನುವಾದಿತವಾದುದು ದಶಮಸ್ಕಂದದ ಇಪ್ಪತ್ತನೆಯ ಅಧ್ಯಾಯ)

ಮೊದಲಿಟ್ಟಿತಾಗ ಮಳೆಗಾಲ
ಎಲ್ಲ ಸತ್ವಗಳ ಬೆಳೆಗಾಲ
ಬೆಳಗಿತು ದಿಗಂತ ಮಿಂಚಿನೊಳು
ಬಾನು ತುಂಬಿತು ಗುಡುಗಿನೊಳು.

ಸಿಡಿಲು ಮಿಂಚುಗಳ ದಟ್ಟ ಕರಿಮೋಡ
ಹರಡಲು ಗಗನವು ಕಳೆಗುಂದಿ
ಮಸುಕು ಬೆಳಕಿನ ಮುಸುಕೊಳು ತೋರಿತು
ಸಗುಣ ಬ್ರಹ್ಮದ ತೆರದೊಳಗೆ.

ಎಂಟು ತಿಂಗಳೂ ತನ್ನ ಕರಗಳಿಂ–
ದೀಂಟಿದ ನೀರೆಂಬೈಸಿರಿಯ
ಸಮಯವೈತರಲು ಬಿಡುಗಡೆಗೈಯಲು
ತೊಡಗಿರುವನಲಾ ಪರ್ಜನ್ಯ .

ಮಿಂಚುಗಳಾಡುವ ಹೆಮ್ಮೋಡಂಗಳು
ಚಂಡಮಾರುತಗೆ ನಡುಗುತ್ತ
ಮರುಕದೊಳೋ ಎನೆ ತಣ್ಣೀರೆರೆವುವು
ಆತನ ಸಂತೈಸುವ ಸಲುವು.

ದೇವರ ನೆನೆದು ತಪದಿಂದೊಣಗಿಹ
ಭೂಮಿಯಿಂದು ಬಲಗೊಂಡಿಹುದು
ಕಾಮ್ಯಕೆ ತಪವೆಸಗುವರೇಪರಿ
ಫಲ ಕೈಗೂಡಲು ಆ ಪರಿಗೆ.

ತೆಪ್ಪಗೆ ಮಲಗಿಹ ಕಪ್ಪೆಗಳುಲಿವಂ
ಕೊಂಡವು ಗುಡುಗಿನ ದನಿಕೇಳಿ
ನಿಯಮವು ತೀರಿದ ಬಳಿಕಾ ಸಮಯದಿ
ಬ್ರಾಹ್ಮಣರೇ ತೆರವಾ ತೆರದಿ.

ಸೆಲೆಯೊಣಗಿದ ಕಿರುಹೊಳೆ ಹರಿದವು
ದಡಗಳ ಮೀರುತ ಹದಗೆಟ್ಟು
ಐಸಿರಿಯಂ ಮೈದುಂಬನು ಹೊಂದುತ
ದಾಸನದೇಪರಿ ಆ ಪರಿಗೆ.

ಹಸುರು ಹುಲ್ಲಿನಿಂ ಹಚ್ಚಗೆ ಎಸೆಯಿತು
ಇಂದ್ರ ಗೋಪದಿಂ ಕೆಂಪಾಗಿ
ನಾಯಿಕೊಡೆಗಳು ಕೊಡೆಹಿಡಿದಿರೆ ತಿರೆ
ದೊರೆಗಳ್ಳೆಸಿರಿಯ ಮೆರೆಸುತಲಿ.

ಒಕ್ಕಲಿಗರಿಗಾನಂದವ ತಂದವು
ಪೈರು ಬೆಳೆದ ಹೊಲಗದ್ದೆಗಳು
ದೇವರ ವಶವೆಂದರಿಯದ ಧನಕರಿ–
ಗವೆ ಎದೆ ಬೇಗೆಂದು ತಂದವಲ.

ನವ ಜಲಸೇವನೆಯಿಂದಲಿ ನೆಲಜಲ
ಜೀವಿಗಳೆಸೆದವು ಕಳೆವೆತ್ತು
ರುಚಿರ ರೂಪದಿಂ, ಹರಿಯನು ನೆನೆದವ
ರೇಪರಿಯಪ್ಪರೊ ಆ ತೆರದಿ

ಹೊಳೆಗಳ ನೆರೆಯೊಳು ಬೆರೆಯುತ ಕಡಲದು
ಗಾಳಿಯೆಬ್ಬಿಸಿದ ತೆರೆಗಳೊಳು
ಮಿಡುಕಿತು, ಬಯಕೆಗೆ ಸಿಕ್ಕಿದ ಗುಣಯುತ
ಅಪಕ್ವಯೋಗಿಯ ಚಿತ್ತದೊಲು.

ಇಡಿದು ಹೊಯ್ದರೂ ಧಾರೆಧಾರೆ ಮಳೆ
ವ್ಯಥೆಗೊಳದಿದ್ದವು ಬೆಟ್ಟಗಳು
ಎಂತುಟಧೋಕ್ಷಜ ಚಿತ್ತರಿರುವರೋ
ಕೇಡು ಕುಸುಕುತಿರೆ ಆ ತೆರದಿ.

ಇದೊ ಅದೊ ಎನುವಂತಿದ್ದವು ಬಳಿಗಳು
ಹುಲ್ಲು ಬೆಳೆದಿರಲು ಹದಗೆಟ್ಟು
ದ್ವಿಜರಭ್ಯಾಸವ ಗೈಯದೆ ತೊರೆದಿಹ
ಶ್ರುತಿಗಳ ಪರಿ ಕಲಿಲಾಲದೊಳು.

ಲೋಕ ಬಂಧುಗಳ ಮೇಘಂಗಳ ಜತೆ
ಗಿರವು ಹುಸಿಕೆಳೆಯ ಮಿಂಚುಗಳು
ಸದ್ಗುಣಭೂಷಿತ ಪುರುಷರೊಳೇಪರಿ
ಬೆದೆವೆಣ್ಣಗಳಾ ಪರಿಯೊಳಗೆ.

ತನ್ನ ಜೊನ್ನವೇ ಬೆಳಗುವ ಮೋಡದಿ
ಮರೆಯಾಗುತ ಪೆರೆ ಬೆಳಗದಿಹ
ತನ್ನ ತೇಜದೊಳೆ ಕಳೆಗೊಂಡೆಸೆಯುವ
ಸ್ವಾಹಂಕಾರದಿ ಪುರುಷನೊಲು.

ಮೋಡಗಳೈತರೆ ಹಬ್ಬವಗೊಳ್ಳುತ
ಕೊರೆತೀರಿದೊಲಿವೆ ನವಿಲುಗಳು
ಹರಿಭಕ್ತರು ಮನೆಗೈತರಲೇಪರಿ
ದುಃಖತಪ್ತಜನರಾ ಪರಿಗೆ.

ಮರಗಳು ಕಾಲೊಳು ನೀರನೀಂಟುತ
ಪರಿಪರಿ ಮೋಜಿನೊಳೆಸೆದಿಹವು
ತಪದಿ ಸೊರಗಿ ತೆಳು ತೆಳ್ಳಗಾದವರು
ಬಯಕೆ ತಣಿಸುವಂದೆಂತಂತೆ.

ಮುಗಿಲೊಡೆಯನು ಮಳೆಗರೆಯಲು ಅಣೆಗಳ
ಕೊಚ್ಚಿ ಕೆಡಹಿದವು ನೆರೆ ನುಗ್ಗಿ
ಕಲಿಯೊಳು ಬಳಿಗೆಡುವೊಲು ವೇದಂಗಳು
ಪಳಿವಾದದಿ ಪಾಷಂಡಿಗಳ.

ಸರ್ವಭೂತಕೂ ಅಮೃತವ ಕರೆದವು
ಘನಗಳು ಗಾಳಿಗಳೊತ್ತಡಕೆ
ಕಾಲಕಾಲದೊಳು ದ್ವಿಜರಾಶಿಸುವೊಲು
ಬಾನವರೆರೆವಂತೊಸಗೆಗಳ.

ಈ ಪರಿ ಮಳೆಯಿಂ ತಣಿದಿಹ, ಮಾಗಿದ
ನೇರಿಳೆ ಖರ್ಜೂರಗಳಿಡಿದ
ಬನವನು ಹೊಕ್ಕನು ಹರಿ ಗೋಗೋವಳ
ಬಲರೊಂದಿಗೆ ಬಿನದಿಸಲೆಳಸಿ.

❑

# ೨. ಸಣ್ಣಕಥೆ
# ಪಯಣ

**– ಯಶವಂತ ಚಿತ್ತಾಲ**

ಆಗ, ಮೂರುಸಂಜೆಯ ಹೊತ್ತಿಗೆ ಭೆಟ್ಟಿಯಾಗಲು ಬಂದಾತ ಹೇಳಿ ಹೋಗಿದ್ದ – "ನಾಳೆ ನಸುಕಿನಲ್ಲಿ ಕೋಳಿ ಕೂಗುವ ಮೊದಲೇ ಹೊರಡಬೇಕು. ಸಿದ್ಧನಾಗಿರು" ಎಂದು. ಎಂತಲೇ, ರಾತ್ರಿಯ ಊಟ ಮುಗಿಸಿದ್ದೇ, ಅವನು ಹೊರಡುವ ಸಿದ್ಧತೆಗೆ ತೊಡಗಿದ್ದ. ಕಳೆದ ನಾಲ್ಕಾರು ದಿನಗಳಲ್ಲಿ ಕೋಣೆಯಲ್ಲಿ ಅಸ್ತವ್ಯಸ್ತವಾಗಿ ಬಿದ್ದುಕೊಂಡ ಅರಿವೆ–ಅಂಚಡಿಗಳನ್ನೆಲ್ಲ ಸೂಟ್‌ಕೇಸಿನಲ್ಲಿ ತುಂಬಹತ್ತಿದ. ತುಂಬುತ್ತಿದ್ದಂತೆ ಕೈಗೆ ಬಂದ 'ಶೇವಿಂಗ್ ಸೆಟ್ಟ'ನ್ನು ನೋಡಿ ತಡೆದ. ಮೋರೆಯ ಮೇಲೆ ಗಡ್ಡ ಬೆಳೆಯುವ ಜಾಗದ ಮೇಲೆ ಕೈಯಾಡಿಸಿಕೊಂಡ. ಬೆಳಿಗ್ಗೆ, ಅವನು ಕರೆಯಲು ಬರುವ ಮೊದಲು ದಾಡಿ ಮಾಡಿಕೊಳ್ಳಲು ಆಗುವುದೋ ಇಲ್ಲವೋ, ಈಗಲೇ ಮಾಡಿಕೊಂಡರೆ ಹೇಗೆ ಎಂಬ ವಿಚಾರ ಬಂದದ್ದೇ, ಅದನ್ನು ಕೃತಿಯಲ್ಲಿ ಇಳಿಸಲು ಆತುರನಾಗಿ ಎದ್ದು ನಿಂತ. ಗಡ್ಡದ ವಿಷಯದಲ್ಲಿ ಅವನು ತೆಗೆದುಕೊಳ್ಳುತ್ತಿದ್ದ ಜಾಗ್ರತೆ ಅವನ ಗೆಳೆಯರಲ್ಲೆಲ್ಲ ಹೆಸರು ಗಳಿಸಿತ್ತು. ಅವನು ಕೆಲಸ ಮಾಡುತ್ತಿದ್ದ ಕಂಪನಿಯವರು ಮಾರುತ್ತಿದ್ದ ರೇಜರ್–ಬ್ಲೇಡುಗಳ ಜಾಹೀರಾತಿನಲ್ಲಿ ಅವನ ಕ್ಷೌರ ಮಾಡಿದ ಮುಖದ ಚಿತ್ರವನ್ನು ನೀವು ಆಗೀಗ ನೋಡಿರಬಹುದು.

ಬಾತ್‌ರೂಮಿನ ವಾಶ್‌ಬೇಸಿನ್ನಿನ ಎದುರಿಗೆ ನಿಂತು, ಗೋಡೆಗೆ ಹಚ್ಚಿದ ಕನ್ನಡಿಯಲ್ಲಿ ಮೋರೆ ನೋಡಿಕೊಳ್ಳುತ್ತ, ಗಡ್ಡಕ್ಕೆ ನೀರು, ಸಾಬೂನು ಹಚ್ಚಿ ಬ್ರಶ್ಶಿನಿಂದ ನೊರೆ ಎಬ್ಬಿಸುತ್ತಿದ್ದಂತೆ ಅವನ ತಲೆಯಲ್ಲಿ ಆಗಿನಿಂದಲೂ ಎದ್ದಿರದ ಒಂದು ವಿಚಾರವು ಮೆಲ್ಲನೆ ಎದ್ದು ಬಂದಾಗ ನಡುವೆಯೇ ನಿಂತುಬಿಟ್ಟ; ಎಲ್ಲ ಬಿಟ್ಟು ಕೋಳಿ ಕೂಗುವ ಮೊದಲು ಎಂದನಲ್ಲ. ಕಲಕತ್ತೆಯಂತಹ ಈ ವಿಶಾಲ ಪಟ್ಟಣದ ಎದೆಯಲ್ಲಿ ನಿಂತ ಈ ದೊಡ್ಡ ಆಧುನಿಕ ಹೊಟೆಲ್ಲಿನ ಹತ್ತಿರ ಕೋಳಿಯೆಲ್ಲಿ ಕೂಗಬೇಕು? ಕೇಳುವುದನ್ನೇ ಮರೆತುಬಿಟ್ಟೆನಲ್ಲ. ಕೋಳಿ ಕೂಗುವುದೂ ಎಷ್ಟು ಹೊತ್ತಿಗೆಂಬುದು

ನೆನಪಿದ್ದರಲ್ಲವೆ; ಹಳ್ಳಿ ಬಿಟ್ಟು ಎಷ್ಟು ವರುಷಗಳಾದವೊ! ಯಾವ ಹಳ್ಳಿಯ ಹುಂಬನೋ ಇವನು–ಕೋಳಿ ಕೂಗುವ ಮೊದಲು ಹೊರಡಲು ಸಿದ್ಧನಾಗಲು ಹೇಳಿದವನು. ಏನಾದರೇನು? ಮುಂಜಾವಿನ ನಾಲ್ಕು ಗಂಟೆಗೇ ಎದ್ದರೆ ಒಳಿತು. ಅದಕ್ಕಿಂತಲೂ ಮೊದಲೇ ಬಂದರೇ? ಬಂದರೆ ಬರಲಿ, ತುಸು ಹಾದಿ ಕಾದಾನು.....

ಗಡ್ಡದ ನೊರೆ ಚೆನ್ನಾಗಿ ಬೆಳೆದಿತ್ತು. ಹರಿತವಾದ ಹೊಸ ಬ್ಲೇಡು ಇನ್ನೂ ಬೆಳೆದಿರದ ಗಡ್ಡವನ್ನು ಸವರುತ್ತಿತ್ತು. ಇನ್ನೊಮ್ಮೆ ಸಾಬೂನು ಹಚ್ಚಿಕೊಳ್ಳುವ ಹೊತ್ತಿಗೆ ತಲೆಯಲ್ಲಿ ಬಂದ ಇನ್ನೊಂದು ವಿಚಾರಕ್ಕೆ ಬೆಚ್ಚಿಬಿದ್ದ. ನಸುಕಿನಲ್ಲೇ ಹೊರಡುವುದಾದರೆ ಹೊಟೆಲ್ಲಿನವರಿಗೆ ಈಗಲೇ ತಿಳಿಸಬೇಕಲ್ಲ. ಓಹ್! ಮರೆತೇಹೋಗುತ್ತಿದ್ದೆ. ಗಡ್ಡಕ್ಕೆ ನೊರೆ ಹಚ್ಚಿಕೊಂಡಿರುವಾಗಲೇ ಕೋಣೆಗೆ ಬಂದು ಟೆಲೆಫೋನ್ ರಿಸೀವರ್ ಎತ್ತಿದ. "ರಿಸೆಪ್ಶನ್ ಪ್ಲೀಸ್" ಎಂದ. ತನಗೆ ಬೇಕಾದ ಸ್ಥಳ ದೊರಕಿದ ಮೇಲೆ ಹೇಳಿದ–"ನಾನು ೧೫೫ನೇ ರೂಮಿನಿಂದ ಮಾತನಾಡುತ್ತಿದ್ದೇನೆ. ಬೆಳಿಗ್ಗೆ ಹೊಟೆಲನ್ನು ಬಿಡಬೇಕು. 'ಬಿಲ್ಲ'ನ್ನು ಈಗಲೇ ಸಿದ್ದಪಡಿಸಿ ಇಡಲು ಹೇಳಿ. ಹೋಗುವಾಗ ಸಹಿ ಮಾಡಿ ಹೋಗುತ್ತೇನೆ. ನನ್ನ ಹತ್ತಿರ 'ಟ್ರೆವಲ್ ಏಜಂಟರ ವೌಚ್ಚರ್' ಇದೆ. ನಾಲ್ಕು ಗಂಟೆಗೆ ಎಬ್ಬಿಸುವ ಕರೆ ಕೊಡಿ." ಇವನು ಮಾತು ಮುಗಿಸಿದ್ದೇ ಟೆಲಿಫೋನಿನ ಆ ತುದಿಯಿಂದ ನಮ್ರವಾದ ಮಾತುಗಳು ಬಂದುವು. "ಕ್ಷಮಿಸಿ ಸಾರ್, ಈ ಕೋಣೆ ತಮ್ಮ ಹೆಸರಿನಲ್ಲಿ ಹತ್ತು ದಿನಗಳ ಸಲುವಾಗಿ 'ರಿಝರ್ವ್' ಆಗಿದೆ.." ಆ ಮಾತುಗಳು ಮುಂದುವರೆಯುವ ಮೊದಲೇ ಇವನು ಅನವಶ್ಯಕವಾಗಿ ಕೆರಳಿ ಒದರಾಡಿದ; "ರಿಝರ್ವ್ ಮಾಡಿದ್ದು ಹೌದು. ಆದರೆ ಒಂದು ಅನಿರೀಕ್ಷಿತ ಕಾರಣಕ್ಕಾಗಿ ನನ್ನ ಇಲ್ಲಿಯ ಮುಕ್ಕಾಮನ್ನು ಅರ್ಧಕ್ಕೇ ಮುಗಿಸಬೇಕಾಗಿದೆ. ಇದರಿಂದ ನಿಮಗೆ ಅಡಚಣೆಯಾಗುತ್ತಿದ್ದರೆ ಮಾತ್ರ...." ಟೆಲಿಫೋನಿನ ಆ ತುದಿಯಿಂದ ತಡವರಿಸುತ್ತ ಬಂದ ಮಾತುಗಳು–"ತಪ್ಪು ತಿಳಕೊಳ್ಳಬೇಡಿ. ಸರ್..." ಆದರೆ ಅವನಿಗೆ ಆ ವಿವರಣೆಯನ್ನು ಕೇಳುವ ತಾಳ್ಮೆಯಾಗಲೀ ವ್ಯವಧಾನವಾಗಲೀ ಇದ್ದಿರಲಿಲ್ಲ. ಟೆಲಿಫೋನಿನ ರಿಸೀವರನ್ನು ಅದರ ಸ್ಥಾನದಲ್ಲಿ ಅಪ್ಪಳಿಸಿದವನೇ ತಿರುಗಿ ಬಾತ್‌ರೂಮಿಗೆ ಬಂದ. ಅವನಿಗೆ ತನಗೆ ಬಂದ ಸಿಟ್ಟಿನಿಂದ ತುಂಬ ಸಮಾಧಾನವೆನಿಸಿತು. ಮರುಕ್ಷಣ, ಗಡ್ಡದ ಮೇಲೆ

'ರೇಜರ್'ನ್ನು ಅಡಿಸುತ್ತಿದ್ದಂತೆ ಅನಿಸತೊಡಗಿತು; ಟೆಲಿಫೋನಿನ ಮೇಲೆ ಮಾತನಾಡಿದವನು ಕಣ್ಣೆದುರಿಗೆ ಇದ್ದಿದ್ದರೆ ಅವನನ್ನು ಹಾಗೆ ಗದರಿಸಲು ತನಗೆ ಮನಸ್ಸಾಗುತ್ತಿತ್ತೇ? ಪರೋಕ್ಷದಲ್ಲಿ ತಾನು ಬೇಕಾದವರನ್ನು ಗದರಿಸಬಲ್ಲೆನಾದರೂ ಪ್ರತ್ಯಕ್ಷದಲ್ಲಿ ಮಾತ್ರ ಹಾಗೆ ಮಾಡುವುದು ತನ್ನಿಂದ ಸಾಧ್ಯವಿಲ್ಲ ಎಂಬ ಸತ್ಯವನ್ನು ಅವನು ಬಲ್ಲ. ಈಗ ಅರ್ಧ ಗಂಟೆಯ ಹಿಂದಿನದೇ ಸಂಗತಿ:

ಆಗ ಮೂರುಸಂಜೆಯ ಹೊತ್ತಿಗೆ ಬಂದ ಆ ಆಗಂತುಕ ಹೊರಟು ಹೋದದ್ದೇ ಅವನು ಮೊಟ್ಟಮೊದಲು ಮಾಡಿದ ಕೆಲಸವೆಂದರೆ ಹೊಟೆಲ್ಲಿನ ಲಾಂಡ್ರಿಗೆ ಟೆಲಿಫೋನ್ ಮಾಡಿ ತನ್ನ ಬಟ್ಟೆಗಳನ್ನು ಕೂಡಲೇ ರೂಮಿಗೆ ಕಳಿಸಿಕೊಡಲು ಕೇಳಿಕೊಂಡದ್ದು. ಬಟ್ಟೆಗಳು ಸಿದ್ಧವಾಗಲು ಇನ್ನೂ ಒಂದು ದಿವಸ ಬೇಕಾಗಿತ್ತು. ಟೆಲಿಫೋನ್ ತೆಗೆದುಕೊಂಡ ನೌಕರ ನಮ್ರ ಭಾಷೆಯಲ್ಲೇ ತನ್ನ ನಿರುಪಾಯತೆಯನ್ನು ತಿಳಿಸಿದ. ಇವನಿಗೆ ಸಿಟ್ಟು ಒಮ್ಮೆಲೇ ಮಸ್ತಕಕ್ಕೇರಿ ಲಾಂಡ್ರಿಯ ಮೆನೇಜರರು ಟೆಲಿಫೋನಿನ ಮೇಲೆ ಬಂದಾಗ ಅತಿ ಗಂಭೀರವಾದ ಧ್ವನಿಯಲ್ಲಿ ತನಗೆ ಎಲ್ಲಿಂದಲೋ 'ಅರ್ಜೆಂಟ್' ಕರೆ ಬಂದಿದ್ದರಿಂದ ಬೆಳಿಗೆ ಎದ್ದದ್ದೇ ಹೊರಟು ಹೋಗಬೇಕಾಗಿದೆ ಎಂದೂ, ಒಗೆಯಲು ಕೊಟ್ಟ ಬಟ್ಟೆಗಳು ಯಾವ ಸ್ಥಿತಿಯಲ್ಲಿದ್ದರೂ ಅಂದು ರಾತ್ರಿಗೇ ತನ್ನ ರೂಮಿಗೆ ಮುಟ್ಟಬೇಕೆಂದೂ ತಿಳಿಸಿದ, ಮೆನೇಜರ ಬಾಯಿ ತೆರೆಯುವ ಮೊದಲೇ ದನಿಯನ್ನು ಎತ್ತರಿಸಿ "ಹಾಗೆ ಮಾಡಲು ಆಗದಿದ್ದಲ್ಲಿ ಮಾತ್ರ ಬಟ್ಟೆಗಳನ್ನು ನೀವೇ ಇಟ್ಟುಕೊಳ್ಳಬಹುದು. ನನಗೆ ಅವುಗಳ ಅವಶ್ಯಕತೆ ಇಲ್ಲ" ಎಂದವನೇ ಟೆಲಿಫೋನ್ ರಿಸೀವರನ್ನು ಕೆಳಗಿಟ್ಟಿದ್ದ. ಆಶ್ಚರ್ಯದ ಸಂಗತಿಯೆಂದರೆ, ಎರಡು ತಾಸುಗಳ ನಂತರ, ಒಗೆದು ಇಸ್ತ್ರಿ ಮಾಡಿದ ಇವನ ಬಟ್ಟೆಗಳನ್ನು ತೆಗೆದುಕೊಂಡು ಲಾಂಡ್ರಿಯ ಮೇನೇಜರರೇ ಇವನ ಕೋಣೆಗೆ ಧಾವಿಸಿ ಬಂದಿದ್ದರು. ಇವನು ಮಾತನಾಡಲಿಲ್ಲ. ಟೆಲಿಫೋನಿನ ಮೇಲೆ ಮಾತನಾಡುವಾಗ ಅವರಿಗೆ ತನ್ನ ಬಗ್ಗೆ ಇದ್ದ ಭಯ, ಆದರಗಳು ತನ್ನನ್ನು ಕಂಡದ್ದೇ ಮಾಯವಾಗಿದ್ದವೋ ಎಂದೆನಿಸಿತು. ಬಟ್ಟೆಗಳ ಪೊಟ್ಟಣವನ್ನು ಇವನ ಟೇಬಲ್ಲಿನ ಮೇಲಿಟ್ಟು ಇವನೊಡನೆ ಮಾತನಾಡದೇ ರೂಮನ್ನು ಬಿಟ್ಟು ಹೊಗಿದ್ದರು. ಇವನ ಜೀವ ಅಸ್ಪಷ್ಟ ಅಸಮಾಧಾನದಿಂದ ಮುದುಡಿಕೊಂಡಿತ್ತು....

ಕ್ಷೌರದ ಕೆಲಸ ಮುಗಿದಿತ್ತು. ಕ್ಷೌರದ ಸರಂಜಾಮನ್ನು ಹೊತ್ತು ಕೋಣೆಗೆ ಬಂದ. "ಅಷ್ಟು ಬೆಳಿಗ್ಗೆ ಎಬ್ಬಿಸುವದೆಂದರೆ ಮರೆತೇಬಿಡುತ್ತಾರೊ ಏನೋ." ಹೊಸ ಸಂಶಯವೊಂದು ತಲೆಯಲ್ಲಿ ಇಣಕುತ್ತಿದ್ದಂತೆ, 'ರೂಮ್ ಬಾಯ್'ನಿಗೂ ಹೇಳಿಡುವುದು ಒಳಿತು. ಅವನಿಗೆ ಸಲ್ಲಬೇಕಾದ 'ಟಿಪ್ಸ್' (ಬಕ್ಷೀಸು) ಈಗಲೇ ಕೊಟ್ಟಂತಾಯಿತು, ಮುಂಜಾನೆಯ ಚಹವನ್ನೂ ತರಿಸಿದಂತಾಯಿತು ಎಂದು ಬಗೆದು ಗಂಟೆ ಒತ್ತಿದ. ಕೆಲ ನಿಮಿಷಗಳಲ್ಲೇ ರೂಮ್–ಬಾಯ್ ಬಂದು ಹಾಜರಾದ. ಐದು ರೂಪಾಯಿಯ ನೋಟು ಒಂದನ್ನು ಅವನ ಕೈಯಲ್ಲಿಡುತ್ತ. "ನನಗೆ ಬೆಳಿಗ್ಗೆ ಸರಿಯಾಗಿ ಐದು ಗಂಟೆಗೆ ಇಲ್ಲಿಂದ ಹೊರಡಲೇಬೇಕಾಗಿದೆ. ನಾಲ್ಕು ಗಂಟೆಗೆ ಎಬ್ಬಿಸಬೇಕೆಂದು ಕೆಳಗೆ ಹೇಳಿಟ್ಟಿದ್ದೇನೆ. ಅದರೆ ಮರೆತೇಬಿಡುತ್ತಾರೋ ಏನೋ. ನೀನು ನಾಲ್ಕು ಗಂಟೆಗೆ ಚಹ ತಂದು ಎಬ್ಬಿಸಬೇಕು, ತಪ್ಪದೇ" ಎಂದು ಹೇಳಿದಾಗ ಸೇವಕ ಕೃತಜ್ಞತೆಯಿಂದ ಸಲಾಮು ಹೊಡೆಯುತ್ತ "ಎಳ್ಳಷ್ಟೂ ಕಾಳಜಿ ಬೇಡ ಸರ್, ನಾಲ್ಕು ಗಂಟೆಗೆ ತಪ್ಪದೇ ಎಚ್ಚರಿಸುವೆ. ಗುಡನೈಟ್ ಸರ್..." ಎಂದು ಹೊರಟುಹೋದ. ತನ್ನ ಹಿಂದೆಯೇ ಕದ ಎಳೆದುಕೊಂಡ.

'ಸೂಟ್‌ಕೇಸ್'ನ್ನು ತುಂಬುವ ಕೆಲಸ ಮುಂದುವರಿದಿತ್ತು. ನಡುವೆಯೇ ಎದ್ದ ಹೊಸ ಪ್ರಶ್ನೆಯೊಂದರಿಂದ ಬೆರಗುಗೊಂಡು ಕುಳಿತುಬಿಟ್ಟ. ಅರೆ, ಆಗ ಬಂದವನು ಕೋಳಿ ಕೂಗುವ ಮೊದಲೇ ಹೊರಡಬೇಕು ಎಂದಾಗ, ಎಲ್ಲಿಗೆ? ಯಾಕೆ? ಎಂದು ಕೇಳುವುದನ್ನೇ ಮರೆತು ಒಪ್ಪಿಬಿಟ್ಟೆನಲ್ಲ! ಒಪ್ಪಿಬಿಟ್ಟೆನೇ?... ಅವನ ಮೋರೆಯ ಮೇಲೆ ವಿಷಾದ ತುಂಬಿದ ನಗೆ ಮೂಡಿತು; ತನ್ನ ಒಪ್ಪಿಗೆ ತಿಳಿಯಲು ಅವನು ಅಲ್ಲಿ ನಿಂತಿದ್ದರಲ್ಲವೆ! ಆದರೆ ಇಂತಹ ಸಂಗತಿಗಳು ಅವನಿಗೆ ಹೊಸವಲ್ಲ. ಈಗ ಅವನು ಕಲಕತ್ತೆಗೆ ಬಂದುದರ ಹಿಂದಿನದೇ ಕಥೆ; ಅವನು ಅವನ ಕಂಪನಿಯ ಉಚ್ಚ ತರಗತಿಯ 'ಟ್ರೆವಲಿಂಗ್ ಸೇಲ್ಸಮನ್'. ಆದರೆ ಅವನು ಸಂಚಾರ ಮಾಡಬೇಕಾದ ಪಟ್ಟಣಗಳಲ್ಲಿ ಕಲಕತ್ತೆ ಇದ್ದಿರಲಿಲ್ಲ. ಕೆಲವು ದಿನಗಳ ಹಿಂದಷ್ಟೇ ತನ್ನ ಆಧಿಕಾರದ ಕೆಳಗಿನ ಹತ್ತಾರು ಪಟ್ಟಣಗಳನ್ನು ಸತತವಾಗಿ ಎರಡು ತಿಂಗಳವರೆಗೆ ತಿರುಗಾಡಿ ಮುಂಬಾಯಿಗೆ ಹಿಂತಿರುಗಿದ್ದ. ಮುಂಬೈ ತಲುಪಿದ ಮರುದಿನವೇ ಅವನ ಮೇಲಾಧಿಕಾರಿ ಅವನನ್ನು ತನ್ನ ಕ್ಯಾಬಿನ್ನಿಗೆ ಕರೆದು ಹೇಳಿದ; "ನಾಳೆಗೆ ನೀನು ಕಲಕತ್ತೆಗೆ ಹೊರಡಬೇಕು." ಇವನಿಗೆ

ಬಾಯಿ ತೆರೆಯುವ ಅವಕಾಶವನ್ನೂ ಕೊಡದೇ ಆ ಮೇಲಾಧಿಕಾರಿ ಮುಂದುವರಿದಿದ್ದ. "ನಿನ್ನ ಟ್ರೇನ್ ಟಿಕೆಟ್ಟು 'ರಿಝರ್ವ್' ಆಗಿದೆ–ಕಲಕತ್ತಾ ಮೇಲಿಗೆ. 'ಗ್ರ್ಯಾಂಡ್ ಹೊಟೆಲ್ಲಿ'ನಲ್ಲಿ ಉಳಿಯುವ ವ್ಯವಸ್ಥೆಯಾಗಿದೆ. ಕಲಕತ್ತೆ ತಲುಪಿದ ಕೂಡಲೇ ಅಲ್ಲಿಯ ಬ್ರ್ಯಾಂಚ್ ಮೆನೇಜರನ್ನು ಭೆಟ್ಟಿಯಾಗು; ನಿನ್ನ ಕಲಕತ್ತೆಯ ಕಾರ್ಯಕ್ರಮ ತಿಳಿಸುತ್ತಾರೆ." ಇವನು 'ಪಿಟ್ಟೆ'ನ್ನದೇ ಕಲಕತ್ತೆಯ ಪ್ರವಾಸಕ್ಕೆ ಒಪ್ಪಿಕೊಂಡಿದ. ಅದರ ಬಗ್ಗೆ ತನಗೆ ಸುಖವಾಗಲೀ ದುಃಖವಾಗಲೀ ಇಲ್ಲ ಎನ್ನುವ ಅರಿವಿನಿಂದ ತುಸು ಅಚ್ಚರಿಪಟ್ಟಿದ್ದ, ಅಷ್ಟೆ.

ಮೇಲಾಧಿಕಾರಿಯ 'ಕ್ಯಾಬಿನ್' ಬಿಟ್ಟು ಹೊರಗೆ ಬಂದ ಮೇಲೆ ತಿಳಿದಿತ್ತು; ಈ ಅನಪೇಕ್ಷಿತ ಪ್ರವಾಸದ ಹಿಂದಿನ ಕಾರಣ. ಕಲಕತ್ತೆಯ ಪ್ರವಾಸಕ್ಕೆ ಹೊಗಬೇಕಾಗಿದ್ದ ಇವನ ಸಹೋದ್ಯೋಗಿಯೊಬ್ಬನು ತರಾತುರಿಯಲ್ಲಿ ಲಗ್ನವಾಗಿ 'ಹನಿಮೂನಿ'ಗೆ ಹೋಗಬೇಕಾದ ಮೋಜಿನ ಘಟನೆ ಆಫೀಸಿನಲ್ಲಿ ಅದಾಗಲೇ ಎಲ್ಲರ ಮಾತಿಗೆ ವಿಷಯ ಒದಗಿಸಿತ್ತು. ತನ್ನದೇ ಆಫೀಸಿನಲ್ಲಿಯ 'ಸ್ಟೆನೋಗ್ರಾಫರ್' ಹುಡುಗಿಯೊಬ್ಬಳನ್ನು ಲಗ್ನವಾದ ತನ್ನ ರಸಿಕ ಸಹೋದ್ಯೋಗಿಯ ನೆನಪು ಬಂದ ಕೂಡಲೇ ಅವನು ನಿಜಕ್ಕೂ ಸಿಹಿಯಾದ ನಗೆ ನಕ್ಕ. ಅವನ ರಸಿಕತೆಯ ಪರಿಣಾಮವಾಗಿ ತಾನು ಕಲಕತ್ತೆಗೆ ಓಡಬೇಕಾಗಿತ್ತು. ಅದಾಗಲೇ ನಾಲ್ವತ್ತು ವರುಷ ದಾಟಿದ್ದರೂ ತನಗೆ ಮಾತ್ರ ಇನ್ನೂ ಹೆಂಡತಿಯಿರಲಿಲ್ಲ. ಮಕ್ಕಳುಮರಿಗಳಿರಲಿಲ್ಲ. ಹತ್ತಿರದ ಸಂಬಂಧಿಕರೂ ಇದ್ದಿರಲಿಲ್ಲ. ಸಂಚಾರಕ್ಕೆ ತಕ್ಕ ಆಳು. 'ಬಾಃಸ್' ತನ್ನನ್ನು ಬೇಕಾದಾಗ ಬೇಕಾದಲ್ಲಿ ಕಳಿಸಬಹುದು. ಅವನ ಮೋರೆಯ ಮೇಲಿನ ನಗುವಿನಲ್ಲಿ ವಿಷಾದದ ಛಾಯೆ ಸೇರಿಕೊಂಡಿತು.

'ವಾರ್ಡ್‌ರೋಬಿ'ನಲ್ಲಿ ಹ್ಯಾಂಗರಿನ ಮೇಲೆ ತೂಗುಹಾಕಿದ ಸೂಟೊಂದನ್ನು ಬಿಟ್ಟು 'ಸೂಟ್‌ಕೇಸಿ'ನಲ್ಲಿ ಎಲ್ಲ ಅರಿವೆಗಳನ್ನೂ ತುಂಬಿಯಾಗಿತ್ತು. ಸೂಟನ್ನು ನಿರಿಗೆ ಮಾಡುತ್ತಿದ್ದಂತೆ ನಿನ್ನೆ ಸಂಜೆ, ಹೊಟೆಲ್ಲಿಗೆ ಹಿಂತಿರುಗಿದಾಗ ಕೆಳಗಿನ ಕೌಂಟರಿನ ಬಳಿಯಲ್ಲಿ ನಡೆದ ಘಟನೆಯೊಂದು ನೆನಪಿಗೆ ಬರಹತ್ತಿತು. ಹೊಟೆಲ್ಲಿಗೆ ಅದೇ ಬಂದು ತಲುಪಿದ ಬಿಳಿಯ ಬಣ್ಣದ ಪರಕೀಯನೊಬ್ಬ ಕೌಂಟರಿನಲ್ಲಿದ್ದ ರಿಜಿಸ್ಟರ್‌ನಲ್ಲಿ ತನಗೆ ಸಂಬಂಧಪಟ್ಟ ವಿವರಗಳನ್ನು ಬರೆಯುತ್ತಿದ್ದಂತೆ

ಅದರಲ್ಲಿಯ "Your next destination" (ನಿಮ್ಮ ಮುಂದಿನ ಮುಕ್ಕಾಮು ಎಲ್ಲಿ?) ಎಂಬ ಶೀರ್ಷಿಕೆಯನ್ನು ನೋಡಿ ಆಶ್ಚರ್ಯಪಟ್ಟು, ಈ ಮಾಹಿತಿಯ ಉಪಯೋಗವೇನು? ಎಂದು ಅಲ್ಲಿಯ ಅಧಿಕಾರಿ ಯೊಬ್ಬನನ್ನು ಪ್ರಶ್ನಿಸುತ್ತಿದ್ದ. ಆ ಪ್ರಶ್ನೆ ತನ್ನ ಕಿವಿಯ ಮೇಲೆ ಬಿದ್ದಾಗ ತಾನೂ ಆ ಹೊಟೆಲ್ಲಿಗೆ ಬಂದ ಮೊದಲ ದಿನ ಆ ರೆಜಿಸ್ಟರಿನಲ್ಲಿ ಬರೆಯುವಾಗ ಬಂದ ಅನುಭವದ ನೆನಪು ಬಂದಿತ್ತು. "Your next destination" ಎಂಬ ಪ್ರಶ್ನೆಯ ಕೆಳಗೆ "Not known" (ಗೊತ್ತಿಲ್ಲ) ಎಂದು ಬರೆಯುತ್ತ ತನ್ನಷ್ಟಕ್ಕೇ ನಕ್ಕಿದ್ದ; ತಿಂಗಳೆರಡು ಪ್ರವಾಸ ಮಾಡಿ ದಣಿದು ಅದೇ ಹಿಂತಿರುಗಿದವನನ್ನು ಕಲಕತ್ತೆಯ ಪ್ರವಾಸಕ್ಕೆ ಕಳಿಸಿದ 'ಬಾಃಸ್'ನ ಲಹರಿಯನ್ನು ಯಾರು ಬಲ್ಲರು? ಕಲಕತ್ತೆಯನ್ನು ಬಿಡುವ ಮೊದಲೇ ಬೇರೆ ಇನ್ನೆಲ್ಲಿಗಾದರೂ ಕಳಿಸಿದರೂ ಕಳಿಸಿದರೇ!

ಈ ಘಟನೆಯ ನೆನಹಿನೊಡನೆಯೇ ಹುಟ್ಟಿ ಬಂದ ಇನ್ನೊಂದು ವಿಚಾರಕ್ಕೆ ಅವನ ಮನಸ್ಸು ತುಸು ಕಳವಳಿಸಿತು. 'ಪ್ರವಾಸ' ಎಂದರೆ ಎಂದೂ ಗೊಂದಲಿಸದ ತಾನು ಇಂದು ಇಷ್ಟೇಕೆ ಗೊಂದಲಿಸುತ್ತಿದ್ದೇನೆ. ಇದೀಗ ಕೈಕೊಳ್ಳಲಿದ್ದ ಪಯಣದ ವಿಷಯದಲ್ಲಿ ತನಗೇ ಅರಿವಾಗದ ಎಂತಹದಾದರೂ ಭೀತಿ, ಅಳುಕು ಇದ್ದಿರಬಹುದೇ? ಎಂದಿಗೂ ಅತಿ ಶಾಂತಚಿತ್ತನಾಗಿ ಪ್ರವಾಸದ ಸಿದ್ಧತೆಯನ್ನು ಮಾಡುವ ತನಗೆ ಹೀಗೇಕೆ ಒಂದೊಂದೇ ವಿಚಾರ–ಅನಿರೀಕ್ಷಿತವಾಗಿ ಬಂದುದೆಂಬಂತೆ–ಬಂದು ಗೊಂದಲಗೆಡಹುತ್ತಿದೆ? ಕಲಕತ್ತೆಯಲ್ಲಿ ಆಫೀಸಿನ ಕೆಲಸ ಇನ್ನೂ ಐದು ದಿನಗಳವರೆಗೆ ಇರುವಾಗ, ಯಾರೋ ಒಬ್ಬ ಅಪರಿಚಿತ ಆಗಂತುಕನ ಪ್ರವಾಸದ ಕರೆಗೆ ಒಪ್ಪಿಕೊಂಡು ಕುಳಿತುಬಿಟ್ಟಿದ್ದೇನಲ್ಲ! ನಾಳೆ 'ಬಾಃಸ್' ಕೇಳಿದರೆ ಏನು ಹೇಳಲಿ? ಮರುಕ್ಷಣ 'ಬಾಃಸ್'ನ ಮಾತನ್ನು ಉಲ್ಲಂಘಿಸಿ ಕಲಕತ್ತೆಯಲ್ಲಿಯ ಕೆಲಸವನ್ನು ಅರ್ಧಕ್ಕೇ ಬಿಟ್ಟು ಹೋಗುವುದರಲ್ಲೇ ಎಂತಹುದೋ ಸಮಾಧಾನ ಕಂಡಿತು. ಈ ಉಲ್ಲಂಘನೆಯೇ ತಾನು ಆ ಹೊಸಬನ ಕರೆಗೆ ಓಗೊಟ್ಟುದರ ಹಿಂದಿನ ಸುಪ್ತ ಪ್ರೇರಣೆಯಾಗಿತ್ತು ಎನ್ನುವ ರೀತಿಯಲ್ಲಿ! ಆದರೂ ಹೊರಡುವ ಮೊದಲು 'ಬಾಃಸ್'ನಿಗೆ ತನ್ನ ಈ ಹೊಸ ನಿಶ್ಚಯವನ್ನು ತಿಳಿಸಬೇಕು ಎಂದು ಬಗೆದು ಕೂಡಲೇ ಟೆಲಿಫೋನ್

ರಿಸೀವರನ್ನು ಎತ್ತಿ, ತನಗೊಂದು 'ಟ್ರಂಕ್‌ಕಾಲ್' ಮಾಡುವುದಿದೆ ಎಂದು ಹೇಳಿ 'ಬಾಃಸ್'ನ ಮನೆಯ ಟೆಲಿಫೋನ್ ನಂಬರ್ ಹಾಗೂ 'ಬಾಃಸ್'ನ ಹೆಸರು ಕೊಟ್ಟು 'ಅರ್ಜಂಟ್ ಕಾಲ್' (ಅವಸರದ ಕರೆ) ಮಾಡಲು ವಿಜ್ಞಾಪಿಸಿದ. 'ಬಾಃಸ್' ಇದಾಗಲೇ ಮಲಗಿರಬಹುದೇನೋ. ಈ ಅವೇಳೆಯಲ್ಲಿ ಬಂದ ಟೆಲಿಫೋನ್ ಕರೆಯಿಂದ ಆತ ಕೆರಳಬಹುದು. ತಾನು ಕೊಡಲಿರುವ ಸುದ್ದಿಯಿಂದಂತೂ ಎದ್ದು ಹಾರಾಡಬಹುದು. ಏಕೋ ಆ ಕಲ್ಪನೆಯಿಂದಲೇ ಅವನಿಗೆ ಇನ್ನಷ್ಟು ಸುಖವೆನಿಸಿತು.

ಟೆಲಿಫೋನ್ ಕರೆ ಬರುವ ಹಾದಿ ನೋಡುತ್ತ ಹಾಸಿಗೆಯಲ್ಲಿ ಅಡ್ಡವಾದಲ್ಲೇ ಇದೆಲ್ಲ ತನ್ನ ನಿಜ ಸ್ವಭಾವಕ್ಕೆ ವಿರುದ್ಧವಾದದ್ದು ಎಂಬ ಅರಿವು ಮೂಡಹತ್ತಿತು; ನಸುಕಿನಲ್ಲಿ ಎದ್ದು ತಾನು ಕೈಗೊಳ್ಳಲಿದ್ದ 'ಪಯಣ'ಕ್ಕೆ ಯಾವ ಬಗೆಯ ಸಮರ್ಥನೆಯೂ ಬೇಕಾಗಿರಲಿಲ್ಲ. ಉಲ್ಲಂಘನೆಯಾಗಲೀ ನಿರಾಕರಣೆ, ಪ್ರತಿಭಟನೆಯಾಗಲೀ ತನ್ನ ಸ್ವಭಾವರಚನೆಯಲ್ಲೇ ಇರಲಿಲ್ಲ. ತನ್ನ ಇಂದಿನವರೆಗಿನ ಆಯುಷ್ಯದಲ್ಲಿ ಇವುಗಳ ಅರ್ಥ ಹೊಳೆದಿರಲಿಲ್ಲ. ಅವಶ್ಯಕತೆ ತೋರಿರಲಿಲ್ಲ. ಗೆಳೆಯರು ಬಂದು ಈಗಿಂದೀಗ ಸಿನೇಮಾಕ್ಕೆ ಹೋಗಬೇಕು ಎಂದು ಸೂಚಿಸಿದಾಗ ಎಷ್ಟೊಂದು ಸಹಜವಾಗಿ ಒಪ್ಪುತ್ತಿದ್ದನೋ ಅಷ್ಟೇ ಸಹಜವಾಗಿ ಅವನ 'ಬಾಃಸ್'ನು ಅವನಿಗಾಗಿ ಸಿದ್ಧಪಡಿಸಿದ ಕಾರ್ಯಕ್ರಮಗಳನ್ನು ಸ್ವೀಕರಿಸುತ್ತಿದ್ದ. ತನ್ನೆಲ್ಲ ಚಟುವಟಿಕೆಗಳ ರೂಪರೇಷೆಗಳನ್ನು ಯಾವಾಗಲೂ ಬೇರೆಯವರೇ ನಿಶ್ಚಯಿಸಿರುತ್ತಾರೆ–ಅದೂ ತನ್ನ ಹಿತಕ್ಕೇ ಎಂಬ ನಂಬುಗೆಯಿಂದಲೇ. ತಾನೂ ಅವುಗಳಿಗೆ ಪ್ರತೀಕಾರ ಮಾಡಿ ಅವರನ್ನೇಕೆ ನಿರಾಶೆಗೊಳಿಸಲಿ, ಎಂದು ಅವನು ಆಗೀಗ ನಗುತ್ತ ಹೇಳುವುದುಂಟು. ಇದನ್ನು ನೆನೆಯುವಾಗ ಅಪ್ಪನ ಮಾತೊಂದರ ನೆನಪಾಯಿತು.

ಅಪ್ಪ ನಿಷ್ಠುರವಾದ ಶಿಸ್ತಿನ ಮನುಷ್ಯನಾಗಿದ್ದ. ಚಿಕ್ಕಂದಿನಲ್ಲಿ–ತನಗೆ ನೆನಪಿರಲಿಲ್ಲ–ಚಿಕ್ಕಪ್ಪ ಹೇಳಿದ ಸಂಗತಿ: ತಾನು ಏಳೋ ಎಂಟೋ ವರುಷದವನಿರುವಾಗ ನಡೆದ ಪ್ರಸಂಗ; ಅಪ್ಪ ತನ್ನನ್ನು ಅಂಗಡಿಯಲ್ಲಿ ಕೂಡಿಸಿ ಯಾವುದೋ ಕೆಲಸಕ್ಕೆಂದು ಮನೆಗೆ ಹೋಗಿದ್ದನಂತೆ. "ನಾನು ಇದೀಗ ಬರುತ್ತೇನೆ. ಯಾರಾದರೂ ಬಂದರೆ ತಡೆಯಲು ಹೇಳು. ಏನೂ ಕೊಡಲು ಹೋಗಬೇಡ" ಎಂದು ಹೇಳಿ ಹೋಗಿದ್ದನಂತೆ. ಅಪ್ಪ

ಹೋದದ್ದೇ, ತನ್ನದೇ ಶಾಲೆಯ, ತನಗಿಂತ ಎಷ್ಟೋ ವರುಷಗಳಿಂದ ದೊಡ್ಡವನಾದ ಹುಡುಗನೊಬ್ಬ ಪೇರಲ ಹಣ್ಣೊಂದನ್ನು ಅಂಗಡಿಗೆ ತಂದು ತನಗೆ ಕೊಟ್ಟು ತನ್ನಿಂದ ಒಂದು ರೂಪಾಯಿ ಪಡೆದು ಹೋದ. ನಾಣ್ಯಗಳ ಪರಿಚಯ ತನಗಿನ್ನೂ ಆಗ ಇದ್ದಿರಲಿಲ್ಲ. ಹುಡುಗ ಬೇಡಿದ್ದು ಒಂದು ಬಿಲ್ಲಿ. ತಾನು ಕೊಟ್ಟದ್ದು ಬೆಳ್ಳಿಯ ನಾಣ್ಯ–ಒಂದು ರೂಪಾಯಿ. ಅಪ್ಪನಿಗೆ ಇದು ತಿಳಿದಾಗ ಜಮದಗ್ನಿಯ ಅವತಾರವಾಗಿದ್ದ. (ಅಪ್ಪ ಜಮದಗ್ನಿಯ ಅವತಾರವೆಂದೇ ಜನರೆಲ್ಲಾ ಆಡಿಕೊಳ್ಳುತ್ತಿದ್ದರು). ತನ್ನನ್ನು ದರದರ ಅಂಗಡಿಯಿಂದ ಮನೆಯವರೆಗೆ ಎಳೆದುಕೊಂಡು ಹೋಗಿ ಹಿತ್ತಲಲ್ಲಿಯ ಬಿಂಬಲಕಾಯಿ ಮರಕ್ಕೆ ಕಟ್ಟಿಹಾಕಿ ತಲೆಯ ಮೇಲೆ ಕೆಂಪು ಇರುವೆಗಳ ಕೊಟ್ಟೆ (ಎಲೆಗಳ ಗೂಡು) ಕೊಡವಿದನಂತೆ. ಇರುವೆಗಳ ಕಡಿತದಿಂದ ಮಗು 'ಕಿಟಾರನೆ' ಚೀರಿಕೊಳ್ಳುತ್ತಿದ್ದಾಗಲೇ ಬಿಂಬಲೀಮರದ ಬರಲಿನಿಂದ ಕೈಗೆ ಬಂದಂತೆ ಹೊಡೆದನಂತೆ. ಕೈಕಾಲುಗಳನ್ನು ಕಟ್ಟಿಸಿಕೊಂಡ ಮಗು ನೋವಿನಿಂದ ಒದ್ದಾಡುತ್ತಿತ್ತಂತೆ. ಅದರ ಒದ್ದಾಟ ನೋಡಿದಷ್ಟೂ ಇವನ ಹೊಡೆಯುವ ಆವೇಶ ಹೆಚ್ಚುತ್ತಿತ್ತಂತೆ. ಅಮ್ಮ, ಸೋದರತ್ತೆಯವರು 'ಬಿಡಿ ಬಿಡಿ, ದಮ್ಮಯ್ಯ' ಎಂದು ಚೀರಿಕೊಂಡರೂ ಇವನು ಬಿಡಲಿಲ್ಲವಂತೆ. ನೆರೆದ ಕೇರಿಯ ಹೆಂಗಸರು ಛೀಮಾರಿ ಹಾಕಿದಾಗ "ನಾನು ಹುಟ್ಟಿಸಿದ ಹುಡುಗ, ನಾನು ಹೊಡೆಯುತ್ತೇನೆ. ಕೇಳುವವರು ನೀವು ಯಾರು?" ಎಂದು ಅವರ ಮೇಲೆ ಹರಿಹಾಯ್ದನಂತೆ. ಕೊನೆಗೆ, ಅದಾಗ ಗೋಕರ್ಣದಿಂದ ಹಿಂತಿರುಗಿದ ಚಿಕ್ಕಪ್ಪ ಅವನ ಕೈರಟ್ಟೆ ಹಿಡಿದು ದೂರ ದಬ್ಬಿ ತನ್ನನ್ನು ಬಿಡಿಸಿದ್ದನಂತೆ. ಹೆದರಿ ಕಂಗಾಲಾದ ಮಗು ಹತ್ತು ದಿನಗಳವರೆಗೆ ಒಬ್ಬರ ಹತ್ತಿರವೂ ಮಾತನಾಡಲಿಲ್ಲವಂತೆ. ತಾನು ದೊಡ್ಡವನಾದ ಮೇಲೆ ಅತ್ತೆಯಾಗಲಿ ತಾಯಿಯಾಗಲೀ ಅಪ್ಪ ತನಗೆ ಕೊಟ್ಟ ಹಿಂಸೆಯ ನೆನಪು ಮಾಡಿದರೆ, ಅಪ್ಪ ತಾನು ಹಾಗೆ ನಡೆಸಿಕೊಂಡದ್ದರಿಂದಲೇ ಹುಡುಗ ಹಾದಿಗೆ ಹತ್ತಿದ, ಇಲ್ಲವಾದರೆ ಅವನಂತಾಗುತ್ತಿದ್ದ, ಇವನಂತಾಗುತ್ತಿದ್ದ ಎಂದು ಯಾರುಯಾರೋ ಅಡ್ಡ ಹಾದಿ ಹಿಡಿದ ಹುಡುಗರ ಕಥೆ ಹೇಳುತ್ತಿದ್ದ. ತನಗೆ ನಗು ಬರುತ್ತಿತ್ತು.

ಅಪ್ಪನನ್ನು ತಾನು ಪ್ರೀತಿಸುತ್ತಿದ್ದೆನೋ ಇಲ್ಲವೋ ಅವನಿಗೆ ನೆನಪಿಲ್ಲ. ಅದರೆ ಅಪ್ಪನಿಗೆ ಎಂದೂ ಅವಿಧೇಯನಾಗಿ ನಡೆದುಕೊಳ್ಳಲಿಲ್ಲ

ಎನ್ನುವುದರ ಕಾರಣ, ಅಪ್ಪ ತಿಳಿದುಕೊಂಡಂತೆ, ಅವಿಧೇಯತೆಗೆ ಅಪ್ಪನಿಂದ ಆಗಬಹುದಾದ ಶಿಕ್ಷೆಯ ಭಯ ಅಗಿರಲಿಲ್ಲ. ಪ್ರತಿಭಟನೆಗೆ ಅರ್ಥವೇ ಇಲ್ಲ ಎಂಬುದು ಅವನ ಜೀವನದ ತತ್ವಜ್ಞಾನವಾಗಿತ್ತು. ಎಷ್ಟೋ ಸಲ ಈ ತತ್ವಜ್ಞಾನ ಕೃತಿಯಲ್ಲಿಳಿದಾಗ ನಿಜವಾಗಿ ಸುಖಪಟ್ಟಿದ್ದುಂಟು. ಆ ದಿನ ಕಲಕತ್ತೆಗೆ ಹೋಗೆಂದು ಹೇಳಲು ತನ್ನನ್ನು ಕರೆಯಿಸಿದಾಗ ತನ್ನಿಂದ ಏನಾದರೂ ಆತಂಕ ಬರಬಹುದೆಂಬ ಅಪೇಕ್ಷೆ 'ಬಾಃಸ್'ನ ಮೋರೆಯ ಮೇಲೆ ನಿಚ್ಚಳವಾಗಿ ಮೂಡಿತ್ತು. ಆದರೆ ತಾನು ಯಾವ ಅಡೆತಡೆಯಿಲ್ಲದೆ ಒಪ್ಪಿಕೊಂಡುಬಿಟ್ಟಾಗ ಅವರಿಗೇ ತುಸು ನಿರಾಸೆಯಾಗಿರಬೇಕು.... ಟೆಲಿಫೋನಿನ ಗಂಟೆ ಬಾರಿಸಿತು. ಅವಸರ ಅವಸರವಾಗಿ ಎದ್ದು ರಿಸೀವರ್ ಎತ್ತಿಕೊಂಡ. 'ಬಾಃಸ್'ನಿಗೆ ತಾನು ಹೇಳಲಿದ್ದ ಸಂದೇಶವನ್ನು ನೆನೆದುಕೊಂಡ. ಗಂಟಲು ಸರಿಪಡಿಸಿಕೊಂಡ. ಮೂಗಿನ ಹೊರಳೆ ಅರಳಿಸಿದ. 'ರಿಸೀವರ್'ನ್ನು ಕಿವಿಗೆ ಹಚ್ಚಿದ: "Bombay line is out of order, Sir. Delay is indefinite. Should I keep the call pending Sir?" (ಮುಂಬಯಿ–ಕಲಕತ್ತೆಗಳ ನಡುವಿನ ಟೆಲಿಫೋನ್ ಸಂಬಂಧ ಕೆಟ್ಟಿದೆ ಸರ್, ದುರಸ್ತಿಗೆ ಬೇಕಾದ ವೇಳೆ ಅನಿಶ್ಚಿತ. ನಿಮ್ಮ ಕರೆಯನ್ನು ಕಾದಿರಿಸಲೇ ಸರ್) "Cancel it" (ರದ್ದುಪಡಿಸಿರಿ) ಎಂದವನೇ ರಿಸೀವರ್‌ನ್ನು ಕೆಳಗಿಟ್ಟು 'ಹೋ–ಹೋ' ಎಂದು ನಗಹತ್ತಿದ. 'ಬಾಃಸ್‌ನ ಮೇಲೆ ಸಿಟ್ಟಾಗುವ ಪ್ರಪ್ರಥಮ ಸಂಧಿ ಅನಾಯಸವಾಗಿ ಕಳೆದುಹೋಗಿತ್ತು. ಅವನಿಗೆ ನಗು ಅನಾವರವಾಯಿತು. ನಗುತ್ತಲೆ ಹಾಸಿಗೆಯ ಮೇಲೆ ಅಡ್ಡವಾದ . ಕೈಗಡಿಯಾರ ನೋಡಿಕೊಂಡ. ಗಂಟೆ ಹನ್ನೆರಡು ದಾಟಿತ್ತು. ಕೂಡಲೇ ಮಲಗಬೇಕು ಅನಿಸಿತು. 'ರೂಮ್–ಬಾಯ್' ಬೆಳಿಗ್ಗೆ ಸರಿಯಾಗಿ ಎಬ್ಬಿಸಬಹುದಲ್ಲವೆ? ಇಲ್ಲವಾದರೆ ಆ ಅಪರಿಚಿತನು ಕರೆಯಲು ಬಂದಾಗ ನಿದ್ದೆ ಹತ್ತಿಬಿಟ್ಟರೆ? ದೀಪ ಆರಿಸುವುದೇ ಬೇಡ. ಅಂದರಾದರೂ ಆಗೀಗ ಎಚ್ಚರಗೊಂಡು ಗಡಿಯಾರ ನೋಡಿಕೊಳ್ಳಬಹುದು. ಅವನು ದೀಪ ಆರಿಸಲಿಲ್ಲ. ಹಾಗೇ ಕಣ್ಣು ಮುಚ್ಚಿದ. ಹೊಟೆಲ್ಲಿಗೆ ಹೊಟೆಲ್ಲೇ ಸ್ತಬ್ಧವಾಗಿತ್ತು. ಹೊರಗೆ, ರಸ್ತೆಯಲ್ಲಿ ಮಾತ್ರ ಕೊನೆಯ ಟ್ರಾಮುಗಳ. ಬಸ್ಸುಗಳ ಸದ್ದು ಆಗೀಗ ಕೇಳಿಬರುತ್ತಿತ್ತು. ದಣಿದ ಮನಸ್ಸಿಗೆ ಜೋಗುಳ ಹೇಳುತ್ತಿತ್ತು.....

ಸುಮಾರು ಒಂದು ಗಂಟೆಯ ಮೇಲೆ ಎಚ್ಚರಗೊಂಡು 'ಧಡಕ್ಕನೆ' ಎದ್ದು ಕೂತಾಗ, ಹೊರಗೆ ಒಮ್ಮೆಲೇ ಗುಡುಗು–ಮಿಂಚು–ಮಳೆ ಸುರುವಾಗಿದ್ದವು. ಗುಡುಗು–ಮಳೆಗಳ ಸದ್ದಿಗೆ ಮೈಮೇಲೆ ರೋಮಾಂಚವೆದ್ದಿತು. ಕೆಲ ಹೊತ್ತಿನವರೆಗೆ ತಾನು ಎಲ್ಲಿದ್ದೇನೆ? ಯಾಕೆ ಹೀಗೆ ಒಮ್ಮಲೇ ಎದ್ದು ಕುಳಿತೆ? ಎನ್ನುವುದು ತಿಳಿಯದೆ ದಿಗ್ಭ್ರಾಂತನಂತೆ ಸುತ್ತಲೂ ನೋಡಹತ್ತಿದೆ. ರೂಮಿನಲ್ಲಿಯ ಎಲ್ಲ ದೀಪಗಳೂ ಬೆಳ್ಳಗೆ ಉರಿಯುತ್ತಿದ್ದವು. ಮಂಚದ ಮೇಲೆ, ಕಾಲು ಮಾಡುವ ದಿಕ್ಕಿನಲ್ಲಿ ಆಗ ನಿರಿಗೆ ಮಾಡಿಟ್ಟ ಸೂಟು ಇತ್ತು. ಅದನ್ನು ನೋಡಿದ ಕೂಡಲೇ ತನ್ನ ಪಯಣದ ನೆನಪು ಬಂತು. ಗಂಟೆ ನೋಡಿಕೊಂಡ. ಇನ್ನು ಮೂರು ತಾಸಾದರೂ ಇರಬೇಕು–ಅವನು ಬರಲು, ಎಂದುಕೊಂಡ. ಹೊರಗೇ ಉಳಿದ ಸೂಟನ್ನು ಸೂಟ್‌ಕೇಸಿನಲ್ಲಿ ತುಂಬಬೇಕು ಎನ್ನುವಾಗ ಬಂದ ವಿಚಾರಕ್ಕೆ ಅವನು ಅವ್ಯಕ್ತವಾಗಿ ಹೆದರಿದ. ತಾನು ಇಂದು ಇಷ್ಟೇಕೆ ಗೊಂದಲಿಸಿದ್ದೇನೆ? ಬೆಳಿಗ್ಗೆ ಅವನು ಬಂದಾಗ ಯಾವ ಡ್ರೆಸ್ಸಿನಲ್ಲಿ ಹೋಗಬೇಕು ಎಂಬ ವಿಚಾರವನ್ನೂ ಮಾಡದೇ ಎಲ್ಲ ಅರಿವೆಗಳನ್ನೂ ಸೂಟ್‌ಕೇಸಿನಲ್ಲಿ ತುಂಬಿದೆನಲ್ಲ. ಬೆಳಿಗ್ಗೆ ಯಾವ ಡ್ರೆಸ್ಸು ಹಾಕಿಕೊಳ್ಳಲಿ? ಈ ಸೂಟನ್ನೇ ಧರಿಸಿದರೆ ಹೇಗೆ? ಈಗ ಬಂದ ನೆನಪಿನಿಂದ ಮಾತ್ರ ಅವನು ತತ್ತರ ನಡುಗಿದ; ಮೂರು ಸಂಜೆಯ ಹೊತ್ತಿಗೆ ಅವನನ್ನು ಭೆಟ್ಟಿಯಾಗಲು ಬಂದಾತ ಬಟ್ಟೆಯನ್ನೇ ತೊಟ್ಟಂತಿರಲಿಲ್ಲ! ಈಗ ನೆನಪಿಗೆ ಬಂತು; ಕೆದರಿದ ಕೂದಲು; ಹರವಾದ ಭುಜಗಳು; ಹರವಾದ ಎದೆ; ಮಾಂಸಲ ಕೈರಟ್ಟೆಗಳು; ಕಪ್ಪು ಮೈ ಬಣ್ಣ; ಮೋರೆಗೆ ಇಷ್ಟುದ್ದ ಕಪ್ಪು ಪೊತ್ತೆ ಮೀಸೆಗಳು; ಕಪ್ಪು ಎದೆಯ ಮೇಲೆ ಕಪ್ಪು ರೊಣೆ; ಎಡಗೈ ರಟ್ಟೆಗೆ ಕಪ್ಪು ಬಣ್ಣದ ಇಷ್ಟು ದಪ್ಪ ದಾರ. ಬಂದ. ಕದ ತಟ್ಟಿದ. ತಾನೇ ಕದ ತೆರೆದ. (ಅಗಳಿ ಹಾಕಿರಲಿಲ್ಲ.) ಸೊಂಟದವರೆಗಿನ ದೇಹ ಒಳಗೆ ಹಾಕಿದ. "ನಾಳೆ ನಸುಕಿನಲ್ಲಿ ಕೋಳಿ ಕೂಗುವ ಮೊದಲೇ ಹೊರಡಬೇಕು. ಸಿದ್ಧನಾಗಿರು" ಎಂದ. ಮೈ ಹಿಂತೆಗದುಕೊಂಡ. ಕದ ಮುಚ್ಚಿದ. ಹೋಗಿ ಬಿಟ್ಟ. 'ಈಗಿಂದೀಗ ಸಿನೇಮಾಕ್ಕೆ ಹೋಗಬೇಕು' ಎಂದು ಗೆಳೆಯರು ಸೂಚಿಸಿದಾಗ ಇಲ್ಲವೆ 'ನಾಳೆ ಕಲಕತ್ತೆಗೆ ಹೋಗಬೇಕು' ಎಂದು 'ಬಾಃಸ್' ಹೇಳಿದಾಗ 'ಹುಂ' ಎನ್ನುವ ಸಹಜತೆಯಿಂದಲೇ ತಾನು ಒಪ್ಪಿಕೊಂಡುಬಿಟ್ಟೆ. ಒಪ್ಪಿಕೊಂಡು ಬಿಟ್ಟೆನೇ? ಅವನ ಮನಸ್ಸಿನಲ್ಲಿ ಪ್ರಥಮ ಬಾರಿ ಸಂಶಯ ಮೂಡಿತು.

ದಣಿವೂ ಬಂದಂತೆ ಎನಿಸಿತು. ಗೊಂದಲಿಸುತ್ತ ಹಾಸಿಗೆಗೆ ಬಂದ. ಅಡ್ಡವಾದ. ಕಣ್ಣು ಮುಚ್ಚಿದ.

ಹೊರಗೆ ಮಾತ್ರ ಗಾಳಿ–ಮಳೆ–ಸಿಡಿಲು–ಗುಡುಗುಗಳ ಆರ್ಭಟ ಒಮ್ಮೆಲೇ ಹೆಚ್ಚಿತ್ತು.

ಅಜ್ಜ ಸತ್ತ ರಾತ್ರಿಯನ್ನು ನೆನೆಯುತ್ತ ಅವನು ನಿದ್ದೆ ಹೋದ. ನಿದ್ದೆ ಹೋಗುವ ಮೊದಲು ಅದೇ ತಲೆ ಎತ್ತಲು ಯತ್ನಿಸುತ್ತಿದ್ದ ಸಂಶಯವೂ ಈಗ ಮಲಗಿತ್ತು; ಅವನು ಬರುವ ಮೊದಲೇ ಕೆಳಗಿನವನಾಗಲಿ 'ರೂಮ್–ಬಾಯ್'ನಾಗಲೀ ತನ್ನನ್ನು ಎಬ್ಬಿಸಬಹುದಲ್ಲವೇ?....

ರೂಮ್–ಬಾಯ್ ಎಬ್ಬಿಸಲಿಲ್ಲ. ಅವನಿಗೆ ಮರೆತೇಹೋಗಿತ್ತು. ತನ್ನ ಅಜಾಗರೂಕತೆಯನ್ನು ಶಪಿಸುತ್ತ, ಅಳುಕುವ ಹೆಜ್ಜೆಗಳನ್ನಿಡುತ್ತ, ಚಹದ ಟ್ರೇ ಹೊತ್ತುಕೊಂಡು ಅವನ ಕೋಣೆಯ ಬಾಗಿಲನ್ನು ತಲುಪಿದಾಗ ಬೆಳಗಿನ ಐದೂವರೆ ಆಗಿತ್ತು. ಇಷ್ಟು ಹೊತ್ತಿಗೆ ಅವರು ಹೊರಟೇಹೋಗಿರಬಹುದೇನೋ, ಕದದ ಮೇಲೆ ಬಡಿದ. ಒಳಗಿನಿಂದ ಉತ್ತರ ಬರಲಿಲ್ಲ. ಕದದ ಹಿಡಿಕೆ ತಿರುವಿ ದೂಡಿದ. ಕದ ತೆರೆಯಿತು; ಒಳಗಿನಿಂದ ಅಗಳಿ ಹಾಕಿರಲಿಲ್ಲ. ರೂಮಿನಲ್ಲಿಯ ದೀಪಗಳೆಲ್ಲವೂ ಉರಿಯುತ್ತಿದ್ದವು. 'ಅವರು ಇದ್ದಾರೆ' ಅನಿಸಿತು. ಅಧೀರ ಹೆಜ್ಜೆಗಳನ್ನಿಡುತ್ತ ಹಾಸಿಗೆಯನ್ನು ಸಮೀಪಿಸಿದ. ಅವನು ಸೂಟು–ಬೂಟುಗಳನ್ನು ಧರಿಸಿಯೇ ಹಾಸಿಗೆಯ ಮೇಲೆ ಅಂಗಾತ ಮಲಗಿ, ಗಾಢ ನಿದ್ದೆ ಹೋಗಿದ್ದ. ಮಂಚದಿಂದ ಇಳಿಬಿಟ್ಟ, ಬಲಗೈಯಲ್ಲಿ ನೆಲದ ಮೇಲಿಟ್ಟ ಸೂಟ್‌ಕೇಸಿನ ಹಿಡಿಕೆಯನ್ನು ಗಟ್ಟಿಯಾಗಿ ಹಿಡಿದಿದ್ದ. ಎಡಗೈಯನ್ನು ಹಾಸಿಗೆಯ ಇನ್ನೊಂದು ಅಂಚಿನತ್ತ ನಿಡಿದಾಗಿ ಚಾಚಿದ್ದ. ಬೂಟು ಹಾಕಿದ ಕಾಲುಗಳು ಒಂದನ್ನೊಂದು ಬಳಸಿದ್ದವು. ದಿಂಬಿನ ಮೇಲೆ ವಿಶ್ರಮಿಸಿದ, ಕ್ರಾಪು ಬಾಚಿದ, ತಲೆ ತುಸು ಬಲಕ್ಕೆ ಒಲಿದಿತ್ತು. ಚಹದ ಟ್ರೇಯನ್ನು ಹತ್ತಿರದ ಟೀಪಾಯಿಯ ಮೇಲಿಟ್ಟು, ರೂಮ್–ಬಾಯ್, "ಗುಡ್‌ಮಾರ್ನಿಂಗ್ ಸರ್" ಎಂದ. ಉತ್ತರ ಬರದಿದ್ದುದನ್ನು ನೋಡಿ, "ನನಗೆ ತಡವಾದದಕ್ಕೆ ಕ್ಷಮಿಸಿ, ಸರ್" ಎಂದ. ಇನ್ನೂ ಉತ್ತರ ಬರದಿದ್ದುದನ್ನು ನೋಡಿ, ಮನಸ್ಸಿನಲ್ಲಿ ಮೂಡಿದ ಸಂಶಯ ನಿವಾರಣೆಗಾಗಿ ಮೈ ಮುಟ್ಟಿ ನೋಡಿದಾಗ ಹೆದರಿದ ಸೇವಕ ಅಲ್ಲಿಂದ ಓಟ ಕಿತ್ತ. ಹೊಟೆಲ್ಲಿನ ಮ್ಯಾನೇಜರರಿಗೆ ಸುದ್ದಿ ಮುಟ್ಟಿ

ಅವರು ಡಾಕ್ಟರರನ್ನು ಕರೆಯಿಸಿ ರೂಮಿಗೆ ಬರುವ ಹೊತ್ತಿಗೆ ಕಾಲುಗಂಟೆ ಸರಿದಿತ್ತು. ಡಾಕ್ಟರರು ಪರೀಕ್ಷಿಸಿ, ಅವನು ಹೋಗಿ ಮುಕ್ಕಾಲು ಗಂಟೆಯಾದರೂ ಆಗಿರಬೇಕು ಎನ್ನುತ್ತ ಕೈಗಡಿಯಾರ ನೋಡಿಕೊಂಡಾಗ, ಐದೂಮುಕ್ಕಾಲು ಗಂಟೆ. ಭಯಗ್ರಸ್ತನಾಗಿ ಹತ್ತಿರ ನಿಂತ ಸೇವಕ. "ಸರಿಯಾಗಿ ಐದು ಗಂಟೆಗೆ ತಾನು ಹೊರಡಬೇಕು. ನಾಲ್ಕು ಗಂಟೆಗೆ ಎಬ್ಬಿಸು. ಎಂದಿದ್ದರು, ಸರ್" ಎಂದ ನಡಗುತ್ತ.

೧೫–೮–೧೯೬೪

# ೩. ಪ್ರಬಂಧ
# ಕಾಲ

**– ಜಯಪ್ರಕಾಶ್ ಮಾವಿನಕುಳಿ**

Our Sweetest songs are those which tell of Saddest thought.
-Shelly

ಬ್ಯಾಂಕಿನ ಮೂರನೇ ಮಹಡಿಯಲ್ಲಿರುವ ನನ್ನ ಕ್ಯಾಬಿನ್‌ನ ಕಿಟಕಿಯ ಗಾಜಿನ ಮೂಲಕ ಹೊರಗೆ ನೋಡಿದರೇ ಜನಸಾಗರ. ಈ ಮುಂಬಯಿಗೆ ಎಲ್ಲಿಂದ ಇಷ್ಟು ಜನರು ಬರುತ್ತಾರೋ, ಯಾಕೆ ಬರುತ್ತಾರೋ, ಎಲ್ಲಿಗೆ ಹೋಗುತ್ತಾರೋ, ಎಲ್ಲಿ ವಾಸಿಸುತ್ತಾರೋ..... ಈ ನಲ್ಲಿಯ ನೀರು, ಕೆಟ್ಟ ವಾಸನೆಯ ಬೆಣ್ಣೆ, ತುಪ್ಪ, ಕೊಳೆತ ತರಕಾರಿ, ಗಲೀಜು ತಿಂಡಿ ತೀರ್ಥ. ಕಣ್ಣು ಬಿಟ್ಟರೆ ಉರಿ ಉರಿ – ಆದರೂ ಮಹಡಿ ಬಸ್ಸುಗಳಲ್ಲಿ, ಟ್ರಾಮ ಬಂಡಿಗಳಲ್ಲಿ, ಅಂಗಡಿಗಳ ಸಾಲುಗಳಲ್ಲಿ, ಫುಟ್‌ಪಾತಿನಲ್ಲಿ, ರಿಕ್ಷಾಗಳಲ್ಲಿ ಎಲ್ಲಿ ನೋಡಿದರೂ ಜನ.... ಬರೇ ಜನ.... ಓಡುತ್ತಿರುವ ಜನ. ಇಲ್ಲಿ ಯಾವಾಗಲೂ ಓಡುತ್ತಲೇ ಇರಬೇಕು. ಬರೇ ಕಾಲಲ್ಲಿ ಓಡಿದರೆ ಸಾಕೇ. ಕಾಲಿನ ವೇಗಕ್ಕೆ ಮಿತಿ ಇಲ್ಲವೇ. ಬಂಡಿ, ಬೈಸಿಕಲ್, ಮೊಪೆಡ್, ಸ್ಕೂಟರ್, ಕಾರು, ಜೀಪು, ಹೆಲಿಕಾಪ್ಟರ್, ವಿಮಾನಗಳಲ್ಲಿ ಕಾಲವನ್ನು ಭೇದಿಸುತ್ತಾ ಓಡುತ್ತಲೇ ಇರಬೇಕು. ಓಡುವುದು ಮನುಷ್ಯನ ವ್ಯಕ್ತಿತ್ವದ ಒಂದು ಭಾಗವೇ ಆಗಿದೆಯೇ.... ಎಲ್ಲಿಂದ ಓಡುತ್ತಿರಬಹುದು? ಮೊಹೆಂಜದಾರೋ, ಹರಪ್ಪ....

ನಾನು ನೋಡುತ್ತಿದ್ದಂತೆ 'ಕ್ರೀಂ' ಎಂದು ಬ್ರೇಕ್ ಹಾಕಿದ ಬಸ್ಸಿನ ಕೆಳಗೆ ಅಪ್ಪಚ್ಚಿಯಾದ ಸೈಕಲ್ ಸವಾರ, ಹೊಟ್ಟೆಯ ಮೇಲೆ ಬಸ್ಸಿನ ಚಕ್ರ ಹರಿದುದರ ಪರಿಣಾಮ ಕರುಳು ಹೊರಗೆ ಬಂದುಬಿಟ್ಟಿದೆ. ಸುತ್ತಲೂ ಸಂತೆಯಲ್ಲಿ ಸೇರಿದಂತೆ ಜನ, ಗುಯ್ ಎನ್ನುತ್ತಾ ಪೋಲೀಸ್ ಜೀಪು. ಹೆಣಸಾಗಾಟ, ಚದುರಿದ ಜನ. ಮತ್ತೆ ಯಥಾಪ್ರಕಾರ ನಿರಂತರ ಕ್ರಿಯೆ. ಆತ ಸತ್ತೇ ಹೋಗಿರಬೇಕು. ಅದು ಯಾರಿಗೆ ಬೇಕಾಗಿದೆ. ಸತ್ತವನ ಬಗ್ಗೆ ದುಃಖಪಡಲು ವ್ಯವದಾನವಾದರೂ ಎಲ್ಲಿದೆ ಈ ಮಹಾನಗರದಲ್ಲಿ? ಇನ್ನು

ಮಹಜರು, ಸರ್ಕಾರಿ ಆಸ್ಪತ್ರೆ, ಹೆಣ ಕೊಯ್ಯುವುದು – ನಾನು ಯಾಕೆ ಬೆಚ್ಚುಬಿದ್ದೆ. ಆ ನೆನಪುಗಳು ನನ್ನ ಬಿಡಲಾರವೇನೋ –

ಅವನು ಸಾಯದೇ ಇದ್ದರೆ ನಾವು ಮುಂಬಯಿಗೆ ಬರುತ್ತಲೇ ಇರಲಿಲ್ಲವೇನೋ. ನಾನು ಮುಂಬಯಿಗೆ ಬಾರದೇ ಇದ್ದಿದ್ದರೆ – ಪ್ರತಿಯೊಂದು ಘಟನೆಯ ಹಿಂದೆ ಯಾವುದಾದರು ಶಕ್ತಿಯ ಕೈವಾಡ ಇರಬಹುದೇ – ಈ ಆಕಸ್ಮಿಕ ಅವಘಡಗಳು ಪ್ರತಿಯೊಬ್ಬನ ಜೀವನದಲ್ಲೂ ಇರುತ್ತವೆಯೇ – ಅವನು ಎಷ್ಟು ಸೂಕ್ಷ್ಮ ಮನುಷ್ಯ. ಕಠಿಣ ಮನುಷ್ಯರಿಗೆ ಮಾತ್ರ ಈ ಬದುಕೇ– ಎಷ್ಟು ಸಣ್ಣ ಘಟನೆ ಅದು–

ಸಾಲಿಗ್ರಾಮದಿಂದ ಕುಂದಾಪುರದ ಕಾಲೇಜಿಗೆ ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಹಿಂಬದಿಯಿಂದ ತಾಗಿದ ಕೈ ಯಾರದು ಎಂದು ನೋಡಿದರೆ ಕ್ಲಾಸ್‌ಮೇಟ್ ಅರುಣಕುಮಾರ್ ನಗುತ್ತ ಇದ್ದ. ನಾನು ಏನೂ ಮಾತನಾಡಲಿಲ್ಲ. ಇಷ್ಟೇ ಸಾಕಾಯಿತು ಅವನಿಗೆ ಪ್ರೇಮಪತ್ರ ಬರೆಯಲು. ಎಂಥ ಸಿಹಿಯಾದ ಪತ್ರ. ಕಣ್ಣು, ಮೈ ಆಕಾರಗಳನ್ನು ಹಾಡಿಹೊಗಳಿ ಬರೆದ ಪತ್ರ. ಪ್ರತಿಯೊಂದು ಹುಡುಗಿಯೂ ಜೀವನದ ಒಂದು ಕಾಲದಲ್ಲಾದರೂ ಪ್ರೇಮಪತ್ರದ ಕುಸುಮವಾಗಬೇಕು. ನಾನು ತಮಾಷೆ ಮಾಡಬೇಕೆನಿಸಿ ಪತ್ರವನ್ನು ತೆಗೆದುಕೊಂಡು ಹೋಗಿ ಪ್ರಿನ್ಸಿಪಾಲರ ಕೈಯಲ್ಲಿ ಇಟ್ಟೆ.

ಅದೇ ದಿನ ಎರಡನೇ, ಸೋಷಿಯಾಲಿಜಿಯ ಪಿರಿಯಡ್‌ನಲ್ಲಿ ಅರುಣನಿಗೆ ಪ್ರಿನ್ಸಿಪಾಲರಿಂದ ಬುಲಾವ್ ಬಂತು. ಅಲ್ಲಿ ಏನು ನಡೆಯಿತೋ ಯಾರು ಬಲ್ಲರು. ಆತ ಪುನಃ ಕ್ಲಾಸಿಗೆ ಬರಲಿಲ್ಲ. ನಾನು ಕ್ಲಾಸು ಬಿಟ್ಟು ಇಂಟರ್‌ವೆಲ್‌ನಲ್ಲಿ ಲೈಬ್ರರಿಗೆ ಹೋಗುತ್ತಿದ್ದಾಗ ಅರುಣ ಮರದ ಕೆಳಗೆ ಸಪ್ಪೆಮೋರೆ ಮಾಡಿಕೊಂಡು ನಿಂತಿದ್ದ. "ಸ್ವಲ್ಪ ನಿಲ್ತೀರಾ ರಂಜನಾ ಅವರೇ" ಎಂದ. ನನಗೆ ಒಮ್ಮಲೇ ಭಯ ಆಯಿತು. ಜೀವನದಲ್ಲಿ ಭಯ ಎಂದರೆ ಏನು ಎಂದು ಗೊತ್ತಾಗಿದ್ದೇ ಅದೇ ಮೊದಲು. ಈ ಭಯದಿಂದ ನನಗೆ ಓಡಬೇಕೆನಿಸಿತು. ಆದರೆ ಕಾಲುಗಳು ಗಟ್ಟಿಯಾಗಿ ನೆಲವನ್ನು ಹಿಡಿದುಕೊಂಡಿದ್ದವು. ಮೈ, ಸಂದುಗಳಲ್ಲಿ ಬೆವರೋ ಬೆವರು. ಆತನೇ ಹತ್ತಿರ ಬಂದು "ಪ್ರಿನ್ಸಿಪಾಲರು ಕರೆದಿದ್ದರು" ಎಂದ. ನನ್ನ ಹೃದಯದ ಬಡಿತ ಇನ್ನೂ ಜೋರಾಗಿ ಬಡಿಯತೊಡಗಿತು. ಸ್ವಲ್ಪ ಹೊತ್ತು ಯಾರೂ

ಏನೂ ಮಾತನಾಡಲಿಲ್ಲ. ಕೊನೆಗೆ ಆತನೇ ಆರಂಭಿಸಿದ: "ನಾನು ನಿಮಗೆ ಬರೆದ ಕಾಗದ ತೋರಿಸಿದರು. ನಿಮ್ಮನ್ನು ನೋಡಿದಾಗ, ಆಟದ ಬಗ್ಗೆ ನಿಮಗಿರುವ ಅಭಿರುಚಿಯನ್ನು ಕಂಡಾಗ ಹೇಳಲಾರದ ಒಂದು ಅನುಭವ ಆಯಿತು. ಅದನ್ನೇ ನಾನು ನಿಮಗೆ ಬರೆದದ್ದು. ಅಲ್ಲಿ ನೋಡಿ, ಆ ಮರವನ್ನು ನೋಡಿ, ತುಂಬಾ ಹೂವುಗಳು ಅರಳಿ ನಿಂತಿದೆ ಅಲ್ಲವೇ. ಹೂವನ್ನು ಬೇಕಾದರೆ ನೀವು ಮುಡಿಯಬಹುದು; ಇಲ್ಲವೇ ಬಿಡಬಹುದು. ಆದರೆ ಹೂವುಗಳು ಅರಳುವುದೇ ತಪ್ಪು ಎನ್ನಲಾದೀತೇನು. ನನಗೆ ನಿಮ್ಮನ್ನು ಪ್ರೀತಿಸಲು ಅಧಿಕಾರವಿದೆ. ಹಾಗೇನೇ ನಿಮಗೆ ನನ್ನನ್ನು ನಿರಾಕರಿಸಲೂ ಅಧಿಕಾರವಿದೆ. ಅದು ಬಿಟ್ಟು ಪ್ರಿನ್ಸಿಪಾಲರಲ್ಲಿ ಕಾಗದ ಕೊಟ್ಟು ನನ್ನನ್ನು ಹರಾಜು ಮಾಡಿದಿರಿ. ನಾನು ಪ್ರಿನ್ಸಿಪಾಲರಲ್ಲಿ ಗೋಗರೆದೆ: 'ಸಾರಿ' ಎಂದೆ, ಕಾಲು ಹಿಡಿಯುತ್ತೇನೆ – ಎಂದೆ. ಅವರದು ಒಂದೇ ಹಠ. "ನಾವು ಹೆತ್ತವರಿಗೆ ಉತ್ತರ ಹೇಳಬೇಕ್ರಿ. ತಂದೆ ಇಲ್ಲ ಎನ್ನುತ್ತೀರಿ. ಅಣ್ಣನನ್ನು ಕರೆದುಕೊಂಡು ಬನ್ನಿ. ಅಲ್ಲಿಯವರೆಗೆ ನಿಮ್ಮನ್ನು ಸಸ್ಪೆಂಡ್ ಮಾಡಿದ್ದೇನೆ...." ಆತ ಮುಂದೇನೂ ಮಾತನಾಡಲಿಲ್ಲ. ತಲೆ ತಗ್ಗಿಸಿ ಹೋಗಿಬಿಟ್ಟ.

ಮರುದಿನ ಕಾಲೇಜಿಗೆ ಬಂದಾಗ ರಜೆ ಘೋಷಿಸಲಾಗಿತ್ತು – 'ಅರುಣಕುಮಾರ ವಿಷ ಕುಡಿದು ಆತ್ಮಹತ್ಯೆ' ಮಾಡಿಕೊಂಡನಂತೆ. ನನ್ನ ಎದೆಗೆ ಯಾರೋ ಕೈಬಾಂಬು ಇಟ್ಟು ಸಿಡಿಸಿದಂತೆ. ಹುಡುಗರು ಏನೇನೋ ಮಾತನಾಡುತ್ತಿದ್ದರು. ಎಲ್ಲರೂ ಪಿಳಿಪಿಳಿ ಕಣ್ಣುಬಿಟ್ಟು ನೋಡುತ್ತಿದ್ದಾರೆ ಎನಿಸುತ್ತಿತ್ತು. ಹೃದಯದಲ್ಲಿ ಹೇಳಲಾರದ ತಳಮಳ. ಪೋಸ್ಟ್‌ಮಾರ್ಟಮ್‌ಗಾಗಿ ಶವವನ್ನು ಜನರಲ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದರು. ಅಲ್ಲೇ ಪ್ರದರ್ಶನಕ್ಕೆ ಇಟ್ಟಿದ್ದರು. ನಾವು ಕಾಲೇಜಿನ ಮೆರವಣಿಗೆಯಲ್ಲಿ ಹೋಗಿದ್ದೆವು. ಶವದ ಮುಖ ನೋಡಿದ ಕೂಡಲೇ ಈ ಎಲ್ಲಾ ಉತ್ಪಾತಕ್ಕೆ ನಾನೇ ಕಾರಣ ಎಂಬಂತೆ ನಿಂತಲ್ಲಿಯೇ ನಡುಗಿದೆ. ನಿನ್ನೆ ಹೂವಿನ ಬಗ್ಗೆ ಮಾತನಾಡಿದವನು ಇಂದು ಹೆಣವಾಗಿ ಮಲಗಿದ್ದ. ನಿಂತಲ್ಲಿಯೇ ಕಣ್ಣಿಗೆ ಕತ್ತಲು. ಕತ್ತಲನ್ನು ಸೀಳಿ ಪೊಲೀಸರು ಬರುತ್ತಾರೆ– "ನೀನೇ ಅವನನ್ನು ಕೊಂದವಳು" ಎಂದು ಕೈಗೆ ಬೇಡಿಹಾಕಿ ಪೊಲೀಸರು ಸ್ಟೇಷನ್‌ಗೆ ಕರೆದುಕೊಂಡು ಹೋದಂತೆ, ಅಲ್ಲಿ ಬತ್ತಲು ಮಾಡಿ ಸೀನಿಯಾರಿಟಿಯ ಸರದಿಯ ಮೇಲೆ ರೇಪು ಮಾಡಿದಂತೆ.... ನಾನು ಮನೆಗೆ ಬಂದಾಗ ತಲೆಯವರೆಗೂ ಏರಿದ ಜ್ವರ.

ಈಗ ಅಥ್ಲೆಟಿಕ್ಸ್‌ನಲ್ಲಿ ಭಾಗವಹಿಸಿ 'ಆನ್ ಯುವರ್ ಮಾರ್ಕ್' ಎಂದಕೂಡಲೇ ಮೈಯನ್ನು ತುಂಬಿಕೊಳ್ಳುವ ಆವೇಶ "ನೀನೇಯಂತೆ ಅರುಣನನ್ನು ಕೊಂದಿದ್ದು" ಎಂದು ಪೊಲೀಸರು ಬೆನ್ನಟ್ಟಿ ಬಂದಂತೆ. ನಗಬಾರದು. ನಕ್ಕಿದರೇ ಕೆಟ್ಟೆ ಎಂದು ನಾನು ಓಡುವ ಪರಿ. ಹುಲಿ ಬಂತು ಹುಲಿ ಎಂದರೆ ಓಡುವುದಿಲ್ಲವೇ. ನಿಜವಾಗಿಯೂ ನಾನು ಭಯದಿಂದ ಓಡುತ್ತಿದ್ದೇನೇಯೇ–

ಆ ಪ್ರಕರಣ ಅಲ್ಲಿಗೇ ಮುಗಿಯಿತೇ. ಮರುದಿನ ಅರುಣನ ಅಣ್ಣ ಮತ್ತು ಅಮ್ಮ ಮನೆಯನ್ನು ಹುಡುಕಿಕೊಂಡು ಬಂದು "ನನ್ನ ಮಗನನ್ನು ಕೊಂದೆಯಲ್ಲೇ, ಬೆಳೆದ ಬಂಗಾರದ ಬೆಳೆಯನ್ನು ತಿಂದೆಯಲ್ಲೇ ರಾಕ್ಷಸಿ"– ಎನ್ನುತ್ತಾ ನನ್ನನ್ನು ಹಿಡಿದು ಎಳೆಯ ಹತ್ತಿದಳು. ನನಗಂತೂ ಲಂಗದಲ್ಲಿ ಉಚ್ಚೆ ಬರುವುದೊಂದು ಬಾಕಿ – ತಾಯಿಯ ಕರುಳಿನ ಕೂಗನ್ನು ನೋಡಿದ್ದು ಆವಾಗಲೇ. ಎಂಥ ಆವೇಶ. ಆಕೆ ನನ್ನನ್ನು ಹಿಸಿದು ತಿನ್ನುವುದೊಂದು ಬಾಕಿ. ಈಗಲೂ ನೆನೆಸಿಕೊಂಡರೆ ಮೈ ಜುಂ ಎನ್ನುತ್ತದೆ. ಇದು ಒಂದು ದಿನದ ಹಾಡೇ, ಬಾಗಿಲು ಹಾಕಿ ಕುಳಿತರೆ "ನಿನ್ನ ಮನೆ ಬಾಗಿಲು ಹಾಕೇ ಹೋಗಲಿ, ನಿನ್ನ ವಂಶ ನಿರ್ವಂಶವಾಗಲಿ. ನಿನಗೆ ಮದುವೆಯಾಗದೇ ಇರಲಿ. ಮಕ್ಕಳಾಗದೇ ಇರಲಿ"– ಎಂದು ಮೂರು ಊರಿಗೆ ಕೇಳುವಂತೆ ಕೂಗೋದು. ನನಗೋ ಪ್ರತಿ ದಿನವೂ ಜ್ವರ. ಮೈಕೈ ಮೊಳೆಹಿಡಿದು ಹೊಡೆದ ಹಾಗೆ ಜ್ವರ. ತಲೆಗೆ ಜ್ವರ ಏರಿದ ದಿನ 'ಅರುಣ'ನ ಹೆಸರು ಹಿಡಿದು ಕೂಗುತ್ತೇನೆಂದು ಅಮ್ಮ ಹೇಳುತ್ತಾಳೆ–

ಹೀಗಾದರೆ ಎಷ್ಟು ದಿನ ಅಂತ ಆ ಊರಿನಲ್ಲಿ ಇರ್ತಾರೆ ಶಾಪ ಹಾಕಿಸಿಕೊಳ್ಳುತ್ತಾ ಮುಂಬಯಿಗೆ ವರ್ಗ ಮಾಡಿಸಿಕೊಂಡು ಬಂದದ್ದು ಹೀಗೆ. ಇಲ್ಲಿ ಯಾರು ಕೇಳ್ತಾರೆ. ಪ್ರತೀದಿನ ಎಷ್ಟೋ ಜನ ಹುಟ್ಟುತ್ತಾರೆ; ಸಾಯುತ್ತಾರೆ. ಒಬ್ಬರ ಪರಿವೆ ಮತ್ತೊಬ್ಬರಿಗಿಲ್ಲ. ಇಲ್ಲಿ ತುಂಬಿರುವವರು ಅಸ್ತಿತ್ವವಿಲ್ಲದ ಜನ. ಇಲ್ಲಿ ಅಸ್ತಿತ್ವವಿರುವುದು ಗಗನಚುಂಬಿ ಕಟ್ಟಡಗಳಿಗೆ, ಸಂಪು ಹೂಡುವ ನಾಯಕರಿಗೆ, ಹೆಲಿಕಾಪ್ಟರ್‌ನಲ್ಲಿ ಹಾರಾಡುವ ಉದ್ಯಮಿಗಳಿಗೆ, ಬೋರ್ಗೆರೆಯುವ ಸಮುದ್ರಕ್ಕೆ, ರೆಡ್ ಲೈಟಿನಲ್ಲಿ ಕೈಬೀಸಿ ಕರೆಯುವ ಬತ್ತಲೆಯ ಮಾಂಸದ ಮುದ್ದೆಯ ಪತಿವ್ರತೆಯರಿಗೆ, ಅವರು ಹಬ್ಬಿಸಿದ ಅಸಂಖ್ಯಾತ ಕ್ರಿಮಿಗಳಿಗೆ– ಇಲ್ಲಿ ಹಗಲು ಇಲ್ಲ; ರಾತ್ರಿ ಇಲ್ಲ;

ಬೆಳದಿಂಗಳು ಇಲ್ಲ. ನಿಯಾನ್ ಲೈಟಿನಲ್ಲಿ ರಾತ್ರಿಯನ್ನೇ ಕೊಂದಿರುವ ಈ ಮಹಾ ಮುಂಬಯಿ.

– ೨ –

ಅಜ್ಜ ಇಳಿದು ಬರುತ್ತಾನೆ.

ತನ್ನ ದರಬಾರಿನ ಪೇಟ ಕಟ್ಟಿಕೊಂಡು. ದೊಣ್ಣೆ ಊರಿಕೊಂಡು ಉದ್ದ ಕೋಟಿನ ಜಮೀನ್ದಾರ ಶಂಕರಪ್ಪ. ಮಹಾ ಕೋಪಿ. ಅಪ್ಪನ ತಪ್ಪಾದರೂ ಏನೂ ಮಹಾ. ತೋಟದ ಕೆಲಸ ಮಾಡುತ್ತಿದ್ದಾಗ ಘಟ್ಟದ ಕೆಳಗಿನ ಶೇರೆಗಾರನ ಜೊತೆಯಲ್ಲಿ ಬಂದಿದ್ದ ಬಳಕುವ ಹೆಣ್ಣು ವಿಶಾಲಾಕ್ಷಿಯನ್ನು ಮಾತನಾಡಿಸಿದ ಎಂಬುದೇ ದೊಡ್ಡ ತಕರಾರು. ಮನೆಹಾಳು ಶೇರೇಗಾರ ತನ್ನ ಕೆಂಪು ಹಲ್ಲುಗಳನ್ನು ಪ್ರದರ್ಶಿಸುತ್ತಾ 'ಸುಳ್ಳು ಹೇಳ್ತೀನಾ' ಎಂದು ಅಜ್ಜನ ಕಿವಿ ಚುಚ್ಚಿದಾಗ ನಾನು ಅಲ್ಲಿಯೇ ಇದ್ದೆ. ಮುಚ್ಚೇಕಡೆಯಲ್ಲಿ ಕುಳಿತು ಬಾಯಿಪಾಠ ಹೇಳುತ್ತಲಿದ್ದೆ– ಪ್ರಭವ, ವಿಭವ– ಶೇರೇಗಾರ ಅಜ್ಜನ ಕಿವಿ ಕಚ್ಚುತ್ತಲೇ ಇದ್ದ. ಆಗ ನನಗೆ ನೆನಪಾದದ್ದು ಅಪ್ಪ ಹಿಂದಿನ ರಾತ್ರಿ ಅಮ್ಮನಲ್ಲಿ ಹೇಳುತ್ತಲಿದ್ದ ಮಾತು–"ನೋಡೇ, ಇವಳೇ, ಈ ಘಟ್ಟದ ಕೆಳಗಿನ ಶೇರೇಗಾರ ಇದ್ದಾನಲ್ಲ ಮಹಾ ಬಾಂಚೋದ್. ನಿನ್ನ ಮಾವನ ತೆವಲಿಗೆ ಹೆಣ್ಣಾಳು ತಂದಿದ್ದಾನೆ. ಅವಳನ್ನು ಹೇಗಾದರೂ ಮಾಡಿ ಓಡಿಸಬೇಕು." ಈ ಮಾತು ನನ್ನ ಕಿವಿಯಲ್ಲಿ ಪ್ರತಿಧ್ವನಿಸಿಕೊಳ್ಳುತ್ತಿರುವಾಗಲೇ ಅಪ್ಪ ತೋಟದಿಂದ ಅಡಿಕೆಯ ಬುಟ್ಟಿಯನ್ನು ಹಿಡಿದುಕೊಂಡು ಬಂದ. ಅಜ್ಜ ಹಿಂದು ಮುಂದು ನೋಡಲೇ ಇಲ್ಲ. ಎತ್ತಿಗೆ ಹೊಡೆಯುವ ಚರ್ಮದ ಬಾರು ಕೋಲಿನಿಂದ ಮುಖ ಮುಸುಡಿ ನೋಡದೇ ಅಪ್ಪನಿಗೆ ಬಾರಿಸತೊಡಗಿದ. ನಾನು, 'ಅಮ್ಮಾ ಅಮ್ಮಾ' ಎಂದೆ. ಅಮ್ಮ ಅಡುಗೆ ಮನೆಯಿಂದ ಓಡಿ ಬಂದು "ಅಯ್ಯಯ್ಯೋ ನನ್ನ ಗಂಡನನ್ನು ಕೊಲ್ಲುತ್ತಾರಲ್ಲೋ, ಬಿಡಿಸ್ರೋ" ಎಂದು ಬೊಬ್ಬೆ ಹಾಕುತ್ತಿದ್ದಳು. ಅಜ್ಜನದು ಒಂದೇ "ಬೋಸುಡಿ ಮಗನೇ ಕೆಲಸದ ಹೆಣ್ಣಿನ ಮಡಿಲಿಗೆ ಕೈ ಹಾಕ್ತೀಯಾ" ಎನ್ನೋದು, ಹೊಡೆಯೋದು. ಅಪ್ಪ ಮಾತ್ರ ಚಲಿಸದೇ ನಿಂತುಬಿಟ್ಟಿದ್ದ. ಅಪ್ಪ–ಒಬ್ಬನೇ ಮುದ್ದಿನ ಮಗನಾಗಿ ಬೆಳೆದಿದ್ದಕ್ಕೊ, ಅಜ್ಜನ ದರ್ಪದಿಂದಾಗಿ ಯಾವ ಕೆಲಸದ ಜವಾಬ್ದಾರಿಯನ್ನೂ ಹೊರದಿದ್ದಕ್ಕೋ, ತನ್ನ ಬಗ್ಗೆ ಹೀನ ಭಾವವನ್ನು ಅಜ್ಜನ ಬಗ್ಗೆ ಆರಾಧನೆ ಭಾವವನ್ನು ಬೆಳೆಸಿಕೊಂಡದ್ದಕ್ಕೋ–

ಅಪ್ಪ ಕಲ್ಲು ಕಂಬದಂತೆ ನಿಂತುಬಿಟ್ಟಿದ್ದ. ಕೊನೆಗೆ ಅಜ್ಜನೆ ಕೈಸೋತು ಬಂದು "ಒಳಕ್ಕೆ ಹೋಗು ಶನಿ ಮುಂಡೇಗಂಡ" ಎಂದಾಗ ತಲೆ ಬಗ್ಗಿಸಿದ್ದ ಅಪ್ಪ ಒಮ್ಮೆ ತಲೆ ಎತ್ತಿ ನೋಡಿದ. ನಾನು ಅಪ್ಪ ಅಳುತ್ತಿರಬಹುದು ಎಂದುಕೊಂಡರೆ– ಇಲ್ಲ ಅಪ್ಪನ ಕಣ್ಣುಗಳು ಕೆಂಪಾಗಿದ್ದವು. ಕಾದ ಕೆಂಡದ ರೀತಿ; ಅಲ್ಲಿ ಇಷ್ಟು ವರುಷ ಇರದ ವೀರ್ಯ ಹೊಳೆಯಾಗಿ ಹರಿದು ಬಂದು, ಅಂಗಾಂಗಗಳ ತುಂಬಿತ್ತು. ಅಲ್ಲಿ ಇಡೀ ಮನೆತನದ ಕುರುಹಾಗಿ ದ್ವೇಷವೇ ಕಿಡಿಯಾಗಿ ಹಾರುವಂತಿತ್ತು.

ಅದೇ ದಿನ ರಾತ್ರಿ ಅಪ್ಪ ಊರು ಬಿಟ್ಟ– ಸಾಲಿಗ್ರಾಮದಲ್ಲಿ ಬಂದು ನೆಲೆಸಿದ್ದು ಹೀಗೇ. ಕೊನೆಗೆ ಅಜ್ಜನಿಗೆ ಪಾರ್ಶ್ವರೋಗ ಹೊಡೆದರೂ, ಎಷ್ಟೋ ವರುಷದ ವೈದಿಕ ಮನೆತನ ಬಚ್ಚಾಲಿ ವಿಶಾಲಾಕ್ಷಿಯ ಕೆಳಗಡೆ ಬಿದ್ದು ಹೊರಲಾಡುತ್ತಿವೆ ಎಂದು ಹೇಳಿದರೂ, ಎಲ್ಲಾ ಶೇರೇಗಾರನ ಕಾರುಬಾರು ಎಂದು ತಿಳಿದರೂ, ತಲೆಮಾರಿನ ಹಿರಿಯರ ಆತ್ಮಗಳು ಪಿಂಡ ಪ್ರಧಾನ ಇಲ್ಲದೆ ನರಳುತ್ತಿದ್ದಾರೆ ಎಂದು ಗೋಗೆರೆದರೂ, ಅಪ್ಪ ಪುನಃ ಹೋಗಲೇ ಇಲ್ಲ. ಅಮ್ಮ ಎಲ್ಲಿಯಾದರೂ ಪ್ರಸ್ತಾಪ ಮಾಡಿದರೆ "ಮನೆಯ ಪಂಚಾಂಗ ಕುಸಿದು ಬಿದಿರುಮೆಳೆ ಬೆಳೆಯಲಿ, ನರಿ ನಾಯಿ ಕೂರಲಿ" ಎಂದು ಕೂಗಾಡುತ್ತಿದ್ದ. ಈ ಉದ್ವೇಗದಲ್ಲಿ ಅಪ್ಪ ಬಿಕ್ಕಿ ಬಿಕ್ಕಿ ಅಳುತ್ತಿದ್ದುದ್ದನ್ನು ನಾನು ನೋಡಿದ್ದೆ. ಆಕ್ರೋಶದ ಕೊನೆ ಯಾವುದು, ಅನುಕಂಪವೇ?

– ೩ –

ಪುನಃ ಅದೇ 'ಆನ್ ಯುವರ್ ಮಾರ್ಕ್' ಎಂದು ಹೇಳಿ ವಿಷಲ್ ಹಾಕಿದ ಕೂಡಲೇ ತೊಡೆಯನ್ನು ತುಂಬಿಕೊಳ್ಳುವ ಧೀಃಶಕ್ತಿ. ಸಿಗ್ನಲ್ ಕೊಡುವುದೇ ತಡ, ಓಡಬೇಕು– ನಾನು ಓಡಿಯೇ ಓಡಿದೆ. ಕಾಲೇಜು, ಯೂನಿವರ್ಸಿಟಿ, ಸ್ಟೇಟ್‌ಲೆವೆಲ್, ನ್ಯಾಶನಲ್, ಏಷ್ಯಾಡ್, ಒಲಿಂಪಿಕ್ಸ್ – ಋತುಗಳು ಬದಲಾದವು–ಗ್ರೀಷ್ಮ, ವರ್ಷ, ಶರತ್, ಹೇಮಂತ, ವಸಂತ– ನಾನು ಮಾತ್ರ ಓಡಿಯೇ ಓಡಿದೆ ಕಾಲದ ಪರಿವೆಯೇ ಇಲ್ಲದೇ – ಈಗ ದೇಶಕ್ಕಾಗಿ ಚಿನ್ನ ಗಳಿಸಿಕೊಟ್ಟ ಶ್ರೇಷ್ಠ ಓಟಗಾರ್ತಿ – ಚಿನ್ನದ ಹುಡುಗಿ. ಆಗ ಮುಂಬಯಿಯ ಮಹಾನಗರದಲ್ಲಿ ಗೊತ್ತು ಗುರಿಯಿಲ್ಲದೆ ಅಪರಿಚಿತಳಾಗಿ, ಅನಾಮಧೇಯಳಾಗಿ ಬಂದ ನಾನು– ಈಗ ಬಸ್ಸಿನಲ್ಲಿ ಹೋಗುವ,

ಫುಟ್‌ಪಾತಿನಲ್ಲಿ ನಡೆಯುವ ಎಲ್ಲಾ ಜನರು ನನ್ನನ್ನೇ ತೋರಿಸುತ್ತಾ 'ಇವಳೇ ಚಿನ್ನದ ಹುಡುಗಿ' ಎಂದು ತೋರಿಸುವಾಗ ನನಗೆ ನಾನೇ ಕರಗಿ ಹೋಗುತ್ತೇನೆ. ಇದು ಬರಿಯ ಮುಂಬಯಿಯಲ್ಲಲ್ಲ. ಇಡೀ ಭಾರತದಲ್ಲೆಲ್ಲಾ– ಕನ್ನಡಿಯಲ್ಲಿ ನನ್ನ ಮುಖವನ್ನು ನೋಡಿಕೊಳ್ಳಬೇಕು. ನಾನು ಕಳೆದುಹೋಗಿದ್ದೇನೋ, ಇದ್ದೇನೋ ಎಂದು. ಕೊನೆಗೆ ಬದಲಾದದ್ದು ಭ್ರಮೆ ಎಂದೆಂಬಂತೆ.

ಕರೆದು ಕೊಡದೇ ಏನು ಮಾಡುತ್ತಾರೆ ಬ್ಯಾಂಕಿನ ಆಫಿಸರ್ ಹುದ್ದೆ. ಒಂದೊಂದು ಸಾರಿ ಚಿನ್ನ ಬಂದಾಗಲೂ ಸೌಲಭ್ಯದ ಸಾಲು. ಮನೆ, ಕಾರು, ಸೈಟು. ಅಪ್ಪ, ಅಮ್ಮ, ತಮ್ಮನಿಗೆ – ಎಲ್ಲರಿಗೂ ಹಿಗ್ಗು. ಕನಸಿನಲ್ಲೂ ಅವರು ಇವುಗಳನ್ನು ಊಹಿಸಿರಲಾರರು. ಯಾರು ಕೇಳಿದರೂ– ರಂಜನಾ ಅಪ್ಪ, ರಂಜನಾ ಅಮ್ಮ, ರಂಜನಾ ತಮ್ಮ – ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದು ವಿಮಾನದಲ್ಲಿ ಬಂದಿಳಿದಾಗ ಸ್ವಾಗತಿಸಲು ಸಜ್ಜಾಗಿ ನಿಂತ ಜನ ಸಮೂಹ. ಮುಂಚೂಣಿಯಲ್ಲಿ ರಾಷ್ಟ್ರ ನಾಯಕರು, ಅವರ ಕೈಯಲ್ಲಿ ಗಾತ್ರದ ಹೂವಿನ ಹಾರ– ಆದರೆ ಆರ್ಭಟದ ಆವರಣಗಳು ಮುಗಿದಾಗ, ತುಂಬಿದ ಜನರ ಗೌಜು, ಗದ್ದಲ ಕರಗಿದಾಗ, ಸಮೂಹದ ಶಬ್ದ ಮೌನವಾದಾಗ ಬಿಚ್ಚಿಕೊಳ್ಳುವ ನನ್ನ ಅಂತರಂಗದ ಆಲಾಪನೆ– ನನಗೆ ಮದುವೆಯ ವಯಸ್ಸು ಮೀರುತ್ತಿದೆಯೇ? ಹಾಗೇ ನೋಡಿದರೆ ಅಜ್ಜ ಎಷ್ಟು ರಸಿಕ. ಜೀವನದ ಎಲ್ಲಾ ಸುಖಗಳನ್ನು ಚೂರೂ ಬಿಡದಂತೆ ಹೀರಿದ. ಈಗಲೂ ಆತ ಊಟ ಮಾಡಿದಷ್ಟು ನನಗೆ ಊಟ ಮಾಡಲು ಆಗಲಿಕ್ಕಿಲ್ಲ. ನನ್ನ ಮುಟ್ಟಿನ ಸಂಖ್ಯೆ ಏರುತ್ತಿದೆ. ಆದರೆ ಅದು ಯಾರಿಗೂ ಬೇಡವೇ ಬೇಡ. ಆ ವಿಷಯದ ಬಗ್ಗೆ ಪ್ರಸ್ತಾಪವೇ ಇಲ್ಲ. ಯಾಕೆಂದರೆ ನಾನು ಹಿಂಡಿದಷ್ಟು ಹಾಲು ಬಸಿಯುವ ಕಾಮಧೇನು– ನಾನಾಗಿಯೇ ನನ್ನ ಮದುವೆ ಮಾಡಿ ಎಂದು ಬಾಯಿ ಬಿಟ್ಟು ಹೇಳಲೇ – ಇಲ್ಲ. ಸಾಧ್ಯವಿಲ್ಲ. ಅದರ ಪರಿಣಾಮ ನಾನು ಓಡುತ್ತಲೇ ಇರಬೇಕು. ಹುಚ್ಚು ಹಿಡಿದವಳಂತೆ ಓಡುತ್ತಲೇ ಇರಬೇಕು....

ಈಗ ನನ್ನನ್ನು ಡಿವಿಜನಲ್ ಮ್ಯಾನೇಜರ್ ಹುದ್ದೆಗೆ ಭಡ್ತಿ ನೀಡಲು ಯೋಚಿಸುತ್ತಿದ್ದಾರಂತೆ. ಯೋಚಿಸದೇ ಏನು ಮಾಡ್ತಾರೆ. ಮೊನ್ನೆ ಮೊನ್ನೆ, ಅಂದರೆ ಎರಡು ತಿಂಗಳಲ್ಲಿ ಸಹಸ್ರ ಸಹಸ್ರ ಠೇವಣಿಯನ್ನು ಸಂಗ್ರಹಿಸಿ

ಕೊಟ್ಟಿಲ್ಲವೇ– "ರಂಜನಾ ಬರುತ್ತಾಳೆ. ಠೇವಣಿ ಇಟ್ಟವರಿಗೆ ಆಟೋಗ್ರಾಫ್ ನೀಡುತ್ತಾಳೆ" ಎಂದು ಮಾಡಿದ ಪತ್ರಿಕಾ ಪ್ರಚಾರ ಫಲ ಕೊಟ್ಟು ಬ್ಯಾಂಕಿನ ಬ್ರಾಂಚುಗಳ ಮುಂದೆ ನನ್ನ ಬರುವಿಗಾಗಿ ಹಣದ ಚೀಲ ಹಿಡಿದು ನಿಂತ ಸಹಸ್ರ ಸಹಸ್ರ ಅಭಿಮಾನಿಗಳು... ಬರೇ ನನ್ನ ನಗುವಿಗಾಗಿ, ನನ್ನ ಆಟೋಗ್ರಾಫ್‌ಗಾಗಿ... ಟೂರು ಮತ್ತೆ ಟೂರು. ಬ್ಯಾಂಕಿನ ಬ್ರಾಂಚುಗಳಿಗೆ, ಜಿಲ್ಲೆಯಲ್ಲೆಲ್ಲಾ, ದೇಶದಲ್ಲಿ, ವಿದೇಶದಲ್ಲಿ, ಅಬುದಾಬಿ, ಮಸ್ಕತ್, ಗಲ್ಫ್ ದೇಶಗಳಲ್ಲಿ, ಮರಳುಗಾಡಿನಲ್ಲಿರುವ ಎಣ್ಣೆಯ ಸಂಪತ್ತನ್ನೆಲ್ಲ ದೋಚಿಕೊಂಡು ಬಂದದ್ದು... ಪ್ರಯಾಣಕ್ಕೆ ಎಲ್ಲವೂ ಸಿದ್ಧ– ಕಾರು, ವಿಮಾನ... ನಾನು ಓಡುತ್ತಲೇ ಇರಬೇಕು. ನಾನು ಎಲ್ಲಿಗೆ ಓಡುತ್ತಿದ್ದೇನೆ? ಕಾಲದ ಜೊತೆಗೋ, ಕಾಲದ ವಿರುದ್ಧ ದಿಕ್ಕಿಗೋ... ಗಕ್ಕನೆ ಯಾರೋ ಕರೆದಂತೆ... ತಿರುಗಿ ನೋಡಿದರೆ ಚಿಕ್ಕಮ್ಮ ಇಳಿದು ಬರುತ್ತಾಳೆ. "ರಂಜನಾ ನೀನು ಓಡುವುದು ಸಾಕು. ತಾಯಿಯಾಗಿ ಜೋಗುಳ ಹಾಡು."

ಈಗ ಹೇಗಿದ್ದಾಳೋ ಚಿಕ್ಕಮ್ಮ. ಬರೋಡಾದ ಚಿಕ್ಕಮ್ಮನನ್ನು ಕಂಡರೆ ಭಯವೇ, ದ್ವೇಷವೇ? ಹಾಗೆ ನೋಡಿದರೆ ಈ ಎಪ್ಪತ್ತು ಕೋಟಿ ಭಾರತೀಯರಲ್ಲಿ ಆಕೆ ಮಾತ್ರ ನನ್ನ ಪ್ರೀತಿಯ ಬದುಕಿನ ಬಗ್ಗೆ ಕಾಳಜಿ ತೋರಿದ್ದು. ಈಗ ಏಳೆಂಟು ವರುಷದ ಹಿಂದೆ ನಮ್ಮ ಮನೆ ದಾದರ್‌ನ ಒಂದು ಹಾಳು ಕೊಂಪೆಯಲ್ಲಿದ್ದಾಗ, ನಾನಿನ್ನೂ ಇಷ್ಟು ಖ್ಯಾತಳಾಗದಿದ್ದಾಗ ಒಂದು ದಿನ, ತುಂಬಾ ಸಣ್ಣ ಮನೆ. ಮುಂಬಯಿಯಲ್ಲಿ ಒಂದೊಂದು ಮೆಟ್ಟಿಗೂ ಬಂಗಾರದ ಬೆಲೆ. ರಾತ್ರಿ ಮಲಗುವುದು ಎಂದರೆ ಭಾರೀ ದೊಡ್ಡ ಸಾಹಸ. ಯಾರಾದರೂ ಗೆಸ್ಟ್ ಬಂದರೆ ದೇವರೇ ಗತಿ. ಮನೆಯ ಮುಂಭಾಗದಲ್ಲಿನ ಕುರ್ಚಿ, ಮೇಜುಗಳನ್ನು ಸರಿಸಿ ಹಾಸಿಗೆ ಹಾಸಬೇಕಾಗಿತ್ತು. ಆ ದಿನವೂ ಹಾಗೇ. ಚಿಕ್ಕಪ್ಪನಿಗೆ ಹೊರಗೆ, ಚಿಕ್ಕಮ್ಮ ನಮ್ಮ ಜೊತೆಯಲ್ಲಿ.

ಸಮರಾತ್ರಿ ಇರಬಹುದು. ಪಕ್ಕದಲ್ಲಿ ಪಿಸು ಪಿಸು ಧ್ವನಿ. ಚಿಕ್ಕಮ್ಮ "ಬೇಡಾರಿ, ಬೇಡಾರಿ ರಂಜನಾ ಮಲಗಿದ್ದಾಳೆ" ಎನ್ನುತ್ತಿರುವಾಗಲೇ ಚಿಕ್ಕಪ್ಪ "ಆಯಿತು ಆಯಿತು ಸುಮ್ಮನಿರು" ಎನ್ನುತ್ತಿದ್ದಾನೆ. ನನಗಂತೂ ಮುಖದವರೆಗೂ ರಕ್ತ ಉಕ್ಕುಕ್ಕಿ ಬಂದ ಹಾಗೆ. ಇಡೀ ದೇಹದ ತಂತಿಯನ್ನು ಯಾರೋ ಜಗ್ಗಿ ಎಳೆದ ಹಾಗೆ. ಚಿಕ್ಕಪ್ಪನಿಗೆ ಎಂಟು ಮಕ್ಕಳಾದರೂ ಹೆಂಡ್ತಿ ಬಸಿರು ಆಗಿದ್ದಾಳೆ ಎಂದರೆ ಸಾಕು ಹಿಗ್ಗೋ ಹಿಗ್ಗು. ಈ ಚಿಕ್ಕಮ್ಮ ಮತ್ತೆ

ಬರೆದಿದ್ದಾಳೆ– "ರಂಜನಾ ನೀನು ಬರೋಡಾದಲ್ಲಿ ನಡೆಯುವ ಸ್ಪರ್ಧೆಯಲ್ಲಿ ಭಾಗವಹಿಸಲು ಬರುತ್ತೀಯಂತೆ. ಬರುವಾಗ ಮುಂಬಯಿಯಲ್ಲಿ ಸಿಗುವ ಪ್ರಸಿದ್ಧ 'ನಂಬೂದರಿ ಲೇಹ' ಎರಡು ದೊಡ್ಡ ಬಾಟಲ್ಲು ತೆಗೆದುಕೊಂಡು ಬಾ, ಅದು ರಕ್ತವೃದ್ಧಿಗೆ ದಿವ್ಯ ಔಷದ"– ಇದ್ದಕ್ಕಿದ್ದಂತೆ ಸಿಟ್ಟು– "ತರುತ್ತೇನೆ, ನೀವು ತಿಂದು ಹಠಕಟ್ಟಿ ಬಸಿರು ಆಗಿ. ನಾನು ನೋಡುತ್ತಾ ನೋಡುತ್ತಾ ಮುದುಕಿ ಆಗುತ್ತೇನೆ"– ಅಥವಾ ಈಗಲೇ ಮುದುಕಿ ಆಗುತ್ತಿರಬಹುದೇ?

ಸಹಪಾಠಿ ಶೀಲಾ ಇಳಿದು ಬರುತ್ತಾಳೆ. ಗಲ್ಫ್‌ನಲ್ಲಿ ಠೇವಣಿ ಸಂಗ್ರಹಿಸಲು ಹೋದಾಗ ಫೋನಿನಲ್ಲಿ ಸಿಕ್ಕಿದ್ದಳು. "ಏನೇ ರಂಜನಾ, ಎಲ್ಲಾ ಸರಿ, ಓಡಿ ಓಡಿ ಏನು ಮಾಡ್ತೀಯಾ"– ಹೌದು ನಾನು ಓಡುವುದನ್ನು ನಿಲ್ಲಿಸಬೇಕು. ಆದರೆ ಅದು ಸಾಧ್ಯವೇ– ಆನ್ ಯುವರ್ ಮಾರ್ಕ್– ಸ್ಟಾರ್ಟರ್ ವಿಷಲ್ ಸದ್ದು, ಓಡುವುದು– ವಿಕಟ್ಟರಿ ಸ್ಟ್ಯಾಂಡ್, ಪದಕ, ಫೋಟೋಗಳ ಫ್ಲ್ಯಾಷ್, ವಿಡಿಯೋಗಳಬೆಳಕು, ಪತ್ರಿಕೆಯ ಮುಖ ಸುದ್ದಿ, ಸನ್ಮಾನ, ಇಂಟರ್‌ವ್ಯೂ– ಶೀಲ ಕೇಳುವುದು ಸರಿ. ಈ ಓಟದ ಕೊನೆ ಯಾವುದು? ಶೀಲ ಮಾತ್ರ ಕಾಲದ ಜೊತೆಗೇ ಓಡಿದಳು, ಕೈ ಕೈ ಹಿಡಿದು ಓಡಿದಳು. ತುಂಬಾ ಅಂದದ ಹುಡುಗಿ. ದೃಢಕಾಯಳಾಗಿ ಲಾವಣ್ಯದಿಂದ ಕೂಡಿದ್ದಳು. ಅವಳ ಒರಟಾದ ಕೂದಲು, ಬಿಗಿಯಾಗಿ ಕಟ್ಟಿದ ಎರಡು ಜಡೆಗಳಾಗಿ ಇಳಿದು ಬೀಳುತ್ತಿದ್ದವು. ಅದು ಅವಳಿಗೆ ತುಂಬಾ ಚೆನ್ನಾಗಿ ಒಪ್ಪುತ್ತಿತ್ತು. ನಕ್ಕಾಗ ಅವಳ ಕೆನ್ನೆಯಲ್ಲಿ ಗುಳಿ ಬೀಳುತ್ತಿತ್ತು. ಸ್ಟೂಡೆಂಟ್ ಲೈಫಿನುದ್ದಕ್ಕೂ ಅವಳು ಸರಾಗ ಸುಖದಲ್ಲಿ ಈಜಾಡಿದಳು. ಇಂದೂ ನೆನಪಿದೆ. ಅವಳು ಮುಖ ಬಾಡಿಸಿಕೊಂಡು ಕಾಲೇಜಿಗೆ ಬಂದದ್ದು. ನಾನು ಏನೇ ಒಂಥರಾ ಇದೀಯಲ್ಲಾ ಎಂದೆ– ಆಕೆ ಪುರಾಣ ಬಿಚ್ಚಿದಳು– "ನೋಡೇ ರಂಜನಾ, ಸುಳ್ಳು ಯಾಕೆ ಹೇಳಬೇಕು. ನಿನ್ನೆ ಮೋಹನಚಂದ್ರನ ಜೊತೆಯಲ್ಲಿ ಹೊಟೆಲ್ಲಿಗೆ ಹೋಗಿ ರೂಮು ಮಾಡಿದ್ದೆವು. ಆದರೆ ಸುಖದ ಅಮಲಿನಲ್ಲಿ ಚೇತೋಹಾರಿಯಾದ ನಿದ್ರೆಯಿಂದ ಎಚ್ಚರಾಗಿ ನೋಡಿದರೆ ಪಕ್ಕದಲ್ಲಿ ಆತ ಇರಲಿಲ್ಲ. ಹೊರಗಡೆ ಬಾಗಿಲು ತೆಗೆದಿತ್ತು. ಸೀರೆ ಸುತ್ತಿಕೊಳ್ಳುವ ಎಂದರೆ ಸೀರೆಯೂ ಇಲ್ಲ. ಆತ ನನಗೆ ಬುದ್ಧಿ ಕಲಿಸಲು ಸೀರೆಯನ್ನು ಎತ್ತಿಕೊಂಡು ಓಡಿ ಹೋಗಿದ್ದ. ನಿಧಾನವಾಗಿ ಎದ್ದು ಬಾಗಿಲು ಮರೆಯಲ್ಲಿ ನಿಂತು 'ರೂಂಬಾಯ್' ಕೂಗಿದೆ. ಬಾಯ್ ಬಂದ. ನಾನು ಬೆಡ್‌ಶೀಟ್ ಸುತ್ತಿಕೊಂಡು ಗಡಗಡ ನಡುಗುತ್ತಿದ್ದೆ. ಅವನಿಗೆ ಕ್ಷಣಮಾತ್ರದಲ್ಲಿ ವಿಷಯ ಗೊತ್ತಾಗಿಹೋಯಿತು.

ನಾನು ಅರ್ಧ ಅಳುತ್ತಾ 'ಪ್ಲೀಸ್, ಒಂದು ಸೀರೆ ತಂದು ಕೊಡ್ತೀಯಾ' ಎಂದೆ. ಪ್ರಾಯದ ಹುಡುಗರಿಗೆ ಹಣ ಬೇಕಾ. ಆತ ಸರಕ್ಕನೆ ಬಾಗಿಲು ಭದ್ರಪಡಿಸಿ 'ನನಗೆ ಸುಖ ಕೊಡು ಸೀರೆ ಕೊಡ್ತೀನಿ' ಎಂದ. ಇಷ್ಟಕ್ಕೆ ಮುಗಿಯಿತೇ. ಅವನು ಹೋಗಿ ಮತ್ತೊಬ್ಬ ಬಾಯ್ ಬಂದ. ಅವನು ಹೇಳಿದ್ದು ಅದೇ– 'ಸುಖ ಕೊಡು ಸೀರೆ ಕೊಡ್ತೀನಿ'. ಹೀಗೇ ಒಂದು ಫ್ಲೋರಿನಲ್ಲಿರುವ ನಾಲ್ಕು ರೂಮು ಬಾಯಿಗಳೂ ಮುಗಿದು ನಾಲ್ಕನೆಯವ ಹೊರಡುವಾಗ ನಾನು ಆತನ ಕೈ ಹಿಡಿದೆ. 'ದಮ್ಮಯ್ಯ' ಎಂದೆ. 'ರಕ್ತ ಬರುತ್ತಿದೆ ಸಾಯ್ತೀನಿ' ಎಂದೆ. ಕೊನೆಗೆ ಸೀರೆ ಬಂತು." ಆಕೆ ಅಷ್ಟು ಹೇಳಿದ ನಾಲ್ಕೆಂಟು ದಿನಗಳು ಓಡಲೇ ಆಗುತ್ತಿರಲಿಲ್ಲ.

ತಮಾಷೆ ಎಂದರೆ ಆಮೇಲೆ ಒಂದೆರೆಡು ತಿಂಗಳಲ್ಲೇ ಕೋರ್ಸು ಮುಗಿಯುವ ಮೊದಲೇ ಸುಂದರ ಇಂಜಿನೀಯರ್ ಗಂಡನ ಕೈಹಿಡಿದು ಗಲ್ಫ್‌ಗೆ ಹಾರಿಹೋಗಿದ್ದಳು. ಕೆಲವರ ಜೀವನವೇ ಹಾಗೇ– ನನ್ನ ಮೈ ಮಾತು ಬಿಗಿಯುತ್ತಾ ಹೋಯಿತು. ಈ ಜೀವನದ ಅನಂತತೆಯ ಭ್ರಮೆಯನ್ನು ಹೋಗಲಾಡಿಸುವುದಾದರೂ ಹೇಗೆ?

–೪–

ಪ್ರಭಾಕರ್ ಇಳಿದು ಬರುತ್ತಾನೆ. ನನ್ನ ಕ್ಯಾಬಿನ್‌ಗೆ ಬರಲು ಅಂಜುವ ಕ್ಲರ್ಕ್. ಆತ ಧೈರ್ಯದಿಂದ ಹೇಳಿದ. ಧೈರ್ಯಕ್ಕೆ ಯೌವನ ಸಾಕ್ಷಿ ಅಲ್ಲವೇ. ಆತ ಹೇಳಿದ, "ಮೇಡಮ್, ನೀವು ಹೀಗೆ ಓಡುವುದರಿಂದ ಕೀರ್ತಿ ಸಿಗಬಹುದು; ಕೀರ್ತಿಯಿಂದ ಸೌಕರ್ಯ ಸಿಗಬಹುದು, ಆದರೆ ಸುಖ ಸಿಗುತ್ತದೆಯೇ?" ಅವನ ಒಂದೊಂದು ಶಬ್ದಕ್ಕೂ ನಾನು ನಡುಗಿದೆ. ಆದರೂ ಆತನನ್ನು ನೋಡಿದಾಗ ಅವನ ದೃಷ್ಟಿ ಸಂಧಿಸಿದಾಗ ಎಂಥದೋ ಅದ್ಭುತ ಒಲವು ಅವನಿಂದ ಹೊರಟು ನನ್ನಲ್ಲಿ ಬಂದು ಸೇರುತ್ತದೆಯೇನೋ ಎಂಬ ಅನುಭವ. ಇಲ್ಲದಿದ್ದರೆ ನನ್ನ ದೇಹದಲ್ಲಿ ಇಷ್ಟು ವರುಷದಿಂದ ಕೂಡಿ ಹಾಕಿದ್ದ ಶಕ್ತಿಯಿಂದ ಏನು ಸಾಧಿಸಬೇಕು ಎಂದುಕೊಂಡಿದ್ದೇನೋ ಆ ಎಲ್ಲಾ ಶಕ್ತಿ ಕ್ಷಣದಲ್ಲಿ ಲೂಟಿಯಾದ ಹಾಗೆ ಎನಿಸತೊಡಗಿದೆ. ಈ ಕತ್ತಲೆ–ಬೆಳಕಿನಲ್ಲಿ, ಶಬ್ದ ನಿಶಬ್ದದಲ್ಲಿ ಮನಸ್ಸಿನ ಆಳಕ್ಕೆ ಇಳಿಯಬಹುದಾದ ಏನೇನೋ ಅಸ್ಪಷ್ಟ ಆಕೃತಿಗಳು ಮುತ್ತಿಗೆ ಹಾಕಿದಂತಾಗಿ ಇದ್ದಕ್ಕಿದ್ದಂತೆ ಎದೆಯೊಳಗೆ ಹಾಲು ತುಂಬಿಕೊಳ್ಳುತ್ತದೆ.

❑

# ೪. ಓದು ಪಠ್ಯ
# ಯಶಸ್ಸಿನ ಮೂರು ದ್ವಾರಗಳು

**ಮೂಲ : ಸ್ಟೀಫನ್ ಹಾಕಿನ್ಸ್**
**ಅನುವಾದ : ಬಿ.ಎಸ್. ಮಯೂರ**

೧೯೭೦ರಲ್ಲಿ, ಲೂಸಿ ಹಾಕಿಂಗ್ ಜನಿಸಿದಳು. ಅದು ಬ್ರಿಟನ್ನಿನ ಮೊದಲ ಮಹಿಳಾ ಪ್ರಧಾನ ಮಂತ್ರಿ, ಮಾರ್ಗರೇಟ್ ಥ್ಯಾಚರ್, ರಾಜ್ಯವನ್ನಾಳಲು ಪ್ರಾರಂಭಿಸಿದ ವರ್ಷ. ೯೭ರ ಹರೆಯದ ಬರ್ಟ್ರಂಡ್ ರಸೆಲ್, ಸ್ಟೀಫನ್ ಹಾಕಿಂಗ್‌ರ ನಾಯಕ, ಕಾಲವಾದ ವರ್ಷ. ಹಾಕಿಂಗ್ ತಮ್ಮ ಮಗಳ ಆಟವನ್ನು ನೋಡುತ್ತಾ 'ಕೃಷ್ಣವಿವರ'ವನ್ನು ಕುರಿತು ಚಿಂತಿಸುತ್ತಿದ್ದರು.

ಅನೇಕ ವೈಜ್ಞಾನಿಕ ಅವಿಷ್ಕಾರಗಳು, ಆಕಸ್ಮಿಕವಾಗಿ ಮೂಡಿ ಬಂದಿರುವುದುಂಟು. ಉದಾಹರಣೆಗೆ, ತಂತಿ–ಅಂಚೆ, ದೂರವಾಣಿ, ಕ್ಷ–ಕಿರಣ ಇತ್ಯಾದಿ. ಹಾಗೆಯೇ ಸ್ಟೀಫನ್ ಹಾಕಿಂಗ್‌ರಿಗೂ ಕೃಷ್ಣವಿವರದ ಬಗೆಗಿನ ವಿವಿಧ ಪರಿಕಲ್ಪನೆಗಳು ಮಗಳೊಡನೆ ಆಡುತ್ತಾ ಇದ್ದಾಗ ಸ್ಪಷ್ಟವಾಗತೊಡಗಿತು.

ಅಂದು ಕೃಷ್ಣವಿವರದ ವಿಷಯ ಸ್ಪಷ್ಟವಾಗಿ ತಿಳಿದಿರಲಿಲ್ಲ. ಆ ಬಗೆಗೆ ಚರ್ಚೆ ನಡೆಯುತ್ತಲೇ ಇತ್ತು. ಅವಕಾಶ – ಕಾಲದಲ್ಲಿ ಯಾವುದು ಕೃಷ್ಣವಿವರದ ಒಳಗೆ, ಯಾವುದು ಹೊರಗೆ ಇರುತ್ತವೆ, ಎಂಬುದನ್ನು ಕುರಿತು ಅವರ ಚಿಂತನೆ ಸಾಗುತ್ತಿತ್ತು. ಇದೇ ಯೋಚನೆಯಲ್ಲಿ ಮಗಳೊಡನೆ ಆಡುತ್ತಿದ್ದಾಗ, ಪೆನ್‌ರೋಸ್‌ರವರ 'ವೈಚಿತ್ರ್ಯ'ವನ್ನು ವಿಸ್ತರಿಸುವ ವಿಚಾರ ಅವರ ಮನಸ್ಸಿನಲ್ಲಿ ಮೂಡಿತು. ಕೂಡಲೇ ಅದು ಮಿಂಚಿನಂತೆ ಕೆಲಸ ಮಾಡಿತು.

ಮುಂದೆ ಎರಡು ವರ್ಷಗಳ ಕಾಲ ಇಬ್ಬರೂ ಒಟ್ಟಿಗೇ ಕೃಷ್ಣವಿವರ ಕುರಿತ ಅಧ್ಯಯನದಲ್ಲಿ ಮಗ್ನರಾದರು. ಹಾಕಿಂಗ್ ಅದಕ್ಕಾಗಿ ೧೯ನೆಯ ಶತಮಾನದಲ್ಲಿ ಲಾರ್ಡ್ ಕೆಲ್ವಿನ್ ರೂಪಿಸಿದ ಉಷ್ಣಚಲನ ಶಾಸ್ತ್ರವನ್ನು (Thermo dynamic) ಹೊಸ ಆಸಕ್ತಿಯಿಂದ ಪುನಃ ಅಧ್ಯಯನ ಮಾಡಲು ಪಕ್ರಮಿಸಿದರು.

ಉಷ್ಣಚಲನಶಾಸ್ತ್ರಕ್ಕೂ ಕೃಷ್ಣವಿವರಕ್ಕೂ ಏನಾದರೂ ಸಂಬಂಧವಿರಬಹುದು ಎಂಬ ವಿಚಾರವನ್ನು ಯಾರೂ ಊಹಿಸಿರಲಿಲ್ಲ. ಉಗಿ ಯಂತ್ರವನ್ನು ನಿರ್ಮಿಸಿದ, ಒತ್ತಡದಲ್ಲಿ ಅನಿಲಗಳ ಸ್ವಭಾವವನ್ನು ಹೇಳಬಲ್ಲ, ಉಷ್ಣ ವರ್ಗಾವಣೆಯನ್ನು ವಿವರಿಸುವ ಈ ಹಳೆಯ ತತ್ವವೆಲ್ಲಿ, ಇತ್ತೀಚಿನ ಆಕಾಶಕಾಯ ಕೃಷ್ಣವಿವರ ಎಲ್ಲಿ, ಎಲ್ಲರೂ ಹುಬ್ಬೇರಿಸಿದರು. ಕೃಷ್ಣವಿವರದ ಹೊಸ ಸಿದ್ಧಾಂತದ ಮೇಲೆ ಉಷ್ಣಚಲನಶಾಸ್ತ್ರದ ಪ್ರಭಾವ ಎಷ್ಟಿರಬಹುದು ಎನ್ನುವ ಕಲ್ಪನೆ ಹಾಕಿಂಗ್‌ರಿಗೂ ಇದ್ದಿರಲಾರದು.

ಗೆಳೆಯರಿಬ್ಬರೂ ಉಷ್ಣಚಲನ ತತ್ತ್ವಗಳನ್ನು ಕೃಷ್ಣವಿವರದಲ್ಲಿಯ ಚಟುವಟಿಕೆಗಳಿಗೆ ಅಳವಡಿಸಲು ಪ್ರಾರಂಭಿಸಿಯೇಬಿಟ್ಟರು.

ಈ ವೇಳೆಗಾಗಲೇ ಹಾಕಿಂಗ್ ಬರವಣಿಗೆ 'ಅಸಾಧ್ಯ' ಎನಿಸುವ ಸ್ಥಿತಿ ತಲುಪಿದ್ದರಿಂದ ಅವರು ಬಳಸುತ್ತಿದ್ದ ಕ್ಲಿಷ್ಟವಾದ ಗಣಿತದ ಸಮೀಕರಣಗಳನ್ನೆಲ್ಲ ನೆನಪಿನಲ್ಲಿಟ್ಟುಕೊಂಡೇ ಮುಂದುವರೆಯಬೇಕಾಗುತ್ತಿತ್ತು.

ಅವರಿಗೆ ನೆನಪಿನ ಶಕ್ತಿ ಅಗಾಧವಾಗಿತ್ತು. ಪುಟಗಟ್ಟಳೆ ಸಮೀಕರಣಗಳನ್ನು ನೆನಪಿನಿಂದಲೇ ಹೇಳಿ ಬರೆಸುವ ಸಾಮರ್ಥ್ಯವೂ ಇತ್ತು.

ಇಷ್ಟೆಲ್ಲ ಅನನುಕೂಲತೆಗಳಿದ್ದರೂ ಅವರೆಂದೂ ತಮ್ಮ ಪ್ರವಾಸ ಕಾರ್ಯಕ್ರಮಗಳನ್ನು ಬಿಡುತ್ತಿರಲಿಲ್ಲ. ಆಗಾಗ್ಗೆ ದೂರದ ಊರಿಗಳಿಗೆ ಉಪನ್ಯಾಸ ನೀಡಲು, ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಹೋಗುತ್ತಿದ್ದರು. ಇತ್ತೀಚೆಗೆ (೨೦೦೬) ಅವರು ಹಾಂಗ್‌ಕಾಂಗ್‌ಗೆ ಉಪನ್ಯಾಸ ನೀಡಲು ಹೊರಟಿದ್ದಾರೆಂಬ ಸುದ್ದಿ ಪ್ರಕಟವಾಗಿತ್ತು.

ತಮ್ಮ ಕೊರತೆಯನ್ನು ಮರೆತು ತಾನೂ ಎಲ್ಲರಂತಿರಬೇಕೆಂಬ ಹಂಬಲ ಅವರಿಗೆ. ಚಿಕಾಗೊ ನಗರದ ಸಂತೋಷಕೂಟವೊಂದರಲ್ಲಿ ಗಾಲಿಕುರ್ಚಿಯಲ್ಲಿ ಕುಳಿತೇ ಜೇನ್‌ಳೊಡನೆ ನೃತ್ಯವನ್ನೂ ಮಾಡಿದರು. ಅತಿ ಉತ್ಸಾಹದಿಮದ ತಮ್ಮ ಗಾಲಿಕುರ್ಚಿಯಲ್ಲಿ ಕುಳಿತೇ ಗಿರಗಿರನೆ ಸುತ್ತಿ ಮಗುವಿನಂತೆ ಸಂತಸಪಟ್ಟರು. ಅವರ ಈ ಉತ್ಸಾಹ ಉನ್ನತ ಹುದ್ದೆಗೆ ಬಂದಾಗಲೂ ಕಡಿಮೆಯಾಗಲಿಲ್ಲ. ಅವರ ತುಂಟ ಕಣ್ಣಗಳೇ ಒಳಗಿನ ಭಾವನೆಗಳನ್ನೆಲ್ಲ ಹೇಳಿ ಬಿಡುತ್ತಿದ್ದವು. ಓದಿನಲ್ಲಿ ಅವರೆಂತಹ ಭಯಂಕರ

ಪ್ರತಿಭೆಯೋ, ಸಂತೋಷಕೂಟಗಳಲ್ಲಿ ಅಷ್ಟೇ ಭಯಂಕರ ಪಾತ್ರಧಾರಿ. ಕ್ರಿಸ್‌ಮಸ್ ವಾರ್ಷಿಕ ಸಂತೋಷ ಕೂಟಗಳಲ್ಲಿ ಅವರಿಲ್ಲದಿದ್ದರೆ ಕೂಟಕ್ಕೆ ಕಳೆಯೇ ಇರದು ಎಂದು ಗೆಳೆಯರು ಹೇಳುವುದುಂಟು.

'ಕೃಷ್ಣವಿವರ'ದ ವಿಶ್ಲೇಷಣೆ, ವಿದೇಶ ಪ್ರವಾಸಗಳ ಜೊತೆಗೇ ಸ್ಟೀಫನ್ ಹಾಕಿಂಗ್ ತನ್ನ ಶಿಷ್ಯ ಎಲ್ಲಿಸ್‌ನ ಸಹಾಯದಿಂದ 'ಅವಕಾಸ–ಕಾಲದ ಬೃಹತ್ ವಿನ್ಯಾಸ' ಎಂಬ ಪುಸ್ತಕ ರಚನೆಯಲ್ಲಿ ತೊಡಗಿಸಿಕೊಂಡರು. ನಿಖರವಾಗಿ ಹೇಳಬೇಕೆಂದರೆ ಅವರು ಸಂಶೋಧನಾ ವಿದ್ಯಾರ್ಥಿಯಾಗಿದ್ದಾಗಲೇ ಅವಕಾಶ–ಕಾಲದ ಬಗೆಗೆ ಸಾಕಷ್ಟು ಚಿಂತನೆ, ವಿಚಾರಮಂಥನಗಳನ್ನು ನಡೆಸಿದ್ದರು. ಅವರ ಅಂದಿನ ವಿಚಾರಧಾರೆಗೆ ಈಗ ಒಂದು ಮೂರ್ತರೂಪ ಸಿದ್ಧವಾಗತೊಡಗಿತು. ಕೇಂಬ್ರಿಡ್ಜ್ ವಿಶ್ವವಿದ್ಯಾಲಯವು ಉತ್ತಮಮಟ್ಟದ ಸಂಶೋಧನ ಪ್ರಬಂಧಗಳನ್ನು ಪ್ರಕಟಿಸುವ ನಿರ್ಧಾರ ಕೈಗೊಂಡಾಗ ಅವರಿಗೆ ಸ್ಫೂರ್ತಿ ಬಂದು ತಮ್ಮ ಟಿಪ್ಪಣಿಗಳನ್ನೆಲ್ಲಾ ಒಟ್ಟುಗೂಡಿಸಿ ಪುಸ್ತಕ ತಯಾರಿಕೆಯಲ್ಲಿ ತೊಡಗಿದರು ಹಾಗೂ ಅವರಿಗೆ ಹಸ್ತಪ್ರತಿ ಸಿದ್ಧಪಡಿಸಲು ಆರು ವರ್ಷಗಳೇ ಬೇಕಾದವು. ಸ್ಟೀಫನ್ ಹಾಕಿಂಗ್‌ರ ಮಾತು ಹೆಚ್ಚು ಅಸ್ಪಷ್ಟವಾಗಿದ್ದುದರಿಂದ ಎಲ್ಲಿಸ್ ಅವರಿಂದ ಉಕ್ತಲೇಖನ ಬರೆದುಕೊಳ್ಳುವಾಗ ಕಷ್ಟಪಡುತ್ತಿದ್ದರು. ಪುಸ್ತಕದ ವಿಷಯವಾಗಿ ಅವರಿಗೆ ಅಷ್ಟು ಕಷ್ಟ ಎನಿಸುತ್ತಿರಲಿಲ್ಲ. ಆದರೆ ಬೇರೆ ವಿಷಯಗಳು ಬಂದಾಗ ಬಹಳ ಕಷ್ಟವಾಗುತ್ತಿತ್ತು.

ಪುಸ್ತಕ ಸಿದ್ಧಪಡಿಸಲು ಆರು ವರ್ಷವಾಗಿದ್ದುದರಿಂದ ಅದರಲ್ಲಿನ ಎಷ್ಟೋ ವಿಷಯಗಳು ಹಳೆಯದಾಗಿಬಿಟ್ಟಿದ್ದವು. ಪುಸ್ತಕ ತಯಾರಿಕೆಗಿಂತ ವೇಗವಾಗಿ ವಿಜ್ಞಾನ–ತಂತ್ರಜ್ಞಾನ ಬೆಳೆಯುತ್ತಿತ್ತು.

ಪುಸ್ತಕದಲ್ಲಿ ಸಾಂಪ್ರದಾಯಿಕ ವಿಶ್ವವಿಜ್ಞಾನದ ಬಗ್ಗೆ ಪ್ರಸ್ತಾಪಿಸಿದ್ದರು. ೧೯೭೩ರಲ್ಲಿ, ಅದು ಪ್ರಕಟವಾಗುವ ವೇಳೆಗಾಗಲೇ, ಅವರೇ ಕೃಷ್ಣವಿವರದ ಶಕಲ (Quantum) ಸಿದ್ಧಾಂತ ವಾದವನ್ನು ಪ್ರಸ್ತಾವಿಸಿದ್ದರು. ತಮ್ಮ ಹೊಸ ಸಿದ್ಧಾಂತವನ್ನು ಅಳವಡಿಸಲು ಅವರು ಪುಸ್ತಕದ ಎರಡನೇ ಆವೃತ್ತಿಗಾಗಿ ಕಾಯಬೇಕಾಯಿತು. ಅವರ ಪುಸ್ತಕ ವಿಶ್ವವಿದ್ಯಾಲಯದ ಪ್ರಕಟಣಾ ವಿಭಾಗಕ್ಕೆ ಒಂದು ಗೌರವವನ್ನು ತಂದುಕೊಟ್ಟಿತು. ಅವರು ವಿಶ್ವವಿದ್ಯಾಲಯದ ಶ್ರೇಷ್ಠ ಬರಹಗಾರ ಎಂದು ಗುರುತಿಸಲ್ಪಟ್ಟರು.

ವಿಶ್ವಶಾಸ್ತ್ರಜ್ಞರಿಗಲ್ಲದೆ ಮತ್ತಾರಿಗೂ ಅರ್ಥವಾಗದಂತಹ ಕ್ಲಿಷ್ಟ ಪುಸ್ತವದು. ಒಮ್ಮೆ ಖಗೋಳ ವಿಜ್ಞಾನಿಗಳ ಸಭೆ ಮುಗಿಸಿಕೊಂಡು, ಸ್ಟೀಫನ್ ಹಾಕಿಂಗ್ ಮತ್ತು ಅವರ ಜೊತೆಗಾರರಾದ ಮಿಟ್ಟನ್ ಮತ್ತು ಜಾನ್ ಒಟ್ಟಿಗೇ ಪ್ರಯಾಣ ಮಾಡುವಾಗ, "ಹಾಕಿಂಗ್, ನಿನ್ನ ಪುಸ್ತಕದ ಪ್ರತಿ ನನ್ನ ಹತ್ತಿರ ಇದೆ."

"ಓಹೋ ಓದಿದೆಯಾ?"

"ಹುಂ ನಾನು ಹತ್ತು ಪುಟಗಳಷ್ಟಾದರೂ ಓದಬೇಕೆಂದು ಪ್ರಾರಂಭಿಸಿದೆ, ಆದರೆ ನಾಲ್ಕು ಪುಟ ಮುಗಿಯುವಷ್ಟರಲ್ಲಿ ಸಾಕಾಯಿತು – ನಿಲ್ಲಿಸಿಬಿಟ್ಟೆ" ಎಂದನು ಗೆಳೆಯ ಜಾನ್.

ಅಂತಹ ಕಬ್ಬಿಣದ ಕಡಲೆಯಾದರೂ ಅದು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಅತ್ಯಂತ ಹೆಚ್ಚು ಮಾರಾಟವಾದ ಸಂಶೋಧನಾ ಪ್ರಬಂಧದ ಪುಸ್ತಕ ಎನಿಸಿಕೊಂಡಿತು.

೧೯೭೭ರಲ್ಲಿ ಸಿಮನ್ ಮಿಟ್ಟನ್ ವಿಶ್ವವಿದ್ಯಾಲಯ ಮುದ್ರಣಾಲಯದ ನಿರ್ದೇಶಕನಾದ. ಅವನ ಪ್ರಕಾರ ಅತಿ ಹೆಚ್ಚು ಪದವಿ ವಿದ್ಯಾರ್ಥಿಗಳು ಆ ಪುಸ್ತಕವನ್ನು ಕೊಂಡು ಇಟ್ಟುಕೊಂಡಿದ್ದರು. ಎರಡು ಪುಟಗಳಿಗಿಂತ ಹೆಚ್ಚು ಓದಲಾರದ ಈ ಕ್ಲಿಷ್ಟ ಪುಸ್ತಕ ಅವರಿಗೆ ಗೌರವ ತಂದುಕೊಡಲು, ಅವರ ಪುಸ್ತಕದ ಕಪಾಟಿನಲ್ಲಿ ಕುಳಿತಿತ್ತು.

ಕೃಷ್ಣವಿವರದ ವಿಷಯವನ್ನು ಕುರಿತ ಅಧ್ಯಯನ ಸಂಶೋಧನೆಗಳು ವೇಗವಾಗಿ ಸಾಗುತ್ತಿದ್ದವು. ಸ್ಟೀಫನ್ ಹಾಕಿಂಗ್ ಅದರ ಮುಂಚೂಣಿ ಯಲ್ಲಿದ್ದರು. ೧೯೭೩ರ ಸೆಪ್ಟೆಂಬರ್‌ನಲ್ಲಿ ಮಾಸ್ಕೋಗೆ ಭೇಟಿ ನೀಡಿದ್ದರು. ಅಲ್ಲಿಯ ವಿಜ್ಞಾನಿಗಳ ಜೊತೆ ಚರ್ಚೆ ಮಾಡಿದಾಗ, ಬರಿಯ ಸಾಂಪ್ರದಾಯಿಕ ವಾದದಿಂದ ಕೃಷ್ಣವಿವರವನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ ಎಂಬುದು ಅವರಿಗೆ ಸ್ಪಷ್ಟವಾಯಿತು.

ಇಪ್ಪತ್ತನೆಯ ಶತಮಾನದ ಭೌತವಿಜ್ಞಾನದ ಪ್ರಗತಿಯಲ್ಲಿ ಸಾಪೇಕ್ಷತಾ ಸಿದ್ಧಾಂತ ಮತ್ತು ಶಕಲ ಸಿದ್ಧಾಂತ, ಎರಡು ಆಧಾರ ಸ್ತಂಭಗಳು. ಅವುಗಳ ಅನ್ವಯವಾಗದೇ ಕೃಷ್ಣವಿವರದ ಅಧ್ಯಯನ ಪೂರ್ಣವಾಗದು ಎಂದು ನಿರ್ಣಯಿಸಿ ತಮ್ಮ ಚಿಂತನೆಯ ಜಾಡನ್ನೇ ಬದಲಿಸಿದರು. ಎಲ್ಲವನ್ನೂ ಮನಸ್ಸಿನಲ್ಲಿಯೇ ಗುಣಿಸುತ್ತಾ, ಚಿಂತಿಸುತ್ತಾ ತಿಂಗಳುಗಳನ್ನು ಕಳೆದರು.

ಏನೇನೋ ಫಲಿತಾಂಶಗಳು ದೊರೆತವು. ಅವರು ಪಡೆದ ಸೂತ್ರಗಳ ಪ್ರಕಾರ, ಕೃಷ್ಣವಿವರ ವಿಕಿರಣಗಳನ್ನು ಹೊಮ್ಮಿಸಬೇಕು! ಆದರೆ ಕೃಷ್ಣವಿವರ ಯಾವುದನ್ನೂ ಹೊರಹಾಕದು ಎಂದು ಎಲ್ಲರೂ ನಂಬಿದ್ದರು.

ಕೃಷ್ಣವಿವರವನ್ನು ಒಂದು ಪ್ರಭಾವಲಯ ಸುತ್ತುವರಿದಿರುತ್ತದೆ. ಇದರ ಅಂಚಿನಲ್ಲಿ ವಿಮೋಚನಾ ವೇಗ (escape velocity) ಬೆಳಕಿನ ವೇಗಕ್ಕೆ ಸಮವಾಗಿರುತ್ತದೆ. ಆದರೆ ಒಳಭಾಗದಲ್ಲಿ ವಿಮೋಚನಾ ವೇಗ ಬೆಳಕಿನ ವೇಗಕ್ಕಿಂತ ಅಧಿಕವಾಗಿರುತ್ತದೆ. ಅಂಚಿನಲ್ಲಿರುವ ಬೆಳಕಿನ ಕಣಗಳು ಒಳಗೂ ಪ್ರವೇಶಿಸಲಾರದೆ, ಹೊರಕ್ಕೂ ಜಿಗಿಯಲಾರದೆ ವಲಯದ ಮೇಲ್ಮೈಯಲ್ಲಿಯೇ ಅಲೆದಾಡುತ್ತಿರುತ್ತವೆ.

ಆದರೆ ಪ್ರಭಾವಲಯವನ್ನು ಒಳಹೊಕ್ಕ ಕಣಗಳು, ವಸ್ತುಗಳು, ಕೃಷ್ಣವಿವರದೊಳ ಹೊಕ್ಕು ಕಾಣೆಯಾಗಿಬಿಡುತ್ತವೆ. ಹೀಗೆ ಕೃಷ್ಣವಿವರದ ದ್ರವ್ಯರಾಶಿ ಅಧಿಕವಾಗುತ್ತದೆ. ಅದರ ಗುರುತ್ವಾಕರ್ಷಣ ಬಲ ಅಧಿಕವಾಗುತ್ತದೆ. ಇಂತಹ ಸಂದರ್ಭದಲ್ಲಿ ಪ್ರಭಾವಲಯದ ವಿಸ್ತೀರ್ಣ ಕುಗ್ಗಬೇಕೋ? ಹಿಗ್ಗಬೇಕೋ?

ಎರಡು ಕೃಷ್ಣವಿವರಗಳು ಡಿಕ್ಕಿ ಹೊಡೆದು ಸೇರಿಬಿಟ್ಟಾಗ ಅದರ ಪ್ರಭಾವಲಯದ ವಿಸ್ತೀರ್ಣ, ಮೊದಲೆರಡರ ಒಟ್ಟು ವಿಸ್ತೀರ್ಣಕ್ಕಿಂತ ಅಧಿಕವಾಗಿರುತ್ತದೆ ಅಥವಾ ಅಷ್ಟೇ ಇರುತ್ತದೆ. ಅಂದರೆ ವಸ್ತುಗಳನ್ನು ನುಂಗತೊಡಗುವ ಕೃಷ್ಣವಿವರವು ಹಿಗ್ಗಬಹುದು ಆದರೆ ಕುಗ್ಗಲಾರದು.

ಕೃಷ್ಣವಿವರದ ದ್ರವ್ಯರಾಶಿ ಅಧಿಕವಾಗಿರುವುದರಿಂದ, ಅಲ್ಲಿಯ ಉಷ್ಣ ಅಧಿಕವಾಗಿ ಅದು ವಿಕಿರಣವನ್ನು ಹೊರಸೂಸಬೇಕು ಎಂಬ, ಪ್ರಿನ್ಸ್‌ಸ್ಟನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಯ ಕ್ಷೀಣ ಧ್ವನಿ, ಬಹುಜನರ ವಾದವನ್ನು ಎದುರಿಸದೇ ಅಡಗಿಕೊಂಡಿತು.

ಇದೇ ಸಂದರ್ಭದಲ್ಲಿ ಸ್ಟೀಫನ್ ಹಾಕಿಂಗ್ ಮಾಸ್ಕೋಗೆ ಹೊರಟರು. ಎಂದಿನಂತೆ ಅವರ ಪತ್ನಿ ಮತ್ತು ಗೆಳೆಯರು ಜೊತೆಗಿದ್ದರು. ಅಲ್ಲಿಯ ವಿಜ್ಞಾನಿ ಮಿತ್ರರು ಸ್ಟೀಫನ್‌ರೊಡನೆ ಮಾತಾಡುತ್ತಾ, ಗಿರಕಿ ಹೊಡೆಯುತ್ತಿರುವ ಕೃಷ್ಣವಿವರ ವಿಕಿರಣವನ್ನು ಉತ್ಪಾದಿಸಬಹುದು, ಅನಿಶ್ಚಿತತಾ ಸಿದ್ಧಾಂತದ (uncertainity principle) ಅನ್ವಯ,

ಹೊರಸೂಸಲೂಬಹುದು ಎಂದು ವಾದಿಸಿದರು. ಸ್ಟೀಫನ್ ಹಾಕಿಂಗ್‌ರಿಗೆ ಸಮಾಧಾನವಾಗಲಿಲ್ಲ. ಹಿಂತಿರುಗಿ ಬಂದಮೇಲೆ ಅವರು ಪುನಃ ತಮ್ಮ ಲೆಕ್ಕಚಾರದಲ್ಲಿ ಮುಳುಗಿದರು. ಅವರಿಗೇ ದಂಗು ಬಡಿಸುವಂತಹ ಫಲಿತಾಂಶ ಹೊರಹೊಮ್ಮಿತು. ಗಿರಕಿ ಹೊಡೆಯದ ಕೃಷ್ಣವಿವರವೂ ವಿಕಿರಣ ಹೊರಸೂಸಬೇಕು ಎಂದಿತು ಲೆಕ್ಕಾಚಾರ. ಅವರಿಗೆ ಆ ವಿದ್ಯಾರ್ಥಿಯ ನೆನಪಾಯಿತು. ಅವರ ಲೆಕ್ಕಾಚಾರ ಮತ್ತೊಂದು ಸೋಜಿಗವನ್ನೂ ಹೇಳಿತು. ಈ ವಿಕಿರಣದ ರೋಹಿತವು ತಪ್ತ ವಸ್ತುವಿನದನ್ನು (Spectrum of hot body radiation) ಹೋಲುತ್ತದೆ!

ಸ್ಟೀಫನ್‌ರ ವಾದಸರಣಿ ಮುಂದುವರೆಯಿತು. ವಸ್ತುಗಳನ್ನು ನುಂಗಿದ ಕೃಷ್ಣವಿವರ ಒಳಗಿನ ಉಷ್ಣತೆಯನ್ನು ಹೆಚ್ಚಿಸಿಕೊಳ್ಳುತ್ತದೆ - ಒಳಗಿನ 'ಅವ್ಯವಸ್ಥೆ'ಯೂ (entropy) ಅಧಿಕವಾಗುತ್ತದೆ. (ಅವ್ಯವಸ್ಥೆಯು ಎಲ್ಲೆಲ್ಲಿಯೂ, ಯಾವಾಗಲೂ ಅಧಿಕವಾಗುತ್ತಲೇ ಸಾಗುತ್ತದೆ ಎಂಬುದು ಉಷ್ಣಚಲನಶಾಸ್ತ್ರದ ಪ್ರಸಿದ್ಧ ನಿಯಮ.)

ಅವಕಾಶ ನಿರ್ವಾತವಾಗಿದೆ ಎಂದರೆ ಅಲ್ಲಿ ವಾಯು ಇಲ್ಲ ಎಂದು ಮಾತ್ರ ಅರ್ಥ. ಅಲ್ಲಿ ಗುರುತ್ವ, ವಿದ್ಯುತ್ ಕಾಂತಕ್ಷೇತ್ರಗಳು ಚುರುಕಾಗಿರುತ್ತವೆ. ಎಲ್ಲಿಯೂ, ಯಾವಾಗಲೂ ಕ್ಷೇತ್ರ ಶೂನ್ಯವಾಗುವುದಿಲ್ಲ. ಬದಲಿಗೆ ಓಲಾಡುತ್ತಲೇ ಇರುತ್ತವೆ. ಅದರಿಂದ ಕಣಗಳ, ಧ್ರುವಗಳ ನಿರ್ಮಾಣ, ಚಲನೆ, ಡಿಕ್ಕಿ, ನಿರ್ನಾಮ ಕ್ರಿಯೆಗಳು ನಡೆಯುತ್ತಲೇ ಇರುತ್ತವೆ. ಎಲ್ಲೆಡೆಯೂ ಅನಿಶ್ಚಿತತೆ, ಕೃಷ್ಣವಿವರದ ಸುತ್ತಲೂ ಇದೇ ವಾತಾವರಣ. ಈ ಕೋಲಾಹಲ ನುಗ್ಗಾಟ ಜಗ್ಗಾಟಗಳಲ್ಲಿ ಹಲವು ಕೃಷ್ಣವಿವರದ ಪ್ರಭಾವಲಯದಿಂದ ಒಳಕ್ಕೆ ಬೀಳುವ ಬೆಳಕಿನ ಕಣಗಳೂ ಇರುತ್ತವೆ. ಹಾಗೆಯೇ ಹೊರಕ್ಕೆ ಸಿಡಿಯುವುವೂ ಇರುತ್ತವೆ. ಹೀಗೆ ಹೊರಸೂಸುವ ವಿಕಿರಣವನ್ನು, 'ಹಾಕಿಂಗ್ ವಿಕಿರಣ' ಎಂದರು.

ವಿಕಿರಣ ಹೊರಬರುತ್ತಿದ್ದ ಹಾಗೆ, ಕೇಂದ್ರದ ದ್ರವ್ಯರಾಶಿ ಕುಗ್ಗುತ್ತದೆ, ಪ್ರಭಾವಲಯ ಕಿರಿದಾಗುತ್ತದೆ. ಕೊನೆಗೆ ಯಾದೃಚ್ಛಿಕವಾಗಿ ವಿಕಿರಣ ಹೊರಬಂದು ಕೃಷ್ಣವಿವರ ಸ್ಫೋಟಿಸೀತೇ? ವಿಜ್ಞಾನ ಜಗತ್ತಿನಲ್ಲಿ 'ಈ ಸ್ಫೋಟ' ಎಬ್ಬಿಸಬಹುದಾದ ಬಿರುಗಾಳಿಯನ್ನು ಊಹಿಸಿ ಸ್ಟೀಫನ್ ಹಾಕಿಂಗ್ ತಮ್ಮ ಗಣನೆಯ ಫಲಿತಾಂಶವನ್ನು ಅಡಗಿಸಿಟ್ಟುಕೊಂಡರು.

ಆದರೆ ಬಹಳ ದಿನ ಅದು ಗುಟ್ಟಾಗಿ ಉಳಿಯಲಿಲ್ಲ. ಅವರ ಗುರು ಡೆನ್ನಿಸ್‌ರ ಬಲವಂತದಿಂದ, 'ಕೃಷ್ಣವಿವರ ಸ್ಫೋಟಿಸಿತೇ?' ಎಂಬ ಶೀರ್ಷಿಕೆಯ ತಮ್ಮ ಪ್ರಬಂಧವನ್ನು ವಿದ್ವತ್ ಜನರ ಸಮ್ಮುಖದಲ್ಲಿ ಮಂಡಿಸಿದರು. ಕೆಲವರಿಗೆ ಅರ್ಥವಾಗಲಿಲ್ಲ. ಕೆಲವರು ತಟಸ್ಥರಾಗಿದ್ದರು, ಕೆಲವರು ಪ್ರಬಲವಾಗಿ ವಿರೋಧಿಸಿದರು. ಆದರೂ ಅವರ ಪ್ರಬಂಧ ಪ್ರಸಿದ್ಧ ಪತ್ರಿಕೆಯಲ್ಲಿ ಪ್ರಕಟವಾಯಿತು. ಹಲವು ಬಗೆಯ ಪ್ರತಿಕ್ರಿಯೆಗಳೂ ಬಂದುವು : 'ಸೈದ್ಧಾಂತಿಕ ಭೌತವಿಜ್ಞಾನ ಕ್ಷೇತ್ರದಲ್ಲಿ ನಡೆದ ಗಣನೀಯ ಬೆಳವಣಿಗೆ'. 'ಭೌತವಿಜ್ಞಾನ ಇತಿಹಾಸದಲ್ಲೇ ಇದೊಂದು ಸೊಗಸಾದ ಲೇಖನ' 'ಕೃಷ್ಣವಿವರದ ವಿಷಯ ಬೇಕೇ ಇದೋ ಸ್ಟೀಫನ್ ಹಾಕಿಂಗ್‌ರನ್ನು ಕೇಳಿ' ಇತ್ಯಾದಿ.

ಹೊರಬಂದ ವಿಕಿರಣ ಕೃಷ್ಣವಿವರದ ಒಳಗಿನ ಸುದ್ದಿಯನ್ನೇನಾದರೂ ಬಿತ್ತರಿಸ ಬಲ್ಲುದೇ? "ಇಲ್ಲ" ಎಂಬುದು ಹಾಕಿಂಗ್‌ರ ನಿಲುವು. ಗಣಿತ ಸೂತ್ರಗಳು ಈ ವಾದವನ್ನು ಗಟ್ಟಿಮಾಡಿದ್ದರಿಂದ, ಅಂದು, ಈ ದಿಟ್ಟ ವಿಜ್ಞಾನಿಯನ್ನು ಯಾರು ಸಮರ್ಥವಾಗಿ ಎದುರಿಸಲಾಗಲೇ ಇಲ್ಲ. ಆದರೆ ಅವರು ಮಾತ್ರ ತಮ್ಮ ಲೆಕ್ಕಾಚಾರಗಳನ್ನು ಪರೀಕ್ಷಿಸುತ್ತಲೇ ಇದ್ದರು. (ಮೂವತ್ತು ವರ್ಷಗಳ ನಂತರ, ೨೦೦೪ರಲ್ಲಿ ಡಬ್ಲಿನ್‌ನ ಅಂತಾರಾಷ್ಟ್ರೀಯ ಭೌತವಿಜ್ಞಾನಿಗಳ ಸಮ್ಮೇಳನದಲ್ಲಿ. ಸ್ಟೀಫನ್ ಹಾಕಿಂಗ್, ತಮ್ಮ ಲೆಕ್ಕಾಚಾರದಲ್ಲಿಯ ತಪ್ಪನ್ನು ತಾವೇ ತೋರಿಸಿ ಹಳೆಯ ನಿಲುವನ್ನು ಬದಲಾಯಿಸಿಕೊಂಡರು. 'ವಿಕಿರಣವು ಮಾಹಿತಿಯನ್ನು ಪೂರ್ತಿಯಾಗಿ ಕೊಡದಿದ್ದರು, ಸ್ವಲ್ಪಮಟ್ಟಿಗೆ ತಿರುಚಿಕೊಡುತ್ತದೆ. ಕೃಷ್ಣವಿವರದ ಒಳಹೊಕ್ಕ ವಸ್ತುಗಳು ಅದರ ಮೂಲಕ ಇನ್ನೊಂದು ವಿಶ್ವವನ್ನು ಪ್ರವೇಶಿಸುತ್ತವೆ ಎಂಬುದು ವಾಸ್ತವಕ್ಕೆ ದೂರವಾದುದು ಎಂದೂ ಹೇಳಿದರು.)

೧೯೭೪ರಲ್ಲಿ ಅವರನ್ನು ಪ್ರತಿಷ್ಠಿತ ರಾಯಲ್ ಸೊಸೈಟಿ, ಸದಸ್ಯರನ್ನಾಗಿ ಆರಿಸಿತು. ಅವರಿಗಾಗ ಇನ್ನೂ ೩೨ ವರ್ಷ ವಯಸ್ಸು. ಈ ಗೌರವನ್ನು ಪಡೆದ ಅತ್ಯಂತ ಕಿರಿಯ ವಿಜ್ಞಾನಿ ಸ್ಟೀಫನ್ ಹಾಕಿಂಗ್.

ಈ ಪ್ರಶಸ್ತಿ ಪ್ರದಾನ ಸಮಾರಂಭದ ಸಂಭ್ರಮ ವೈಭವಗಳನ್ನು ನೋಡಿಯೋ ತಿಳಿಯಬೇಕು. ಭವ್ಯವಾದ ಬೃಹತ್ ಕಟ್ಟಡ, ಅಲ್ಲೊಂದು ವಿಶಾಲವಾದ ಸಭಾಂಗಣ, ಎದುರಿಗೆ ಎತ್ತರವಾದ ವರ್ಣರಂಜಿತ ವೇದಿಕೆ,

ಒಳಹೊಕ್ಕವರನ್ನು ದಂಗುಬಡಿಸುವಂಥ ವಾತಾವರಣ, ನಾವೆಷ್ಟು ಸಣ್ಣವರು ಎಂದು ತೋರಿಸುವಂತಹ ಭವ್ಯತೆ!

ಪ್ರಶಸ್ತಿ ಪುರಸ್ಕೃತರು ಸಭಾಂಗಣದಲ್ಲಿ ಉದ್ದಕ್ಕೂ ನಡೆದುಕೊಂಡು ಹೋಗಿ ಎತ್ತರವಾದ ವೇದಿಕೆಯನ್ನು ಹತ್ತಿ ಅಲ್ಲಿರುವ ದಾಖಲೆ ಪುಸ್ತಕದಲ್ಲಿ ಸಹಿ ಮಾಡಿ, ಪ್ರಶಸ್ತಿ ಪಡೆದು ಅಧ್ಯಕ್ಷರಿಗೆ ಹಸ್ತಲಾಘವ ನೀಡಿ ಬರಬೇಕು. ಇದು ಅಲ್ಲಿಯ ವಾಡಿಕೆ. ಆದರೆ ಸ್ಟೀಫನ್ ಹಾಕಿಂಗ್‌ರ ಪರಿಸ್ಥಿತಿಯೇ ಬೇರೆಯಾಗಿದ್ದರಿಂದ ವಾಡಿಕೆ ತಿರುವುಮುರುವಾಯಿತು. ಅಂದಿನ ಅಧ್ಯಕ್ಷರಾದ ನೊಬೆಲ್ ವಿಜ್ಞಾನಿ ಸರ್ ಅಲೆನ್ ಹಾಡ್ಜ್‌ಕಿನ್, ದಾಖಲೆ ಪುಸ್ತಕವನ್ನು ಹಿಡಿದುಕೊಂಡು ವೇದಿಕೆಯಿಂದ ಇಳಿದು ಬಂದರು. ಮುಂದಿನ ಸಾಲಿನಲ್ಲೇ ಕುಳಿತಿದ್ದ ಸ್ಟೀಫನ್ ಹಾಕಿಂಗ್ ಮುಂದೆ ಆ ಪುಸ್ತಕವನ್ನಿಟ್ಟು ಅವರ ಸಹಿಗಾಗಿ ಕಾದುನಿಂತರು. ಸ್ಟೀಫನ್ ಹಾಕಿಂಗ್ ಒಂದೊಂದೇ ಅಕ್ಷರಗಳನ್ನು ಜೋಡಿಸಿ ತಮ್ಮ ಸಹಿ ಮಾಡಲು ಸಾಕಷ್ಟು ಸಮಯ ತೆಗೆದುಕೊಂಡರು. ಬಹಳ ಪ್ರಯತ್ನಪಟ್ಟು ಅವರು ತಮ್ಮ ಹೆಸರನ್ನು ಮೂಡಿಸುತ್ತಿದ್ದಾಗ, ಇಡೀ ಸಭೆ ನಿಶ್ಯಬ್ದವಾಗಿ ಉಸಿರು ಬಿಗಿಹಿಡಿದು ನೋಡುತ್ತಿತ್ತು. ಸಹಿ ಮುಗಿಸಿ ಅಧ್ಯಕ್ಷರು ಪುಸ್ತಕವನ್ನು ತೆಗೆದುಕೊಳ್ಳುತ್ತಿದ್ದ ಹಾಗೇ ಸಭಿಕರು ಕಿವಿಗಡಚಿಕ್ಕುವ ಕರತಾಡನದಿಂದ ತಮ್ಮ ಹರ್ಷ, ಸಂತೋಷ, ಗೌರವಗಳನ್ನು ವ್ಯಕ್ತಪಡಿಸಿದರು. ಹಾಕಿಂಗ್‌ರ ಗುರು ಸ್ಸಿಯಾಮ ಡೆನ್ನಿಸ್ ಮನಬಿಚ್ಚಿ ಮಾತನಾಡಿ ಶಿಷ್ಯನನ್ನು ಆಶೀರ್ವದಿಸಿದರು. ಶಿಷ್ಯನ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿ ಧನ್ಯರಾದರು. ಕುಳಿತಲ್ಲೇ ಅದ್ಭುತವಾದ ಏರ್ಪಾಡುಗಳನ್ನೂ, ಕುಟುಂಬದವರ ಮತ್ತು ಗೆಳೆಯರ ಸಂತೋಷ ಸಂಭ್ರಮಗಳನ್ನೂ ವೀಕ್ಷಿಸಿದ ಸ್ಟೀಫನ್, "ಜೀವಿತದಲ್ಲಿ ಇದೊಂದು ಅಮೂಲ್ಯವಾದ ಮಜಲು. ಆದರೆ ಇದು ಪ್ರಾರಂಭ ಮಾತ್ರ. ಹತ್ತಲು ಇನ್ನೂ ಬಹಳ ಮೆಟ್ಟಿಲುಗಳಿವೆ, ಗೆಳೆಯರ ಸಹಕಾರದಿಂದ ಸಾಧಿಸಬಹುದು" ಎಂದರು. ಕಾಲಾಗದಿದ್ದರೇನಂತೆ, ಬುದ್ಧಿ ಎತ್ತರೆತ್ತರಕ್ಕೇರಲಾರದೇ?

೩೨ ವರ್ಷ ಬದುಕಿದ್ದೇ ಒಂದು ಸಾಧನೆ, ಅವರು ಗಳಿಸಿದ ಗೌರವ ಪ್ರಶಸ್ತಿಗಳು ನಿಜಕ್ಕೂ ಒಂದು ಅಪೂರ್ವ ಸಾಧನೆ. ಅವರೀಗ ಅಂತರಾಷ್ಟ್ರೀಯ ಭೌತವಿಜ್ಞಾನಿ/ವಿಶ್ವ ವಿಜ್ಞಾನಿ. ಗಾಲಿ ಕುರ್ಚಿಯಲ್ಲಿಯೇ ಕುಳಿತು ವಿಶ್ವ ಸಂಚಾರ ಮಾಡಿದ/ಮಾಡುತ್ತಿರುವ ಮೇಧಾವಿ.

ಇಲ್ಲಿಂದ ಮುಂದೆ ಪ್ರಶಸ್ತಿಗಳು ಅವರನ್ನು ಅರಸಿ ಪುಂಖಾನುಪುಂಖವಾಗಿ ಹರಿದು ಬಂದವು. ಪಸಡೇನದ ಕಾಲ್ಟೆಕ್ ಸಂಸ್ಥೆ ಅವರನ್ನು ಒಂದು ವರ್ಷದ ಅವಧಿಗೆ ಅಧ್ಯಯನಕ್ಕಾಗಿ ಆಹ್ವಾನಿಸಿತು. ಸ್ಟೀಫನ್ ಹಾಕಿಂಗ್ ಲಾಸ್ ಏಂಜಲೀಸ್ – ದೇವತೆಗಳ ನಗರ ತಲುಪಿದರು. ಪಸಾಡೆನ, ಲಾಸ್ ಏಂಜಲೀಸ್‌ನ ಸುಂದರ ತಾಣ. ಅದು ಹಾಲಿವುಡ್‌ನ ಆಗ್ನೇಯಕ್ಕಿದೆ. ಎರಡು ಬದಿಗೂ ಸಾಲುಮರಗಳಿರುವ ವಿಸ್ತಾರವಾದ ರಸ್ತೆಗಳು ಪಸಾಡೆನದ ಉದ್ದಗಲಕ್ಕೂ ಹಾಸುಹೊಕ್ಕಾಗಿರುವುದರಿಂದ, ಚಿತ್ರತಾರೆಯರಿಗೂ, ನಿರ್ಮಾಪಕರಿಗೂ ನೆಚ್ಚಿನ ನಗರ.

ನಗರದ ಸುತ್ತಲೂ ಪರ್ವತ ಶ್ರೇಣಿ ಇರುವುದರಿಂದ, ಬೇಸಿಗೆಯಲ್ಲಿ ಮಂಜಿನ ಮುಸುಕು ಹೊದ್ದು ಮಂಕಾಗಿಬಿಡುತ್ತದೆ. ಆದುದರಿಂದಲೇ ಅಲ್ಲಿಯ ಆದಿವಾಸಿಗಳು ಪಸಾಡೆನವನ್ನು 'ಕಾವಳದ ಕಣಿವೆ' ಎನ್ನುತ್ತಾರೆ. ಹಾಗೆ ಕಾವಳ ಕವುಚಿಕೊಂಡಾಗ ಊರಿಗೆಲ್ಲಾ ಎಚ್ಚರಿಕೆಯ ಗಂಟೆ ಕೇಳಿಸುತ್ತದೆ. ಯಾರು ಎಲ್ಲಿದ್ದರೆ ಅಲ್ಲಿಯೇ ಇರಬೇಕು ಎಂದು ಅದು ಸಾರುತ್ತದೆ. ತುರ್ತು ಕಾರ್ಯನಿರತರನ್ನು ಉಳಿದು ಯಾರೂ ಹೊರಗೆ ಬರಬಾರದು. ಆಕಾಶವಾಣಿಯಿಂದಲೂ ಎಚ್ಚರಿಕೆಯ ಉದ್ಘೋಷ ಪ್ರಸಾರವಾಗುತ್ತಲೇ ಇರುತ್ತದೆ. ರಸ್ತೆ ದೀಪಗಳು ಬೆಳಗುತ್ತವೆ. ಅಪಘಾತಗಳನ್ನು ತಡೆಯಲು ಎಲ್ಲಾ ತರಹದ ಮುನ್ನೆಚ್ಚರಿಕೆ ಕ್ರಮಗಳನ್ನೂ ತೆಗೆದುಕೊಳ್ಳುತ್ತಾರೆ. ಅಂತಹ ನಗರದಲ್ಲಿ ಕಾಲ್ಟೆಕ್ ವಿಶ್ವವಿದ್ಯಾಲಯವಿದೆ. ಅದರ ಪ್ರಸಿದ್ಧಿಗೆ ಹೋಲಿಸಿದರೆ, ಮೂರ್ತಿ ಚಿಕ್ಕದೆಂದೇ ಹೇಳಬೇಕು. ಆದರೇನು ವಿಜ್ಞಾನಿಗಳಿಗೆ, ಅಧ್ಯಯನಾಸಕ್ತರಿಗೆ ಅದೊಂದು ಪವಿತ್ರ ಸ್ಥಳ. ಪ್ರಪಂಚದ ಮೂಲೆಮೂಲೆಗಳಿಂದ ವಿದ್ಯಾರ್ಥಿಗಳು ಇಲ್ಲಿ ಕಲಿಯಬೇಕೆಂದು ಧಾವಿಸಿ ಬರುತ್ತಾರೆ. ಅದರ ಎತ್ತರಕ್ಕೇರಲು ವಿದ್ಯಾರ್ಥಿಗಳು ಹಗಲಿರುಳೂ ಕಷ್ಟ ಪಡುತ್ತಾರೆ. ನೊಬೆಲ್ ವಿಜ್ಞಾನಿ ರಾಬರ್ಟ್ ಮಿಲಿಕನ್ ಇದ್ದ ಸ್ಥಳ, ಐನ್‌ಸ್ಟೈನ್ ಆಗಾಗ್ಗೆ ಭೇಟಿಕೊಡುತ್ತಿದ್ದ ಸ್ಥಳ. ಅಲ್ಲದೆ ವಿಶ್ವವಿದ್ಯಾಲಯಕ್ಕೆ ಹಣದ ಕೊರತೆಯಾಗದಂತೆ ನೋಡಿಕೊಳ್ಳುವ ಸಂಘ ಸಂಸ್ಥೆಗಳೂ, ನಾಗರೀಕರೂ ಇರುವುದರಿಂದ ಅಲ್ಲಿ ಉತ್ತಮ ಮಟ್ಟದ ಗ್ರಂಥಾಲಯಗಳೂ, ಪ್ರಯೋಗಶಾಲೆಗಳೂ ಇವೆ. ಸನಿಹದಲ್ಲೇ ಮೌಂಟ್ ವಿಲ್ಸನ್ ತಾರಾ ವೀಕ್ಷಣಾಲಯವೂ ಇದೆ. ಕಲಿಯುವವರಿಗೆ ಇದಕ್ಕಿಂತ ಉತ್ತಮ ವಾತವರಣ ಎಲ್ಲಿ ಸಿಕ್ಕೀತು?

ಸ್ಟೀಫನ್ ಹಾಕಿಂಗ್ ಅಲ್ಲಿಗೆ ಹೋದಾಗ ಕಿಪ್ ತಾರ್ನ್ ಸಾಪೇಕ್ಷತಾ ಸಿದ್ಧಾಂತ ವಿಭಾಗದ ಮುಖ್ಯಸ್ಥನಾಗಿದ್ದ. ನಗುಮೊಗದ ಉತ್ಸಾಹದ ಚೆಲುಮೆಯಾಗಿದ್ದ. ನೊಬೆಲ್ ವಿಜ್ಞಾನಿ, ರಿಚರ್ಡ್ ಫೈನ್‌ಮನ್ (೧೯೧೮–೧೯೮೮), ಅಲ್ಲಿ ಅಧ್ಯಾಪಕನಾಗಿದ್ದ. ರಿಚರ್ಡ್ ಅಂತೂ ಕಾಲೇಜಿನ ಕೂಟಗಳಲ್ಲಿ, ಸಂಜೆಯ ಪ್ರಶಾಂತ ವಾತವರಣದಲ್ಲಿ, ತನ್ನ ಬಾಂಗೋ ನುಡಿಸುತ್ತ ನಗುತ್ತ, ನಗಿಸುತ್ತ ಸಂತೋಷವಾಗಿರುತ್ತಿದ್ದ. ಇಂಗ್ಲೇಂಡಿನ ವಿಶ್ವವಿದ್ಯಾಲಯಗಳ ಬಿಗಿ ವಾತವರಣವೆಲ್ಲಿ – ಇಲ್ಲಿಯ ಮುಕ್ತ ವಾತವರಣವೆಲ್ಲಿ?!

ಅಲ್ಲಿಯ ಕಟ್ಟಡಗಳಲ್ಲಿ ಗಾಳಿ ಬೆಳಕಿಗೆ ಕೊರತೆಯೇ ಇಲ್ಲ. ಸುತ್ತಮುತ್ತಲೂ ಸ್ಪೇನ್ ಶೈಲಿಯ ಮನೆಗಳು. ಮಧ್ಯದಲ್ಲಿ ೯೦ ಅಂತಸ್ತಿನ ಮಿಲಿಕನ್ ಪ್ರಯೋಗಾಲಯ ಜಂಬದ ಕಂಬದಂತೆ ತಲೆ ಎತ್ತಿ ನಿಂತಿದೆ. ವಿಶ್ವವಿದ್ಯಾಲಯದ ಆವರಣದಲ್ಲಿ ಮನೋರಂಜನೆಗೆ ಅವಕಾಶವಿಲ್ಲ ಎನ್ನುವ ಮಾತೇ ಇರಲಿಲ್ಲ. ಫೈನ್‌ಮನ್ ಇರುವ ಕಡೆ ವಾತವರಣ ಬಿಗಿಯಾಗಿರಲು ಸಾಧ್ಯವೇ? ಈತ ಎಷ್ಟು ಪ್ರತಿಭಾವಂತ ಪ್ರಾಧ್ಯಾಪಕನೋ ಅಷ್ಟೇ ಹಾಸ್ಯಪ್ರಜ್ಞೆಯುಳ್ಳವ ಕೂಡ. ಸ್ಟೀಫನ್ ಹಾಕಿಂಗರ ಕ್ಷೇತ್ರ ವಿಶ್ವ ವಿಜ್ಞಾನ, ಫೈನ್‌ಮನ್‌ನದು ಪರಮಾಣು ವಿಜ್ಞಾನವಾದರೂ, ಅವರ ಹಾಸ್ಯಪ್ರಜ್ಞೆ ಇಬ್ಬರನ್ನೂ ಹತ್ತಿರ ತಂದಿತ್ತು. ಇಬ್ಬರನ್ನೂ ವಿದ್ಯಾರ್ಥಿವೃಂದ ಆರಾಧಿಸುತ್ತಿತ್ತು. ಅವರನ್ನು 'ತಂಪಾದ ಕೋಲ್ಮಿಂಚುಗಳು' ಎನ್ನುತ್ತಿದ್ದರು. ೧೯೮೮ರಲ್ಲಿ ಫೈನ್‌ಮನ್ ಕಾಲವಾದಾಗ ಇಡೀ ವಿಶ್ವವಿದ್ಯಾಲಯವೇ ಶೋಕಿಸಿತು.

ಡಾನ್ ಪೇಜ್ ಎಂಬ ಕಿರಿಯ ವಿಜ್ಞಾನಿ ಹಾಗೂ ಸಂಶೋಧಕ ಸ್ಟೀಫನ್ ಹಾಕಿಂಗ್‌ರಿಗೆ ಸಹಾಯಕನಾಗಿ ನೇಮಕಗೊಂಡ. ಅವರಿಬ್ಬರೂ ಇಂದಿಗೂ (೨೦೦೭) ಒಳ್ಳೆಯ ಗೆಳಯರಾಗಿದ್ದಾರೆ. ಇಬ್ಬರೂ ಕೂಡಿ ಕೃಷ್ಣವಿವರವನ್ನು ಕುರಿತು, ವರ್ಷ ಮುಗಿಯುವುದರಲ್ಲಿ, ಒಂದು ಸಂಶೋಧನಾ ಪ್ರಬಂಧವನ್ನು ಪ್ರಕಟಿಸಿದರು.

ಹಾಕಿಂಗ್ ಕುಟುಂಬಕ್ಕೆ ಅಮೆರಿಕಾ ಪ್ರವಾಸ, ಉಲ್ಲಾಸಕರ ಬದಲಾವಣೆಯಾಯಿತು. ಜೇನ್ ತನ್ನ ಇಬ್ಬರು ಮಕ್ಕಳನ್ನೂ, ಅಂಗವಿಕಲ ಪತಿಯನ್ನೂ, ಗಮನಿಸುತ್ತ ಎಲ್ಲರಿಗೂ ಅನುಕೂಲವಾಗುವಂತೆ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದಳು. ಸ್ಟೀಫನ್ ಹಾಕಿಂಗ್‌ರ ಗಾಲಿ

ಕುರ್ಚಿಗಾಗಿ ಅಲ್ಲಿ ಮರದ ಇಳಿಜಾರನ್ನು ನಿರ್ಮಿಸಿದರು. ಈಗ ಇಂಗ್ಲೆಂಡ್ ಅಮೆರಿಕಾಗಳಲ್ಲಿ ಅಂಗವಿಕಲರ ಗಾಲಿಕುರ್ಚಿಗಾಗಿ ಪ್ರತ್ಯೇಕ ವ್ಯವಸ್ಥೆ ಎಲ್ಲೆಲ್ಲೂ ಕಾಣುತ್ತದೆ.

ಸ್ಟೀಫನ್ ಹಾಕಿಂಗ್ ಬರುತ್ತಿದ್ದಂತೆಯೇ ಅವರಿಗಾಗಿ ಸುಸಜ್ಜಿತ ಕಛೇರಿ ಕೋಣೆಯೇ ಸಿದ್ಧವಾಯಿತು. ಆತಿಥೇಯರ ಕಾಳಜಿ, ಅನುಕಂಪಗಳನ್ನು ಕಂಡು ಹಾಕಿಂಗ್ ಭಾವಪರವಶರಾದರು. ದಕ್ಷಿಣ ಕ್ಯಾಲಿಫೋರ್ನಿಯಾದ ಹವಾ ಜೇನ್ ಮತ್ತು ಮಕ್ಕಳಿಗೆ ಬಹಳ ಮೆಚ್ಚುಗೆಯಾಯಿತು. ಅಲ್ಲಿಯ ನೀಲಿ ಸಮುದ್ರ, ಅದರ ವಿಶಾಲವಾದ ಕಿನಾರೆ ಎಲ್ಲವನ್ನೂ ಅವರು ಇಷ್ಟ ಪಟ್ಟರು. ಕೇಂಬ್ರಿಡ್ಜ್‌ನ ಅನಿಶ್ಚಿತ ಹವಾಮಾನದಿಂದ ದೊರೆತ ಬಿಡುಗಡೆ ಅವರಿಗೆ ಸಂತಸ ತಂದಿತು.

ರಾಬರ್ಟ್ ಶಾಲೆಗೆ ಹೋಗುತ್ತಿದ್ದ. ಪುಟ್ಟ ಲೂಸಿ ಮಾತ್ರ ಅಲ್ಲಿಯ ವಿಶಾಲ ಮೈದಾನದಲ್ಲಿ ಓಡುತ್ತಾ ಕುಣಿಯುತ್ತಾ ಖುಷಿಯಿಂದ ಕಾಲ ಕಳೆಯುತ್ತಿದ್ದಳು. ಜೇನ್ ಮಕ್ಕಳೊಡನೆ ಡಿಸ್ನಿಲ್ಯಾಂಡ್‌ನಲ್ಲಿ ಸುತ್ತಾಡಿದಳು. ವೇಳೆ ಸಿಕ್ಕಾಗಲೆಲ್ಲ ಅವರು ಜೊತೆಯಾಗಿ ಊರು ಸುತ್ತಲು ಗೆಳೆಯರ ಮನೆಗೆ ಭೇಟಿ ಕೊಡಲು ಹೋಗುತ್ತಿದ್ದರು. ಬಾಡಿಗೆ ಕಾರುಗಳಲ್ಲಿ ಅವರು ಸಾಧ್ಯವಾದಷ್ಟೂ ಊರು ಸುತ್ತಿದರು. ಊರಿಗೆ ಹೋದ ಮೇಲೆ ಮೆಲಕು ಹಾಕಲು ಬೆಟ್ಟದಷ್ಟು ಸಿಹಿಸಿಹಿ ನೆನಪುಗಳನ್ನು ತುಂಬಿಕೊಂಡರು.

ಇಂಗ್ಲೆಂಡಿಗೆ ಹಿಂತಿರುಗಿ ದಂಪತಿಗಳಿಗೆ, ತಾವು ಅನುಕೂಲವಾಗಿ ಹಾಯಾಗಿ ಬದುಕಲು ತಮ್ಮ ಪರಿಸರವನ್ನು ಬದಲಾಯಿಸಿಕೊಳ್ಳಬೇಕು ಎಂದು ತೋರಿತು. ಕ್ಯಾಲಿಫೋರ್ನಿಯದಲ್ಲಿದ್ದ ಸೌಕರ್ಯಗಳನ್ನು ಇಲ್ಲಿಯೂ ನಿರ್ಮಿಸಿಕೊಂಡು ನೆಮ್ಮದಿಯಿಂದಿರಬೇಕು ಎಂದುಕೊಂಡರು.

ಸ್ಟೀಫನ್‌ರ ಸೌಕರ್ಯಕ್ಕಾಗಿ ಜನ ಏನು ಮಾಡಲೂ ಸಿದ್ಧರಿದ್ದರು. ಅವರಿಗಾಗಿ, ಹತ್ತಿರದಲ್ಲಿಯೇ, ಕಾಲೇಜಿಗೆ ಸೇರಿದ ಒಂದು ಕಟ್ಟಡದಲ್ಲಿ, ನೆಲಮಟ್ಟದ ಮನೆಯನ್ನು ಬಿಟ್ಟುಕೊಟ್ಟರು. ಅಲ್ಲಿಂದ, ಗಾಲಿ ಕುರ್ಚಿಯಲ್ಲಿ ಕಾಲೇಜಿಗೆ ಹೋಗಲು ಅವರಿಗೆ ಹತ್ತು ನಿಮಿಷ ಸಾಕಾಗುತ್ತಿತ್ತು. ಮನೆಯ ಸುತ್ತಲೂ ತೋಟವಿದ್ದುದರಿಂದ ಮಕ್ಕಳು ಸಂತೋಷವಾಗಿದ್ದರು. ಮನೆಯ ಬಾಗಿಲುಗಳು ಅಗಲವಾಗಿದ್ದು, ಗಾಲಿಕುರ್ಚಿ ಅಡೆತಡೆ ಇಲ್ಲದೇ ಸರಾಗವಾಗಿ ಓಡಾಡುತ್ತಿತ್ತು.

ಸ್ಟೀಫನ್ ಹಾಕಿಂಗ್‌ರಿಗೆ ಈಗ ಮಲಗೇಳಲೂ ಇನ್ನೊಬ್ಬರ ಸಹಾಯ ಬೇಕು ಎನಿಸುತ್ತಿತ್ತು. ಇಷ್ಟು ದಿನವೂ ಜೇನ್ ಎಲ್ಲವನ್ನೂ ನಿಭಾಯಿಸುತ್ತಿದ್ದಳು. ಆದರೆ ಇತ್ತೀಚೆಗೆ, ಇಬ್ಬರು ಮಕ್ಕಳ ಜವಾಬ್ದಾರಿಯ ಜೊತೆಗೆ ಗಂಡನನ್ನೂ ನೋಡಿಕೊಳ್ಳುವುದು ಕಷ್ಟ ಎನಿಸುತ್ತಿತ್ತು. ದಿನೇ ದಿನೇ ಈತ ಹೆಚ್ಚು ಹೆಚ್ಚು ಪರಾವಲಂಬಿಯಾಗುತ್ತಿದ್ದರು. ಇದು ಅವಳನ್ನು ಮಾನಸಿಕವಾಗಿ ದೈಹಿಕವಾಗಿ ದಣಿಸಿಬಿಟ್ಟಿತು. ಅದಕ್ಕಾಗಿ ಒಬ್ಬ ಸಂಶೋಧಕ ವಿದ್ಯಾರ್ಥಿಯನ್ನು ಸಹಾಯಕ್ಕಾಗಿ ನೇಮಿಸಿಕೊಳ್ಳುವ ನಿರ್ಧಾರ ಮಾಡಿದರು. ಮನೆ ದೊಡ್ಡದಾಗಿದ್ದರಿಂದ ಅವನ ವಸತಿಗೆ ತೊಂದರೆಯಾಗುವಂತಿರಲಿಲ್ಲ.

ಸ್ಟೀಫನ್ ಹಾಕಿಂಗ್‌ರಂಥ ಮಹಾವಿಜ್ಞಾನಿಯ ಮನೆಯಲ್ಲಿಯೇ ಉಳಿದುಕೊಂಡು ಅವರಿಗೆ ಉಪಚಾರ ಮಾಡುತ್ತ ಕಲಿಯುವುದೇನು ಸಾಮಾನ್ಯ ಅದೃಷ್ಟವೇ? ನಮ್ಮ ದೇಶದ ಗುರುಕುಲ ಪದ್ಧತಿಯ ಹಾಗೆ! ಜೇನ್‌ಳಿಗೆ ಉಸಿರಾಡುವಂತಾಯಿತು. ಮಕ್ಕಳಿಗೆ ಹೊಸ ಗೆಳೆಯ ದೊರೆತಂತಾಯಿತು. ಹಾಗೆ ಬಂದು ಸಹಾಯ ಮಾಡಲು ಒಪ್ಪಿಕೊಂಡ ವಿದ್ಯಾರ್ಥಿಗೆ ಕೈತುಂಬ ಕೆಲಸವಿರುತ್ತಿತ್ತು. ಗುರುವಿಗೆ ಎಲ್ಲ ರೀತಿಯ ಸಹಾಯ ಮಾಡುವುದಲ್ಲದೇ, ಅವರಿಂದ ಉಕ್ತಲೇಖನ ತೆಗೆದುಕೊಳ್ಳಬೇಕಾಗಿತ್ತು. ಅವರಿಗೆ ಕಾಲೇಜಿನಲ್ಲಿ ಕಲಿಯುವುದಕ್ಕಿಂತ ಹೆಚ್ಚು ಕಲಿಯುವ ಅವಕಾಶವೂ ದೊರೆಯುತ್ತಿತ್ತು. ಹಣ, ವಸತಿ ಸೌಕರ್ಯವಿರುತ್ತಿತ್ತು. ಅದರಿಂದಲೇ ಒಬ್ಬರಾದ ಮೇಲೊಬ್ಬ ವಿದ್ಯಾರ್ಥಿ ಸ್ವಂತ ಇಚ್ಛೆಯಿಂದ ಅವರಲ್ಲಿಗೆ ಬಂದು ಸ್ಟೀಫನ್ ಹಾಕಿಂಗ್‌ರ ಸಹಾಯಕ್ಕೆ ನಿಲ್ಲುತ್ತಿದ್ದರು. ಹೀಗೆ ಬಂದವರಲ್ಲಿ ಅವರ ಅಮೆರಿಕಾದ ಗೆಳೆಯ, ಸಹ ಲೇಖಕ, ಡಾನ್ ಪೇಜ್ ಕೂಡ ಒಬ್ಬ.

ಕಾಲ್ಟೆಕ್‌ನಲ್ಲಿ ಸ್ನಾತಕೋತ್ತರ ಪದವಿ ಮುಗಿಸಿ ಕೆಲಸಕ್ಕೆ ಅರ್ಜಿ ಹಾಕುವಾಗ, ಡಾನ್ ಪೇಜ್, ಸ್ಟೀಫನ್ ಹಾಕಿಂಗ್‌ರನ್ನು ಶಿಫಾರಸ್ಸು ಪತ್ರ ಕೇಳಿದಾಗ, "ನನ್ನಲ್ಲಿಗೇ ಬಂದುಬಿಡು ನಾನೇ ಕರೆಸಿಕೊಳ್ಳುತ್ತೇನೆ" ಎಂದು ಹೇಳೀ ಎಲ್ಲ ರೀತಿಯಲ್ಲೂ ಸಹಾಯ ಮಾಡಿ ಎರಡು ವರ್ಷದ ಸಂಶೋಧನೆಗೆ ಅವಕಾಶ ಮಾಡಿಕೊಟ್ಟರು. ಹೀಗೆ ಕಾಲ್ಟೆಕ್‌ನಲ್ಲಿ ಚಿಗುರಿದ ಅವರ ಸ್ನೇಹ ಮುಂದುವರೆಯಿತು, ಹಾಗೇ ಮುಂದುವರೆದಿದೆ.

ಸ್ಟೀಫನ್ ಹಾಕಿಂಗ್‌ರ ಗಾಲಿಕುರ್ಚಿಯ ಜೊತೆಯಲ್ಲಿಯೇ ಪೇಜ್ ಕೂಡ ಹೋಗುತ್ತಿದ್ದುದರಿಂದ, ಅವರಿಗೆ ಮಾತಾಡಲು ಸಾಕಷ್ಟು ಅವಕಾಶವಿರುತ್ತಿತ್ತು. ಹಿಂದಿನ ದಿನದ ಅಧ್ಯಯನ, ಇಂದು ಅವರು ಮಾಡಬೇಕಾದ ಕೆಲಸದ ಚಿಂತನೆ, ಎಲ್ಲ ರಸ್ತೆಯಲ್ಲಿಯೇ ನಡೆಯುತ್ತಿದ್ದವು. "ನನಗೆ ಇದರಿಂದ ಬಹಳ ಲಾಭವಾಗುತ್ತಿತ್ತು. ದಿನವೂ ಈ ರೀತಿಯ ಮಾತುಗಳಿಂದ, ನೇರವಾಗಿ, ಸ್ಪಷ್ಟವಾಗಿ, ಮಿತವಾದ ಮಾತುಗಳಿಂದ ವಿಷಯಗಳನ್ನು ಹೇಳುವ ಶಿಸ್ತನ್ನು ಕಲಿತೆ" ಎಂದು ಪೇಜ್ ನೆನಪಿಸಿಕೊಳ್ಳುತ್ತಾನೆ.

೧೯೬೮ರಿಂದ ಬಳಿಸುತ್ತಿದ್ದ ಗಾಲಿಕುರ್ಚಿ ಈಗ ಅವರಿಗೆ ಓಡಿಸುವುದು ಕಷ್ಟ ಎನಿಸಿತು. ಅಂದರೆ ಅವರ ಆರೋಗ್ಯ ಇನ್ನಷ್ಟು ಕ್ಷೀಣಿಸಿತು ಎಂದರ್ಥ. ಇದನ್ನೇ ಹಾಕಿಂಗ್ ದಂಪತಿಗಳು 'ಅನುಕೂಲ' ಎಂದು ಭಾವಿಸಿಕೊಂಡರು! "ಒಳ್ಳೆಯದೇ ಆಯಿತು, ಈ ಸ್ವಯಂಚಾಲಿತ ಗಾಲಿಕುರ್ಚಿಯನ್ನು ಅವರೇ ರಸ್ತೆಯಲ್ಲಿ ಓಡಿಸಿಕೊಂಡು ಹೋಗಬಹುದು, ಅಷ್ಟರಮಟ್ಟಿಗೆ ಅವರು ಸ್ವಾವಲಂಬಿಯಾದ ಹಾಗಾಯಿತು" ಎಂದು ಹೇಳಿ ಜೇನ್ ತನ್ನ ಪತಿ ಖಿನ್ನನಾಗದಂತೆ ನೋಡಿಕೊಂಡಳು.

ಇದರಿಂದ ಅವರ ಉತ್ಸಾಹ ಇಮ್ಮಡಿಸಿತು. ಆತ ರಸ್ತೆಯಲ್ಲಿ ಈ ಹೊಸ 'ಕಾರನ್ನು' ಓಡಿಸುವ ಪರಿಯನ್ನು ನೋಡಿ ಜನ ಗಾಬರಿಯಾಗುತ್ತಿದ್ದರು. 'ಎಂತಹ ರಾಕ್ಷಸ ಚಾಲಕ' ಎನ್ನುತ್ತಿದ್ದರು. ಇಡೀ ರಸ್ತೆಯಲ್ಲಿ ತನ್ನದೊಂದೇ ವಾಹನ ಎನ್ನುವ ಭ್ರಮೆಯಿಂದ ಬೀದಿಗೆ ನುಗ್ಗಿಬಿಡುತ್ತಿದ್ದರು. ಅನಾಹುತವನ್ನು ತಪ್ಪಿಸಲು ಅವರ ಸಹಾಯಕರು ಅವರ ವಾಹನದ ಪಕ್ಕದಲ್ಲಿ ಓಡುತ್ತಾ ಹೋಗಬೇಕಾಗುತ್ತಿತ್ತು.

ಆದರೂ ಅನಾಹುತ ನಡೆದೇಹೋಯಿತು. ಜನ ಹಾಕಿಂಗ್‌ರ ಕುರ್ಚಿ ಕಂಡರೆ ತಾವೇ ಆಚೀಚೆ ಸರಿಯುತ್ತಿದ್ದರು. ಆದರೂ ಒಮ್ಮೆ ಬಸ್ ಚಾಲಕನಿಗೆ, ಗಾಲಿ ಕುರ್ಚಿಯಲ್ಲಿದ್ದ ಪುಟ್ಟ ಆಕೃತಿ, ಅಂತರಾಷ್ಟ್ರೀಯ ಖ್ಯಾತಿಯ ವಿಜ್ಞಾನಿ, ಗಾಲಿಕುರ್ಚಿಯನ್ನು ನಡೆಸುತ್ತಿದ್ದುದು ಕಾಣಿಸಲೇ ಇಲ್ಲ. ಹಿಂದಿನಿಂದ ಬಸ್ ಸ್ವಲ್ಪ ಗುದ್ದಿಬಿಟ್ಟಿತು. ಅಷ್ಟೇ ಸಾಕಾಯಿತು, ಸ್ಟೀಫನ್ ಹಾಕಿಂಗ್ ರಸ್ತೆಗೆ ಮಗುಚಿಕೊಂಡುಬಿಟ್ಟರು. ಅದು ಅವರಿಗೆ ಮಾರಕವಾಗಲಿಲ್ಲ. ತಲೆ, ಭುಜಗಳಿಗೆ ಸ್ವಲ್ಪ ತರಚು ಗಾಯವಾಯಿತು. ವೈದ್ಯರ ಮಾತು ಮೀರಿ ಮೂರೇ ವಾರಗಳಲ್ಲಿ ಅವರು ಕೆಲಸಕ್ಕೆ ಹಾಜರಾಗಿಬಿಟ್ಟರು. "ಎಲ್ಲಿ ನನ್ನ ಪುಸ್ತಕ, ಎಲ್ಲಿ ಹೊಸ ಪ್ರಕಟಣೆಗಳು?"

ಅವರ ದೈನಂದಿನ ಕೆಲಸ ಆರಂಭವಾಗಿಬಿಟ್ಟಿತು. ಆದರೂ ಅವರ ಮೊಂಡು ಧೈರ್ಯವಾಗಲೀ, ವೇಗವಾಗಲೀ ಕಡಿಮೆಯಾಗಲೇ ಇಲ್ಲ.

೧೯೮೯ರಲ್ಲಿ, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಅವರ ಉಪನ್ಯಾಸ ಏರ್ಪಾಡಾಗಿತ್ತು. ಭೌತವಿಜ್ಞಾನದ ಹೊಸ ಪ್ರಾಧ್ಯಾಪಕ, ಜಾರ್ಜ್ ಎಂಬಾತ ಸ್ಟೀಫನ್ ಹಾಕಿಂಗ್‌ರ ದೇಖರೇಖಿಗೆ ನಿಯೋಜಿತನಾಗಿದ್ದ. ಅವನು ಈ ಪ್ರತಿಷ್ಠಿತ ವಿಶ್ವಶಾಸ್ತ್ರಜ್ಞನನ್ನು ಕರೆದುಕೊಂಡು ಬರುವುದರಿಂದ ಮೊದಲ್ಗೊಂಡು, ಅವರ ಉಪನ್ಯಾಸ ಮತ್ತು ಮುಂದಿನ ಎಲ್ಲ ಏರ್ಪಾಡನ್ನೂ ಗಮನಿಸಿಕೊಳ್ಳಬೇಕಾಗಿತ್ತು. ಉಪನ್ಯಾಸ ಇದ್ದುದ್ದು ನೆಲಮಾಳಿಗೆಯ ಸಭಾಂಗಣದಲ್ಲಿ. ಬಹಳ ಜನ ಸೇರುವ ನಿರೀಕ್ಷೆ ಇದ್ದುದ್ದರಿಂದ ವಿಶಾಲವಾದ ಸಭಾಂಗಣದಲ್ಲಿ ಸಭೆಯ ಏರ್ಪಾಡು ನಡೆದಿತ್ತು. ನಿವೃತ್ತ ಪ್ರಾಧ್ಯಾಪಕರು, ಸೇವೆಯಲ್ಲಿರುವ ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಸಂಶೋಧಕ ಅಭ್ಯರ್ಥಿಗಳು ಮತ್ತು ಆಸಕ್ತ ಸಾರ್ವಜನಿಕರೂ ಇದ್ದರು.

ಜಾರ್ಜ್‌ನ ಪರೀಕ್ಷೆ ಈಗ ಪ್ರಾರಂಭವಾಯಿತು. ಅವನು ಸಾವರಿಸಿಕೊಳ್ಳುವುದರಲ್ಲಿಯೇ ಸ್ಟೀಫನ್ ಹಾಕಿಂಗ್‌ರ ಗಾಲಿಕುರ್ಚಿ ಲಿಫ್ಟ್‌ನ ಕಡೆಗೆ ಬಾಣದಂತೆ ನುಗ್ಗಿಬಿಟ್ಟಿತು. ಒಮ್ಮೆಗೆ ಇಬ್ಬರೇ ಹೋಗಬಹುದಾದ ಚಿಕ್ಕ ಲಿಫ್ಟ್ ಅದು. ಅಲ್ಲದೆ ಗಾಲಿಕುರ್ಚಿಯನ್ನು ನುಗ್ಗಿಸುವುದು ಕಷ್ಟ. ಅದರಿಂದ 'ಅವರು ಬಾಗಿಲ ಹತ್ತಿರ ನಿಲ್ಲಬಹುದು' ಎಂದುಕೊಂಡಿದ್ದ ಜಾರ್ಜ್. ಆದರೆ ನಡೆದದ್ದೇ ಬೇರೆ. ಸ್ಟೀಫನ್ ಹಾಕಿಂಗ್ ತಮ್ಮ ವಾಹನವನ್ನು ಹಾಗೆ ಹೀಗೆ ತಿರುಗಿಸಿ ಒಳಕ್ಕೆ ನುಗ್ಗಿಸಿಯೇಬಿಟ್ಟರು! ಈಗ ಬಾಣದಂತೆ ಓಡುವ ಸರದಿ ಜಾರ್ಜ್‌ನದಾಯಿತು. ಎರಡು ಕ್ಷಣದಲ್ಲಿ ಈ ಎಲ್ಲ ಘಟನೆಗಳು ನಡೆದುಹೋದವು. ಲಿಫ್ಟ್‌ನ ಬಾಗಿಲು ಮುಚ್ಚಿಕೊಂಡು ಬಿಡುವುದರಲ್ಲಿತ್ತು. ಆದರೆ ಕುರ್ಚಿಯ ಗಾಲಿ ನಡುವೆ ಸಿಕ್ಕಿಕೊಂಡದ್ದರಿಂದ ಅದು ಪೂರ್ತಿ ಮುಚ್ಚಿಕೊಳ್ಳಲೂ ಆಗಲಿಲ್ಲ. ಜಾರ್ಜ್‌ಗೆ ಗಾಬರಿಯಾಯಿತು. ಕೆಳಗೆ ನೂರಾರು ಜನ ಇವರ ಹಾದಿಕಾಯುತ್ತಿದ್ದಾರೆ, ಆಗಲೇ ತಡವಾಗಿದೆ. ಈ ಪ್ರಾಧ್ಯಾಪಕರಿಗಾದರೋ ಒಳಗಿನ ಯಾವ ನಿಯಂತ್ರಕ ಗುಂಡಿಯೂ ಕೈಗೆಟುಕುವಂತಿಲ್ಲ. ಜಾರ್ಜ್‌ನ ಗಾಬರಿಯನ್ನು ವರ್ಣಿಸಲು ಪದಗಳುಂಟೇ?

ಸ್ಟೀಫನ್ ಹಾಕಿಂಗ್ ಸ್ವಲ್ಪವೂ ವಿಚಲಿತರಾಗದೇ ಗಾಲಿಕುರ್ಚಿಯ ಗುಂಡಿಗಳನ್ನು ಒತ್ತುತ್ತಾ ತಮ್ಮ ವಾಹನವನ್ನು ಹಿಂದಕ್ಕೆ ತೆಗಯುವ

ಪ್ರಯತ್ನದಲ್ಲಿದ್ದಾರೆ! ಜಾರ್ಜ್ ತನ್ನ ಕೈಯನ್ನು ಕಷ್ಟಪಟ್ಟು ಬಾಗಿಲೊಳಗೆ ತೂರಿಸಿ ಗುಂಡಿ ಒತ್ತಿ ಬಾಗಿಲು ತೆರೆದ. ಕೂಡಲೇ ಹಾಕಿಂಗ್ ತಮ್ಮ ಗಾಡಿಯನ್ನು ವೇಗವಾಗಿ ಹಿಂದಕ್ಕೆ ತೆಗೆದು ಅದೇ ವೇಗದಲ್ಲಿ ಒಳಕ್ಕೆ ನುಗ್ಗಿಸಿದರು. ಜಾರ್ಜ್ 'ಸದ್ಯ' ಎಂದು ನಿಟ್ಟುಸಿರು ಬಿಟ್ಟರೆ, ಹಾಕಿಂಗ್ ತಾನೇನೋ ಸಾಧಿಸಿದೆ ಎಂಬ ಭಾವದ, ವಿಜಯದ ನಗೆ ಬೀರುತ್ತಾ ನೋಡುತ್ತಿದ್ದಾರೆ!

ಸ್ಟೀಫನ್ ಹಾಕಿಂಗ್ ಗಾಲಿಕುರ್ಚಿಯನ್ನು, ತಮ್ಮ ನಿಷ್ಕ್ರಿಯ ದೇಹದ ಕ್ರಿಯಾಭಾಗದಂತೆ ಬಳಸುತ್ತಾರೆ. ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಸಾಧನವನ್ನಾಗಿ ಬಳಿಸಿಕೊಳ್ಳುತ್ತಾರೆ. ಅವರಿಗೆ ತಮ್ಮ ಕೋಪ, ಸಂತೋಷ, ಬೇಸರಗಳನ್ನು ವ್ಯಕ್ತಪಡಿಸಲು ಧ್ವನಿಯೇ ಇಲ್ಲವಲ್ಲ. ಕಿರುಚಲಾರರು, ಕೂಗಲಾರರು, ಅವರ ಕಂಪ್ಯೂಟರ್ ಧ್ವನಿಯಂತೂ ಭಾವರಹಿತವಾದದ್ದು. ಅವರು ಗಾಲಿ ತಿರುಗಿಸುತ್ತಿದ್ದ ವೇಗ, ಅವರ ಕೋಪ ಅಸಮಾಧಾನಗಳನ್ನು ಹೇಳುತ್ತಿತ್ತು. ಯಾರಾದರೂ ಅನಾವಶ್ಯವಾಗಿ ವಾದ ಮಾಡುತ್ತಿದ್ದರೆ, ಯಾವುದೋ ಬೇಡದ ಹರಟೆಯಲ್ಲಿ ತೊಡಗಿದ್ದರೆ, ತಮ್ಮ ಗಾಲಿಕುರ್ಚಿಯನ್ನು 'ಝುಂಯ್' ಎಂದು ತಿರುಗಿಸಿಕೊಂಡು ವೇಗವಾಗಿ ಹೊರಟುಬಿಡುತ್ತಿದ್ದರು. ತನಗೆ ಯಾರಾದರೂ ಅಸಮಾಧಾನವಾಗುವಂತೆ ಮಾತನಾಡಿದರೆ, ತಮ್ಮ ಗಾಲಿಕುರ್ಚಿಯನ್ನು ತಿರುಗಿಸಿ, ಅವರ ಕಾಲಿನ ಬೆರಳಿನ ಮೇಲೇ ಓಡಿಸಿಬಿಡುತ್ತಿದ್ದರು. ಇಂಥ ಅನುಭವ ಅವರ ವಿದ್ಯಾರ್ಥಿಗಳಿಗೆ, ಗೆಳಯರಿಗೆ ಹೊಸದಾಗಿರಲಿಲ್ಲ.

ಆದರೆ ತಮ್ಮ ಮಕ್ಕಳೊಡನೆ ಆಡುವಾಗ ಮಾತ್ರ ಅದರ ಓಡಾಟವೇ ಬೇರೆ ತರಹ ಇರುತ್ತಿತ್ತು. ವಿಧವಿಧವಾಗಿ ಕುರ್ಚಿಯನ್ನು ತಿರುಗಿಸುತ್ತ ಮಕ್ಕಳೊಡನೆ ಆಟವಾಡಿಕೊಂಡು ಮೋಜು ಮಾಡುವ ಹಾಕಿಂಗ್‌ರನ್ನು ನೋಡಿದರೆ ಆರೋಗ್ಯವಂತ ತಂದೆಗಳ ಕಣ್ಣಲ್ಲಿ ನೀರು ತೊಟ್ಟಿಕ್ಕುತ್ತಿತ್ತು.

ರಾಬರ್ಟ್, ಲೂಸಿ, ಮತ್ತು ತಿಮೊತಿ ಮೂವರಿಗೂ ಎಲ್ಲಾ ಆಟಗಳನ್ನೂ, ವಿದ್ಯೆಗಳನ್ನೂ ಕಲಿಸಿದ್ದು ಅವರ ಅಮ್ಮನೇ. ಇಂತಹ ವಿಷಯದಲ್ಲಿ ಜೇನ್ ತಂದೆ ತಾಯಿ ಎರಡೂ ಪಾತ್ರಗಳನ್ನೂ ವಹಿಸಬೇಕಾಗಿತ್ತು. ಹುಡುಗರಿಗೆ ಕ್ರಿಕೆಟನ್ನೂ ಕಲಿಸುವ ಕಷ್ಟವನ್ನು ಹಾಗೆ ಮಾಡಲು ಪ್ರಯತ್ನಿಸಿದ ತಾಯಂದಿರು ಮಾತ್ರ ಅರ್ಥಮಾಡಿಕೊಳ್ಳಬಲ್ಲರು.

೧೯೭೫-೧೯೭೬ರಲ್ಲಿಯೇ ಸ್ಟೀಫನ್ ಹಾಕಿಂಗ್‌ರಿಗೆ ಆರು ಪ್ರಮುಖ ಪ್ರಶಸ್ತಿಗಳು ಬಂದವು. ಮಕ್ಕಳು ಬೆಳೆಯುತ್ತಿದ್ದರು. ಪ್ರಶಸ್ತಿಗಳ ರಾಶಿಯೂ ಬೆಳೆಯುತ್ತಿತ್ತು. ಅವರ ಖ್ಯಾತಿ ವಿಜ್ಞಾನ ಜಗತ್ತಿನಲ್ಲಿ ಹರಡುತ್ತಿತ್ತು. ಆದರೆ ಜೇನ್‌ಗೆ ತಾನೆಲ್ಲೋ ಕಳೆದುಹೋಗುತ್ತಿದ್ದೇನೆ ಎನಿಸುತ್ತಿತ್ತು. ಪಾಶ್ಚಾತ್ಯ ದೇಶಗಳಲ್ಲಿ ಹೆಂಗಸರು ಬರಿಯ ಗೃಹಿಣಿಯರಾಗಿ ಕರಗಿಹೋಗುವ ಮನೋಭಾವದವರಲ್ಲ. ಅವರು ತಮ್ಮದೇ ಸಾಧನೆಗಳಿಂದ, ವ್ಯಕ್ತಿತ್ವದಿಂದ ಗುರುತಿಸಿಕೊಳ್ಳಬೇಕೆಂಬ ಭಾವನೆಯುಳ್ಳ ಸ್ತ್ರೀಯರು.

ಆದರೂ ಜೇನ್, ತಾಯಿಯಾಗಿ, ದಾದಿಯಾಗಿ, ಪತ್ನಿಯಾಗಿ, ತನ್ನ ಜವಾಬ್ದಾರಿಯನ್ನು ನಿಷ್ಠೆಯಿಂದ ನಿಭಾಯಿಸುತ್ತಿದ್ದಳು. ಇಂತಿದ್ದರು ಸಮಾಜದಲ್ಲಿ ನಡೆಯುತ್ತಿದ್ದ ಸುಧಾರಣೆಗಳು, ಬದಲಾವಣೆಗಳು ಅವಳನ್ನು ಆಗಾಗ್ಗೆ ಕೆಣುಕುತ್ತಿದ್ದವು. ತಾನೂ ಏನಾದರೂ ಮಾಡಲೇಬೇಕು ಎಂಬ ತೀವ್ರವಾದ ಭಾವನೆ ಒಳಗಿನಿಂದ ಚುಚ್ಚತೊಡಗಿತು. ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಗೆ ಅಧ್ಯಯನ ಮಾಡಲಾರಂಭಿಸಿದಳು.

"ಹೇಗೆ ನಡೀತಿದೆ ನಿಮ್ಮ ಅಭ್ಯಾಸ?" ಎಂದು ಯಾರಾದರೂ ಕೇಳಿದರೆ, "ಏನೂ ಸುಖವಿಲ್ಲ, ಓದಲು ಕುಳಿತರೆ ಮಕ್ಕಳ ನೆನಪು ಕಾಡುತ್ತದೆ, ಮಕ್ಕಳೊಡನಿದ್ದಾಗ ಓದಬೇಕೆಂಬ ಕಾತರ ಅಮರಿಕೊಳ್ಳುತ್ತದೆ." ಇದು ಆ ತಾಯಿಯ ಉತ್ತರ.

ಇಂತಹ ಹೊಯ್ದಾಟದಲ್ಲಿಯೇ ಪದವಿ ಮುಗಿಸಿ, ಕೇಂಬ್ರಿಡ್ಜ್‌ನ ಒಂದು ಶಾಲೆಯಲ್ಲಿ ಉಪಾಧ್ಯಾಯ ವೃತ್ತಿಯನ್ನು ಪ್ರಾರಂಭಿಸಿದಳು. ಆದರೂ ತಾನು ಖ್ಯಾತ ವಿಜ್ಞಾನಿಯ ಪತ್ನಿ ಎಂಬ ಭಾವನೆ, ತಾನು ಒಬ್ಬ ಉಪಾಧ್ಯಾಯಿನಿ ಎಂಬ ಭಾವನೆಯನ್ನು ಮೆಟ್ಟುತ್ತಲೇ ಇತ್ತು. ಬಹಳಷ್ಟು ಬಾರಿ, ಪತಿಯ ಜೊತೆಗೆ ಅವಳೂ ಸಭೆ ಸಮಾರಂಭಗಳಿಗೆ ಹೋಗಬೇಕಾಗುತ್ತಿತ್ತು. ಎಲ್ಲ ಕಡೆಯಲ್ಲಿಯೂ ಜನರು ಸ್ಟೀಫನ್ ಹಾಕಿಂಗ್‌ರನ್ನು ಮಾತನಾಡಿಸುತ್ತಿದ್ದರು. ಯಾರೂ ಅವಳ ಪರಿಚಯವನ್ನು ಮಾಡಿಕೊಳ್ಳುವುದಿರಲಿ, ಅವಳ ಬಗೆಗೆ ಕೇಳುತ್ತಲೂ ಇರಲಿಲ್ಲ. ಅವಳೊಬ್ಬ ಅನಾಮಧೇಯಳಾಗಿ ಸ್ಟೀಫನ್ ಹಾಕಿಂಗ್‌ರನ್ನು ಅನುಸರಿಸಿಕೊಂಡು ಬರಬೇಕಾಗುತ್ತಿತ್ತು.

ಅದರೆ ಸ್ಟಿಫನ್ ಹಾಕಿಂಗ್ ಮಾತ್ರ ಆಗಾಗ್ಗೆ, ತನ್ನ ಪ್ರತಿ ಮುನ್ನಡೆಗೂ ಜೇನ್‌ಳ ಸಹಕಾರ, ಅವಳ ತ್ಯಾಗವೇ ಕಾರಣ ಎಂದು ಹೇಳುತ್ತಿದ್ದರು.

ಅವಳೇ ತನ್ನ ಈ ಸುಂದರ 'ಗೃಹ'ದ ನಿರ್ಮಾತೃ, ನಿರ್ವಾಹಕಿ ಎನ್ನುತ್ತಿದ್ದರು. ತಂದೆಯಾಗಿ ಮಕ್ಕಳಿಗೆ ಏನನ್ನೂ ಮಾಡಲಾರದ್ದಕ್ಕೆ ಕೊರಗುತ್ತಿದ್ದರು.

ಜೇನ್ ದೈವಭಕ್ತೆ, ಸಾಹಿತ್ಯವನ್ನು ಓದಿದವಳು. ಹಲವಾರು ಭಾಷೆಗಳನ್ನೂ ಬಲ್ಲವಳು. ದೇವರ ಕಲ್ಪನೆಯನ್ನೂ ಒಗ್ಗದ ಸ್ಟೀಫನ್ ಹಾಕಿಂಗ್ ಜೊತೆಗೆ ಆಗಾಗ್ಗೆ ವಾದ ವಿವಾದಗಳಾಗುತ್ತಿದ್ದವು.

"ನನಗೆ ದೇವರಲ್ಲಿರುವ ನಂಬಿಕೆಯೇ ಈ ನನ್ನ ಬದುಕಿಗೆ ಆಧಾರ. ಅದಿಲ್ಲದೇ ಇಂತಹ ಒಂದು 'ಗೃಹ'ವನ್ನು ಮುನ್ನಡೆಸುವ ಧೈರ್ಯ ನನಗಿರುತ್ತಿರಲಿಲ್ಲ"ಎನ್ನುತ್ತಿದ್ದಳು.

ಸ್ಟೀಫನ್ ಹಾಕಿಂಗ್‌ರ ಆಲೋಚನೆಯ ದಿಕ್ಕೇ ಬೇರೆ. "ಲಕ್ಷಾಂತರ ನೀಹಾರಿಕೆಗಳಲ್ಲಿ ಒಂದು ನೀಹಾರಿಕೆಯ ಅಂಚಿನಲ್ಲಿರುವ ಒಂದು ಸಾಮಾನ್ಯ ನಕ್ಷತ್ರದ ಸುತ್ತ ಸುತ್ತುವ ಹಲವಾರು ಗ್ರಹಗಳಲ್ಲಿ ಒಂದಾದ ಭೂಮಿಯಲ್ಲಿ ನಮ್ಮಂತಹ 'ಅಣು' ಜೀವಿಗಳು ಬದುಕಿದ್ದೇವೆ. ಅಂತಹ ಈ ಒಂದು 'ಅಣು' ಜೀವಿಯನ್ನು ಗಮನಿಸಬಲ್ಲನೇ 'ದೇವರು'? ಅಂತಹ ನಂಬಿಕೆಯೇ ನನಗೆ ಬರಲಾರದು – ದೇವರನ್ನು ನಂಬುವುದು ಬಹಳ ಕಷ್ಟ."

ಜೇನ್ ಅಲ್ಲಿಗೂ ಬಿಡದೇ "ಅವರ ತಪ್ಪಿಲ್ಲದೇ ಅವರನ್ನು ಕಾಡುತ್ತಿರುವ ಈ ಅನಾರೋಗ್ಯವೇ ಅವರ ಇಂಥ ಭಾವನೆಗೆ ಕಾರಣ" ಎಂದು ತನ್ನದೇ ಆದ ವಿವರಣೆಯನ್ನು ಕೊಡುತ್ತಿದ್ದಳು.

ಲಕ್ಷಾಂತರ ಜನರಲ್ಲಿ ಒಬ್ಬರಿಗೆ ಬರಬಹುದಾದ ವ್ಯಾಧಿ ಅವರನ್ನು ಕಾಡುತ್ತಿದ್ದರೂ, ಯಾರ ಅನುಕಂಪವನ್ನು ನಿರೀಕ್ಷಿಸದೇ, ಲಕ್ಷ ಜನರಲ್ಲಿ ಎದ್ದು ಕಾಣುವಂತಹ ವಿಜ್ಞಾನಿಯಾಗಿ ಬೆಳೆಯುತ್ತಿದ್ದಾರೆ. ಅನುಕಂಪ ನಿರೀಕ್ಷಿಸಿದ್ದರೆ ಅವರು ಯಾರ ಕಣ್ಣಿಗೂ ಬೀಳದೇ ಲಕ್ಷ ಜನರಲ್ಲೊಬ್ಬರಾಗಿ ತೇಲಿಹೋಗಿಬಿಡುತ್ತಿದ್ದರು.

ಅವರ ಆತ್ಮವಿಶ್ವಾಸಕ್ಕೆ ಚ್ಯುತಿಬಾರದಂತೆ, ಸ್ವಾಭಿಮಾನಕ್ಕೆ ಧಕ್ಕೆಯಾಗದಂತೆ, ಅವರ ಪತ್ನಿಯೂ, ಗೆಳೆಯರೂ, ಬಂಧುಗಳೂ ನಡೆದುಕೊಂಡರು. ಅವರಿಗೆ ಬೆಳೆಯುವ ಅವಕಾಶ ಮಾಡಿಕೊಟ್ಟರು. ಮಕ್ಕಳು ತಂದೆಯನ್ನು ಅರ್ಥಮಾಡಿಕೊಳ್ಳಲು ಜೇನ್ ಬಹಳ ಶ್ರಮಿಸಿದ್ದಾಳೆ, ಅಂತಹ ಸಂಗಾತಿಯನ್ನು ಪಡೆದದ್ದು ತಮ್ಮ ಅದೃಷ್ಟ, ಎಂದು ಪದೇ ಪದೇ

ಹೇಳುತ್ತಿದ್ದ ಸ್ಟೀಫನ್ ಹಾಕಿಂಗ್‌ರನ್ನು, 'ದೇವರನ್ನು ಪ್ರಾರ್ಥಿಸಿ, ದೇವರ ಅಸ್ತಿತ್ವವನ್ನು ನಂಬಿ, ಎಂದರೆ ಏನು ಹೇಳಿಯಾರು?

ಸ್ಟೀಫನ್ ಹಾಕಿಂಗ್‌ರಿಗೆ ಬ್ರಹ್ಮಾಂಡದ ವೈಶಾಲ್ಯ ಕುರಿತ ಕಲ್ಪನೆ ಇದೆ, ಮಾನವನೆಷ್ಟು ತೃಣರೂಪಿ ಎಂಬ ಅರಿವೂ ಇದೆ, ನಡುವೆ ಇರುವ ಈ ಭೂಮಿಯ ಸೌಂದರ್ಯವನ್ನು ಸವಿದು ಆನಂದಿಸುವ 'ಮಾನವ' ಮನಸ್ಸೂ ಇದೆ. ಇದನ್ನೆಲ್ಲಾ ಬಿಟ್ಟು 'ದೇವರನ್ನು' ಇನ್ನೆಲ್ಲಿ ಹುಡುಕಬೇಕು? – ಇದು ಅವರ ಪ್ರಶ್ನೆ.

ತಮ್ಮ ಪ್ರೀತಿಯ ವಿಷಯದ ಅಧ್ಯಯನ, ಚಿಂತನೆಗಳಲ್ಲಿ ಮುಳುಗಿ ತಮ್ಮನ್ನೇ ಮರೆತು ಆನಂದಪಡುತ್ತಿರುವ ಚೇತನ, ಬೇರೆ ದೇವರನ್ನು ಹೇಗೆ ಕಲ್ಪಿಸಿಕೊಳ್ಳಬೇಕು? ಹೇಗೆ ವರ್ಣಿಸಬೇಕು?

"ದೇವರ ಬಗೆಗಿನ ಕಲ್ಪನೆ ಇಲ್ಲದೆ ವಿಶ್ವದ ಆದಿಯನ್ನು ಕುರಿತು ಹೇಳುವುದು ಕಷ್ಟ. ಅದರ ಬಗೆಗಿನ ವೈಜ್ಞಾನಿಕ ಅಧ್ಯಯನಕ್ಕೂ, ಅಧ್ಯಾತ್ಮಿಕ ಚರ್ಚೆಗೂ ನಡುವೆ ಅಂತರ ಬಹು ಕಿರಿದಾಗಿದೆ. ನಾನು ವಿಜ್ಞಾನದ ಭಾಗದಲ್ಲಿದ್ದೇನೆ. ಇಲ್ಲಿ ನಡೆಯುವ ಎಷ್ಟೋ ಕ್ರಿಯೆಗಳಿಗೆ ವಿಜ್ಞಾನ ಯಾವ ಸಮರ್ಥ ವಿವರಣೆಯನ್ನೂ ಕೊಡುವಲ್ಲಿ ಸೋಲಬಹುದು. ಆದರೆ ದೇವರನ್ನೇ ಕುರಿತಾಡುವುದು ಅವರವರ ಭಾವಕ್ಕೆ ಸೀಮಿತವಾದ ವಿಷಯ."

"ನಾವೆಂದಾದರೂ ಒಂದು ಸಂಪೂರ್ಣ ಸಿದ್ಧಾಂತವನ್ನು ರೂಪಿಸಿದರೆ ಅದು ಸರಳವಾಗಿರಬೇಕು. ವೇದಾಂತಿಗಳೂ, ವಿಜ್ಞಾನಿಗಳೂ, ಸಾಮಾನ್ಯರೂ, ಒಟ್ಟಿಗೇ ಕುಳಿತು ಚರ್ಚಿಸಿ ಅರ್ಥಮಾಡಿ ಕೊಳ್ಳುವಂತಿರಬೇಕು. ನಾವೂ, ಈ ವಿಶ್ವವೂ ಏಕೆ ಇಲ್ಲಿದ್ದೇವೆ, ನಮ್ಮ ಇರವಿಗೆ ಅರ್ಥವೇನು? ಎಂದು ಎಲ್ಲರೂ ಕೂಡಿಯೇ ಚರ್ಚಿಸುವಂತಿರಬೇಕು. ಆಗ ಮಾನವನ ಆಲೋಚನಾ ಶಕ್ತಿ ಗೆಲುವು ಸಾಧಿಸಿದಂತಾಗುತ್ತದೆ. ನಮಗೆ ದೇವರ ಮನಸ್ಸಿನಲ್ಲಿ ಏನಿದೆ ಎಂಬ ಅರಿವುಂಟಾಗುತ್ತದೆ. ವಿಜ್ಞಾನ ಎಂದಾದರೂ 'ಹೇಗೆ?' ಎಂಬ ಪ್ರಶ್ನೆಗೆ ಉತ್ತರಿಸಬಹುದು, ಆದರೆ 'ಏಕೆ?' ಎಂಬ ಪ್ರಶ್ನೆಗೆ ಉತ್ತರಿಸಲಾರದು"

ಜೇನ್‌ಗೆ ದೈವ ಪ್ರಿಯವಾದಷ್ಟೂ, ಸ್ಟೀಫನ್ ಹಾಕಿಂಗ್ ತಮ್ಮ 'ಸಿದ್ಧಾಂತ–ವಿಶ್ವ'ದೆಡೆಗೆ ವಾಲುವುದು ಅಧಿಕವಾಯಿತು. "ಪ್ರತಿಯೊಂದೂ ಗಣಿತ ವಿಜ್ಞಾನ ಮತ್ತು ತರ್ಕಗಳಿಗೆ ಒಳಪಡುವುದರಿಂದ, ಅದೇ ಸತ್ಯ

ಎಂದು ಅವರ ವಾದವಾಗಿರುವಾಗ, ದೇವರಲ್ಲಿ ವಿಶ್ವಾಸವಿಟ್ಟು ಬದುಕುತ್ತಿರುವ ನನ್ನ ಮನಸ್ಸಿಗೆ ಘಾಸಿಯಾಗತೊಡಗಿತು" ಎಂದು ಜೇನ್ ಅಳಲನ್ನು ತೋಡಿಕೊಳ್ಳುವಂತಾಯಿತು.

ಜೇನ್‌ಗೆ ವಿಜ್ಞಾನದ ಹಿನ್ನೆಲೆ ಇಲ್ಲ. ಅವಳು ಸಾಹಿತ್ಯದ ವಿದ್ಯಾರ್ಥಿನಿ. ಸ್ಟೀಫನ್ ತನ್ನ ಆಲೋಚನೆಗಳನ್ನೂ, ಸಿದ್ಧಾಂತಗಳನ್ನೂ, ಪತ್ನಿಗೆ ವಿವರಿಸುವಾಗ ಅವಳಿಗೆ ಅರ್ಥವಾಗುವ ಭಾಷೆಯಲ್ಲಿ ವಿವರಿಸಬೇಕಾಗಿತ್ತು. ಇದರಿಂದ ಈತನ ಆಲೋಚನೆಗಳೂ ಶಿಸ್ತಿಗೆ ಒಳಪಡುತ್ತಿದ್ದವು. ಆರಂಭದಲ್ಲಿ ಇದೊಂದು ಸಮಸ್ಯೆ ಎನಿಸಲಿಲ್ಲ. ಆದರೆ ವಿಶ್ವವನ್ನೂ ಅದರ ಹುಟ್ಟು, ಬೆಳವಣಿಗೆಯನ್ನೂ ವಿವರಿಸುವಾಗ ಈತನ ಭಾವನೆಗಳು ವೇದಾಂತದ ಗಡಿಗೆ ಸಮೀಪ ಬರಲಾರಂಭಿಸುತ್ತಿವೆ ಎಂದು ಜೇನ್ ಗುರುತಿಸಿದಾಗ ಅವಳ ಕಣ್ಣು ಮಿಂಚುತ್ತಿತ್ತು.

"ಈ ವಿಶ್ವ ಹೇಗೆ ಬಂತು?"

"– ಬರಲಿಲ್ಲ, ಅಲ್ಲಿಯೇ ಇದೆ."

"ಹಾಗಾದರೆ ವಿಶ್ವದ ಆದಿ ಹೇಗೆ?", "ಅಂತ್ಯ ಹೇಗೆ?"

ಇಂಥ ಪ್ರಶ್ನೆಗಳು ದಿನನಿತ್ಯ ಚರ್ಚೆಯಾಗುತ್ತಿದ್ದವು. "ದೇವರು ಈ ವಿಶ್ವವನ್ನು ಸೃಷ್ಟಿಸಿ ಕಾಪಾಡುತ್ತಿದ್ದಾನೆ, ಎನ್ನುವುದಕ್ಕೂ – ವಿಶ್ವಕ್ಕೆ ಒಂದು ಆದಿ ಅಂತ್ಯವಿದೆ ಎನ್ನುವುದಕ್ಕೂ ಸಂಬಂಧವಿಲ್ಲ. ವೃತ್ತಕ್ಕೆ ಆದಿ–ಅಂತ್ಯವಿಲ್ಲ ಎನ್ನುವುದಕ್ಕೂ ಅದರ ರಚನೆಗೂ ಸಂಬಂಧವಿಲ್ಲ. ವೃತ್ತ ರಚಿಸುವಾಗ ಆದಿ ಅಂತ್ಯಗಳಿದ್ದವು, ರಚಿಸಿದ ಮೇಲೆ? ಹಾಗಾದರೆ 'ವೃತ್ತ'ವನ್ನು ರಚಿಸಿದವರಾರು?"

ಹಾಕಿಂಗ್ ತನ್ನ ಬೆಂಬಲಿಗರನ್ನೂ, ವಿದ್ಯಾರ್ಥಿಗಳನ್ನೂ – ವಿಮರ್ಶಕರನ್ನೂ ಈ ರೀತಿಯ ಹೇಳಿಕೆಗಳಿಂದ ದಿಗ್ಭ್ರಮೆಗೀಡು ಮಾಡುತ್ತಿದ್ದರು.

"ಏಕಕ್ಷೇತ್ರ ಸಿದ್ಧಾಂತ ಏನಾದರೂ ಇದೆ ಎಂದಾದರೆ, ಅದು ಬರಿಯ ನಿಯಮ, ಸೂತ್ರಗಳಲ್ಲಿರಬೇಕು. ಅಂಥ ನಿಯಮಗಳಿಗೆ ಗಾಳಿ ಊದಿ ಚೇತನ ನೀಡುವ ಶಕ್ತಿ ಯಾವುದು? ಆ ಸೂತ್ರಗಳ ವಿವರಣೆಗೆ ಒಳಪಡುವ ವಿಶ್ವವನ್ನು ಮಾಡಿದ್ದು ಯಾವ ಶಕ್ತಿ?" ಕೇಳುಗರಿಗೆ ಒಂದು ರೀತಿಯ ಮಂಕು ಕವಿಯುತ್ತಿತ್ತು.

ಇಂಥ ಪ್ರಶ್ನೆಗಳನ್ನು ಪ್ರಸರಿಸುತ್ತಾ ಜನರನ್ನು ಆಲೋಚನೆಗೆ ಪ್ರೇರಿಸುವುದು ಅವರ ಉದ್ದೇಶವಿದ್ದೀತೆ?

ಜನರು ತಮ್ಮ ನಂಬಿಕೆಯ ಮಿತಿಯನ್ನು ಅರಿಯಬೇಕೆಂಬ ಆಶಯವಿದ್ದೀತೆ?

"ವಿಶ್ವ ಪಾಲಿಸುತ್ತಿರುವ ನಿಯಮಗಳನ್ನು ರೂಪಿಸುವಾಗ, ಯಾರಾದರೂ ರೂಪಿಸಿರಲಿ, ಒಂದೇ ಸರಳ ಸೂತ್ರವನ್ನು, ಬಹುಶಃ, ಏಕ ಕ್ಷೇತ್ರ ಸಿದ್ಧಾಂತವನ್ನು, ಮೂಲ ನಿಯಮವಾಗಿ ಬಳಸಿಕೊಂಡಿರಬಹುದೇ? ಅಂತಹ ಸೂತ್ರವು ನಮ್ಮ ಕೈಗೆಟುಕಿದರೆ (?) ನಾವೂ ಒಂದು ಪುಟ್ಟ ವಿಶ್ವವನ್ನಾದರೂ ಪ್ರಯೋಗಶಾಲೆಯಲ್ಲಿ 'ಸೃಷ್ಟಿ'ಸಬಹುದೇ? ವಿಶ್ವ ಗಡಿರಹಿತವಾದದ್ದೇ ಅಥವಾ ಸೀಮಿತವಲಯವುಳ್ಳದ್ದೇ? ಇಂತಹ ಹಲವಾರು ಪ್ರಶ್ನೆಗಳು ಐನ್‌ಸ್ಟೈನ್‌ರ ಕಾಲದಿಂದ ಜಗತ್ತಿನ ವಿಜ್ಞಾನಿಗಳನ್ನು ಕಾಡುತ್ತಿವೆ. ವಿಶ್ವದ ನಿಯಮಗಳನ್ನು ಪರೀಕ್ಷಿಸುತ್ತ ಅಧ್ಯಯನ ಮಾಡುತ್ತ, ಹುಡುಕುತ್ತಿರುವ ಈ 'ಸರಳ ಸೂತ್ರ' ವಿಶ್ವದ ಸ್ವರೂಪವನ್ನು ತೆರೆದಿಡುವುದರ ಜೊತೆಗೆ, 'ದೇವರನ್ನೇ' ತನಿಖೆ ಮಾಡಲು ಹೊರಟಿರುವ 'ಮಾನವ'ನೆಂಬ ಜೀವಿಯ 'ಇರುವನ್ನೂ' ವಿವರಿಸಬಹುದು. ಆ ಸೂತ್ರ ಅಥವಾ ಸೂತ್ರಗಳು ಪರಿಪೂರ್ಣವಾಗಿರಬಹುದು" ಇದು ಐನ್‌ಸ್ಟೈನ್‌ರ ಆಲೋಚನಾ ಲಹರಿ.

ಹಾಕಿಂಗ್‌ರ ಮಾತುಗಳು ಸಂಕ್ಷಿಪ್ತವಾಗಿರುತ್ತಿದ್ದರಿಂದ, ಕಷ್ಟಪಟ್ಟು ಅರ್ಥಮಾಡಿಕೊಳ್ಳಬೇಕಾದ್ದರಿಂದ, ಅವರ ವಿಚಾರಗಳು ಅನೇಕ ಬಾರಿ ತಪ್ಪಾಗಿ ಪ್ರಚಾರವಾಗಿರುವ ಸಾಧ್ಯತೆಯೂ ಇರುತ್ತಿತ್ತು.

ಸತ್ಯಾನ್ವೇಷಣೆಗೆ, ಅಂದರೆ ವಿಶ್ವದ ಸ್ವರೂಪಾನ್ವೇಷಣೆಗೆ, ಎರಡು ಮುಖ್ಯ ಮಾರ್ಗಗಳು ಗೋಚರವಾಗುತ್ತವೆ. ಒಂದು ಬುದ್ಧಿಗೆ ತೋರುವ ಸಿದ್ಧಾಂತದ ಮಾರ್ಗ, ಇನ್ನೊಂದು ಆತ್ಮಕ್ಕೆ ತೋರುವ ಅಧ್ಯಾತ್ಮಿಕ ಮಾರ್ಗ. ಹೀಗೆ ಅಲ್ಲಲ್ಲಿ ಮಾತುಗಳು ಕೇಳಿಬರುತ್ತಿದ್ದಾಗ, ಒಂದು ಲೇಖನ ಪ್ರಕಟವಾಯಿತು. ಜೋಸೆಫ್ ಕಾಂಪ್‌ಬೆಲ್ ತನ್ನ ಒಂದು ಲೇಖನದಲ್ಲಿ 'ಹಿಂದುಗಳ ಪುರಾಣದಲ್ಲಿ 'ಕಾಳಿ' ಎಂಬ ಹೆಸರಿನ ದೇವತೆಯನ್ನು ಕುರಿತ ಭಯಂಕರ ನಂಬಿಕೆಗಳಿವೆ. ಏನನ್ನೂ ತುಂಬಿಸಿದರೂ ಖಾಲಿಯಾಗಿಯೇ ಉಳಿಯುವ ಜಠರ ಉಳ್ಳವಳು. ಅವಳ ಗರ್ಭದಿಂದ ಹುಟ್ಟಿದ ವಸ್ತುಗಳಿಲ್ಲ ಇತ್ಯಾದಿ – ಕಾಳಿಗೂ ಕೃಷ್ಣವಿವರಕ್ಕೂ ಸಂಬಂಧ ಕಲ್ಪಿಸುವ ಪ್ರಯತ್ನ

ಮಾಡಿದಾಗ, ಹಾಕಿಂಗ್ ಅಸಹನೆಯಿಂದ 'ಘೂಂ'ಕರಿಸಿದರು. ತಮ್ಮ ಅಸಮಾಧಾನವನ್ನು ತೋರ್ಪಡಿಸಲು ಅವರಿಗಿದ್ದುದ್ದು ಅದೊಂದೇ ಮಾರ್ಗ. ಹಾಗೆ ಹೇಳಿದವನ ಕಾಲ್ಬೆರಳು ಅಂದು ಉಳಿದದ್ದೇ ಆಶ್ಚರ್ಯ.

"ಮೇಲ್ನೋಟಕ್ಕೆ ಹಾಗೊಂದು ಸಾಮ್ಯ ಕಾಣಬಹುದು. ಆದರೆ ಆಳವಾಗಿ ಅಧ್ಯಯನ ಮಾಡದೇ ತಾಳೆ ಹಾಕಿ ಗೊಂದಲ ಉಂಟುಮಾಡುವುದು ಸರಿಯಲ್ಲ. ಕೃಷ್ಣವಿವರಕ್ಕೆ (ಬ್ಲಾಕ್ ಹೋಲ್) ಹಾಗೆಂದು ಹೆಸರಿಟ್ಟವರು ಜಾನ್ ವ್ಹೀಲರ್ (೧೯೬೭), ಮನುಷ್ಯನಿಗೆ ಯಾವಾಗಲೂ ಕತ್ತಲ ಭಯ. ಕಪ್ಪು ಕತ್ತಲೆಯಲ್ಲಿ ಎಲ್ಲಿಯೋ ಕಳೆದುಹೋಗುತ್ತೇನೆ ಎಂಬ ಅಂಜಿಕೆ ಕಾಡುತ್ತದೆ. ಕತ್ತಲಗರ್ಭ ಎಲ್ಲವನ್ನೂ ನುಂಗಿಬಿಡುತ್ತದೆ ಎಂಬ ಭಯ. ಅದಕ್ಕಾಗಿಯೇ ವಸ್ತುಗಳನ್ನು ಗುರುತುಳಿಸದೇ ನುಂಗುವ 'ಸ್ಥಳ'ಕ್ಕೆ ಕಪ್ಪು ರಂಧ್ರ – 'ಕೃಷ್ಣವಿವರ' – ಬ್ಲಾಕ್ ಹೋಲ್ ಎಂದು ಕರೆದರು. ರಷ್ಯಾದವರು ಇದೇ ಸ್ಥಳವನ್ನು "ಘನೀಭವಿಸಿದ ನಕ್ಷತ್ರ' ಎಂದು ಕರೆದರು. ಆ ಹೆಸರು ಹಾಗೆಯೇ ಉಳಿದಿದ್ದರೆ 'ಕಾಳಿ' ಸಾಮ್ಯಕ್ಕೆ ಅರ್ಥವೇ ಇರುತ್ತಿರಲಿಲ್ಲ."

ಅನೇಕ ಪತ್ರಿಕೋದ್ಯಮಿಗಳು, ಸಾರ್ವಜನಿಕರು, ಸ್ಟೀಫನ್ ಹಾಕಿಂಗ್‌ರನ್ನೇ 'ಕೃಷ್ಣವಿವರ' ಎಂದು ಕರೆದರು. ಆಗ ಸ್ಟೀಫನ್, "ನನಗೆ ಅದರ ಭಯವಿಲ್ಲ, ನಾನದರ ಯಜಮಾನ" ಎಂದು ನಗುತ್ತಿದ್ದರು. ಬಹುಶಃ, ಅವರಿಂದ ಎಷ್ಟೋ ವಿಷಯಗಳು ಹೊರಕ್ಕೆ ಬರಲಾರವು ಎನ್ನುವ ಅಭಿಪ್ರಾಯದಲ್ಲಿ ಅವರು ಹಾಗೆ ಕರೆದಿರಬೇಕು. ಅವರನ್ನು "ಕೃಷ್ಣವಿವರವನ್ನು ಕುರಿತು ಹೊರಟ 'ವ್ಯೋಮ ಪಯಣಿಗ'" ಎಂದೂ ವರ್ಣಿಸುತ್ತಿದ್ದರು. ವ್ಯೋಮ ಪಯಣಿಗರೋ ಅಲ್ಲವೋ ಆದರೆ ಅವರು ೧೯೭೦ರ ದಶಕದಲ್ಲಿ ಪ್ರಾರಂಭಿಸಿದ ಪ್ರಪಂಚ ಪರ್ಯಟನೆ ಮಾತ್ರ ನಿರಂತರವಾಗಿ ಸಾಗುತ್ತಿತ್ತು. ಅಮೆರಿಕಾದ ಚಿಕಾಗೊ, ಬಾಸ್ಟನ್‌ನಿಂದ ಕ್ಯಾಲಿಫೋರ್ನಿಯದವರೆಗೂ ಸುತ್ತಿದರು. ಅವರ ಮಾತು ಮಾತ್ರ, ಸಾರ್ವಜನಿಕರಿಗೂ, ಪತ್ರಕರ್ತರಿಗೂ, ಅವರು ಹೇಳುವ ವಿಷಯದಷ್ಟೇ ಕ್ಲಿಷ್ಟ ಎನಿಸುತ್ತಿತ್ತು. ಇತ್ತೀಚೆಗೆ ಈ ಪರ್ಯಟನೆಗಳು ಕಡಿಮೆಯಾಗಿವೆ.

ಅಮೆರಿಕಾದಲ್ಲಿ, ಅಂದು ಬೀಸಿದ ಹಾಕಿಂಗ್ ಗಾಳಿ, ೧೯೭೬ರಲ್ಲಿ ಬಿರುಗಾಳಿಯಾಯಿತು. ಅಲ್ಲಿ ಒಮ್ಮೆ ಮಾತಾಡುತ್ತ, "ಐನ್‌ಸ್ಟೈನ್ 'ದೇವರು

ಪಗಡೆಯಾಡುವುದಿಲ್ಲ'" ಎಂದಿದ್ದಾರೆ. ಆದರೆ ದೇವರು ಪಗಡೆ ಯಾಡುವುದಷ್ಟೇ ಅಲ್ಲ ದಾಳವನ್ನು ಒಮ್ಮೊಮ್ಮೆ ಯಾರಿಗೂ ಕಾಣದ ಕಡೆಗೆ ಎಸೆದುಬಿಡುವುದೂ ಉಂಟು" ಎಂದು ಸ್ಟೀಫನ್ ಹಾಕಿಂಗ್ ಹೇಳಿದ್ದುಂಟು. ಜೂಜಾಡುವಾಗ ಬೀಳುವ ಗರ ಅನಿಶ್ಚಿತವಾದರೂ ಜೂಜಾಟಕ್ಕೆ ತನ್ನದೇ ಆದ ನಿಶ್ಚಿತ ನಿಯಮಗಳಿರುವುದು ನಿಜ ತಾನೆ.

ಜನಪ್ರಿಯ ವಿಜ್ಞಾನ ಲೇಖಕ ನಿಜೆಲ್ ಕಾಲ್ಡರ್ 'ವಿಶ್ವದ ಕೀಲಿಕೈ' ಎಂಬ ಪುಸ್ತಕವನ್ನು ಅದೇ ಸುಮಾರಿಗೆ ಬರೆದರು. ಅದರಲ್ಲಿ ಶಕಲ ಸಿದ್ಧಾಂತಗಳನ್ನೂ, ಸಾಪೇಕ್ಷತಾ ಸಿದ್ಧಾಂತಗಳನ್ನೂ, ಏಕೀಕರಿಸುವ ಪ್ರಯತ್ನದಲ್ಲಿ ಸ್ಟೀಫನ್ ಹಾಕಿಂಗ್‌ರ ಪಾತ್ರವನ್ನು ಕುರಿತು ಉಲ್ಲೇಖಿಸಲಾಗಿತ್ತು. ೧೯೭೭ರಲ್ಲಿ ಬಿ.ಬಿ.ಸಿ. ಕೇಂದ್ರವು ಈ ಪುಸ್ತಕವನ್ನಾಧರಿಸಿದ ಕಾರ್ಯಕ್ರಮವನ್ನು ಪ್ರಸಾರ ಮಾಡಿತು. ಅಂದು, ಮೊದಲಬಾರಿಗೆ ಲಕ್ಷೋಪಲಕ್ಷ ವೀಕ್ಷಕರು ಸ್ಟೀಫನ್ ಹಾಕಿಂಗ್‌ರ ಬಗ್ಗೆ ತಿಳಿದುಕೊಂಡರು. ಅವರ ಬೌದ್ಧಿಕ ಪ್ರತಿಭೆಯ ಬಗೆಗೂ, ಭೌತಿಕ ದುರ್ಬಲತೆಯ ಬಗೆಗೂ ತಿಳಿದುಕೊಂಡರು, ನೋಡಿದರು, ಬೆರಗಾದರು.

ಅಲ್ಲಿಂದಾಚೆಗೆ ಅವರ ಕೀರ್ತಿ ಉತ್ತುಂಗಕ್ಕೇರಿತು. ಎಲ್ಲೆಲ್ಲೂ ಅವರದೇ ಮಾತು, ಎಲ್ಲ ಪತ್ರಿಕೆಗಳಲ್ಲೂ ಅವರದೇ ವಿಷಯ. ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಅವರನ್ನು ಗುರುತ್ವ ಭೌತ ವಿಜ್ಞಾನ ವಿಭಾಗದ ಮುಖ್ಯಸ್ಥರನ್ನಾಗಿ ನೇಮಿಸಿಕೊಂಡಿತು. ಅವರು ಕೇಂಬ್ರಿಡ್ಜ್‌ನಲ್ಲಿರುವವರೆಗೆ ಆ ಸ್ಥಾನ ಅವರಿಗೇ ಮೀಸಲು ಎಂದೂ ಸಾರಿತು, ಆಗಲೇ ಕೀಸ್ ವಿಶ್ವವಿದ್ಯಾನಿಲಯವೂ ಅವರಿಗೆ ಗೌರವ ಪದವಿ ನೀಡಿತು.

ಅವರಿಗೆ ಗೌರವ ಪ್ರಶಸ್ತಿಗಳ ಹೊಳೆಯೇ ಹರಿದು ಬರಲಾರಂಭಿಸಿತು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ರಾಬರ್ಟ್ ಬರ್ಮನ್, ತನ್ನ ಶಿಷ್ಯನಿಗೆ ಗೌರವ ಪದವಿಯನ್ನು ನೀಡಲು ಶಿಫಾರಸು ಮಾಡುತ್ತಾ, "ಇಂತಹ ಶ್ರೇಷ್ಠ ವಿಜ್ಞಾನಿ ನಮ್ಮ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡುತ್ತಿದ್ದರು ಎಂಬುದೇ ನಮಗೆ ಹೆಮ್ಮೆಯ ವಿಷಯ. ಇಷ್ಟು ಚಿಕ್ಕ ಪ್ರಾಯದಲ್ಲಿ ಇಷ್ಟೊಂದು ಗೌರವ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇಂದು ಯಾರಾದರೂ ಕೃಷ್ಣವಿವರವನ್ನು ಕುರಿತು ಹೇಳಬೇಕಾದರೆ ಅಲ್ಲಿ ಸ್ಟೀಫನ್ ಹಾಕಿಂಗ್‌ರ ಹೆಸರು ಉಲ್ಲೇಖವಾಗಲೇಬೇಕು. ಮುಂದೆ ಅವರಿಗೆ ನೊಬೆಲ್ ಪಾರಿತೋಷಕ

ಬರಬೇಕೆಂಬುದು ನಮ್ಮ ಆಶಯ." ಈ ಶಿಫಾರಸ್ಸಿನಿಂದ ಅವರಿಗೆ ಆ ವಿಶ್ವವಿದ್ಯಾಲಯದ ಗೌರವ ಪದವಿ ದೊರೆಯಿತು. ೧೯೮೩ರಲ್ಲಿ ಭೌತವಿಜ್ಞಾನದ ನೊಬೆಲ್ ಪ್ರಶಸ್ತಿ, ವಿಶ್ವವಿಜ್ಞಾನಿ ಎಸ್. ಚಂದ್ರಶೇಖರ್‌ರಿಗೆ (೧೯೧೦–೯೫) ದೊರಕಿತು. ಪ್ರಶಸ್ತಿಯನ್ನು ಹಂಚಿಕೊಳ್ಳಲು ಇನ್ನೊಬ್ಬರಿದ್ದಾರೆ ಎಂದು ತಿಳಿದಾಗ ಎಸ್. ಚಂದ್ರಶೇಖರ್ ಊಹಿಸಿದ್ದು ಸ್ಟೀಫನ್ ಹಾಕಿಂಗ್‌ರನ್ನು, ಆದರೆ ಆ ಊಹೆ ಹುಸಿಯಾಯಿತು.

ಯಾವುದೇ ಸಿದ್ಧಾಂತವನ್ನು ಪ್ರಾಯೋಗಿಕವಾಗಿ ಪರೀಕ್ಷಿಸಲು ಸಾಧ್ಯವಾಗಬೇಕು, ಎಂದು ಪ್ರಶಸ್ತಿಯ ನಿಯಮಾವಳಿ ಹೇಳುತ್ತದೆ. ಬಹುಶಃ ಸ್ಟೀಫನ್ ಹಾಕಿಂಗ್‌ರ ಸಿದ್ಧಾಂತ, ಇನ್ನೂ ತರ್ಕ ಗಣಿತಗಳಲ್ಲಿ ಮಾತ್ರ ವಿಜೃಂಭಿಸುತ್ತಿದೆ, ಎಂಬುದು ಸಮಿತಿಯ ಅಭಿಪ್ರಾಯವಾಗಿದ್ದೀತು.

೧೯೭೯–೮೦ರಲ್ಲಿ ಸ್ಟೀಫನ್ ಹಾಕಿಂಗ್, ಲುಕೇಸಿಯನ್ ಪ್ರಾಧ್ಯಾಪಕ ಸ್ಥಾನವನ್ನು ಪಡೆದರು. ಇದೊಂದು ಗೌರವದ ಸ್ಥಾನ. ಹಿಂದೆ ಐಸಾಕ್ ನ್ಯೂಟನ್ ಅಲಂಕರಿಸಿದ್ದ ಸ್ಥಾನವಿದು. ವಿಜ್ಞಾನದ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದ ಸ್ಟೀಫನ್ ಹಾಕಿಂಗ್‌ರಿಗೆ ವಿಶ್ವವಿದ್ಯಾಲಯದಲ್ಲಿಯೂ ವಿಶೇಷ ಸ್ಥಾನ ಗೌರವ ಲಭ್ಯವಾಯಿತು. ಅಂದರೆ ಅವರಿಗಾಗಿಯೇ ಒಂದು ಕೋಣೆ, ಕಛೇರಿ ದೊರೆಯಿತು. ಇದರಿಂದಾಗಿ ಅವರಿಗೆ ತಮ್ಮ ಪುಸ್ತಕಗಳನ್ನು ಹರಡಿಕೊಳ್ಳಲು, ತಮ್ಮ ಸಹಾಯಕನನ್ನು ಜೊತೆಯಲ್ಲಿಯೇ ಉಳಿಸಿಕೊಂಡು ಕೆಲಸ ಮಾಡಲು ಅನುಕೂಲವಾಯಿತು. ಇದೇ ಸಂದರ್ಭದಲ್ಲಿ ಅವರದೊಂದು ವಿಶೇಷ ಉಪನ್ಯಾಸದ ಏರ್ಪಾಡಾಯಿತು. ಅಂದಿನ ವಿಷಯ 'ಸೈದ್ಧಾಂತಿಕ ಭೌತಶಾಸ್ತ್ರದ ಅಂತ್ಯ ಕಾಣುತ್ತಿದೆಯೇ?' ಬೇರಾವ ಕ್ಷೇತ್ರವನ್ನೂ ಆರಿಸಿಕೊಳ್ಳಲಾಗದೆ, ಸೈದ್ಧಾಂತಿಕ ಕ್ಷೇತ್ರವನ್ನೇ ಆರಿಸಿಕೊಂಡು ಅಧ್ಯಯನ ಮಾಡುತ್ತಿರುವ ಸ್ಟೀಫನ್ ಹಾಕಿಂಗ್, ವಿಶೇಷ ಗೌರವ ಸ್ವೀಕಾರ ಮಾಡುವ ದಿನ, ಮಾತಾಡಲು ಆರಿಸಿಕೊಂಡ ವಿಷಯ ಕೇಳಿದ ಅನೇಕರು 'ಅಬ್ಬಾ ಇವರ ಧೈರ್ಯವೇ' ಎಂದು ಉದ್ಗರಿಸಿದರು.

ಸ್ಟೀಫನ್ ಹಾಕಿಂಗ್‌ರ ಶಿಷ್ಯ ಗುರುವಿನ ಪ್ರಬಂಧ ಓದುವುದನ್ನು

ಮುಂದುವರಿಸುತ್ತ – "ಈ ಶತಮಾನ ಮುಗಿಯುವುದರಲ್ಲಿ ಎಲ್ಲವನ್ನೂ ವಿವರಿಸುವ 'ಏಕಕ್ಷೇತ್ರ ಸಿದ್ಧಾಂತ' ಸಿದ್ಧವಾಗಿಯೇ ಬಿಡುತ್ತದೆ. ಆಮೇಲೆ ನನ್ನಂತಹ ಸೈದ್ಧಾಂತಿಕ ಭೌತವಿಜ್ಞಾನಿಗಳಿಗೆ ಕೆಲಸವಿರುವುದಿಲ್ಲ. ಅತಿ

ಗುರುತ್ವ ಸಿದ್ಧಾಂತವೇ ಬಹುಶಃ, ಪ್ರಕೃತಿಯ ಎಲ್ಲ ಬಲಗಳನ್ನೂ, ಕಣಗಳನ್ನೂ, ಒಟ್ಟಾಗಿ ಸೇರಿಸಿ ವಿವರಿಸಬಹುದು. ನಾನು ಇಲ್ಲಿ ಮಾಡುತ್ತಿರುವ ಕೆಲಸ, ಜಗತ್ತಿನ ಭೌತ ವಿಜ್ಞಾನಿಗಳು ಮಾಡುತ್ತಿರುವ ಕೆಲಸದ ಒಂದು ಸಣ್ಣ ಭಾಗ ಮಾತ್ರ. ವಿಶ್ವವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನಕ್ಕೆ ಮಾನವನಷ್ಟೇ ಪ್ರಾಚೀನ ಇತಿಹಾಸವಿದೆ – ಎಂದು ಮಾನವ ಚಿಂತಿಸಲು ಪ್ರಾರಂಭಿಸಿದನೋ ಅಂದೇ ಈ ಪ್ರಕ್ರಿಯೆ ಆರಂಭವಾಗಿದೆ. ಪ್ರಕೃತಿಯಲ್ಲಿ ಒಂದು ಶಿಸ್ತಿದೆ ಎಂದು ಅರಿವಿಗೆ ಬಂದಾಗಿನಿಂದ, ಅದನ್ನು ಅರ್ಥಮಾಡಿಕೊಳ್ಳಲು, ವಿವರಿಸಲು, ಪುರಾಣಗಳೂ, ಧರ್ಮಗಳೂ, ವಿಜ್ಞಾನವೂ ಗಣಿತವೂ ಒಂದಾದ ಮೇಲೊಂದು ಹುಟ್ಟಿಕೊಂಡವು. ಅಷ್ಟಾದರೂ ನಮ್ಮ ಪೂರ್ವಿಕರಿಗೆ ಅರ್ಥವಾಗಿದ್ದುದಕ್ಕಿಂತ ಹೆಚ್ಚಿನದೇನೂ ನಮ್ಮ ಅರಿವಿಗೆ ನಿಲುಕಿಲ್ಲ. ಆದರೂ ಏನೋ ತಿಳಿದುಕೊಂಡುಬಿಟ್ಟಿದ್ದೇವೆ ಎಂಬ ಭ್ರಮೆಯಲ್ಲಿ ನಮಗೆ ನಾವೇ ಬೆನ್ನು ತಟ್ಟಿಕೊಳ್ಳುತ್ತೇವೆ.

"ಈಗ ಈ ಸಿದ್ಧಾಂತಗಳನ್ನು ಒಟ್ಟಿಗೇ ನೋಡಿ, ಅವುಗಳಲ್ಲಿ ಎಷ್ಟು ವಿರೋಧಾಭಾಸಗಳಿವೆ ಎಂದು ಗೋಚರಿಸುತ್ತದೆ. ಎಲ್ಲ ಅರ್ಥಹೀನ ಎನಿಸುತ್ತವೆ. ಉದಾಹರಣೆಗೆ, ಖಾಲಿ ಎಂದ ಅವಕಾಶ ಖಾಲಿ ಇಲ್ಲ – ಕೃಷ್ಣವಿವರ (ಕಪ್ಪು ರಂಧ್ರ) ಕಪ್ಪಾಗಿಲ್ಲ – ವಿಶ್ವದಲ್ಲಿ ಎಲ್ಲಿ ನೋಡಿದರೂ ವಾಸ್ತವ ಎನ್ನುವುದು ಸಂಕೀರ್ಣವಾಗಿ, ಆಶ್ಚರ್ಯಕರವಾಗಿ ಕಾಣುತ್ತದೆ, ಕೈಗೆಟುಕುವುದಿಲ್ಲ, ಕೈಯಿಂದ ತಪ್ಪಿಸಿಕೊಂಡುಬಿಡುತ್ತದೆ, ಒಮ್ಮೊಮ್ಮೆ ಪರಕೀಯವಾಗಿ ಕಾಣುತ್ತದೆ. ಅನುಭವದ ಆಧಾರದಿಂದ ಮುಂದೆ ಹೀಗಾಗಬಹುದು ಎನ್ನುವುದಾಗುತ್ತದೆಯೇ ಹೊರತು, ಹೀಗೇ ಆಗುತ್ತದೆ ಎಂದು ಮುನ್ನುಡಿಯುವುದು ಅಸಾಧ್ಯ. ಯಾವ ವೈಜ್ಞಾನಿಕ ಸಿದ್ಧಾಂತ ಇದನ್ನು ವಿವರಿಸೀತು?"

ಹತ್ತು ವರ್ಷಗಳ ನಂತರ ೧೯೯೦ರಲ್ಲಿ "– ಸೈದ್ಧಾಂತಿಕ ಭೌತವಿಜ್ಞಾನದ ಅಂತ್ಯದ ಬಗ್ಗೆ ನಿಮ್ಮ ನಿಲುವು ಹಾಗೆಯೇ ಇದೆಯೇ?" ಎಂದು ಕೇಳಿದಾಗ – "ಹಾಗೆಯೇ ಇದೆ ಆದರೆ, ಸ್ವಲ್ಪ ಬದಲಾವಣೆ ಇದೆ. ಈ ಶತಮಾನದ ಅಂತ್ಯದಲ್ಲಿ ಅಲ್ಲ, ಬಲಗಳನ್ನೂ, ಕಣಗಳನ್ನೂ ಏಕೀಕರಿಸುವುದು 'ಅತಿ ಗುರುತ್ವ' ಅಲ್ಲ – 'ಅತಿ ಸೂಕ್ಷ್ಮತಂತುಗಳು', ವಿಶ್ವದ

ಮೂಲವಸ್ತುಗಳು ಕಣಗಳಲ್ಲ ಕಂಪಿಸುತ್ತಿರುವ ಸೂಕ್ಷ್ಮ ತಂತುಗಳು. ಈ ಸಿದ್ಧಾಂತ ಅಚ್ಚುಕಟ್ಟಾಗಿ ರೂಪುಗೊಳ್ಳಲು ಇನ್ನೂ ಕಾಲ ಬೇಕು ಅಂದರೆ ಸೈದ್ಧಾಂತಿಕ ಭೌತವಿಜ್ಞಾನದ ಆಯಸ್ಸು ಸ್ವಲ್ಪ ಹೆಚ್ಚಿತು.

ಇದರಿಂದ, ವಿಶ್ವ ಹೇಗಿದೆ, ಏನು ಮಾಡುತ್ತದೆ ಎಂದು ತಿಳಿಸಬಹುದೇ ಹೊರತು ಅದು ಏಕೆ ಹಾಗೆ ವರ್ತಿಸುತ್ತದೆ ಎಂಬ ಪ್ರಶ್ನೆಗೆ ಉತ್ತರಿಸಲಾಗದು. ಈ ಏಕೆಗೆ ಉತ್ತರ ಸಿಕ್ಕಿದರೆ!!" ಎಂದರು,

೧೯೭೯ರಲ್ಲಿ ಅವರ ಮೂರನೆಯ ಮಗ, ತಿಮೊತಿಯ ಜನನವಾಯಿತು. ಹಲವಾರು ರೀತಿಯ ಅವಗಡಗಳನ್ನು ದಾಟಿಕೊಂಡೇ ಸಂತಸದಿಂದ ಬಾಳುತ್ತಿದ್ದವರಿಗೆ ಹೊಸ ಮಗುವಿನ ಆಗಮನ ಮತ್ತಷ್ಟು ಸಂತಸ ತಂದಿತು. ಜೇನ್ ಸ್ನಾತಕೋತ್ತರ ಪದವಿ ಪಡೆದಳು. ಅವಳಿಗೆ ತನ್ನ ಉಪಾಧ್ಯಾಯ ವೃತ್ತಿಯಲ್ಲಿ ತೃಪ್ತಿ, ಸಂತೋಷ ದೊರೆತು ಉತ್ಸಾಹ ಇಮ್ಮಡಿಸಿತು.

ಸ್ಟೀಫನ್ ಹಾಕಿಂಗ್ ಹತ್ತು ವರ್ಷಗಳಲ್ಲಿ, ತನ್ನ ಬೌದ್ಧಿಕ ಬೆಳವಣಿಗೆಯ ಅವಲೋಕನ ಮಾಡಿದಂತೆ, ತನ್ನ ಆರೋಗ್ಯ ಸ್ಥಿತಿಯನ್ನೂ ಅವಲೋಕನ ಮಾಡಿಕೊಂಡರು. ವೈದ್ಯರ ನಿರೀಕ್ಷೆಗಿಂತ ನಿಧಾನವಾಗಿ ಅವರ ಆರೋಗ್ಯ ಕ್ಷೀಣಿಸುತ್ತಿತ್ತು. ಇತ್ತ ಆರ್ಥಿಕ ಸ್ಥಿತಿಯೂ ಉತ್ತಮವಾಗಿತ್ತು. ಹಾಗಾಗಿ ಕ್ರಮೇಣ ಶಿಷ್ಯರ ಸೇವೆಯನ್ನು ಕಡಿಮೆಮಾಡಿಕೊಂಡು, ಸೇವಾಸಂಸ್ಥೆಯ ದಾದಿಯರನ್ನು ನೇಮಕ ಮಾಡಿಕೊಳ್ಳುವುದು ಸಾಧ್ಯವಾಯಿತು. ಲುಕೇಸಿಯನ್ ಪ್ರಾಧ್ಯಾಪಕರಾಗಿದ್ದರಿಂದ ವಿಶ್ವವಿದ್ಯಾಲಯದಲ್ಲಿಯೂ, ಸಮಾಜದಲ್ಲಿಯೂ ಅವರ ಘನತೆ ಗೌರವಗಳು ಹೆಚ್ಚಿದವು. ಆಗಾಗ್ಗೆ ಸಂತೋಷಕೂಟಗಳಿಗೆ ಆಹ್ವಾನ ಬರುತ್ತಿದ್ದವು. ಸ್ಟೀಫನ್ ಹಾಕಿಂಗ್ ಮತ್ತು ಜೇನ್ ಕೂಟಗಳಿಗೆ ಜೊತೆಯಾಗಿಯೇ ಹೋಗಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. "ಒಬ್ಬ ಆರೋಗ್ಯವಂತ ಮಾಡಬಹುದಾದ್ದನ್ನೆಲ್ಲಾ ಅವನು ಮಾಡುವಂತೆ ಅವಳು ಸಹಕರಿಸುತ್ತಾಳೆ, ಒಳ್ಳೆಯ ಗೃಹಿಣಿ, ಇಬ್ಬರೂ ಒಳ್ಳೆಯ ಆತಿಥೇಯರು–" ಎಂದು ಬರ್ಮನ್ ಜ್ಞಾಪಿಸಿಕೊಳ್ಳುವುದುಂಟು.

ಸ್ಟೀಫನ್ ಹಾಕಿಂಗ್‌ರನ್ನು ಮೊದಲ ಬಾರಿ ನೋಡುವವರಿಗೆ ದಿಗ್ಭ್ರಮೆಯಾಗುತ್ತಿತ್ತು. ಅವರ ವಿಜ್ಞಾನ ಸಾಧನೆಗಳನ್ನು ಅರಿಯದವರಂತೂ, "ಇದಾವುದೋ ಅಂಗವಿಕಲ ಗಾಲಿಕುರ್ಚಿಯಲ್ಲಿ ಅಡಗಿಕೊಂಡು ಊರೆಲ್ಲ

ಸುತ್ತುತ್ತಿದೆ" ಎಂದುಕೊಳ್ಳುತ್ತಿದ್ದರು. ಕತ್ತಿನ ಶಕ್ತಿ ಸಾಲದೆ ಬಾಗಿದ ತಲೆ, ಎದೆಯ ಮೇಲೆ ಬಿದ್ದ ಗಲ್ಲ, ನೀರನ್ನೂ ತಾನಾಗಿಯೇ ಕುಡಿಯಲಾರದ ಜೀವ, "ಬಹುಶಃ ಬುದ್ಧಿಮಾಂದ್ಯನೂ ಇರಬೇಕು" ಎಂದುಕೊಳ್ಳುತ್ತಿದ್ದರು.

ಇವೆಲ್ಲ ಅವರಿಗೆ ಅರ್ಥವಾಗುತ್ತಿತ್ತು. ಅದನ್ನೇ ಒಂದು ತಮಾಷೆ ಎಂಬಂತೆ ನಕ್ಕು ಸುಮ್ಮನಾಗಿಬಿಡುತ್ತಿದ್ದರು.

"ಯಾವತ್ತಾದರೂ, ನಿಮ್ಮ ನ್ಯೂನತೆಯಿಂದಾಗಿ ನೀವು ಕುಗ್ಗಿದ್ದುಂಟೇ?"

"ಇಲ್ಲ! ಅದರ ಜೊತೆಯಲ್ಲಿಯೇ ನಾನು ಬದುಕಿದ್ದೇನೆ."

"ನಿಮ್ಮ ವ್ಯಾಧಿಯನ್ನು ಕುರಿತು ಎಂದಾದರೂ ನೀವು ಪಶ್ಚಾತ್ತಾಪ ಪಟ್ಟಿದ್ದುಂಟೇ?"

"ನನ್ನ ಮಕ್ಕಳ ಜೊತೆಯಲ್ಲಿ ಆಟವಾಡಲು ಸಾಧ್ಯವಾಗದೆ ಇದ್ದಾಗ ನನಗೆ ಬೇಸರವಾಗಿದ್ದುಂಟು."

ಗಾಲಿಕುರ್ಚಿಗಾಗಿ ವಿಶೇಷ ಪಥ ನಿರ್ಮಿಸುವುದಕ್ಕೆ ಅವರು ವಿಶ್ವವಿದ್ಯಾಲಯದ ಅಧಿಕಾರಿಗಳೊಡನೆ ಹೋರಾಟವನ್ನೇ ನಡೆಸಬೇಕಾಯಿತು. ಹಾಗೆಯೇ ಕಾಲುದಾರಿಯನ್ನು ರಸ್ತೆಯ ಮಟ್ಟಕ್ಕೆ ತರಬೇಕು ಎಂದೂ ಅವರು ಪುಸಭೆಯಲ್ಲಿ ಹೋರಾಟ ಮಾಡಿದರು. ಅವರ ಹೋರಾಟದ ಫಲವಾಗಿ ಅಂಗವಿಕಲರಿಗೆ ಅನುಕೂಲವಾಗುವಂಥ ಕಾನೂನು ಜಾರಿಗೆ ಬಂದಿತು.

"ಸ್ವಯಂಚಾಲಿತ ನರಗಳು ಹೀಗೆ ಸ್ಥಗಿತವಾಗುವುದನ್ನು ತಡೆಗಟ್ಟಲು ಅಥವಾ ಗುಣಪಡಿಸಲು, ನಿಮ್ಮ ಬುದ್ಧಿಶಕ್ತಿ ನಿಮಗೆ ಸಹಾಯ ಮಾಡಲಿಲ್ಲವೇ?"

"ನಾನು ವೈದ್ಯನಲ್ಲ, ಭೌತವಿಜ್ಞಾನಿ. ಆ ಬಗೆಗೆ ಸಂಶೋಧನೆಗಳು ನಡೆಯಬೇಕಾದಲ್ಲಿ ನಡೆಯುತ್ತಿವೆ. ಉತ್ತರ ಸಿಕ್ಕಾಗ ತಿಳಿದುಕೊಂಡರಾಯಿತು."

ಅವರು ತಮ್ಮ ಸ್ಥಾನದ ಪ್ರಭಾವದಿಂದ, ವಿಶ್ವವಿದ್ಯಾಲಯಗಳಲ್ಲಿ ಮಹಿಳೆಯರಿಗೆ ಅವಕಾಶ ನೀಡಬೇಕೆಂದು ಮತ್ತು ಸಾರ್ವಜನಿಕ ಸ್ಥಳ, ವಾಚನಾಲಯ, ಕಾಲೇಜು ಮತ್ತು ಸಂಗ್ರಹಾಲಯಗಳಲ್ಲಿ ಗಾಲಿಕುರ್ಚಿಯ ಸವಾರರಿಗಾಗಿ ಪ್ರತ್ಯೇಕವಾದ ವ್ಯವಸ್ಥೆ ಇರಬೇಕೆಂದು, ಹೋರಾಡಿದರು. ಇಂದು ಇಂಗ್ಲೆಂಡ್, ಅಮೆರಿಕಾಗಳಲ್ಲಿ ಗಾಲಿಕುರ್ಚಿಯಲ್ಲಿ ಬರುವವರಿಗೆ ಮೊದಲ ಸರದಿ, ಎಲ್ಲ ತರಹದ ನಿಲ್ದಾಣಗಳಲ್ಲಿಯೂ ಅವರಿಗೆ ಮೊದಲ

ಪ್ರಾಶಸ್ತ್ಯ ಲಭ್ಯವಿದೆ. ಸಾರ್ವಜನಿಕರೂ ಕೂಡ ಇವರನ್ನು ವಿಶೇಷ ಗೌರವದಿಂದ ನಡೆಸಿಕೊಳ್ಳುತ್ತಾರೆ. ಬಾಡಿಗೆ ವಾಹನಗಳಲ್ಲಿ ಕೂಡ ಗಾಲಿಕುರ್ಚಿ ಸುಲಭವಾಗಿ ಒಳಹೊಕ್ಕು, ಈಚೆ ಬರಬಹುದು. ಇದರಿಂದ ವಯೋವೃದ್ಧರಿಗೂ ಅನುಕೂಲವಾಗುತ್ತದೆ. ಸಾರ್ವಜನಿಕ ವಾಹನಗಳ ವಿನ್ಯಾಸವನ್ನೇ ಇವರ ಅನುಕೂಲಕ್ಕಾಗಿ ಬದಲಿಸಿಕೊಂಡುಬಿಟ್ಟಿದ್ದಾರೆ.

ಅಮೆರಿಕಾದ ಮಿಲಿಟರಿ ಸಿಬ್ಬಂದಿಯವರು ಹಾಕಿಂಗ್‌ರನ್ನು ಗೌರವಿಸಿದ ಸಂದರ್ಭದಲ್ಲಿ, "ನೀವೇಕೆ ನಿಮ್ಮ ಅಮೂಲ್ಯವಾದ ಕಾಲವನ್ನೂ, ಹಣವನ್ನೂ ವ್ಯಯ ಮಾಡಿ ಸ್ಫೋಟಕಗಳನ್ನು ತಯಾರಿಸಿ ಸಂಗ್ರಹಿಸಿಟ್ಟುಕೊಂಡಿದ್ದೀರಿ? ಸಹಬಾಳ್ವೆಗೆ ಪ್ರೇರಿಸಿ, ಸೌಹಾರ್ದ ಮನೋಭಾವವನ್ನು ಬೆಳಸಬಾರದೇ?" ಎಂದು ಹೇಳಿ ತಮ್ಮ ಯುದ್ಧವಿರೋಧಿ ನೀತಿಯನ್ನು ಅವರೆದುರೇ ಸ್ಪಷ್ಟವಾಗಿ ಹೊರಗೆಡಹಿದ್ದುಂಟು.

❑

# ಭಾಗ ೩ – ಪ್ರವಾಸ

**ಆಶಯ:**

'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ' ಎಂಬ ಅಡಿಗರ ಮಾತಿನಂತೆ ಮನುಷ್ಯ ಸದಾ ಹೊಸತನವನ್ನು ಬಯಸುತ್ತಾನೆ. ಹಾಗಾಗಿ ಪ್ರವಾಸ ಎಂಬುದು ಇಂದು ವಿಶ್ವವ್ಯಾಪಿಯಾಗಿ ಹರಡಿರುವ ಒಂದು ಲಾಭದಾಯಕ ಉದ್ದಿಮೆಯಾಗಿದೆ. ಪುರಾತನ ಕಾಲದಿಂದಲೂ ಸಹ ಮಾನವ ಈ ಪ್ರವಾಸವನ್ನು ಬೇರೆ ಬೇರೆ ಉದ್ದೇಶಗಳ ರೂಪದಲ್ಲಿ ಮಾಡಿರುವುದನ್ನು ಕಾಣಬಹುದು. ಪಂಪನ ಆದಿಪುರಾಣದಲ್ಲಿನ ಪಷ್ಪೋದ್ಯಾನ ಪ್ರಸಂಗದಲ್ಲಿ ಭರತನ ರಾಣಿಯರು ವನವಿಹಾರಕ್ಕೆ ಕಾಡಿಗೆ ತೆರಳುವುದನ್ನು ಕಾಣಬಹುದು. ತೀರ್ಥಯಾತ್ರೆ ರೂಪದಲ್ಲಿ, ಉದ್ಯೋಗ ವ್ಯವಹಾರ ರೂಪದಲ್ಲಿ ಹಿಂದಿನಿಂದಲೂ ಸಹ ಪ್ರವಾಸ ಕೈಗೊಂಡ ದಾಖಲೆಗಳು ದೊರಕುತ್ತವೆ. ವಿದ್ಯಾಭ್ಯಾಸಕ್ಕಾಗಿ "ದೇಶ ಸುತ್ತಿ ಕೋಶ ಓದು" ಎಂಬ ಗಾದೆಯಂತೆ ಜ್ಞಾನಾರ್ಜನೆಗಾಗಿ, ಮನರಂಜನೆಗಾಗಿ, ವಿಲಾಸಿ ಜೀವನಕ್ಕಾಗಿ ಇಂದು ಈ ಪ್ರವಾಸ ಖ್ಯಾತವಾಗಿದೆ. ಅದರಲ್ಲೂ ಸ್ಥಳೀಯ ದೇಸೀಯ, ವಿದೇಶಿಯ ಪ್ರವಾಸಗಳನ್ನು ವಿವಿಧ ಉದ್ದೆಶಗಳಿಗಾಗಿ ಕೈಗೊಳ್ಳುವುದನ್ನು ಕಾಣಬಹುದು. ಪ್ರತೀ ದೇಶದಲ್ಲೂ ಪ್ರವಾಸೋದ್ಯಮ ಇಲಾಖೆಯು ಲಾಭದಾಯಕವಾಗಿ ನಡೆಯುತ್ತಿರುವುದನ್ನು ಕಾಣಬಹುದು. ನಮ್ಮ ಸಾಹಿತಿಗಳು ಪ್ರವಾಸ ಕೈಗೊಂಡು ಸುಮ್ಮನೆ ಅನುಭವಿಸಿ ಕೈಬಿಡದೆ ಅವನ್ನೆಲ್ಲ ಪುಸ್ತಕರೂಪದಲ್ಲಿ, ಕಥೆ, ಕವನಗಳ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಇದರಿಂದ ಆ ಪ್ರದೇಶಗಳನ್ನು ನೋಡದೇ ಇರುವವರು ಅವುಗಳನ್ನು ಓದಿದರೆ ನೋಡಿದ ಅನುಭವ, ಅಲ್ಲಿನ ವಿಶೇಷತೆಗಳನ್ನು ತಿಳಿಯಲು ಈ ಪ್ರವಾಸ ಸಾಹಿತ್ಯದಿಂದ ಸಾಧ್ಯವಾಗಿದೆ. ಸುಮ್ಮನೆ ಸುತ್ತಾಡಿ ಬರದೇ ಅಲ್ಲಿನ ವಿಶೇಷತೆಗಳನ್ನು, ಆಚರಣೆಗಳನ್ನು, ಜನಾಂಗದ ಬಗ್ಗೆ, ಹಬ್ಬ ಆಚರಣೆಗಳು, ಸಂಸ್ಕೃತಿ ಭೌಗೋಳಿಕ ಪರಿಸರ, ಮಳೆ, ಬೆಳೆ, ನಂಬಿಕೆಗಳು, ಉಡುಗೆ, ತೊಡುಗೆಗಳ ಕುರಿತಾಗಿ, ಇತಿಹಾಸ, ನಂಬಿಕೆಗಳು, ವಿಜ್ಞಾನ, ತಂತ್ರಜ್ಞಾನ, ಉದ್ಯೋಗ ಇತ್ಯಾದಿಗಳನ್ನು ಕಟ್ಟಿಕೊಟ್ಟಿದ್ದಾರೆ. ಹೀಗಾಗಿ ಇಂದು ಸಾಹಿತ್ಯ ಪ್ರಕಾರಗಳಲ್ಲಿ ಒಂದು ಪ್ರಕಾರವಾಗಿ ಪ್ರವಾಸ ಸಾಹಿತ್ಯ ಗುರುತಿಸಲ್ಪಟ್ಟಿದೆ. ಅಲ್ಲದೇ ಅವುಗಳನ್ನು ಅಧ್ಯಯನ ಮಾಡಿ ನಮ್ಮ ಅನುಭವವನ್ನು ಹೆಚ್ಚಿಸಿಕೊಳ್ಳಲು ಈ ಪ್ರವಾಸ ಕೃತಿಗಳು ಸಹಕಾರಿಯಾಗಿವೆ. ಎಲ್ಲರಿಗೂ ದೇಶ ವಿದೇಶಗಳನ್ನು ಸುತ್ತಲು ಸಾಧ್ಯವಾಗದಿರಬಹುದು. ಆದರೆ ಹೋಗಿ ಬಂದವರು ಕಟ್ಟಿಕೊಟ್ಟಿರುವ ಕೃತಿಗಳನ್ನು ಅಧ್ಯಯನ ಮಾಡುವ ಮೂಲಕ ಓದುಗರು ಸಹ ಅಲ್ಲೆಲ್ಲ ವಿಹರಿಸಲು ಸಾಧ್ಯವಾಗುವುದು. ಆ ನಿಟ್ಟಿನಲ್ಲಿ ಗಮನ ಸೆಳೆಯಲು ನಮ್ಮ ಈ ಪ್ರವಾಸ ಭಾಗದ ಓದು.

– ಡಾ. ಪ್ರೇಮ ಸಿದ್ಧರಾಜು

# ೧. ಕಾವ್ಯ
# ಕಾಶ್ಮೀರದಲ್ಲಿ ಕಾರ್ಗಾಲ

**– ಸಿದ್ಧಯ್ಯ ಪುರಾಣಿಕ**

ಘನಘೋರ ಮೇಘ–ಮದದಂತಿ–ಸೇನೆ ಹಿಮಗಿರಿಗೆ ಢಿಕ್ಕಿ ಹೊಡೆಯ
ಮದಕುಂಭ–ಕುಂಭ ನಗರಾಜ ಹತಿಗೆ ಕ್ಷತಿಗೊಂಡು ಸೀಳಿ ಒಡೆಯೆ
ಉದುರುತ್ತಲಿಹವು ಅಣಿಮುತ್ತು ನೋಡು ಕುಂಭಿನಿಯು ಕಾಂತಿವಡೆಯೆ
ಶ್ರೀನಗರ ಸರಸಿಯಲಿ ನೌಕೆ ನೂರು ತೇಂಕಾಡಿ ಜೋಲಿ ಹೊಡೆಯೆ ॥೧॥

ಶಲಿಮಾರಿನಲ್ಲಿ ಕಾರಂಜಿ ಸಾಲು ನೆಗೆದಾಡೆ ಉಬ್ಬಿ ಕೊಬ್ಬಿ
ಹರವನದಿ ಬಳ್ಳಿ ತಳ್ಳಂಕಗೊಳ್ಳೆ ಫಲವೃಕ್ಷಗಳನು ತಬ್ಬಿ
ಜಹಲಮಿನ ಜಲವು ನೊರೆ ಚೆಲ್ಲಿ ಮೊರೆಯೆ ಇಕ್ಕೆಲಕೆ ಏರಿ ಹೋಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನಮಾಗಿ ॥೨॥

ಕೇಶರದ ಹೊಲವು ಓಕುಳಿಯನಾಡೆ ಕೆಂಪುಗುಳ್ವ ಎಸಳ ತೂರಿ
ಕಸ್ತೂರಿ ಮೃಗವು ಚಿನ್ನಾಟವಾಡೆ ಮೃಗನಾಭಿ ಮದವ ಬೀರಿ
ಲೆಕ್ಕಕ್ಕೆ ಸಿಗದ ಸರಸಿಜಗರಳೆ ಬರುವಂತೆ ಸೊಬಗೆ ಸಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನಮಾಗಿ ॥೩॥

ಕಾಲಿಡಲು ಕೂಡ ಸ್ಥಳವಿಲ್ಲದಂತೆ ನೆಲವೆಲ್ಲ ಹೂಗಳಾಗಿ
ಕೈಯಿಡಲು ಕೂಡ ಸ್ಥಳವಿಲ್ಲದಂತೆ ಎಲೆಯೆಲ್ಲ ಹಣ್ಗಳಾಗಿ
ಆಕಾಶ ಕೂಡ ಕೈಯಾಸೆ ಮಾಡೆ ಮೇಲಿಂದ ಕೆಳಗೆ ಬಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನಮಾಗಿ ॥೪॥

ಈ ಮಣ್ಣಿನಲ್ಲಿ ಇನ್ನೆನಿತು ಬಣ್ಣದರಳಿಹವು ನೋಡಲೆಂದು
ಇನ್ನೆನಿತು ಹಣ್ಣು, ಕಣ್ ಸೆಳೆವ ಹೆಣ್ಣು ಹುದುಗಿಹವು ನೋಡಲೆಂದು
ಅಪ್ಸರೆಯರಿಳಿದು ಬರುತಿಹರು ನೋಡು ಸುರಿಮಳೆಯ ಹನಿಗಳಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನಮಾಗಿ ॥೫॥

ಹಿಮಗಡ್ಡೆಯೊಡೆಯೆ ಹಿಮಮಣಿಗಳುರುಳೆ ಹರಮುಖದ ಶಿಖರದಿಂದ
ದಾಡಿಮಗಳೊಡೆಯೆ ಮುತ್ತುಗಳು ಸುರಿಯೆ ದಾಡಿಮದ ನಿಕರದಿಂದ

ಮಳೆ ಬಂತು ಬಂತು ಆಗಸದ ನಯನದಾನಂದ ಬಾಷ್ಪವಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನವಾಗಿ ॥೬॥

ನೆರೆ ಬಂತು ತೊರೆಗೆ, ನೊರೆ ಬಂತು ತೆರೆಗೆ, ಹರೆ ಬಂತು ದರಿಯ ಝರಿಗೆ;
ಮದ ಬಂತು ವನಕೆ, ಮುದ ಬಂತು ಜನಕೆ, ನಿಧಿ ಬಂತು ಗದ್ದೆ ಕೆರೆಗೆ,
ಸಂಭ್ರಮದ ಪಯಿರು ಸಂತಸದ ಸುಗ್ಗಿಗೌತಣದ ಓಲೆಯಾಗಿ–
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನವಾಗಿ ॥೭॥

ಜಲಪಾತ ಜಿಗಿಯೆ ಕಲ್ಲುಗಳು ಚಿಗಿಯೆ ಚೆಲುವುಗಳು ಮುಸುಕು ತೆಗೆಯೆ
ಹೆಸರರಿಯದಿರುವ ಪಶುಪಕ್ಷಿವೃಕ್ಷವಲ್ಲರಿಗಳೆದೆಯು ನೆಗೆಯೆ
ಕಾಲ್ಗಳಿಗೆ ತೆರೆಗೆ ಕೊಳಗಳಿಗೆ ತೊರೆಗೆ ಜವ್ವನದ ಜೀಕವಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನವಾಗಿ ॥೮॥

ಇದೋ ಖಿಲಿನಮಾರ್ಗ, ಇದು ಹಿಮದ ದುರ್ಗ, ಇನ್ನಿಹುದೆ ಬೇರೆ ಸ್ವರ್ಗ?
ಅಪವರ್ಗಲಕ್ಷ್ಮಿಗಿದೆ ಪದ್ಮಪೀಠ, ಪರ್ಣಗಳು ವೃಕ್ಷವರ್ಗ.
ಈ ಮೇಘಪುಷ್ಪ ಮುಕ್ತಾಕಲಾಪವಾಗಿಹುದು ಲಕ್ಷ್ಮಿಗಾಗಿ –
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನವಾಗಿ ॥೯॥

ಬನಿಹಾಲ ಶಿಖರ ನಿಂತಿಹುದು ಹರನ ಸಿರಿಜಡೆಯ ಗಂಟಿನಂತೆ
ಸುತ್ತುತ್ತ ಮೇಲಕೇರಿರುವ ದಾರಿ ಸುತ್ತಿರುವ ಸರ್ಪದಂತೆ
ಮಳೆ ನೀರು ಇಳಿಯೆ ಗಿರಿಶಿಖರದಿಂದ ಗಂಗಾವತರಣವಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನವಾಗಿ ॥೧೦॥

ಶಶಿಧರನ ಭಸಿತ ಉದುರುತ್ತಲಿಹುದೊ, ದರಹಸಿತ ರಶ್ಮಿಚಯವೊ,
ಗಿರಿಸುತೆಯ ಚರಣ–ನಖ–ಕಾಂತಿಧಾರೆ, ನಯನಾಂಶು–ವೀಚಿ–ಕುಲವೊ,
ದರಿಗುಹೆಯ ಉರದಿ ಪಡಿನುಡಿವ ಸಿಡಿಲು ಡಮರುಗದ ಶಬ್ದವಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನವಾಗಿ ॥೧೧॥

ಗಜಚರ್ಮಮೇಘ, ಭಸಿತಾಂಗ ಹಿಮವು, ಗಂಗೋತ್ತಮಾಂಗ ಶೃಂಗ;
ಈ ಬೆಟ್ಟ ರುದ್ರ, ಶ್ರೀನಗರ ಗೌರಿ, ರಮಣೀಯ ಉಭಯ ಸಂಗ!
ಮಳೆ ಉದಕ, ಆಲಿ ಸುಮ, ಮಿಂಚು ದೀಪ ಶಿವಶಿವೆಯ ಪೂಜೆಗಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನವಾಗಿ ॥೧೨॥

❑

# ೨. ಪ್ರಬಂಧ
# ಬೆಡಗಿನ ಜೈಪುರ

**– ಡಾ. ಕೆ. ಶಿವರಾಮಕಾರಂತ**

ಇಲ್ಲಿನ ಮುಖ್ಯ ಬೀದಿಗಳು ಸಂಧಿಸುವಲ್ಲಿ, ಸುಂದರವಾದ ಚೌಕಗಳಿವೆ. ಕೆಲವೊಂದು ಕಡೆಗಳಲ್ಲಿ ಭವ್ಯವಾದ ಮಹಾದ್ವಾರಗಳಿವೆ. ಅಲ್ಲದೆ, ಜಯಪುರವು ಬಣ್ಣಗಾರರ ತವರೂರು. ಬಣ್ಣ ಹಾಕುವ ಕುಶಲಿಗರು ಆ ಊರಿನಲ್ಲಿ ಬಹಳ ಇದ್ದಾರೆ. ಬಣ್ಣದಲ್ಲಿ ಮೋಹವಿರುವ ಜನರೂ ಬಹಳ ಇದ್ದಾರೆ. ಗಿಡಮರಗಳಿಲ್ಲದ ಸ್ಥಳದಲ್ಲಿ ವಾಸಿಸುವ ಜನರಿಗೆ, ಕಣ್ಣಿನ ತಣಿವು ಹೇಗೆ ಬರಬೇಕು? ಹಾಗೆಂದೋ ಏನೋ, ಇಲ್ಲಿನ ಜನರು – ಮಾರವಾಡಿ ಹೆಂಗಸರು, ಮುಸಲ್ಮಾನ ಹೆಂಗಸರು, ರಂಗುರಂಗಿನ ಲಂಗ, ಪಾಯಿಜಾಮಾ, ಸೀರೆ, ರವಕೆ, ಮೇಲುದೆ ತೊಡುವ ಅಭ್ಯಾಸದವರು. ಅದರಲ್ಲೂ ಕೆಂಪು, ಕಿತ್ತಳೆ, ಹಳದಿ ಎಂದರೆ ಅವರಿಗೆ ಪ್ರಾಣ. ನಿತ್ಯವೂ ಹೋಳಿಯ ಹುಣ್ಣಿಮೆ ಮಾಡುವವರಂತೆ ಬಣ್ಣದ ಚೆಲ್ಲಾಟ ಅವರ ಬಟ್ಟೆಗಳಲ್ಲಿ. ಗಂಡಸರೂ ರಂಗುರಾಯರೇ. ಅವರ ಪಂಚೆ, ಅಂಗಿಗಳಲ್ಲಿ ರಂಗು ಕಾಣಿಸದಿದ್ದರೂ, ಮುಂಡಾಸಿನ ಮೂವತ್ತು ಮೊಳಗಳಲ್ಲಿ ಮುನ್ನೂರು ಬಣ್ಣಗಳನ್ನು ಮೆರೆಯಿಸುವುದುಂಟು. ಸುತ್ತುಸುತ್ತಿನ ಅವರ ದೇಶೀಯ ಮುಂಡಾಸವನ್ನು ಚೆನ್ನಾಗಿ ಬಿಗಿದುಕೊಂಡಾಗ ಬಲು ಗಂಭೀರವಾಗಿಯೇ ಕಾಣಿಸುತ್ತದೆ. ಜೋಧಪುರದ ಸರುವಾಲು ನಿಲುವಂಗಿ, ರಜಪೂತ ರುಮಾಲೆ – ಮೂರೂ ಸೇರಿದರೆ ಹಿಂದೀ ಗಂಡುಡುಗೆಗಳಲ್ಲೇ ಭವ್ಯವಾದ ಉಡುಗೆಯಾಗುತ್ತದೆಂದು ನನಗೆನಿಸುತ್ತದೆ. ಇಂಥ ಉಡುಗೆಉಡುವ ಜನವೃಂದದ ಎಡೆಯಲ್ಲಿ, ಈಗ ಸಿಂಧೀಯರೂ ಸೇರಿದ್ದಾರೆ. ಸಿಂಧೀ ಹೆಂಗಸರು ಸಹ ವರ್ಣಪ್ರಿಯರೇ. ಬಣ್ಣ ಬಣ್ಣದ ಸೆಟನ್ ಶರಾಯಿ, ಪಾಯಿಜಾಮಾ ತೊಟ್ಟು, ಮೇಲುದೆ ಹಾಕಿ, ಈ ಜನಗಳೊಡನೆ ಅಲೆದಾಡುವಾಗ ಅವರದ್ದೂ ಒಂದು ಶೋಭೆಯೇ. ಇಲ್ಲಿನ ಸ್ತ್ರೀಯರನ್ನು ಕಾಣುವಾಗ ಅವರ ಬೆಳ್ಳಗಿನ ಬಣ್ಣ, ಹೊಳಪಿನ ಕಣ್ಣುಗಳು – ತುಂಬಾ ಆಕರ್ಷಣೀಯವಾಗಿ ಕಾಣಿಸುತ್ತವೆ. ಆದರೆ ಮಾಡುವುದೇನೆ?

ತಮ್ಮ ರೂಪ ಲಾವಣ್ಯವನ್ನು ೨೦. ೨೫ ವರ್ಷದ ಮೇಲೆ ಉಳಿಸಿಕೊಳ್ಳುವ ಮನೋವೃತ್ತಿ ಅಲ್ಲಿಯ ಸ್ತ್ರೀಯರದ್ದಲ್ಲವೆಂದು ಕಾಣುತ್ತದೆ. ಇಂಥ ಬರಗಾಲದ ದಿನಗಳಲ್ಲೂ, ಸಕ್ಕರೆಯ ಅಭಾವದ ದಿನಗಳಲ್ಲೂ, ಎಲ್ಲಿಲ್ಲದ ಸಕ್ಕರೆ ತುಪ್ಪದ ತಿಂಡಿಗಳನ್ನು ತಿಂದು, ಹಿಪೊಪೊಟೇಮಸ್ ಆಕೃತಿ ತಾಳುತ್ತಾರಲ್ಲ! ಹಾಗಿರಲು ಅವರ ರೂಪ ಕಂಡು ಮೋಹಿಸಿ ಮದುವೆಯಾಗುವವರ ಪಾಡೇನೋ – ಪರಮಾತ್ಮನೇ ಬಲ್ಲ. ರಜಪುತನಾದ ಕೀರ್ತಿಯನ್ನೆಲ್ಲ 'ಟಾಡ್ಸ್ ಎನಲ್ಸ್'ನಲ್ಲಿ ಬಹಳವಾಗಿ ಹೇಳಿದೆ. ಅವರ ಸ್ತ್ರೀಯರು ಪಾತಿವ್ರತ್ಯಕ್ಕಾಗಿ ಚಿತೆ ಏರಿದ ಕತೆ. ಗಂಡಸರು ಕಾಮಿನಿಯರಿಗಾಗಿ ಕಾದಾಡಿದ ಕತೆ, ಅರಸರು ದಾಯಾದಿ ಮತ್ಸರದಿಂದ ನಿತ್ಯ ಕಚ್ಚಾಡಿದ ಕತೆ – ಎಲ್ಲವೂ ವೀರ ವಿಕ್ರಮದ ಕತೆಗಳೇ. ಅವರ ಅತಿ ಶೌರ್ಯವನ್ನು ನೆನೆಯುವಾಗ, ಅದೇನೆ ಘೋರಿ ಮಹಮ್ಮದನನ್ನು ನಮ್ಮ ನಾಡಿಗೆ ಕರತಂದದುದು ಎಂಬುದನ್ನು ಮಾತ್ರ ನೆನೆದುಕೊಂಡಲ್ಲಿ ದುಃಖ ಬರುತ್ತದೆ.

ಈ ರಜಪುತಾನದ ಮರುಭೂಮಿಯಲ್ಲಿ – ಎಷ್ಟೊಂದು ಅರಸು ಕುಲಗಳಿವೆ – ರಾಜರುಗಳೆಷ್ಟು! ರಾಣಾರುಗಳೆಷ್ಟು! ಠಾಕೂರರೆಷ್ಟು! ಇವರನ್ನೆಲ್ಲ ಮೂಲೆಗುಂಪಾಗಿಸಿ, ನಾಡನ್ನು ಒಂದುಗೂಡಿಸಿದ ವಲ್ಲಭಭಾಯಿ ಪಟೇಲರ ಶೌರ್ಯವನ್ನು ಭಾರತ ದೇಶವು ಮರೆಯುವಂತೆಯೇ ಇಲ್ಲ. ಅಂಬೇರಕ್ಕೆ ಹೊರಟ ನಾನು 'ಆರ್ಯ ಕೀರ್ತಿ' ಪಾಠ ಹೇಳುತ್ತ ಕುಳಿತೆನಲ್ಲವೇ?

ನಾವು ನಗರವನ್ನು ಕಳೆದು, ಸುಂದರವಾದ ರಸ್ತೆಗಳಲ್ಲಿ ಹಾದು, ಉನ್ನತವಾದ ಬೆಟ್ಟಗಳಿಗೆ ಅಭಿಮುಖವಾಗಿ ಹೊರಟೆವು. ಇನ್ನೊಂದು ನಾಲ್ಕು ಮೈಲಿಗೆ ಅಂಬೇರದ ಬೆಟ್ಟವು ಸಿಗುತ್ತದೆ. ಅಂಬೇರವು ಜಯಪುರದ ಪೂರ್ವಕಾಲದ ರಾಜಧಾನಿ. ಹಳೆಯ ಕೋಟೆ, ಅರಮನೆಗಳೆಲ್ಲ ಅಲ್ಲಿವೆ. ಜಯಪುರಕ್ಕಿಂತಲೂ ಹಿರಿಯ ಆಕರ್ಷಣೆ ಅದು. ಸಂಜೆ, ಮುಂಜಾನೆಗಳಲ್ಲಿ ಅಲ್ಲಿಯ ಗುಡ್ಡ, ಬೆಟ್ಟ, ಕಣಿವೆಗಳು ಅಪೂರ್ವವಾದ ಮೋಹಕತೆಯನ್ನು ತಾಳುತ್ತವೆ. ಹಿಂದೆ ನಾನು ಅಲ್ಲಿಗೆ ಹೋದಾಗ, ಅಲ್ಲಿ ಜನವಸತಿ ಇದ್ದಿರಲಿಲ್ಲ. ಹಲವಾರು ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು. ಈಗ ಹಾಗಿಲ್ಲ; ನೂರಾರು ಸಿಂಧೀ ಕುಟುಂಬಗಳು ಅಲ್ಲಿ ಮನೆ ಮಾಡಿಕೊಂಡಿವೆ. ಅಂಬೇರದ ಬುಡದಲ್ಲಿ – ಒಂದು ಪುಟ್ಟ

ಸರೋವರವಿದೆ. 'ಸರೋವರ' ದೊಡ್ಡ ಹೆಸರು; ಕೆರೆ. ಕೆರೆಯ ನೋಟವು ಸುಂದರವಾದ ನೋಟ. ಸುತ್ತಲಿನ ಮರಗಳಲ್ಲಿ ಆಗಷ್ಟೆ ಎಳೆ ಹಸರು ತಳಿರುಗಳು ಚಿಗುರಿದ್ದು, ಮರಗಳು ಹಚ್ಚಗೆ ಕಾಣಿಸುತ್ತಿದ್ದವು. ಕೆರೆಯ ಮಗ್ಗುಲಿನಿಂದ ಮುಂದುವರಿದರೆ, ಒಂದು ಸುಂದರ ಉದ್ಯಾನ ಕಾಣಸಿಗುತ್ತದೆ. ಅಲ್ಲಿ ಆಳವಿಲ್ಲದ ಒಂದು ಕೊಳವನ್ನು, ಚಿತ್ರವಿಚಿತ್ರವಾಗಿ ವಿಭಾಗಿಸಿ, ನೀರು ತುಂಬಿದಾಗ ಲಲಿತವಾಗಿ ಕಾಣಿಸುವಂತೆ ಮಾಡಿದ್ದಾರೆ. ಉದ್ಯಾನದ ಬಳಿಯಲ್ಲೇ ಕೆಂಪು ಕಲ್ಲಿನ ಹಳೆಯ ಕಾಲದ, ಕೆಲವೊಂದು ಸುಂದರ ಪ್ರತಿಮೆಗಳಿವೆ. ಪ್ರಾಚೀನ ರಜಪೂತ ಕೆತ್ತನೆಯ ಸರಳತೆ, ವೈಖರಿ, ಭವ್ಯತೆಗಳೆಲ್ಲ ಕಾಣಿಸುತ್ತವೆ. ಉದ್ಯಾನವನ್ನು ಹಾಯ್ದು ದೊಡ್ಡಿಯ ಬಾಗಿಲೊಂದನ್ನು ದಾಟಿ, ಕೋಟೆಯ ದಾರಿಯನ್ನು ಏರಿ ಹೋಗಬೇಕು. ಏರುತ್ತ ಹೋದಂತೆ, ಕೆಳಗಿನ ನೋಟ ರಮಣೀಯವಾಗುತ್ತ ಹೋಗುವುದು. ನಾವು ಅವಸರವಾಗಿ ಕೋಟೆಯನ್ನು ಸೇರಿದೆವು. ಕೋಟೆಯ ಒಳಗೆ ಅರಮನೆ, ಅರಮನೆಗೆ ಸಂಬಂಧಿಸಿದ ಸಭಾಂಗಣಗಳನ್ನು, ದೇವಾಲಯ ಮೊದಲಾದವುಗಳನ್ನು ಅಲ್ಲಿ ಎರಡು ಮೂರು ಅಂತಸ್ತುಗಳಲ್ಲಿ ರಚಿಸಿದ್ದಾರೆ. ಮೊದಲನೆಯ ಅಂತಸ್ತಿನಲ್ಲಿ ದೇವಾಲಯವಿದೆ. ಈ ಪುಟ್ಟ ಮಂದಿರವು ಚಿತ್ರ ಕೆಲಸಗಳಿಂದ ಕೂಡಿದ ಹಾಲುಗಲ್ಲಿನ ರಚನೆ. ಗೋಡೆಗಳೆಲ್ಲವೂ ಹಾಲುಗಲ್ಲಿನವೇ; ನೆಲವೂ ಅದರದ್ದೇ, ಸ್ತಂಭಗಳೂ ಅವುಗಳದ್ದೇ. ಗುಡಿ ಚಿಕ್ಕದಾದರೂ ಶಾಂತವಾಗಿ ಕಾಣಿಸುವ ಮಂದಿರವಾಗಿದೆ. ಗುಡಿಯ ವಿಗ್ರಹ ಮಾತ್ರ ಆಕಾರದಿಂದಲೂ, ಅಲಂಕಾರಗಳಿಂದಲೂ ಅಷ್ಟೊಂದು ಶೋಭಿಸದ್ದು. ಅಲ್ಲಿಯ ಪೂಜಾರಿಯೂ ಹಾಗೇನೆ, ದಕ್ಷಿಣ ಹಿಂದುಸ್ಥಾನದ ಪೂಜಾರಿಗಳಂತೆ ಬಿಳಿ ಪಂಚೆಯುಟ್ಟು ಶುಭ್ರ ವಸನಧಾರಿಯಾಗಿ ಕಾಣುವ ಬದಲು, ಕಾವಿ ಬಟ್ಟೆ, ಕೆಂಪು ಟೋಪಿ, ಅಂಗಿಗಳನ್ನು ಹಾಕಿಕೊಂಡು ದೊಂಬಿದಾಸನಂತೆ ಕಾಣಿಸುತ್ತಿದ್ದ.

ಇಲ್ಲಿಯ ಗುಡಿಯನ್ನು ನೋಡಿ, ಮೇಲಿನ ಅಂಗಳವನ್ನೇರಿ ಹೋದರೆ ದೊಡ್ಡದೊಂದು ಸಭಾಂಗಣ ಬರುತ್ತದೆ. ಇದು ವಿಶಾಲವಾದ ಹಾಲುಗಲ್ಲಿನ ರಚನೆ. ಅದರ ಚಾವಣಿ, ರಜಪುತಾನದ ಶೈಲಿಯ ಕಮಾನುಗಳು, ಕಂಬಗಳು, ತುಂಬ ಲಲಿತವಾಗಿದ್ದು, ಪರಸ್ಪರ ಹೊಂದಿಕೊಂಡು, ಈ ರಚನೆಗೆ ಚೆಲುವನ್ನು ಕೊಡುತ್ತವೆ. ಎದುರಿನ ಅಂಗಣವೂ ಸಾಕಷ್ಟು ವಿಶಾಲವಾಗಿದೆ. ಇಲ್ಲಿಂದ ಮೂರನೆಯ ಅಂತಸ್ತಿಗೆ ಹೋದರೆ ರಾಜರುಗಳ

ಅಂತಃಪುರ ಸಿಗುತ್ತದೆ. ಅಲ್ಲಿನ ಕೆಲವು ಭಾಗಗಳಲ್ಲಿ ಚಂದ್ರಕಾಂತ ಶಿಲೆಯ ಸುಂದರ ಮಂಟಪಗಳಿವೆ. ಶಿಲೆಯನ್ನು ಕೆತ್ತಿ, ಬಣ್ಣದ ಕಲ್ಲುಗಳಿಂದ ಕೊರೆದು ತುಂಬಿಸಿದ ಲತಾಪುಷ್ಪಗಳ ಚಿತ್ರಾವಳಿಗಳೂ ಇವೆ. ಇನ್ನೊಂದೆರೆಡು ಚಾವಡಿಗಳು – ಕನ್ನಡಿಯ ಚೂರುಗಳನ್ನು ಸುಣ್ಣದ ಗಾರೆಯಲ್ಲಿ ಅಂಟಿಸಿ, ಚಿತ್ರವಿಚಿತ್ರ ಪ್ರತಿರೂಪಗಳನ್ನು ನಿರ್ಮಿಸಿ ಅಲಂಕರಿಸಿದಂಥ ಕಂಬ, ಮುಚ್ಚಿಗೆಗಳುಳ್ಳ ರಚನೆ. ಕತ್ತಲಿನಲ್ಲಿ ದೀವಿಗೆ ಹೊತ್ತಿಸಿದಾಗ, ಲಕ್ಷೋಪಲಕ್ಷ ಈ ಗಾಜಿನ ತುಣುಕುಗಳು, ಈ ಚಾವಡಿಗೆ ನಕ್ಷತ್ರಲೋಕದ ಸೊಬಗನ್ನು ಕೊಡುತ್ತವೆ. ಮೊಗಲ ಅರಮನೆಗಳಲ್ಲೂ ಇಂಥವೇ ಕೃತಿಗಳನ್ನು ನಾವು ಕಾಣಬಹುದು. ಈ ಚಾವಡಿಗಳಿಂದ ಹೊರಗಿನ ನೋಟವನ್ನು ನೋಡಲು ಸುಂದರವಾದ ಕಿಟಕಿ ಬಾಗಿಲುಗಳಿವೆ.

ಅರಮನೆಯ ಮೊದಲನೆಯ ಮಟ್ಟದಲ್ಲಿ ಇನ್ನೊಂದು ಅಂತಃಪುರವಿದೆ. ಅಲ್ಲೂ ಹಾಲುಗಲ್ಲಿನ ಚಾವಡಿಗಳಿವೆ. ನೀರಿನ ಕಾರಂಜಿಗಳಿವೆ. ಚಿತ್ರ ಕೊರೆದು ಮಾಡಿದ ಹಾಲುಗಲ್ಲಿನ ನೀರ ಕಾಲುವೆಗಳಿವೆ. ಇವೆಲ್ಲ ರಜಪೂತ ಅರಸುಗಳ ರಸಿಕ ಜೀವನವನ್ನು ಸೂಚಿಸುತ್ತವೆ. ಇವುಗಳನ್ನೆಲ್ಲ ನಾನು ಹಿಂದೆ ನೋಡಿದವನೇ. ಆದರೆ ಆವರಣದ ಹಿಂದುಗಡೆ ಇರುವ ತಗ್ಗಿದ ಕಣಿವೆಗೆ, ಇಳಿದಾಗ ಅಲ್ಲಿ ಮೀರಾಬಾಯಿಯ ದೇವಾಲಯವಿದೆ ಎಂಬ ಸಂಗತಿ ನನಗೆ ಆತನಕ ಗೊತ್ತೇ ಇರಲಿಲ್ಲ.

ತುಂಬ ಇಕ್ಕಟ್ಟಿನ ಬೆಟ್ಟದ ಸಂದಿನ ಕಣಿವೆಯದು. ಇಳುಕಲು ಹೆಚ್ಚು. ಈಗಂತೂ ಗಿಡಮರಗಳು ಬೆಳೆದು ಕಾಡಿನಂತಾಗಿದೆ. ಆದರೆ ಹಿಂದೊಂದು ಕಾಲದಲ್ಲಿ ಈ ಬೆಟ್ಟದ ಅಂಚಿನಲ್ಲೆಲ್ಲ ನೂರಾರು ಮನೆಮಾರುಗಳು ತುಂಬಿಕೊಂಡಿದ್ದವು. ಇಂದು ಆ ಸೌಧಗಳೆಲ್ಲ ಪುಡಿಪುಡಿಯಾಗಿ, ಸುತ್ತಲಿನ ನೆಲದೊಡನೆ ಬೆರೆತು, ಹುಟ್ಟಡಗಿ ಹೋಗಿವೆ – ಈ ಕಣಿವೆಯ ತಳದಲ್ಲೇ ಕಾಣಿಸುತ್ತದೆ – ಮೀರಾಬಾಯಿಯ ದೇವಾಲಯ. ಆಕೆ ಗಿರಿಧರ ನಾಗರನನ್ನು ಪೂಜಿಸಿದ ಸ್ಥಳ. ಇದು 'ಖಜುರಾಹೋ' ಗುಡಿಗಳ ಸ್ಮೃತಿಯನ್ನು ತಂದುಕೊಡುತ್ತದೆ. ರಜಪೂತ ದೇವಾಲಯಗಳ ಶೈಲಿಗಿಂತ ಇದು ಭಿನ್ನವಾದುದು. ಕೆಳಗಿಳಿದು ಹೋಗಿ, ಗುಡಿಯನ್ನು ನೋಡಿದರೆ, ಅದರ ಸೊಬಗು ನಮಗೆ ಚೆನ್ನಾಗಿ ಕಾಣುತ್ತದೆ. ನಕ್ಷತ್ರಾಕೃತಿಯ ನೆಲೆಗಟ್ಟಿನ

ಮೇಲೆ ಈ ಮಂದಿರ ನಿಂತಿದೆ. ನಕ್ಷತ್ರಾಕೃತಿಯನ್ನು ತುಂಬಿಕೊಂಡು ಗರ್ಭಗೃಹ, ನವರಂಗಗಳಿವೆ. ಅದರ ಎದುರಿಗೆ ತಾಗಿಕೊಂಡು ಪುಟ್ಟ ಮುಖಮಂಟಪವೊಂದಿದೆ. ಇವುಗಳೇ ಏರಿ, ಬೆಳೆದು, ಶಿಖರ ಶಿಖರಗಳಾಗಿ ದೇವಾಲಯದ ಉನ್ನತ ಶಿಖರವಾಗುತ್ತದೆ. ಗಿರಿಶೈಲಗಳ ಎಡೆಯಲ್ಲಿ, ಇದೂ ಒಂದು ಗಿರಿಯ ಮರಿ, ಎಂಬ ಹೊಂದಿಕೆ ಗುಡಿಗೂ ಅದರ ಆವರಣಕ್ಕೂ ಕಾಣಿಸುತ್ತದೆ. ಗುಡಿಯ ಆವರಣವನ್ನು ನೋಡಿ, ಅಲ್ಲಿ ಸ್ವಚ್ಛಂದವಾಗಿ ಅಲೆದಾಡುವ ನವಿಲುಗಳನ್ನು ಕಂಡು ಹಿಗ್ಗಿ, ನಮ್ಮ ಟಾಂಗಾ ನಿಲ್ಲಿಸಿದಲ್ಲಿಗೆ ಮರಳಿ ಬಂದೆವು. ನಮ್ಮ ಜೀವ ತುಂಬ ದಣಿದಿತ್ತು. ನಮ್ಮೆಲ್ಲರಿಗೂ ಬಾಯಾರಿಕೆ ಏರಿ ಹೋಗಿತ್ತು. ನಾವು ಬಂದವರೇ, ಹಾದಿಯ ಮಗ್ಗುಲಿನ ಒಂದು ಅಂಗಡಿಯ ಮುಂದೆ ಕುಳಿತು, ಬಣ್ಣ ಬಣ್ಣದ ಸೋಡಾ, ಲೆಮನೇಡ್ ಕುಡಿದೆವು. ಉಡಿಗೆಯಲ್ಲಿ ಅಷ್ಟೆಲ್ಲ ಬಣ್ಣಗಳನ್ನು ತುಂಬಿಸಿ ತಿರುಗುವ ಅಲ್ಲಿನ ಜನ, ಮಾರುವ ಸೋಡಾ, ಲೆಮನ್‌ಗಳಿಗೂ ಕಡುಪಿನ ರಂಗನ್ನು ಕೊಟ್ಟಿದ್ದಾರೆ. ಕಂಡರೆ ಇದು ಶಾಯಿಯೋ, ಪಾನೀಯವೋ – ಎಂಬ ಭ್ರಮೆ ಬರಬೇಕು. ನಮ್ಮ ಪಾಲಿಗೆ ದೊರೆತ, ಕುಡಿಯಬಹುದಾದ ಪಾನೀಯವು ಅದೊಂದೇನೆ. ಅದನ್ನೂ ಕೊಟ್ಟುದು ಯಾವುದರಲ್ಲಿ? ಗೆಲನ್ ಟಾಂಕಿಗಳಂತೆ ಕಾಣಿಸುವಂಥ ಗಾಜಿನ ಥಾಲಿಗಳಲ್ಲಿ! ನಮ್ಮ ಶ್ರೀಪತಿ ಅಳತೆಯಲ್ಲೇ ಈ ಗಾಜನ್ನು ನಿರ್ಮಿಸಿದ್ದಾರಲ್ಲಾ ಎಂದು ಅನಿಸಿತು ನಮಗೆ.

ಸರಿ – ಮನೆಗೆ ಹೊರಟೆವು – ಆ ಸಂಜೆಯ ವೇಳೆಯಲ್ಲಿ ಊರ ಮಹಿಳೆಯರು, ಬೆಟ್ಟವನ್ನೇರಿ ಹವೆ ನುಂಗುತ್ತಿದ್ದರು. ಸಿಂಧೀ ಹುಡುಗ ಹುಡುಗಿಯರು ಬೀದಿಗಳಲ್ಲೆಲ್ಲ ದಾಂಧಲೆ ಎಬ್ಬಿಸುತ್ತಿದ್ದರು. ನಮ್ಮ ಕೆಮಾರವನ್ನು ನೋಡಿ "ಫೋಟೋ ನಿಕಾಲೋ?" ಎಂದರು. ನಮ್ಮ ಕೆಮಾರದಲ್ಲಿ ಅವರ ಚಿತ್ರ ತೆಗೆದಿಲ್ಲವಾದರೂ, ಅವರ ಮುದ್ದಾದ ತುಂಟ ಮುಖಗಳ ನೆನಪು ನನ್ನ ಮನದಲ್ಲಿ ಮೂಡಿ ನಿಂತಿದೆ.

ಆಗ ಗೋಧೂಳಿಯ ಸಮಯ. ಟಾಂಗಾ ಕುದುರೆಯು ಮೆಲ್ಲಗೆ ನಮ್ಮ ಮಾನವೀ ಹೊರೆಯನ್ನು ಎಳೆದುಕೊಂಡು ಸಾಗುತ್ತಲಿತ್ತು. ಆಗ ನಮ್ಮ ದೃಷ್ಟಿ ಸೆಳೆದದ್ದು – ಉನ್ನತವಾದೊಂದು ತಾಳೆಯ ಮರ. ಅದಕ್ಕೆ ನೂರು

ವರ್ಷವಾದರೂ ಪ್ರಾಯ ಸಂದಿರಬೇಕು. ಬರಿಯ ಈಚಲು, ಖರ್ಜೂರದ ಮರಗಳಿರುವ ಈ ದೇಶದಲ್ಲಿ, ನಮ್ಮೂರ ತಾಳೆಯ ಮರ (ಹನೆ)ವನ್ನು ಯಾರು ತಂದು ನೆಟ್ಟರೋ ನನಗಂತೂ ತಿಳಿಯದು. ಇಲ್ಲಿಂದ ಮುಂದೆ ತುಂಬ ಹೊಲಗಳು ಕಾಣಸಿಗುತ್ತವೆ. ಹೊಲಗಳಲ್ಲಿ ಕೋಳಿ, ಕಾಗೆಗಳಿಗಿಂತ, ಅಗ್ಗವಾಗಿ ಕಾಣಿಸುವ ನವಿಲಿನ ಹಿಂಡು, ನಿಜ; ನವಿಲುಗಳ ರಾಜ್ಯದಲ್ಲಿ ಬಣ್ಣದ ಕಣ್ಣು ಹುಟ್ಟಲು ರಜಪುತಾನದ ಸ್ತ್ರೀಯರಿಗೆ ಬೇರೆ ಪ್ರೇರಣೆ ಬೇಕಿಲ್ಲ. ನವಿಲಿನ ಬಣ್ಣ ಕಲಿತರು; ಆದರೆ ಇಲ್ಲಿನ ಜನಕ್ಕೆ ನವಿಲಿನ ಬಳುಕಾಟ ಬರದಲ್ಲ – ಎಂಬುದೇ ನನಗೆ ವ್ಯಥೆ. ಹಿಂದೊಮ್ಮೆ ಆ ದಾರಿಯಾಗಿ ನಾನು ಬರುತ್ತಿದ್ದಾಗ, ಹಳ್ಳಿಯ ಹೆಂಗಸರು ಹಾದಿಯುದ್ದಕ್ಕೂ ಹಾಡಿಕೊಂಡು ಹೋಗುತ್ತಿರುವುದನ್ನು ಕೇಳಿದ್ದೆ. ಈ ಬಾರಿ ಆ ನೋಟ ದೊರೆಯಲಿಲ್ಲ. ನಾವು ತಿರುಗಿ ಪೇಟೆಯನ್ನು ಹಾದು, ನಮ್ಮ ಮಿತ್ರರ ಮನೆಯನ್ನು ಸೇರಿದೆವು.

ಮರುದಿನ ಬೆಳಿಗ್ಗೆ ಇನ್ನೊಮ್ಮೆ ನಗರವನ್ನು ನೋಡಹೋದೆವು. ಮುಖ್ಯ ಚೌಕಿಗೆ ಬಂದು, ಊರ ಜನರ ಬೆಡಗನ್ನು ಕಾಣಲು ನಿಂತೆವು. ಬೀದಿಗಳಲ್ಲೆಲ್ಲ ಟಾಂಗಾಗಳೂ, ಕುದುರೆಗಳೂ, ಒಂಟೆಗಳೂ ಸಮಾನ ಹಕ್ಕಿನಿಂದ ಅಲೆದಾಡುವ ನೋಟ ಪ್ರೇಕ್ಷಣೀಯವಾಗಿತ್ತು. ಬೀದಿಯ ಒಂದು ಕಡೆಯಲ್ಲಿ 'ಹವಾಮಹಲ್' ಇದೆ. ಹವಾ ಮಹಲು ಜಯಪುರ ಅರಮನೆಯ ಒಂದು ಭಾಗದ ಹೆಸರು. ದೇಶೀಯ ವಾಸ್ತುಶೈಲಿಯ ವೈಖರಿ ಎದ್ದು ಕಾಣುವ ನೋಟ ಅದು. ಅರಮನೆಯ ಒಳಗಡೆ ನಾವು ಹೋಗಲಿಲ್ಲ. ಹಿಂದೆ ಬಂದಾಗ P.E.N. ಸದಸ್ಯರಿಗೆ ಜಯಪುರ ಮಹಾರಾಜರು ತಮ್ಮ ಉದ್ಯಾನದಲ್ಲಿ ಒಂದು ಔತಣ ಕೊಟ್ಟಿದ್ದರು; ಈಗಲೂ ಒಂದು ಔತಣ ದೊರಕುವ ಹಾಗೆ ಮಾಡಬಹುದಿತ್ತೊ ಏನೋ. ಅಂಥ ಪ್ರಸಂಗವಿಲ್ಲದುದರಿಂದ, ಅಲ್ಲಿಗೆ ಸಮೀಪವಾಗಿರುವ 'ಜಂತ್ರ ಮಂತ್ರ' ನೋಡಲು ಹೋದೆವು.

'ಜಂತ್ರ ಮಂತ್ರ' ಎಂಬುದು ಹಳೆಯ ಕಾಲದ ಖಗೋಲ ವಿಜ್ಞಾನದ ಪರಿಶೀಲನಾಲಯವಾಗಿದೆ. ಡಿಲ್ಲಿಯಲ್ಲಿಯೂ ಇಂಥ ಒಂದು ಜಂತ್ರಮಂತ್ರವಿದೆ. ಅದನ್ನು ನೋಡಿದ್ದ ನನಗೆ, ಇದನ್ನು ನೋಡಲು ಅಷ್ಟೊಂದು ಉತ್ಸಾಹವಿರಲಿಲ್ಲ. ಆದರೆ ಇಲ್ಲಿನ ಆವರಣವನ್ನು ಹೊಕ್ಕು ನೋಡಿದ ಮೇಲೆ, ಅದಕ್ಕಿಂತ ಇದು ಹಿರಿಯದೆನಿಸಿತು. ೪೦೦–೫೦೦

ವರ್ಷಗಳ ಪೂರ್ವದಲ್ಲಿ ನಮ್ಮ ಖಗೋಳಜ್ಞರು ಗ್ರಹ, ಸೂರ್ಯಚಂದ್ರ, ತಾರಾಮಂಡಲಗಳನ್ನು ಅಳೆದು, ಪರಿಶೀಲಿಸಿ ನೋಡುವ, ಇಲ್ಲಿ ವಿಚಿತ್ರವಾದ ಸಾಧನಗಳನ್ನು ನಟ್ಟಿದ್ದಾರೆ. ಇಂಥ ಹತ್ತೆಂಟು ವಿವಿಧ ಸಾಧನಗಳ ವಿಚಿತ್ರ ರಚನೆಗಳಿವೆ. ಗಳಿಗೆ ಅಳೆಯುವುದಕ್ಕೆ ಪ್ರತಿಯೊಂದು ತಿಂಗಳಿನಲ್ಲೂ ಸೂರ್ಯ, ನಕ್ಷತ್ರಗಳ ಗತಿ ಪರಿಶೀಲಿಸುವುದಕ್ಕೆ ಏನೇನೋ ಏರ್ಪಾಟುಗಳಿವೆ. ನನಗೆ ಖಗೋಲ ಜ್ಞಾನ ಸಲ್ಲದು. ಆದರೆ ಕಲಾದೃಷ್ಟಿಯಿಂದ ನೋಡುವಾಗ, ಈ ಎಲ್ಲಾ ರಚನೆಗಳು 'Futuristic Style'ನ ವಾಸ್ತು ರಚನೆಗಳಂತೆ ಕಾಣಿಸುತ್ತಿದ್ದವು. ಅನೇಕ ಬಗೆಯ ವರ್ತುಲ ರೇಖೆಗಳು, ಲಂಬರೇಖೆಗಳು, ಕರ್ಣರೇಖೆಗಳು ಒಂದಕ್ಕೊಂದು ಹೋಮದಿ, ಮೇಳವಿಸಿ, ಬಗೆಬಗೆಯಲ್ಲಿ ನೆಳಲು ಬೆಳಕುಗಳನ್ನು ಕಡೆಯುವಂತೆ, ಬಾನೆದುರಿಗೆ ವಿಚಿತ್ರಶೋಭೆಯನ್ನು ತೋರುವಂತೆ, ರಚಿತವಾಗಿದೆ. ಪ್ರತಿಯೊಂದು ಸಾಧನದ ಮೇಲೂ – ಅವುಗಳ ಉಪಯೋಗ, ಕಾಲವನ್ನು ಅಳೆಯುವ ರೀತಿ ಮೋದಲಾದವುಗಳನ್ನು ಬರೆದಿದೆ. ದೂರದರ್ಶಿಯ ಸಹಾಯವಿಲ್ಲದೆ, ಬರಿಗಣ್ಣಿನಿಂದಲೇ ಖಗೋಳದ ಗ್ರಹಗಳ ಗತಿಯನ್ನು ಅಳೆಯಲು ಮಾಡಿದ ಈ ಸಾಧನಗಳು – ಗಣಿತಕ್ಕೂ ಸೂಕ್ಷ್ಮ ಪರಿಶೀಲನೆಗೂ ನಮ್ಮ ಹಿರಿಯರು ಸಲ್ಲಿಸಿದಂಥ ಕಾಣಿಕೆ. ಬರಿಯ ಕುತೂಹಲಕ್ಕಾಗಿ ನೋಡಿದರೂ ತಾಸೆರೆಡು ತಾಸುಗಳನ್ನು ಈ ಸ್ಥಳದಲ್ಲಿ ಕ್ಷಣದಂತೆ ಕಳೆಯಬಹುದು. ಇದನ್ನು ಕಂಡು ನನಗೆ ಸೂರ್ಯಚಂದ್ರರನ್ನು ಗೌರವಿಸುವ ಮನಸ್ಸು ಬಂದಿತು. ನಾವೆಷ್ಟು ಗೌರವಿಸಿದರೇನು? ಸೂರ್ಯ, ನಡುಬಾನಲ್ಲಿ ನಿಂತು ನಮ್ಮ ತಲೆಯನ್ನೇ ಕೊರೆಯುತ್ತಿದ್ದನಾದುದರಿಂದ, ಇತರ ಸ್ಥಳಗಳನ್ನು ನೋಡುವ ಆಸೆ ಮರೆತು, ಮನೆಗೇ ಓಡಿ ಬಂದೆವು. ಆ ದಿನವಂತೂ ನನ್ನ ಅಂತರಾಷ್ಟ್ರೀಯ ಪರಿಸ್ಥಿತಿಯೇ ಕೆಟ್ಟುಹೋಗಿತ್ತು. ಅಂದರೆ, ಹಿಂದಣ ಊರುಗಳಲ್ಲಿ ತಿಂದ ತಿನಿಸಿನ ಫಲವಾಗಿ ಹೊಟ್ಟೆ ಕಡಿಯುತ್ತಲೇ ಇತ್ತು. ಮನೆಗೆ ಬಂದು ಮಲಗಿಕೊಂಡರೆ ಸಾಕೆನಿಸಿತ್ತು.

ಆ ದಿನ ಮಧ್ಯಾಹ್ನ ಬಿಸಿಲು ಇಳಿದ ಮೇಲೆ, ಇನ್ನೊಮ್ಮೆ ಸಂಚಾರಕ್ಕೆ ಹೊರಡುವ ಆಸೆ ನಮ್ಮದು. ಜಯಪುರದಲ್ಲಿನ ಜಾನಪದ ನೃತ್ಯಗಳನ್ನು ನೋಡಬೇಕೆಂಬ ಹಂಬಲ ನನ್ನದಿತ್ತು. ಹಾಗಾಗಿ ಮುಂಚಿತವಾಗಿಯೇ ನನ್ನ ಮಿತ್ರರಿಗೆ ಆ ಆಪೇಕ್ಷೆ ತಿಳಿಸಿದ್ದೆ. ಅವರು ತಮ್ಮ ಗೆಳೆಯರಿಗೆ ತಿಳಿಸಿ ಆ ಏರ್ಪಾಟು

ಮಾಡಿಸಿದ್ದರು. ಸಂಜೆಯಾಗುತ್ತಲೇ ಅಲ್ಲಿನ ಚೀಫ್ ಎಂಜಿನಿಯರ್ ಗೋಪಿನಾಥರಾಯರ ಮನೆಗೆ ಹೋದೆವು. ಅವರು ಮೈಸೂರಿನವರು. ಸದ್ಯ ಜಯಪುರದಲ್ಲೇ ಉದ್ಯೋಗ ಮಾಡಿಕೊಂಡು ಸ್ವಂತ ಮನೆ ಕಟ್ಟಿಸಿ ವಾಸವಾಗಿದ್ದಾರೆ. ಅವರ ಸುಂದರವಾದ ಬಂಗಲೆಯ ಎದುರಿಗೆ, ಹಚ್ಚ ಹಸುರಿನ ಬಯಲಿನ ಒಂದು ತುಣುಕು ಜಾಗವಿದೆ. ಅಲ್ಲೇ ನೃತ್ಯ ಕಾರ್ಯಕ್ರಮ, ಊರಿನ ಜನಸಾಮಾನ್ಯರ ನೃತ್ಯವದು. ಇಬ್ಬರು ಯೌವನಸ್ಥರು ಮಾರವಾಡಿ ಸ್ತ್ರೀಯರ ಉಡುಗೆ ಉಟ್ಟಿದ್ದರು. ಮುಖವೇನೋ ಸುಲಕ್ಷಣವಾಗಿರಲಿಲ್ಲ. ಅದು ತಿಳಿದೋ ಏನೋ, ಮಾರವಾಡಿ ಹೆಂಗಸರಂತೆ ತಲೆಗೆ ಸೆರಗು ಹಾಕಿಕೊಂಡು, ಮುಖ ತೋರಿಸದೆ ಕುಣಿಯತೊಡಗಿದರು. ಹಿಮ್ಮೇಳಕ್ಕೆ ಡೋಲು ತಮಟೆಗಳಿದ್ದವು. ಮುಂಭಾಗದಲ್ಲಿ ಸ್ತ್ರೀವೇಷದ ನರ್ತಕರು ಲಾಸ್ಯವೆಸಗಿದರು. ಅವರ ಕಾಲಿನ ನಡಿಗೆಯಲ್ಲೂ, ಕೈಗಳ ಚಲನೆಯಲ್ಲೂ ಜಾಣ್ಮೆ, ಚೆಲುವುಗಳೆರಡೂ ಇದ್ದವು. ಈ ಮೋಹಿನಿಯರನ್ನು ವರಿಸಲು ಇಬ್ಬರು, ಬೈರಾಗಿ ವೇಷದ ಜನಗಳು ಸಿದ್ಧರಾದರು. ಹೀಗಾಗಿ ಒಂದು ತಾಸಿನ ತನಕ ಭಯಂಕರ ಶೃಂಗಾರ ನಾಟ್ಯ ಸಾಗಿತು. ಅವರ ಜೊತೆಗೆ ಮೂರು, ನಾಲ್ಕು ಹುಡುಗರು ನಿತ್ಯದ ಉಡುಗೆಯಲ್ಲಿ ಕುಣಿದಾಡಿದರು. ಆ ನೋಟವನ್ನು ನೋಡುವುದಕ್ಕೆ ಪುರವಣಿಗರೂ ಬಂದು ಕಲೆತರು. ನಮಗಾಗಿ ತಮ್ಮ ಕಂಟ್ರಾಕ್ಟರ್‌ರೊಬ್ಬರನ್ನು ಹಿಡಿದು, ಒಂದೇ ದಿನದ ಏರ್ಪಾಟಿನಿಂದ ಈ ಕಾರ್ಯಕ್ರಮವನ್ನು ಏರ್ಪಾಡಿಸಿದ ನಮ್ ಮಿತ್ರರಿಗೆ ನಾನು ತುಂಬಾ ಋಣಿ. ಕೆಲಸವಾದ ಮೇಲೆ, ಗೋಪಿನಾಥರ ಆದರಾತಿಥ್ಯವಿತ್ತು. ಅವರು ಮೈಸೂರನ್ನು ಬಿಟ್ಟು ಬಂದಿದ್ದರೂ, ಮೈಸೂರಿನ ಕಾಫಿಯನ್ನು ಬಿಟ್ಟು ಬಂದಿರಲಿಲ್ಲ. ಕಾಫಿಯ ವಿಚಾರದಲ್ಲಿ ನನಗಾಗಲಿ, ನನ್ನ ಮಿತ್ರ ಶ್ರೀಪತಿಗಾಗಲಿ, ಅದರ ಹೆಸರನ್ನು ಕೇಳಿಯೇ ಕಿವಿ ನೆಟ್ಟಗಾಗುತ್ತಿತ್ತು. ಹರಟೆ ಕೊಚ್ಚುತ್ತ, ರುಚಿಯಾದ ಕಡು ಕಾಫಿ ಕುಡಿದು, ಅರ್ಧ ಮತ್ತರಾಗಿ ನಾವು ಮನೆಗೆ ಮರಳಿದೆವು. ಮುಂದೆಲ್ಲ ಅವಸರವೇ. ಅವಸರದ ಊಟ, ಅವಸರದ ಓಟ. ನಾವು ಧಾವಿಸಿ ಬರುವುದರೊಳಗಾಗಿ ದಿಲ್ಲಿಗೆ ಹೋಗುವ ರೈಲು ಬಂಡಿ ಬಂದಿತ್ತು. ನಿಲ್ದಾಣದಲ್ಲಿ ಬಂದು ಹೋಗುವ ಪಯಣಿಗರ ಸಂಖ್ಯೆ ಬಹಳ. ಸೀಟು ಕಾದಿರಿಸಿದ್ದುದರಿಂದ ಒಂದು ಡಬ್ಬೆ ಅಲ್ಲಿಂದಲೇ ಜೋಡಿಸುವುದರಿಂದ ನಮಗೇನೂ ತೊಡಕಾಗಲಿಲ್ಲ. ಮಿತ್ರ ರೈಗಳ ಸತ್ಕಾರಕ್ಕೆ ವಂದನೆ ಸಲ್ಲಿಸಿ, ಬಂಡಿಯನ್ನೇರಿ, ಮೇಲಂತಸ್ತಿನಲ್ಲಿ ಹಾಸಿಗೆ ಬಿಡಿಸಿದೆವು. ನಮಗೆ ಬೆಳಗಾದದ್ದೇ ದೆಹಲಿಯನ್ನು ಸಮೀಪಿಸಿದಾಗ.

❑

# ೩. ಲೇಖನ
# ಮಹಾನಗರ ಮಾಸ್ಕೋ

**– ಡಾ. ಜಿ. ಎಸ್. ಶಿವರುದ್ರಪ್ಪ**

ಮಾಸ್ಕೋ ನಿಜವಾಗಿಯೂ ಮಹಾನಗರ. 'ಮಹಾ' ಎಂಬ ಪದಕ್ಕೆ ಯಾಕೋ ಏನೋ ಒಂದು ಬಗೆಯ ಹೀನಾರ್ಥ ಬರುವಷ್ಟರ ಮಟ್ಟಿಗೆ ಕನ್ನಡದಲ್ಲಿ ಬಳಸಲಾಗಿದ್ದರೂ, ಆ ಮಾತಿನ ನಿಜವಾದ ಅರ್ಥದಲ್ಲಿ ನಾನು ಮಾಸ್ಕೋವನ್ನು ಮಹಾನಗರ ಎಂದು ಕರೆಯುತ್ತೇನೆ. ಇಲ್ಲಿ ಏನನ್ನು ನೋಡಿದರೂ ಈ ಮಾತು ನಿಜ ಅನ್ನಿಸುತ್ತದೆ. ಬೀದಿಗಳ ವೈಶಾಲ್ಯ; ಸಾಲು ಸಾಲಾದ ಬೃಹದಾಕಾರದ ಕಟ್ಟಡಗಳು; ಇಲ್ಲಿನ ಮ್ಯೂಸಿಯಂಗಳು; ಸಾವಿರಾರು ಕೊಠಡಿಗಳನ್ನೊಳಗೊಳ್ಳುವ ಹೋಟೆಲ್‌ಗಳು; ಭಾರೀ ಸರ್ವ ಸಾಮಾಗ್ರಿ ಮಳಿಗೆಗಳು – ಏನನ್ನು ನೋಡಲಿ, 'ಮಹಾ' ಎಂಬ ಪದವೇ ಇವುಗಳನ್ನು ವರ್ಣಿಸಲು ಸಾರ್ಥಕವಾದ ಪದ ಅನ್ನಿಸುತ್ತದೆ. ಐವತ್ತು ವರ್ಷಗಳ ಕಾಲ ಬೇರೆ ಯಾರನ್ನೂ ಬರಗೊಡದೆ ಹಠಯೋಗದಲ್ಲಿ ತೊಡಗಿದಂತೆ ಈ ಜನತೆ ಈ ದೇಶವನ್ನು ಕಟ್ಟಿರುವ ರೀತಿ, ಸಾಧಿಸಿರುವ ಪ್ರಗತಿ ಆಶ್ಚರ್ಯಕರವಾದದ್ದು.

ಮಾಸ್ಕೋ ಸೋವಿಯತ್ ನಾಡಿನ ರಾಜಧಾನಿ. ಅತ್ಯಂತ ಬೃಹತ್ತಾದ ಕಮ್ಯೂನಿಸ್ಟ್ ಸರ್ಕಾರದ ಕೇಂದ್ರಾಡಳಿತ ಬಿಂದು. ರಷ್ಯಾದ ಮಹಾ ಕ್ರಾಂತಿಯ ನಾಯಕ ಲೆನಿನ್ ತನ್ನ ಪಾರ್ಟಿಯ ನಾಯಕರೊಂದಿಗೆ ಈ ನಗರವನ್ನು ಪ್ರವೇಶಿಸಿದ್ದು ೧೯೧೮ನೆಯ ಮಾರ್ಚಿ ಹನ್ನೊಂದನೆಯ ತಾರೀಖು.

ಮಾಸ್ಕೋ ಜಗತ್ತಿನ ಅತ್ಯಂತ ದೊಡ್ಡ ನಗರಗಳಲ್ಲಿ ಬಹುಶಃ ನಾಲ್ಕನೆಯದು. ೩೪೭ ಚದರ ಮೈಲಿಗಳಷ್ಟು ವ್ಯಾಪಕವಾದ ಈ ನಗರದಲ್ಲಿ ಒಟ್ಟು ನಾಲ್ಕು ಸಾವಿರ ಬೀದಿಗಳಿವೆ. ಏಳು ಮಿಲಿಯನ್ ಜನ ಇಲ್ಲಿ ವಾಸಿಸುತ್ತಾರೆ.

ಮಾಸ್ಕೋ ಜನ ಲೆನಿನ್ನನ ನೆನಪನ್ನು ಎಲ್ಲೆಲ್ಲಿಯೂ ಸ್ಥಾಯಿಯನ್ನಾಗಿ ಮಾಡಿದ್ದಾರೆ. ಬೀದಿಗಳಿಗೆ, ಬಡಾವಣೆಗಳಿಗೆ ಆತನ ಹೆಸರನ್ನು ಇರಿಸಿದ್ದಾರೆ. ಬೀದಿ ಬೀದಿಗಳಲ್ಲಿ, ಪಾರ್ಕುಗಳಲ್ಲಿ, ಮ್ಯೂಸಿಯಂಗಳಲ್ಲಿ ಲೆನಿನ್‌ನ ದೊಡ್ಡ ದೊಡ್ಡ ವಿಗ್ರಹಗಳಿವೆ; ಭಾವಚಿತ್ರಗಳಿವೆ. ಅಷ್ಟು ಸಾಲದೆಂಬಂತೆ ಲೆನಿನ್ನನ ಶವವನ್ನು ಗಾಜಿನ ಪೆಟ್ಟಿಗೆಯಲ್ಲಿರಿಸಿ, ಕೆಂಪು ಚೌಕದಲ್ಲಿ ಅಮೃತಶಿಲೆಯ ಶವಾಲಯವೊಂದನ್ನು ಕಟ್ಟಿದ್ದಾರೆ. ದಿನವೂ ಸಾವಿರಾರು ಜನ ಈ ಮಹಾನಾಯಕನ ಪಾರ್ಥೀವ ಶರೀರವನ್ನು ಸಂದರ್ಶಿಸುತ್ತಾರೆ.

ಮಾಸ್ಕೋ ನಗರದಲ್ಲಿನ ಸಸ್ಯಸಮೃದ್ಧಿ ಮನಸ್ಸಿಗೆ ತಂಪು. ಯಾವ ಬೀದಿಯನ್ನು ನೋಡಿದರೂ ಇಕ್ಕೆಲದಲ್ಲಿ ದಟ್ಟವಾದ ತೋಪುಗಳಿವೆ. ಈ ನಗರದ ಯೋಜನೆಯಲ್ಲಿಯೇ ಒಬ್ಬ ನಾಗರಿಕನಿಗೆ ಇಪ್ಪತ್ತು ಚದರ ಮೀಟರುಗಳಷ್ಟು ಹಸಿರು ಇರಬೇಕೆಂದು ಯೋಜಿಸಲಾಗಿದೆಯಂತೆ. ಈ ಮರಗಿಡಗಳಿಂದ ಒಳ್ಳೆಯ ಸಹಜವಾದ ಗಾಳಿ ದೊರೆಯುತ್ತದೆ. ಮರ–ಗಿಡಗಳು ಮನುಷ್ಯನ ದೈಹಿಕ ಮಾನಸಿಕ ಆರೋಗ್ಯಕ್ಕೆ ಎಷ್ಟುಮುಖ್ಯ ಎನ್ನುವುದನ್ನು ಈ ಜನ ಕಂಡುಕೊಂಡಂತೆ ಇನ್ನಾರು ಕಂಡುಕೊಂಡಿರಲಾರರು. ನಮ್ಮ ನಗರಗಳಲ್ಲಾದರೋ ಇದ್ದ ಮರಗಳನ್ನು ಕಡಿಯುತ್ತೇವೆ; ಆಮೇಲೆ ವನಮಹೋತ್ಸವ ಮಾಡಿ ಸಸಿಗಳನ್ನು ನೆಡಿಸುತ್ತೇವೆ. ಬೀದಿ ದನಗಳ ಹೊಟ್ಟೆಯಲ್ಲಿ ನೆಟ್ಟ ಗಿಡಗಳು ಜೀರ್ಣವಾಗುತ್ತವೆ!

ಈ ಊರಿನ ಬೀದಿಗಳು ಅತ್ಯಂತ ಸ್ವಚ್ಛವಾಗಿರಲು ಕಾರಣ ಈ ಸರ್ಕಾರ ವಹಿಸುವ ಎಚ್ಚರ ಮೆಚ್ಚಬೇಕಾದದ್ದು. ಗಂಟೆಗೊಂದು ಸಲವೋ ಏನೋ ಬೀದಿಗಳನ್ನು ತೊಳೆಯುವ, ಹಾಗೂ ಉಜ್ಜಿ ಶುಭ್ರ ಮಾಡುವ ಯಂತ್ರಗಳು ಓಡಾಡುತ್ತವೆ. ಯಾವ ಕ್ಷಣ ನೋಡಿದರೂ ಬೀದಿಗಳನ್ನು ಗುಡಿಸಿ ಸಾರಿಸಿದ ಅನುಭವವಾಗುತ್ತದೆ. ಹಾಗೆಂದರೆ ಕೊಳೆಯೇ ಆಗುವುದಿಲ್ಲವೆಂದೇನೂ ಅರ್ಥವಲ್ಲ; ಸ್ವಚ್ಛವಾಗಿಡುವಲ್ಲಿ ಇವರು ವಹಿಸುವ ಎಚ್ಚರ ಮಹತ್ವದ್ದು.

ಮಾಸ್ಕೋ ನಗರದ ಹೃದಯಕೇಂದ್ರ ಕೆಂಪುಚೌಕ (Red Square) ಮತ್ತು ಕ್ರೆಮ್ಲಿನ್; ಕೆಂಪು ಚೌಕ ಜಗತ್ತಿನ ಅತ್ಯಂತ ಸುಂದರವಾದ ಸ್ಥಳಗಳಲ್ಲಿ ಒಂದು ಎಂದು ವೊಲೋಜ ಹೇಳಿದ. ಮಾಸ್ಕೋ ನಗರದ ಎಲ್ಲ ಬೀದಿಗಳೂ ಬಂದು ಸಂಧಿಸುವ ಕೇಂದ್ರ ಇದು. ಏಳುನೂರಾ ಎಂಭತ್ತು

ಸಾವಿರ ಚದರ ಅಡಿಗಳಷ್ಟು ವಿಸ್ತಾರವಾಗಿರುವ ಈ ಚೌಕ, ರಷ್ಯಾದ ಕ್ರಾಂತಿಯ ಇತಿಹಾಸದಲ್ಲಿ ಅನೇಕ ಮಹತ್ವದ ಘಟನೆಗಳು ಜರುಗಿದ ಸ್ಥಳವಾಗಿದೆ. ಜನತೆಯ ಕ್ರಾಂತಿಯ ಸಂಘಟನೆಯಾದದ್ದು ಇಲ್ಲಿ; ಶ್ರೀಮಂತರ ವೈಭವಗಳ ವಿರುದ್ಧ ಜನ ಬಂಡಾಯವೆದ್ದದ್ದು ಇಲ್ಲಿ; ೧೯೧೭ನೆ ಅಕ್ಟೋಬರ್ ತಿಂಗಳು ಕ್ರಾಂತಿ ದಳಗಳಿಗೂ ಆಳರಸರಿಗೂ ಬಿರುಸಾದ ಕದನವಾಗಿ, ರಕ್ತ ಸುರಿದು ನೆಲ ಕೆಂಪಾದದ್ದು ಇಲ್ಲಿ; ಕೆಂಪು ಚೌಕ ಕ್ರಾಂತಿಕಾರರ ರಕ್ತದಿಂದ, ತನ್ನ ಹೆಸರನ್ನು ಸಂಕೇತವನ್ನಾಗಿ ಮಾಡಿಕೊಂಡದ್ದು ಇಲ್ಲಿ; ಕೆಂಪು ಬಾವುಟ ೧೯೧೮ನೆ ಮಾರ್ಚಿ ತಿಂಗಳಲ್ಲಿ ಕ್ರೆಮ್ಲಿನ್ನಿನ ಮೇಲೆ ಏರಿದ್ದು ಇಲ್ಲಿ.

ಜ಼ಾರ್ ದೊರೆಗಳ ಕಾಲದಲ್ಲಿ ನಿರ್ಮಿತವಾದ ಹಲವು ಚರ್ಚುಗಳು ಇಲ್ಲಿವೆ. ಈ ದೇಗುಲಗಳ ವರ್ಣಮಯವಾದ ಕಟ್ಟಡಗಳೂ, ಗೋಪುರಗಳೂ ತುಂಬ ಸುಂದರವಾಗಿವೆ. ಈಗ ವರ್ಷದಲ್ಲಿ ಎರಡು ಸಲ 'ಪೆರೇಡ್' ನಡೆಯುತ್ತದೆ – ಮೇ ಒಂದನೇ ತಾರೀಖು ಮತ್ತು ನವೆಂಬರ್ ಏಳನೇ ತಾರೀಖು.

ಇಲ್ಲಿಯೇ ಕಪ್ಪು ಕೆಂಪು ಅಮೃತಶಿಲೆಯಿಂದ ರಚಿತವಾದ ಲೆನಿನ್ನಿನ ಶವಾಲಯವಿದೆ. ಗಂಟೆಗೆ ಒಂದು ಸಲ ಈ ಶವಾಲಯದ ಬಾಗಿಲಲ್ಲಿ 'ಪ್ರತಿಮಾ ಯೋಗ'ದಲ್ಲಿ ನಿಂತ ಅಂಗರಕ್ಷಕರನ್ನು ಬದಲಾಯಿಸುತ್ತಾರೆ. ಬೆಳ್ಳನೆಯ ಬಿಗಿಯುಡುಪು ತೊಟ್ಟ ಕೆಂಪನೆಯ ತರುಣ ರಕ್ಷಕರು ಒಂದಿಷ್ಟೂ ಮಿಸುಗದ ಕಲ್ಲಿನ ಬೊಂಬೆಗಳ ಹಾಗೆ ಶವಾಲಯದ ಬಾಗಿಲಲ್ಲಿ ಕಾವಲು ನಿಂತಿರುವುದನ್ನು ನೋಡುವುದು ಒಂದು ಸೊಗಸು. ಕೆಂಪು ಚೌಕದ ಎತ್ತರವಾದ ಗೋಪುರದ ಗಡಿಯಾರದಲ್ಲಿ ಎರಡು ನಿಮಿಷ ಇದೆ ಎನ್ನುವಾಗ ದೂರದ ಕಮಾನುಬಾಗಿಲ ಪಹರೆ ಮನೆಯಿಂದ ಮೂರು ಜನ ಅಂಗರಕ್ಷಕರು ಬಂದೂಕು ಹಿಡಿದು ಗಂಭೀರವಾಗಿ ಒಂದು ಅಳತೆಯಲ್ಲಿ ಹೆಜ್ಜೆಯನ್ನಿಡುತ್ತಾ ಶವಾಲಯದ ಹೊಸ್ತಿಲ ಬಳಿ ಬರುವ ವೇಳೆಗೆ ಗೋಪುರದ ಗಡಿಯಾರದಲ್ಲಿ ಗಂಟೆ ಬಾರಿಸತೊಡಗುತ್ತದೆ. ಎವೆಯಿಕ್ಕುವುದರೊಳಗೆ, ನಿಂತ ಕಾವಲಿನವರು ಮುಮದೆ ಬಂದು, ಬಂದ ಕಾವಲಿನವರು ನಿಯಮಿತವಾದ ಸ್ಥಳದಲ್ಲಿ ನಿಂತು, ಮೂರನೆಯ ರಕ್ಷಕನೊಂದಿಗೆ ಈ ಇಬ್ಬರೂ ಸೇರಿ, ಮತ್ತೆ ದಾಪುಗಾಲಿನ ಅಳತೆಯ

ಹೆಜ್ಜೆಯನ್ನಿಕ್ಕುತ್ತಾ, ದೂರದ ಕಮಾನುಬಾಗಿಲನ್ನು ದಾಟಿ ಒಳಗೆ ಹೋಗುತ್ತಾರೆ. ಮತ್ತೆ ಒಂದು ಗಂಟೆ, ನಿಂತ ಕಾವಲುಗಾರರು ಶಿಲಾ ಪ್ರತಿಮೆಗಳು. ಈ ಕಾವಲುಗಾರರನ್ನು ಬದಲಾಯಿಸುವ ದೃಶ್ಯವನ್ನು ನೋಡಲು ಜನ ಕಿಕ್ಕಿರಿದು ನೆರೆಯುತ್ತಾರೆ. ಚಳಿಗಾಲದಲ್ಲಿ ಮಾತ್ರ ಈ ಕಾವಲುಗಾರರನ್ನು ಅರ್ಧಗಂಟೆಗೆ ಒಮ್ಮೆ ಬದಲಾಯಿಸುತ್ತಾರಂತೆ. ಈ ಕಾವಲುಗಾರರು ನಿಲ್ಲುವ ನಿಲುವು ಮಹಾನಾಯಕ ಲೆನಿನ್ನನಿಗೆ ತೋರುವ ಒಂದು ಶಿಸ್ತಿನ ಧಾರ್ಮಿಕ ವಿಧಿಯಂತೆನನಗೆ ಭಾಸವಾಗುತ್ತದೆ. ಧರ್ಮವನ್ನು ದೂರೀಕರಿಸಿ, ಇದ್ದ ಚರ್ಚುಗಳನ್ನೆಲ್ಲ ವಸ್ತುಸಂಗ್ರಹಾಲಯ ಮಾಡಿದ ಜನ, ಲೆನಿನ್ನನ್ನೆ ದೇವರ ನಿಲಿವಿಗೆ ಏರಿಸಿ, ಈ ಶವಾಲಯವನ್ನೇ ದೇಗುಲವನ್ನಾಗಿ ಮಾಡಿಕೊಂಡಂತೆ ತೋರುತ್ತದೆ.

ಈ ಕೆಂಪು ಚೌಕದ ಬದಿಯಲ್ಲೇ ಇದೆ ಕ್ರೆಮ್ಲಿನ್ – ಸೋವಿಯತ್ ಪರಮಾಧಿಕಾರದ ಆಡಳಿತ ಕೇಂದ್ರ. ಮಾಸ್ಕೋ ನಗರದಲ್ಲಿ ಈ ಕ್ರೆಮ್ಲಿನ್ ಅತ್ಯಂತ ಪ್ರಾಚೀನವಾದ ಐತಿಹಾಸಿಕ ಸ್ಥಳ. ಕ್ರೆಮ್ಲಿನ್ನಿನ ಇತಿಹಾಸದ ಮೊದಲ ದಾಖಲೆಗಳು ದೊರೆಯುವುದು ಕ್ರಿ.ಶ. ೧೧೪೭ರಷ್ಟು ಹಿಂದೆಯೇ. ರಷ್ಯಾ ದೇಶವನ್ನಾಳಿದ ರಾಜರುಗಳಿಗೆಲ್ಲ ಇದೇ ರಾಜಧಾನಿ. ಕಾಲದಿಂದ ಕಾಲಕ್ಕೆ ಇದನ್ನು ಸುತ್ತುವರಿದಿರುವ, ಎತ್ತರವಾದ ಕೋಟೆಯ ಗೋಡೆಗಳು ನಿರ್ಮಿತವಾದವು. ಹದಿನೇಳನೆಯ ಶತಮಾನದ ವೇಳೆಗೆ ಈ ಕ್ರೆಮ್ಲಿನ್ನಿನ ಅರಮನೆಯ ಸುತ್ತ ಅಮೋಘವಾದ ವಸತಿಗಳ, ಚರ್ಚುಗಳ ನಿರ್ಮಾಣ ಪೂರ್ಣವಾಯಿತು. ೧೭೧೨ರಲ್ಲಿ ಮಾಸ್ಕೋದಿಂದ ರಷ್ಯಾದ ರಾಜಧಾನಿ ಪೆಟ್ರೋಗ್ರಾಡಿಗೆ ಸ್ಥಳಾಂತರವಾಯಿತು. ಆದರೂ ಕ್ರೆಮ್ಲಿನ್ ಜ಼ಾರ್ ದೊರೆಗಳ ತಾತ್ಕಾಲಿಕ ವಸತಿಯಾಗಿತ್ತು. ರಷ್ಯದ ರಾಜ–ರಾಣಿಯರು ಪೆಟ್ರೋಗ್ರಾಡಿನಿಂದ ಆಗಾಗ ಮಾಸ್ಕೋಗೆ ಬಂದು, ಹಳೆಯ ರಾಜಧಾನಿಯಾಗಿದ್ದ ಮಾಸ್ಕೋದ ಕ್ರೆಮ್ಲಿನ್ನಿನಲ್ಲಿದ್ದ ಪೂರ್ವಿಕರ ಸ್ಮಾರಕಗಳಿಗೆ, ಹಾಗೂ ದೇವಸ್ಥಾನಗಳಿಗೆ ಗೌರವವನ್ನು ಸಲ್ಲಿಸುತ್ತಿದ್ದರು. ೧೮೧೨ನೆ ಸೆಪ್ಟೆಂಬರ್ ತಿಂಗಳು ನೆಪೋಲಿಯನ್ ಮಾಸ್ಕೋ ನಗರವನ್ನು ವಶಪಡಿಸಿಕೊಂಡಾಗ, ಒಂದು ತಿಂಗಳ ಕಾಲ ಆತ ಕ್ರೆಮ್ಲಿನ್‌ನಲ್ಲಿ ಬಿಡಾರ ಹೂಡಿದ್ದ. ತನ್ನನ್ನು ಕೇಳುವ ಪಿಳ್ಳೆಯೊಂದೂ ಇಲ್ಲದಂತೆ ಬರಿದಾದ ಮಾಸ್ಕೋ ನಗರವನ್ನು ನೋಡಿ ಕ್ರುದ್ಧನಾದ ನೆಪೋಲಿಯನ್, ಅಲ್ಲಿಂದ

ಹಿಂದಿರುಗುವಾಗ ಕ್ರೆಮ್ಲಿನ್ ಅನ್ನು ನಾಶಮಾಡಲು ತನ್ನ ಸೈನಿಕರಿಗೆ ಅಪ್ಪಣೆ ಮಾಡಿದ, ಆದರೆ ಜನರ ಪ್ರತಿಭಟನೆಯಿಂದಾಗಿ ಅದು ಸಾಧ್ಯವಾಗಲಿಲ್ಲ. ೧೮೧೨ರ ನಂತರ ಕ್ರೆಮ್ಲಿನ್ನಿನ ಎಲ್ಲಾ ಐತಿಹಾಸಿಕ ಸ್ಮಾರಕಗಳನ್ನು ಪುನರ್ ನಿರ್ಮಿಸಲಾಯಿತು.

೧೯೧೮ನೇ ಮಾರ್ಚಿ ಹನ್ನೊಂದನೆಯ ತಾರೀಖು ಕ್ರಾಂತಿನಾಯಕ ಲೆನಿನ್, ತನ್ನ ಸಹಾಯಕರೊಡನೆ ಮಾಸ್ಕೋ ನಗರವನ್ನು ಪ್ರವೇಶಿಸಿ ಸ್ವಾಧೀನಕ್ಕೆ ತೆಗೆದುಕೊಂಡ ಮೇಲೆ, ಮತ್ತೆ ಪೆಟ್ರೋಗ್ರಾಡಿನಿಂದ (ಈಗ ಇದಕ್ಕೆ ಲೆನಿನ್‌ಗ್ರಾಡ್ ಎಂದು ಹೆಸರಿಸಲಾಗಿದೆ) ಸರ್ಕಾರದ ಸಮಸ್ತ ಆಡಳಿತಾಂಗಗಳೂ ಮಾಸ್ಕೋ ನಗರಕ್ಕೆ ವರ್ಗಾಯಿಸಲ್ಪಟ್ಟವು. "ಮಾಸ್ಕೋ ನಗರದಲ್ಲಿ ಐತಿಹಾಸಿಕ ಮಹತ್ವವುಳ್ಳ ಯಾವ ಯಾವ ಸುಂದರವಾದದ್ದು ಉಂಟೊ ಅದೆಲ್ಲವನ್ನೂ ನಾವು ಉಳಿಸಿ ಸಂರಕ್ಷಿಸತಕ್ಕದ್ದು" ಎಂದು ಲೆನಿನ್ ಅಪ್ಪಣೆ ಮಾಡಿದ. ೧೯೧೮ನೇ ಅಕ್ಟೋಬರ್ ತಿಂಗಳು ಕ್ರೆಮ್ಲಿನ್ನಿನ ಮೇಲೇರಿದ ಕೆಂಪು ಬಾವುಟ ಇಂದಿಗೂ ಹಾರಾಡುತ್ತದೆ.

ಮಾಸ್ಕ್ವಾ ನದಿಯ ಎಡದಂಡೆಯ ಮೇಲಿನ ಪ್ರದೇಶದಲ್ಲಿ, ಎತ್ತರವಾದ ಕಲ್ಲಿನ ಕೋಟೆ ಗೋಡೆಗಳ ನಡುವೆ, ಕ್ರೆಮ್ಲಿನ್ನಿನ ಚಿನ್ನದ ಗೋಪುರಗಳು, ಬಣಗಾರದ ಹಕ್ಕಿಯ ಕೊಕ್ಕಿನಂತೆ ಚಾಚಿಕೊಂಡಿವೆ. ಇಂದು, ಕ್ರೆಮ್ಲಿನ್ ರಷ್ಯನ್ ಸಂಸ್ಕೃತಿಯ ಮಹಾಕೃತಿಗಳ ಭಂಡಾರ ಮಾತ್ರವಲ್ಲ, ಸೋವಿಯತ್ ಸರ್ಕಾರದ ಪರಮಾಧಿಕಾರದ ಕೇಂದ್ರಪೀಠವೂ ಹೌದು. ಈ ಕ್ರೆಮ್ಲಿನ್ ಕೋಟೆ ಗೋಡೆಗಳ ಆವರಣದಲ್ಲಿ ಹಲವು 'ಕೆಥಿಡ್ರಲ್'ಗಳಿವೆ. ಜ಼ಾರ್ ದೊರೆಗಳ ಕಾಲದ ಪೂಜಾ ಮಂದಿರಗಳಿವು. ಇವುಗಳ ಒಳಗಿನ ಎತ್ತರವಾದ ಭಿತ್ತಿಗಳ ತುಂಬ ಬೈಬಲ್ಲಿನ ಅನೇಕ ಪ್ರಸಂಗಗಳ ವರ್ಣಚಿತ್ರಗಳು ಕಿಕ್ಕಿರಿದಿವೆ. ಇಂಥ ಅನೇಕ ದೇವ ಮಂದಿರಗಳು ಈ ದಿನ ಕೇವಲ ಪ್ರದರ್ಶನದ ವಸ್ತುಗಳಾಗಿವೆ. ಇಲ್ಲಿನ ಆವರಣದಲ್ಲಿ 'ಪ್ಯಾಲೇಸ್ ಆಫ್ ಕಾಂಗ್ರೆಸ್' ಎಂಬ ಭಾರೀ ಭವನವಿದೆ. ಇದು ರಷ್ಯದ ಸ್ವಾತಂತ್ರ್ಯೋತ್ತರ ಕಾಲದ ಕಟ್ಟಡ. ಆರು ಸಾವಿರ ಜನ ಕೂರುವ ವ್ಯವಸ್ಥೆ ಇದರಲ್ಲಿದೆ. ೧೯೬೧ ರಲ್ಲಿ ನಿರ್ಮಿತವಾದ ಈ ಕಟ್ಟಡದೊಳಗೆ ಸೋವಿಯತ್ ಮಹಾಧಿವೇಶನಗಳು ನಡೆಯುತ್ತವೆ. ಇದರೊಳಗಿನ ಸಭಾಭವನದ ವೇದಿಕೆಯೇ ೧೩೨ ಅಡಿ ಉದ್ದ, ೭೨ ಅಡಿ ಅಗಲವಾಗಿದೆ.

ಅಧಿವೇಶನ ಕಾಲದಲ್ಲಿ ವೇದಿಕೆಯ ಮೇಲಿಂದ ನಡೆಯುವ ಉಪನ್ಯಾಸಗಳನ್ನು, ಇಪ್ಪತ್ತೊಂಭತ್ತು ವಿವಿಧ ಬಾಷೆಗಳಿಗೆ ಅನುವಾದ ಮಾಡಿ, ಸದಸ್ಯರು ತಮ್ಮ ಪೀಠಗಳಲ್ಲಿ ಕಿವಿಗೆ ತಗುಲಿಸಿಕೊಂಡ ಯಂತ್ರೋಪಕರಣಗಳ ಮೂಲಕ ಕೇಳಿಸುವ ವ್ಯವಸ್ಥೆ ಇದೆ. ಆಗಾಗ ಈ ಭವನದಲ್ಲಿ 'ಬ್ಯಾಲೆ'ಗಳು ನಡೆಯುತ್ತವೆ.

ಕ್ರೆಮ್ಲಿನ್ನಿನ ಆವರಣದಲ್ಲಿ 'ಆರ್ಮರಿ' ಎಂಬ ಶಸ್ತ್ರಾಗಾರವಿದೆ. ಅದನ್ನು ನೋಡಲು ನಮಗೆ ಟಿಕೆಟ್ ದೊರೆಯಲಿಲ್ಲ ಹಾಗೆಯೆ ಜ಼ಾರ್ ದೊರೆಗಳ ಕಾಲದ ವಜ್ರ ವೈಢೂರ್ಯಾದಿ ಆಭರಣಗಳ ಸಂಗ್ರಹಾಲಯವೂ ಒಂದಿದೆ. ಅದನ್ನು ನೋಡಲೂ ಮೊದಲೇ ಟಿಕೆಟ್‌ಗಳನ್ನು ಕಾದಿರಿಸಬೇಕು.

❑

# ೪. ಓದು ಪಠ್ಯ
# ಆಸ್ಟ್ರೇಲಿಯಾ

**–ಡಾ. ಲತಾ ಗುತ್ತಿ**

**(ಕೃತಿ: ಕನ್ನಡ ಪ್ರವಾಸ ಸಾಹಿತ್ಯದ ಒಳನೋಟಗಳು)**

ಪುರಾತತ್ವ ಪುರಾವೆಗಳ ಪ್ರಕಾರ ಆಸ್ಟ್ರೇಲಿಯದ ಮೂಲ ನಿವಾಸಿಗಳು ೪೦,೦೦೦ ವರ್ಷಗಳಷ್ಟು ಪ್ರಾಚೀನರು ಎಂದು ತಿಳಿಯುತ್ತದೆ. ಇವರು ಆಗ್ನೇಯ ಏಷ್ಯಾದಿಂದ ಬಂದವರೆಂದು ಹೇಳಲಾಗಿದೆ. ಆದರೆ ೧೬ನೆಯ ಶತಮಾನದಲ್ಲಿ ಯುರೋಪಿನ ಅನ್ವೇಷಣಾಕಾರರು ಇಲ್ಲಿ ಕಾಲಿಟ್ಟ ನಂತರ ಎಲ್ಲವೂ ಬದಲಾಗಿಹೋಗಿದೆ. ತಮ್ಮ ವಸಾಹತುವಿಗೆ ಮೂಲ ನಿವಾಸಿಗಳ ಮೇಲೆ ದೌರ್ಜನ್ಯ ಪ್ರಾರಂಭಿಸಿದರು. ಮೂಲ ನಿವಾಸಿಗಳ ಸಂಖ್ಯೆ ತೀವ್ರವಾಗಿ ಇಳಿಯತೊಡಗಿತು. ಬ್ರಿಟನ್ನಿನಲ್ಲಿ ಅಪರಾಧ ಮಾಡಿದವರನ್ನು ಗಡೀಪಾರು ಮಾಡಿ ಆಸ್ಟ್ರೇಲಿಯಾಕ್ಕೆ ಕಳುಹಿಸಲಾಗುತ್ತಿತ್ತು. ಅದು ಅಂದು ಖೈದಿಗಳ ನಾಡು ಎಂದೂ ಪರಿಚಿತವಾಗಿತ್ತು. ಬ್ರಿಟಿಷರ ದಾಸ್ಯದಿಂದ ೧೯೦೧ರಲ್ಲಿ ಸ್ವಾತಂತ್ರ್ಯ ಪಡೆದುಕೊಂಡು ತಾವೇ ಸಂವಿಧಾನ ರಚಿಸಿಕೊಂಡಿದ್ದಾರೆ. ಆಸ್ಟ್ರೇಲಿಯಾ ಸ್ವಾತಂತ್ರ್ಯ ರಾಷ್ಟ್ರವಾದರೂ ಈಗಲೂ ಬ್ರಿಟನ್ನಿನ ರಾಣಿಯೇ ಅಧಿಪತ. ಹೇರಳವಾದ ನೈಸರ್ಗಿಕ ಸಂಪತ್ತನ್ನು ಹೊಂದಿದ್ದು ಕೈಗಾರಿಕಾ ರಾಷ್ಟ್ರವಾಗಿರುವ ಆಸ್ಟ್ರೇಲಿಯಾ ಉನ್ನತ ಜೀವನಮಟ್ಟ ಹೊಂದಿರುವ ಪ್ರಜಾಪ್ರಭುತ್ವ ರಾಷ್ಟ್ರ. ಅಲ್ಲಿರುವವರೆಲ್ಲ ಹೆಚ್ಚಾಗಿ ಯುರೋಪಿಯನ್ನರು, ಅಮೆರಿಕನ್ನರು ಐಶಾರಾಮಿಯಾಗಿದ್ದಾರೆ. ಇವರೆಲ್ಲ ಆಸ್ಟ್ರೇಲಿಯ ಪೌರರು. ನಮ್ಮ ಭಾರತೀಯರನೇಕರು ಉದ್ಯೋಗಾರ್ಥಿಗಳಾಗಿಯೋ, ವಿದ್ಯಾರ್ಥಿಗಳಾಗಿಯೋ ಹೋಗುತ್ತಿರುವುದು ಕೆಲವರು ಅಲ್ಲಿಯೇ ನೆಲೆಯೂರಿದವರೂ ಇರುವುದು ಕಂಡು ಬರುತ್ತದೆ. ಆಸ್ಟ್ರೇಲಿಯಾ ಒಳ್ಳೆಯ ವಿಶ್ವವಿದ್ಯಾಲಯಗಳನ್ನು ಹೊಂದಿದೆ. ಆಸ್ಟ್ರೇಲಿಯಾಗೆ ಇತ್ತೀಚೆಗೆ ಯುರೋಪ್ ಅಮೆರಿಕಾಕ್ಕಿಂತ ಬೇಡಿಕೆ ಹೆಚ್ಚುತ್ತಿದೆ. ನಮ್ಮ ಪ್ರವಾಸ ಸಾಹಿತಿಗಳು ಯುರೋಪ್, ಅಮೆರಿಕಾಕ್ಕೆ ಹೋಗಿ ಬಂದಷ್ಟು ಈ ಕಡೆಗೆ ಹೋಗಿಲ್ಲ. ಬೆರಳೆಣಿಕೆಯ ಲೇಖಕರು ಮಾತ್ರ ಆಸ್ಟ್ರೇಲಿಯಾದ ಬಗೆಗೆ ಪ್ರವಾಸ ಕಥನ ರಚಿಸಿರುವುದು ಕಂಡುಬರುತ್ತದೆ. ಪದ್ಮಾ ಗುರುರಾಜ್ (ಕಾಂಗರೂಗಳ ನಾಡಿನಲ್ಲಿ), ಪ್ರೊ. ಬಿ. ವಿರೂಪಾಕ್ಷಪ್ಪ (ನನ್ನ ಸಿಂಗಪುರ

ಮತ್ತು ಆಸ್ಟ್ರೇಲಿಯಾದ ಪ್ರವಾಸ ಅನುಭವಗಳು), ಟಿ. ಮಹಾಬಲೇಶ್ವರ ಭಟ್ಟ (ಆಸ್ಟ್ರೇಲಿಯಾದಲ್ಲಿ ಎಪ್ಪತ್ತು ದಿನಗಳು), ನಾಗಭೂಷಣಯ್ಯ (ನಾ ಕಂಡ ನ್ಯೂಜಿಲೆಂಡ್), ಪ್ರಭಾವತಿ (ಹಸಿರು – ಹವಳ), ತ್ರಿವೇಣಿ ಶಿವಕುಮಾರ (ವಿವ್ಯ ಮೌನದ ದೇಶಗಳಲ್ಲಿ) ಮುಂತಾದವರು.

ಈ ಭೂಮಂಡಲದ ಅತಿ ಚಿಕ್ಕ ಖಂಡ ಆಸ್ಟ್ರೇಲಿಯಾ. ಆಸ್ಟ್ರೇಲಿಯಾ, ನ್ಯೂಗಿನಿ, ನ್ಯೂಜಿಲ್ಯಾಂಡ್ ಮತ್ತು ಪೆಸಿಫಿಕ್ ಸಾಗರದ ಸಾವಿರಾರು ಪುಟ್ಟ ದ್ವೀಪಗಳನ್ನು ಒಳಗೊಂಡಿರುವ ಈ ಖಂಡವನ್ನು 'ಓಷೇನಿಯಾ' ಎಂದೂ ಕರೆಯುತ್ತಾರೆ. ಪೆಸಿಫಿಕ್ ಸಾಗರದ ಪ್ರದೇಶದಲ್ಲಿರುವ ದೇಶಗಳು ಹಾಗೂ ದ್ವೀಪಗಳಲ್ಲಿರುವ ಮೂಲ ಜನರಿಗೆ ಮೆಲಾನೇಷಿಯನ್, ಮೈಕ್ರೋನೇಷಿಯನ್, ಪಾಲಿನೇಷಿಯನ್ ಎಂದೂ ಕರೆಯುವರು. ಈ ಬಗೆಗಿನ ದೀರ್ಘವಾದ ಪರಿಚಯವನ್ನು ಪಾಂಡುರಂಗಶಾಸ್ತ್ರಿ, ಸಿ. ಆರ್. ಕೃಷ್ಣರಾವ್ ಅವರು ತಮ್ಮ 'ದೇಶ ವಿದೇಶಗಳ ಪರಿಚಯ' ಪುಸ್ತಕದಲ್ಲಿ ತಿಳಿಸಿಕೊಟ್ಟಿದ್ದಾರೆ.

'ನನ್ನ ಸಿಂಗಪುರ ಮತ್ತು ಆಸ್ಟ್ರೇಲಿಯದ ಪ್ರವಾಸ ಅನುಭವಗಳು' ಇದು ಪ್ರೊ. ಬಿ. ವಿರೂಪಾಕ್ಷಪ್ಪನವರ ಪ್ರವಾಸ ಕಥನ. ಆಸ್ಟ್ರೇಲಿಯಾದ ಬಗೆಗಿನ ಒಂದು ಸಮಗ್ರ ಪರಿಚಯವನ್ನು ಇವರು ಮಾಡಿಕೊಟ್ಟಿದ್ದಾರೆ. Aborigines ಎಂದು ಕರೆಯುತ್ತಿರುವ ಅಲ್ಲಿಯ ಆದಿವಾಸಿಗಳು ಅಥವಾ ಮೂಲ ನಿವಾಸಿಗಳಿಗೆ ೪೦, ೦೦೦ ವರ್ಷಗಳ ಇತಿಹಾಸವಿದೆ ಎಂದು ಸಂಶೋಧಕರ ಅಭಿಪ್ರಾಯ ತಿಳಿಸಿಕೊಡುತ್ತಾರೆ. ಇವರ ಬಣ್ಣ ಕಡುಕಪ್ಪು, ಮುಖ ಮುದ್ರೆ ದಕ್ಷಿಣ ಆಫ್ರಿಕಾ ಹಾಗೂ ದಕ್ಷಿಣ ಭಾರತದ ಕಾಡುಗಳ ಆದಿವಾಸಿಗಳ ಮುಖ ಮುದ್ರೆಯನ್ನು ಹೋಲುತ್ತದೆ. ಇವು ಬೇಟೆಯ ಮಾನವ ಯುಗದ ರೀತಿಯಲ್ಲಿಯೇ ಇರುತ್ತಾರೆ. ಬೆತ್ತಲೆಯಾಗಿದ್ದು ಗಿಡದ ಎಲೆಗಳಿಂದ ತಮ್ಮ ಮರ್ಮಾಂಗಗಳನ್ನು ಮುಚ್ಚಿಕೊಳ್ಳುತ್ತಾರೆ. ಬಿಲ್ಲು ಬಾಣಗಳು ಯಾವಾಗಲೂ ಇವರ ಸಂಗಾತಿ. ಬಾರಾಮೂಡಿ ಎಂಬ ಮೀನು ಮತ್ತು ಗೆಣಸುಗಳು ಇವರ ಆಹಾರ, ಭೂತ ಪ್ರೇತಗಳಲ್ಲಿ ನಂಬಿಕೆ ಉಳ್ಳವರು. ಇವರಲ್ಲಿ ಎರಡುನೂರು ಪ್ರಕಾರದ ಬುಡಕಟ್ಟುಗಳಿವೆ. ಇವರು ಸಂಘ ಜೀವಿಗಳಾಗಿ ಅನೇಕ ಉತ್ಸವಗಳನ್ನು ಸಮಾರಂಭಗಳನ್ನು ಆಚರಿಸುತ್ತಾರೆ. ಸಮಾರಂಭಗಳಿಗೆ ಬುಡಕಟ್ಟಿನ ಕುಟುಂಬಗಳನ್ನು ಕೊಂಬು ಗಳನ್ನೂದುವುದರ ಮೂಲಕ ಆಮಂತ್ರಣ ಕಳಿಸಿ ಆಚರಿಸಲಾಗುತ್ತದೆ.

ಇವರು ಆಧ್ಯಾತ್ಮಕವಾಗಿ ಪರಂಪರೆಗಳನ್ನು ರೂಪಿಸಿದ್ದಲ್ಲದೆ ಕಲೆ, ಸಂಗೀತ ಮತ್ತು ತಮ್ಮದೇ ಆದ ಔಷಧ ಪದ್ಧತಿಯನ್ನು ಬೆಳೆಸಿಕೊಂಡಿದ್ದರು. ಕ್ಯಾಪ್ಟನ್ ಕುಕ್ ೧೭೭೦ರಲ್ಲಿ ಆಸ್ಟ್ರೇಲಿಯಾದ ಈಗಿನ ಸಿಡ್ನಿ ಪಟ್ಟಣದ ಹತ್ತಿರ ನೈಸರ್ಗಿಕ ಬಂದರಿಗೆ ಹಡಗಿನಲ್ಲಿ ಬಂದಿಳಿದಾಗ ಇವರು ಬಿಳಿಯರ ಬರವನ್ನು ಪ್ರಬಲವಾಗಿ ವಿರೋಧಿಸಿರು. ಅವರನ್ನು ಕೊಲ್ಲಲು ಯೋಜಿಸಿದರು. ಆದರೆ ಕ್ಯಾಪ್ಟನ್ ಕುಕ್ ಬುದ್ಧಿವಂತ, ಆಹಾರ ಬಟ್ಟೆಗಳ ಆಮಿಷ ತೋರಿಸಿ ಇವರನ್ನು ಇವರನ್ನು ಪಳಗಿಸಿದ, ತನ್ನ ಪರ ಮಾಡಿಕೊಂಡ. ನಂತರ ಬಂದ ಯುರೋಪಿಯನ್ನರು ಇಲ್ಲಿಯ ಕಾಡುಗಳನ್ನು ನಾಶಮಾಡಿ ತಮ್ಮ ಮನೆಗಳನ್ನು ಕಟ್ಟಿಕೊಂಡರು. ಆದಿವಾಸಿಗಳನ್ನು ದುಡಿಸಿಕೊಳ್ಳತೊಡಗಿದರು. ಯುರೋಪಿಯನ್ನರಿಂದ ಚರ್ಚುಗಳು ಸ್ಥಾಪಿತವಾಗತೊಡಗಿದವು. ಕ್ರಿಶ್ಚಿಯನ್ ಪಾದ್ರಿಗಳಿಂದ ಇವರ ಮತಾಂತರ ಪ್ರಾರಂಭವಾಗಿ ಅನೇಕರು ಈ ಧರ್ಮವನ್ನು ಸ್ವೀಕರಿಸಿದರು. ಇಂಗ್ಲೀಷ್ ಕಲಿತು ಅವರ ವೇಷ ಭೂಷಣಗಳನ್ನು ಆಹಾರ ಕ್ರಮಗಳನ್ನು ತಮ್ಮದಾಗಿಸಿಕೊಂಡರು. ಹೀಗಿದ್ದರೂ ಅವರು ತಮ್ಮ ಮೂಲ ಸಂಸ್ಕೃತಿಯನ್ನು ಬಿಟ್ಟಿಲ್ಲವೆಂದು ಹೇಳಬೇಕು ಎನ್ನುತ್ತಾರೆ. ವಿರೂಪಾಕ್ಷಪ್ಪನವರು.

ಆಸ್ಟ್ರೇಲಿಯಾದ ವಿಶ್ವವಿದ್ಯಾಲಯಗಳು ಅವುಗಳ ಗುಣಮಟ್ಟದ ಬಗೆಗೆ ಲೇಖಕರು ತುಂಬಾ ಮೆಚ್ಚಿಕೊಂಡಿದ್ದಾರೆ. ಆಸ್ಟ್ರೇಲಿಯಾ ಬ್ರಿಟಿಷ್ ಸಾಮ್ರಾಜ್ಯದ ಅಂಗವಾಗಿರುವುದರಿಂದ ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾಲಯದ ಹಂತದವರೆಗೆ ಬ್ರಿಟಿಷ್ ಮಾದರಿಯ ಶಿಕ್ಷಣ ಪದ್ಧತಿ ಜಾರಿಯಲ್ಲಿರುವಂತೆ, ಆಸ್ಟ್ರೇಲಿಯಾದಲ್ಲಿ ಒಟ್ಟು ಐವತ್ತು ವಿಶ್ವವಿದ್ಯಾಲಯಗಳಿದ್ದು, ಪ್ರತಿಯೊಂದು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ೧೦,೦೦೦ಕ್ಕಿಂತ ಮಿಗಿಲಾಗಿರುವುದಿಲ್ಲವೆನ್ನುವರು. ಯುರೋಪ್ ಅಮೆರಿಕಾದಂತೆ ಇಲ್ಲಿಯ ವಿದ್ಯಾರ್ಥಿಗಳದ್ದು ಅದೇ ಕಥೆ. ೧೨ನೆಯ ಕ್ಲಾಸಿನಲ್ಲಿ ಇರುವಾಗಲೇ ಪ್ರೌಢರಾಗಿರುತ್ತಾರೆ. ಓದುವವರು ಗಂಭೀರವಾಗಿ ಓದಿಕೊಂಡು ಹೋಗುತ್ತಿದ್ದರೆ ಉಳಿದವರು (ಹೆಚ್ಚಾಗಿ) ಪ್ರೇಮ ಕಾಮ ಕುಡಿತದ ಚಟಕ್ಕೆ ಬಲಿ ಬೀಳುವರು.

ಅಲ್ಲಿಯ ರಾಷ್ಟ್ರೀಯ ಕಲಾಕೇಂದ್ರಕ್ಕೆ ಭೇಟಿ ಕೊಟ್ಟ ಲೇಕಕರು ಭಾರತೀಯ ವಿಭಾಗದಲ್ಲಿ, ಹಿಂದೂ ಧರ್ಮದ ವ್ಯಾಖ್ಯೆ ಇರುವುದನ್ನು ನೋಡಿ ಓದಿ ತಮ್ಮ ಪ್ರವಾಸ ಕಥನದಲ್ಲಿ ಹಿಡಿದಿಟ್ಟಿದ್ದಾರೆ. ಅದು ಇಂಗ್ಲೀಷ್‌ನಲ್ಲಿದೆ. ಅದರ ಅನುವಾದವನ್ನು ಇವರು ಮಾಡಿದ್ದಾರೆ. ಪೂರ್ವ

ದೇಶಗಳಲ್ಲಿ ಬುದ್ಧನ ಪ್ರಭಾವ ಇನ್ನೂ ಅಚ್ಚಳಿಯದ ರೀತಿಯಲ್ಲಿ ಉಳಿದುಕೊಂಡು ಬಂದಿದೆ ಎನ್ನುವಂತೆ ಈ ವಸ್ತು ಸಂಗ್ರಹಾಲಯ ದಲ್ಲಿರುವ ಬುದ್ಧನ ವಿಗ್ರಹಗಳು ಜೈನ ತೀರ್ಥಂಕರರ ಕಂಚಿನ ವಿಗ್ರಹಗಳು ಅಲ್ಲಿರುವುದಾಗಿ ತಿಳಿಸುತ್ತಾರೆ.

೧೮ನೆಯ ಶತಮಾನದಲ್ಲಿ ಇಲ್ಲಿಗೆ ಬಂದಿಳಿದು ವಸಾಹತು ಸ್ಥಾಪಿಸಿದ ಯುರೋಪಿಯನ್ನರು, ತಾವು ಬರುವಾಗ ತಂದ ಅನೇಕ ವಸ್ತುಗಳಂತೆ (ತರಕಾರಿ, ಹಣ್ಣು ಬೀಜಗಳು, ಗೊಬ್ಬರ, ಒಳ್ಳೆ ಜಾತಿಯ ಆಕಳುಗಳು ಮುಂತಾದವುಗಳು) ಕುರಿಗಳನ್ನೂ ಅವುಗಳ ತಳಿಯನ್ನೂ ಇಲ್ಲಿಗೆ ತಂದಿದ್ದಾರೆ. ಉಣ್ಣೆ ತೆಗೆಯಲೆಂದೇ ಹೆಸರಾಂತ ತಳಿಗಳನ್ನು ಇಲ್ಲಿ ಸಾಕಿದ್ದಾರೆ. ಆಸ್ಟ್ರೇಲಿಯದ ಉಣ್ಣೆ ಜಗತ್ಪ್ರಸಿದ್ಧ. ಉಣ್ಣೆಯನ್ನು ನಿರ್ಯಾತ ಮಾಡುವ ದೇಶಗಳಲ್ಲಿ ಆಸ್ಟ್ರೇಲಿಯಾ ಪ್ರಧಾನ ದೇಶ ಎನ್ನುವರು. ಇದರ ಬಗೆಗೆ ಸಾಕಷ್ಟು ವಿವರಣೆ ಬಂದಿದೆ.

ಟಿ. ಮಹಾಬಲೇಶ್ವರ ಭಟ್ಟರ 'ಆಸ್ಟ್ರೇಲಿಯಾದಲ್ಲಿ ಎಪ್ಪತ್ತು ದಿನಗಳು' ಕೃತಿಯ ಮುಖಾಂತರ ಆದಷ್ಟು ಅಲ್ಲಿಯ ಸಮಾಜಿಕ ರಾಜಕೀಯ ಪರಿಚಯವನ್ನು ಮಾಡಿಕೊಳ್ಳಬಹುದಾಗಿದೆ. ಆಸ್ಟ್ರೇಲಿಯಾದ ರಾಜಧಾನಿ ಕ್ಯಾನ್ಬೆರಾ. 'ಕೆನ್‌ಬರಾ' ಎಂದರೆ ಆದಿವಾಸಿಗಳ ಭಾಷೆಯಲ್ಲಿ ಕೂಡುವ ಸ್ಥಳ (Meeting place) ಎಂದರ್ಥವಂತೆ. ಆದಿವಾಸಿ ಭಾಷೆಯ ಅನೇಕ ಹೆಸರುಗಳನ್ನು ಬೀದಿಗಳಿಗೆ ಇಟ್ಟಿದ್ದಾರೆ ಎನ್ನುವರು. ಇಲ್ಲಿಯ ಪಾರ್ಲಿಮೆಂಟ್ ಭವನಕ್ಕೆ ಸಾರ್ವಜನಿಕರು ಪ್ರವೇಶಿಸುವಾಗ ಯಾರ ಅಪ್ಪಣೆಯನ್ನು ಪಡೆಯಬೇಕಾದ್ದಿಲ್ಲ. ಆಸ್ಟ್ರೇಲಿಯಾದ ಪ್ರಧಾನ ಮಂತ್ರಿ ಈ ಭವನಕ್ಕೆ ಬರಲು ಎಷ್ಟು ಅವಕಾಶ ಇದೆಯೋ, ಅಷ್ಟೇ ಅವಕಾಶ ಆಸ್ಟ್ರೇಲಿಯಾದ ಜನತೆಗೂ, ವಿದೇಶಿಯರಿಗೂ ಒದೆ. ಇಲ್ಲಿ ಒಳಪ್ರವೇಶಿಸುವ ಯಾರೂ ತಮ್ಮ ಹೆಸರು, ವಿಳಾಸ, ಸಹಿ ನೀಡುವುದಾಗಲಿ, ನಮ್ಮಲ್ಲಿಯಂತೆ ಪಾರ್ಲಿಮೆಂಟ್ ಸದಸ್ಯರ ಅನುಮತಿ ಪತ್ರವಾಗಲಿ ರಕ್ಷಣಾ ಇಲಾಖೆಯ ಅಪ್ಪಣೆ ಪತ್ರವಾಗಲೀ ತರಬೇಕಾಗಿಲ್ಲ. ದೇವಾಲಯಗಳಿಗೆ ಹೋಗಿ ಬರುವಂತೆ ಇಲ್ಲಿಗೆ ಹೋಗಿ ಬರಬಹುದು. ಪಾರ್ಲಿಮೆಂಟ್ ಭವನದಲ್ಲಿ ಎಲ್ಲಿ ಬೇಕಾದರೂ ಫೋಟೋ ತೆಗೆಯಲು ಯಾರ ಅಭ್ಯಂತರವೂ ಇಲ್ಲ. ದೇಶದ ಜನರಿಗೆ ನಿಜವಾದ ಸ್ವಾತಂತ್ರ್ಯ ಇಲ್ಲಿ ಇದೆ. ಮಂತ್ರಿಗಳು ಇಲ್ಲಿ ಸಾಮಾನ್ಯ ಜನರಂತೆಯೇ ಇರುತ್ತಾರೆ. ಅವರೇ ಕುಟುಂಬದ ಸಮೇತ

ಮಾರ್ಕೆಟ್ಟಿಗೆ ಹೋಗಿ ತಮ್ಮ ಸಾಮಾನುಗಳನ್ನು ಕೊಂಡು ತರುತ್ತಾರೆ. ಆಸ್ಟ್ರೇಲಿಯಾದ ಪ್ರಜೆಗೆ ಮತದಾನ ಹಕ್ಕು ಬರಲು ೧೮ ವರ್ಷದವರಾಗಿರಬೇಕು. ರಾಜಕೀಯದಲ್ಲಿ ಸತ್ಯಾಗ್ರಹ, ಪ್ರತಿಭಟನೆ, ವಿರೋಧ ಪಕ್ಷಗಳಿದ್ದರೂ ವಿನಾಕಾರಣ ಪ್ರತಿಭಟನೆ ಸತ್ಯಾಗ್ರಹ ನಡೆಯುವುದಿಲ್ಲ. ಪ್ರಧಾನ ಮಂತ್ರಿಯಾದವರು ಪ್ರತಿಭಟನಕಾರರ ಸಮಸ್ಯೆಯನ್ನು ಅರಿಯಲು ಅವರೇ ಬರುತ್ತಾರೆ. ಸರಿ ಎಂದು ಕಂಡರೆ, ನ್ಯಾಯಸಮ್ಮತವಾಗಿದ್ದರೆ ಅಂತಹುದಕ್ಕೆ ಸರಕಾರ ಮಾನ್ಯತೆ ಕೊಡುತ್ತದೆ. ಆದರೆ ಸತ್ಯಾಗ್ರಹ ನಡೆಸುವವರ ಬೇಡಿಕೆ ಸೂಕ್ತವಲ್ಲವೆಂದು ಕಂಡುಬಂದರೆ ಅಷ್ಟೇ ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸುತ್ತಾರೆ ಎಂದು ಅಲ್ಲಿಯ ರಾಜಕೀಯ ವ್ಯವಸ್ಥೆ ಬಗೆಗೆ ತಿಳಿಸಿಕೊಟ್ಟಿರುವರು.

ಅಲ್ಲಿಯ ದಾಂಪತ್ಯ ಜೀವನ ಎಷ್ಟೊಂದು ಸಹಜಾವಸ್ಥೆಗೆ ಇಳಿದುಬಿಟ್ಟಿದೆ ಎಂಬುದು ವಿವರವಾಗಿಯೇ ಹೇಳಿದ್ದಾರೆ. ವಿವಾಹಕ್ಕೆ ಮುನ್ನ ೧೫ನೆಯ ವಯಸ್ಸಿನಲ್ಲಿಯೇ ಮಕ್ಕಳನ್ನು ಹಡೆದವರ ಸಂಖ್ಯೆ ಇಲ್ಲೇನು ಕಡಿಮೆ ಇಲ್ಲ. ೨೨ ವರ್ಷಕ್ಕೆ ಎರಡು ಅಥವಾ ಮೂರು ಮಕ್ಕಳ ತಾಯಂದಿರಾಗಿ ಅನಂತರ ಅಧಿಕೃತವಾಗಿ ವಿವಾಹವನ್ನು ಮಾಡಿಕೊಂಡವರೇ ಇಲ್ಲಿ ಬಹಳಷ್ಟು ಮಂದಿ ಇದ್ದಾರೆ. ಇಲ್ಲಿಯ ಮದುವೆಯ ರಿಜಿಸ್ಟ್ರೇಷನ್ ಫಾರಂನಲ್ಲಿ ನಿಮಗೆ ಇದು ಮೊದಲನೆಯ ಮದುವೆಯೇ? ನಿಮಗೆ ಇದು ಎಷ್ಟನೆಯ ಮದುವೆ? ನಿಮಗೆ ಎಷ್ಟು ಮಂದಿ ಮಕ್ಕಳಿದ್ದಾರೆ? ಎಂಬ ಕಾಲಂಗಳು ಮುದ್ರಿಸಿರುತ್ತಾರೆ. ವಿವಾಹವಾಗಲಿ ದಾಂಪತ್ಯ ಜೀವನವಾಗಲಿ ಇಲ್ಲಿ ಸುಖಕರವಾಗಿಲ್ಲ. ಪ್ರೇಮ ಕಾಮ ಇವುಗಳಿಗೆ ವಿಶೇಷವಾದ ಮಹತ್ವ ಇಲ್ಲ. ವಿವಾಹದಲ್ಲಿ ಮಹಿಳೆ ಕಡಿಮೆ ವರ್ಷದವಳಿರಬೇಕೆನ್ನುವ ನಿಯಮವೇನಿಲ್ಲ. ಪರಸ್ಪರ ಪ್ರೀತಿ ಮಾಡಿದರೆ ಸಾಕು. ಅತಿ ಚಿಕ್ಕ ವಯಸ್ಸಿನ ಹುಡುಗಿಯನ್ನು ೪೫, ೫೦ ವರ್ಷದ ಪುರುಷ ಮದುವೆಯಾಗುವುದೂ ಸಾಮಾನ್ಯ ಸಂಗತಿ ಎನ್ನುತ್ತಾರೆ.

ಪದ್ಮಾ ಗುರುರಾಜ್‌ರ ಪ್ರವಾಸ ಕೃತಿ 'ಕಾಂಗರೂಗಳ ನಾಡಿನಲ್ಲಿ' ಆಸ್ಟ್ರೇಲಿಯಾದ ಬಗೆಗೆ ಅನೇಕ ವಿಷಯಗಳು ಪರಿಚಯಿಸಿದ್ದಾರೆ. ಅವರು ತಿಳಿಸಿದಂತೆ ಆಸ್ಟ್ರೇಲಿಯಾದ ನಿರುದ್ಯೋಗ ವೇತನ ವೃದ್ಧಾಪ್ಯವೇತನದ ಬಗೆಗೆ ತಿಳಿದುಕೊಳ್ಳಬೇಕು. ಇಲ್ಲಿ ಸರಕಾರ ಉದಾರವಾಗಿ ವಲಸೆ

ಬಂದವರಿಗೆ, ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವವರೆಗೆ ವಾರಕ್ಕೆ ಇಷ್ಟು ಎಂದು ನಿರುದ್ಯೋಗ ಭತ್ಯೆ ನೀಡುತ್ತದೆ. ಅದು ಹೊಟ್ಟೆ ಬಟ್ಟೆ ಕನಿಷ್ಟ ಸೌಲಭ್ಯಗಳಿಗಾಗುವಷ್ಟು ಇರುತ್ತದೆಯಾದುದರಿಂದ ಎಷ್ಟೋ ಜನ ಆಲಸಿಗಳು ಕೆಲಸ ಹುಡುಕುವ, ಕೆಲಸ ಮಾಡುವ ಗೋಜಿಗೆ ಹೋಗುವುದಿಲ್ಲ. ಮತ್ತು ಎಷ್ಟೋ ಜನ ಕೆಲಸಮಾಡಿಕೊಂಡೂ ಸಂಪಾದನೆ ಇದ್ದರೂ ಸರಕಾರಕ್ಕೆ ಮೋಸ ಮಾಡಿ ವೇತನ ತೆಗೆದುಕೊಳ್ಳುವವರ ಪ್ರಸಂಗಗಳೂ ಉಂಟು. ಸರಕಾರ ಕನಿಷ್ಟ ಜೀವನ ಸೌಲಭ್ಯಗಳನ್ನು ರಿಯಾಯತಿಗಳನ್ನು ಒದಗಿಸುವುದರಿಂದ ಈ ದೇಶದಲ್ಲಿ ಎಲ್ಲೂ ದೀನರು ದರಿದ್ರರು ಭಿಕ್ಷುಕರು ಇಲ್ಲವೇ ಇಲ್ಲ. ಕಳ್ಳತನ, ಸುಲಿಗೆ, ದರೋಡೆ ಮುಂತಾದ ಅಪರಾಧಗಳ ಪ್ರಮಾಣ ಸಹ ಕಡಿಮೆ. ಆಗಾಗ ಒಂದಷ್ಟು ಕೇಳಿಬರುವುದಾದರೂ ಲೈಂಗಿಕ ಅಪರಾಧಗಳು, ರೇಪ್, ಕಾಡಿನಲ್ಲಿ ತಿರುಗಾಡಲು ಹೋಗಿ ಕಳೆದು ಹೋದವರು, ಬೈಕಿಗಳ ಗ್ಯಾಂಗ್‌ವಾರ್‌ಗಳು ಇತ್ಯಾದಿ ಪ್ರಸಂಗಗಳು ಕಾಣುತ್ತಲೇ ಇರುತ್ತವೆ ಎನ್ನುತ್ತಾರೆ ಲೇಖಕಿ.

ನಮ್ಮ ಹಾಗೆ ಅಲ್ಲಿ ಕೂಡು ಕುಟುಂಬದ ಪದ್ಧತಿ ಇಲ್ಲ. ಮಕ್ಕಳು ವಯಸ್ಸಿಗೆ ಬರುತ್ತಿದ್ದಂತೆಯೇ ಹೆತ್ತವರಿಂದ ಬೇರೆಯಾಗುತ್ತಾರೆ. ಎಲ್ಲರಿಗೂ ಸ್ವತಂತ್ರ ಜೀವನದ ಹಂಬಲ, ಹಿರಿಯರೂ ಸಹ ಮಕ್ಕಳೊಂದಿಗೆ ಇರಲು ಇಚ್ಛೆಸುವುದಿಲ್ಲ. ಆದರೆ ಇಲ್ಲಿಯ ಸರಕಾರ ವೃದ್ಧರಿಗೆ ಸಾಕಷ್ಟು ಸವಲತ್ತುಗಳನ್ನು ಕೊಡುತ್ತದೆ. ವೃದ್ಧಾಪ್ಯ ವೇತನದ ಜೊತೆಗೆ ಸೀನಿಯರ್ ಸಿಟಿಜನ್ ಎಂದು ಬಸ್ಸು, ರೈಲು, ಸಿನಿಮಾ, ವೈದ್ಯಕೀಯ ಶೂಶ್ರೂಷೆ, ಮತ್ತೆ ಎಲ್ಲೇ ಹೋದರೂ ರಿಯಾಯಿತಿಯೋ ರಿಯಾಯಿತಿ ನೀಡುತ್ತದೆ ಎಂದು ಅಲ್ಲೆಲ್ಲ ಅಡ್ಡಾಡುವಾಗ ಲೇಖಕಿ ಗಮನಿಸಿದ್ದಾರೆ.

ಪ್ರಭಾಮೂರ್ತಿಯವರ 'ಹಸಿರು-ಹವಳ' ಪ್ರವಾಸ ಕಥನ ಆಸ್ಟ್ರೇಲಿಯಾದ ವಿವಿಧ ಭಾಗಗಳಲ್ಲಿ ಅಡ್ಡಾಡಿ ಸಂತಸಪಟ್ಟ ಸಂದರ್ಭಗಳನ್ನು ಹೇಳುತ್ತಾ ಹೋಗುತ್ತಾರೆ. ಲೇಖಕಿ ವಕೀಲರಾಗಿ ಇಡೀ ದಿವಸ ಕೋರ್ಟು ಕಚೇರಿ ಕೆಲಸಗಳಲ್ಲಿ ಕಕ್ಷಿದಾರರೊಡನೆ ಇರುವ ಸಂದರ್ಭಗಳೇ ಹೆಚ್ಚಿರುವಾಗ ಅವರ ಸಾಹಿತ್ಯಾಸಕ್ತಿ ಇಲ್ಲಿ ಕಂಡು ಸಂತೋಷವಾಗುತ್ತದೆ. ಪ್ರತಿ ವರ್ಷಕ್ಕೊಮ್ಮೆ ದೇಶ ವಿದೇಶಗಳ ಪ್ರವಾಸಿ ತಾಣಗಳಿಗೆ ಹೋಗುವ ರೂಢಿ ಇಟ್ಟುಕೊಂಡಿರುವ ಪ್ರಭಾ ಮತ್ತು ಅವರ ಪತಿ ಡಾ. ಮೂರ್ತಿಯವರು ಆಸ್ಟ್ರೇಲಿಯಾಕ್ಕೂ ಹೋಗಿ ಬಂದಿದ್ದಾರೆ.

ಸಿಡ್ನಿ, ಕ್ಯಾನ್‌ಬೆರಾ ಪಟ್ಟಣಗಳು, ಅಲ್ಲಿಯ ಸ್ವಚ್ಛತೆ, ಹಸಿರು ಹುಲ್ಲುಗಾವಲುಗಳು ನೋಡುತ್ತ ನಮ್ಮ ದೇಶದ ಕೊಳಚೆ ಪ್ರದೇಶಗಳು, ಗಿಜಿಗುಟ್ಟುವ ವಾತವರಣ ನೆನಪಿಸಿಕೊಳ್ಳುತ್ತ ಇಡೀ ನಮ್ಮ ಪ್ರವಾಸದಲ್ಲೆಲ್ಲ ನನ್ನಲ್ಲಿ ಈ ಯೋಚನೆ ಕೊರೆಯುತ್ತಲೇ ಇತ್ತು ಎನ್ನುತ್ತಾರೆ. ಪ್ರತಿಯೊಬ್ಬ ಭಾರತೀಯನೂ ಹೊರದೇಶಗಳಲ್ಲಿ ಪ್ರವಾಸಿಸುವಾಗಾಗಲೀ ಅಲ್ಲಿಯೇ ಇರಬೇಕಾದ ಸಂದರ್ಭಗಳಲ್ಲಾಗಲಿ ಆಗಾಗ ಸಾಂದರ್ಭಿಕವಾಗಿ ಭಾರತದ ಇಂತಹ ದೃಶ್ಯಗಳನ್ನು ಪದೆ ಪದೇ ನೆನಪಿಸಿಕೊಳ್ಳುತ್ತ ಪೇಚಾಡಿಕೊಳ್ಳುವುದು ಇದ್ದೇಇದೆ. ಕೆಲವರಂತೂ ಭಾರತದ ವ್ಯವಸ್ಥೆಯ ಬಗೆಗೆ ಆಕ್ರೋಶಗೊಂಡು ಸಿಕ್ಕಾಪಟ್ಟೆ ಕೂಗಾಡಿಕೊಂಡು ಬರೆದವರೂ ಇದ್ದಾರೆ. ಕೊನೆಗೆ ಭಾರತಕ್ಕೆ ಬಂದು ಮೋಕ್ಷ ಪಡೆಯಲು ಸ್ವತಂತ್ರವಾಗಿ ಅಡ್ಡಾಡಲೂ ಹವಣಿಸುತ್ತಾರೆ (ಇದು ಯಾವತ್ತೂ ಹೀಗೆ).

ಪ್ರಭಾಮೂರ್ತಿ ವಕೀಲೆಯಾದುದರಿಂದ ಆಸಕ್ತಿಯಿಂದ ಅಲ್ಲಿಯ ಹೈಕೋರ್ಟು, ಸುಪ್ರೀಂಕೋರ್ಟು ಮತ್ತು ಕೌಂಟಿ ಕೋರ್ಟುಗಳನ್ನು ನೋಡಿ ಅಲ್ಲಿಯ ವ್ಯವಸ್ಥೆಗಳ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿರುವರು. ಪ್ರವಾಸಿ ಬಸ್ಸುಗಳ ಮುಖಾಂತರ ಅಲ್ಲಲ್ಲಿ ಹೋಗಿ ಕಾಂಗರೂ, ಕ್ವೋಲಾ ಪ್ರಾಣಿಗಳ ಫಾರಂ ನೋಡಿದ್ದಾರೆ. ಅಲ್ಪಕಾ ಪ್ರಾಣಿಗಳು ಮೇಯುವ ಹುಲ್ಲುಗಾವಲಿನಲ್ಲಿ ಅಡ್ಡಾಡಿದ್ದಾರೆ. ಗೋಲ್ಡ್ ಕೋಸ್ಟ್‌ನ ಸುಂದರ ತಾಣಗಳಲ್ಲಿ ಸುತ್ತಾಡಿದ್ದಾರೆ. ಪ್ರಪಂಚದ ನೈಸರ್ಗಿಕ ಅಚ್ಚರಿಗಳಲ್ಲೊಂದಾದ ಗ್ರೇಟ್ ಬ್ಯಾರಿಯರ್ ರೀಪನ್ನು ಹಡಗಿನಲ್ಲಿರುವ ಸಬ್‌ಮೆರೀನ್ ಕೆಳ ಅಂತಸ್ತಿನ ಗಾಜಿನ ತಳದ ಮುಖಾಂತರವೇ ಹವಳ ದಿನ್ನೆಗಳನ್ನು ನೋಡಿ ತೃಪ್ತಿ ಪಟ್ಟುಕೊಳ್ಳುತ್ತಾರೆ. ಹೀಗೆ ಇದೊಂದು ಸಂತೋಷವಾಗಿ ಅಡ್ಡಾಡಿ ಬಂದು ಬರೆದ ಪುಸ್ತಕವೆನ್ನಬಹುದಾಗಿದೆ.

'ದಿವ್ಯಮೌನದ ದೇಶಗಳಲ್ಲಿ' ಇದು ತ್ರಿವೇಣಿ ಶಿವಕುಮಾರರ ಪ್ರವಾಸ ಕಥನ. ಕುಟುಂಬದ ಸದಸ್ಯರು ಹಾಗೂ ಸಂಬಂಧಿಗಳು ಮತ್ತು ಕೆಲವು ಲೇಖಕಿಯರ ಒಂದು ದೊಡ್ಡ ಗುಂಪಿನಲ್ಲಿ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್‌ಗಳ ಪ್ರವಾಸ ಮಾಡಿ ಬಂದ ಅನುಭವದ ಪ್ರವಾಸ ಕಥನ ಇದಾಗಿದೆ. 'ದಿ ಗ್ರೇಟ್ ಬ್ಯಾರಿಯರ್ ರೀಫ್' ನೋಡುವ ಸಂಭ್ರಮದ ಮುಖಾಂತರ ಇವರ ಪ್ರವಾಸ ಕಥನ ಆರಂಭವಾಗುತ್ತದೆ.

ಸಮುದ್ರದೊಳಗಿನ ಮಾಯಾನಗರಿ ನೋಡಿ ಅಬ್ಬಾ! ಎಂದು ಬೆರಗಾಗಿದ್ದಾರೆ ತ್ರಿವೇಣಿ. ಸಬ್‌ಮರೀನ್ ದೋಣಿಯ ತಳದಲ್ಲಿ ಅಗಲ ಹಾಸಿದ್ದ ಗಾಜಿನಡಿಯಿಂದ ಸಮುದ್ರದಾಳದ ಹವಳದ ಕಣಿವೆ, ಕಣಿವೆಗಳ ಮಧ್ಯೆ ಅಸಂಖ್ಯಾತ ಬಣ್ಣ ಬಣ್ಣದ ಮೀನುಗಳು, ಬದುಕಿರುವ ಹವಳದ ಗೊಂಚಲುಗಳು, ನೀಲಿ, ಕೇಸರಿ, ಬಿಳಿ, ಕೆಂಪು ಗುಲಾಬಿ ಇತ್ಯಾದಿ ವೈವಿಧ್ಯಮಯ ಬಣ್ಣಗಳ ಹವಳಗಳು ಪೊದೆಗಳಂತೆ, ಜೊಂಪೆಗಳಂತೆ, ಹೂಗಳಂತೆ, ಹುತ್ತಗಳಂತೆ ಬೆಳದು ಹೊಸದೊಂದು ಲೋಕವನ್ನೇ ಸೃಷ್ಟಿಮಾಡಿಬಿಟ್ಟಿದನ್ನು ನೋಡಿ ಸಂತಸಪಟ್ಟಿದ್ದಾರೆ.

ನ್ಯೂಜಿಲ್ಯಾಂಡ್‌ನಲ್ಲಿ ಅಡ್ಡಾಡುವಾಗ ಸುಮಾರು ೮೦೦ ವರ್ಷಗಳ ಹಿಮದೆ ಚೀನಾದೇಶದಿಂದ ಥೈವಾನ್ ಪೆಸಿಫಿಕ್ ಸಾಗರದ ಮೇಲೆ ಪ್ರಯಾಣ ಮಾಡಿ ಇಲ್ಲಿ ನೆಲೆಸಿರುವ 'ಮಾರಿ' ಜನಾಂಗದವರ ಬಗೆಗೆ ಪರಿಚಯ ಕೊಡುತ್ತಾರೆ. ಸೊಂಟಕ್ಕೆ ತೆಂಗಿನ ಗರಿಯಿಂದ ಮಾಡಿರುವ ತುಂಡುಲಂಗದಂಥ ವಸ್ತುವನ್ನು ಸುತ್ತಿ ಕೊರಳಿಗೆ ವಿಚಿತ್ರವಾದ ಮಣಿಸರಗಳನ್ನು ಧರಿಸಿ, ಹಚ್ಚೆ ಹಾಕಿಕೊಂಡ ಜನ ಇವರು. ಇವರದೇ ಆದಂತಹ ನೃತ್ಯಶೈಲಿ, ಅಡುಗೆ, ಮರದ ಮೇಲಿನ ಸುಂದರ ಕೆತ್ತನೆಯ ಕೆಲಸ ಮುಂತಾದ ಸಂಪ್ರದಾಯಗಳನ್ನು ಉಳಿಸಿಕೊಂಡು ಬಂದದ್ದಾಗಿ ತಿಳಿಸುತ್ತಾರೆ. ಆದರೆ ಯುರೋಪಿಯನ್ನರು ಅಲ್ಲಿ ಕಾಲಿಟ್ಟ ನಂತರ ಅವರನ್ನು ಹತ್ತಿಕ್ಕಿ ತಮ್ಮ ಸಾಮ್ರಾಜ್ಯ ಸ್ಥಾಪಿಸಿದ್ದಾರೆ. ಸಮಾಜದ ಮುಖ್ಯವಾಹಿನಿಯಲ್ಲಿ ಅವರನ್ನು ಪೂರ್ತಿಯಾಗಿ ಬೆರೆಯಲು ಬಿಡುವುದಿಲ್ಲ. ಪ್ರವಾಸಿಗರಿಗೆ ತಮ್ಮ ವೇಷ ಭೂಷಣಗಳಿಂದ ಮನರಂಜನೆ ನೀಡಿ ತೃಪ್ತಿಪಟ್ಟುಕೊಳ್ಳುತ್ತಾರಷ್ಟೇ ಎಂದಿರುವರು ಲೇಖಕಿ. ಪ್ರಪಂಚದ ಎಲ್ಲಾ ರಾಷ್ಟ್ರಗಳ ಮೂಲ ನಿವಾಸಿಗಳ ಮೇಲಾದ ಯುರೋಪಿಯನ್ನರ ದಬ್ಬಾಳಿಕೆ ನೆನಪಿಸಿಕೊಳ್ಳುತ್ತ ಮರುಕಪಟ್ಟು ಅಯ್ಯೋ! ಎಂದು ಬೇಸರಪಟ್ಟುಕೊಂಡಿದ್ದಾರೆ.

ಸಿಡ್ನಿಯ ಓಪೇರಾ ಹೌಸ್, ಬ್ಲೂ ಮೌಂಟನ್ಸ್ ನೋಡುತ್ತಾ ಕಾಂಗರೂ ಕ್ವೋಲಾಗಳನ್ನು ನೋಡುತ್ತಾ, ನಿಸರ್ಗ ಸೌಂದರ್ಯದಲ್ಲಿ ಸಂತಸದಿಂದ ಅಡ್ಡಾಡಿ ಬಂದಿದ್ದಾರೆ. ಸ್ಥಿತಪ್ರಜ್ಞರಂತೆ ಗೊಂಬೆಗಳಂತೆ ಕಾಣುವ ಮಾನವರ ಈ ದಿವ್ಯ ಮೌನದ ದೇಶಗಳಲ್ಲಿ ಸಂಚರಿಸಿ ಬಂದ ಮೇಲೆ ಅಲ್ಲಿನ ನೀರವ ಸ್ಮಶಾನ ಮೌನಕ್ಕಿಂತ ನಮ್ಮ ಗೌಜು ಗದ್ದಲದ ಭಾರತ ಎಷ್ಟು ಚಂದವಿದೆ! ಈ

ಗಲಾಟೆ ಹಿತವಾಗಿದೆ ಎನಿಸಿದ್ದು ಸುಳ್ಳಲ್ಲ ಎಂದು ಬಹಳ ಆತ್ಮೀಯವಾಗಿ ಒಪ್ಪಿಕೊಂಡಿದ್ದಾರೆ. ಉಳಿದವರಂತೆ ಏರ್‌ಪೋರ್ಟಿನಲ್ಲಿ ಇಳಿಯುತ್ತಿದ್ದಂತೆಯೇ "ಛೀ! ಥೂ! ನಮ್ಮ ದೇಶ" ಎಂಬ ಅಬ್ಬರದ ಮಾತುಗಳನ್ನು ಆಡುತ್ತ ಕೊನೆಯವರೆಗೂ ಇಲ್ಲಿಯದೇ ಗಾಳಿ ಸೇವಿಸುತ್ತ ಬದುಕುವ ಕೆಲವು ಪ್ರವಾಸ ಲೇಖಕರು ಇಲ್ಲಿ ಕಣ್ಮುಂದೆ ತೇಲಿಹೋದರು.

ಪಿ.ಎಂ. ನಾಗಭೂಷಣಯ್ಯನವರ 'ನಾ ಕಂಡ ನ್ಯೂಜಿಲ್ಯಾಂಡ್' ಕೃತಿ ನ್ಯೂಜಿಲ್ಯಾಂಡಿನ ಭೌಗೋಳಿಕ ಪರಿಚಯದಿಂದ ಶುರುವಾಗುತ್ತದೆ. ಅಲ್ಲಿಯ ಹವಾಮಾನ, ಪ್ರಕೃತಿ ಸೌಂದರ್ಯಕ್ಕೆ ಮಾರು ಹೋಗಿದ್ದಾರೆ. ಅಲ್ಲಿಯ ರಸ್ತೆಗಳ, ವಾಹನಗಳ, ಸೊಬಗಿನ ಪ್ರವಾಸಿ ತಾಣಗಳ ಬಗೆಗೆ ಮಾಹಿತಿಗಳಿವೆ. ನ್ಯೂಜಿಲ್ಯಾಂಡಿನ ಮನೆಗಳೆಲ್ಲಾ ಕಟ್ಟಿಗೆಯ ಮನೆಗಳಾಗಿದ್ದು ಭೂಕಂಪನ, ಚಳಿಗೆ ತಡೆದುಕೊಳ್ಳುವಂತೆ ವ್ಯವಸ್ಥೆ ಮಾಡಿರುತ್ತಾರಂತೆ. ಇಲ್ಲಿ ಪ್ರತಿ ಮನೆಯ ಮುಂದೆ ಕೈತೋಟ ದೊಡ್ಡದಿದ್ದಷ್ಟು ತೆರಿಗೆ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ. ಅಲಂಕಾರಿಕ ಗಿಡಗಳು, ಹಣ್ಣಿನ ಗಿಡಗಳು ಹೆಚ್ಚಾಗಿ ಬೆಳೆಯುತ್ತಾರೆ. ಹಣ್ಣುಗಳು ಹೆಚ್ಚಾಗಿ ಬೆಳೆಯುವವರು ಪ್ಲಾಸ್ಟಿಕ್ ಚೀಲಗಳಲ್ಲಿ ಹಣ್ಣುಗಳನ್ನಿಟ್ಟು ಮನೆಯ ಮುಂದೆ ಹೊರಗಡೆ ರಸ್ತೆಗೆ ಸಮೀಪ ಇಟ್ಟು ಉಚಿತ ತೆಗೆದುಕೊಂಡು ಹೋಗಬಹುದು ಎಂದು ಬೋರ್ಡ್ ಹಾಕಿರುತ್ತಾರೆ. ಇಲ್ಲಿ ದ್ರಾಕ್ಷಿಯನ್ನು ಹೆಚ್ಚಾಗಿ ಬೆಳೆಯುವುದರಿಂದ ವೈನ್ ಫ್ಯಾಕ್ಟರಿಗಳು ಬಹಳಷ್ಟಿವೆ.

ನ್ಯೂಜಿಲ್ಯಾಂಡ್‌ನ ಸಂಖ್ಯೆ ೩೮ ಲಕ್ಷ. ಇದರಲ್ಲಿ ಭಾರತೀಯ ಜನಸಂಕ್ಯೆ ಸುಮಾರು ೨೦ ಸಾವಿರ ಎಂದು ಅಂದಾಜು. ಇದರಲ್ಲಿ ಸುಮಾರು ೬೦೦ ಜನ ಕನ್ನಡಿಗರಿರಬಹುದು. ಉಳಿದೆಲ್ಲ ಭಾರತೀಯ ಭಾಷಿಕರಂತೆ ಕನ್ನಡಿಗರೂ ಕನ್ನಡ ಸಂಘ ಸ್ಥಾಪಿಸಿಕೊಂಡಿದ್ದಾರೆ. ಗುಜರಾತಿಗಳು ತಮ್ಮ ಸಂಗದ ವತಿಯಿಂದ ಭಾರತೀಯ ಮಂದಿರ ಎಂಬ ದೊಡ್ಡ ದೇವಸ್ಥಾನವನ್ನು ಆಕ್ಲೆಂಡಿನಲ್ಲಿ ಕಟ್ಟಿದ್ದಾರೆ. ಈ ದೇವಸ್ಥಾನದಲ್ಲಿ ಪರಮೇಶ್ವರ, ಪಾರ್ವತಿ, ಗಣೆಶ, ನಂದಿ, ದುರ್ಗೆ, ರಾಮ ಲಕ್ಷ್ಮಣ ಸೀತೆ, ಕೃಷ್ಣ ರಾಧೆ, ಮಹಾವಿಷ್ಣು ಲಕ್ಷ್ಮಿ ಮತ್ತು ಆಂಜನೇಯ ವಿಗ್ರಹಗಳನ್ನು ಅಮೃತಶಿಲೆಯಲ್ಲಿ ತಯಾರಿಸಿ ಪ್ರತಿಷ್ಠಾಪಿಸಿದ್ದಾರೆ. ಅಲ್ಲಿ ಪ್ರತಿ ದಿವಸ ಪೀಜಾ ವ್ಯವಸ್ಥೆ ಇದೆ. ಆಕ್ಲೆಂಡಿನಿಂದ ೧೦ ಕಿ.ಮಿ. ದೂರದಲ್ಲಿ ಇಸ್ಕಾನ್ ದೇವಾಲಯವಿದೆ. ಬಹಳ ಜನ ಭಕ್ತರು ದಿನ ನಿತ್ಯವೂ ಭೇಟಿ ಕೊಡುತ್ತಾರೆ ಎನ್ನುತ್ತಾರೆ ಲೇಖಕರು.

ನ್ಯೂಜಿಲ್ಯಾಂಡ್‌ನ ಕನ್ನಡದ ಕೂಟದಲ್ಲಿ ನಡೆಯುತ್ತಿರುವ ಅನೇಕ ಕಾರ್ಯಕ್ರಮಗಳ ಬಗೆಗೆ ಲೇಖಕರು ಬಹಳ ಸಂತೋಷಪಟ್ಟು ಕೊಂಡಿದ್ದಾರೆ. ಅಲ್ಲಿಯ ಗುಜರಾತಿಗಳು, ತಮಿಳರು ಹೇಗೆ ತಮ್ಮತನವನ್ನು ಮಾತೃಭಾಷೆಯಲ್ಲಿ ಉಳಿಸಿಕೊಂಡಿದ್ದಾರೋ ಹಾಗೆಯೇ ಕನ್ನಡಿಗರೂ ಮನೆಯಲ್ಲಿ, ಮಕ್ಕಳೊಂದಿಗೆ ಉಳಿಸಿಕೊಳ್ಳಿರಿ ಎಂದು ಪ್ರಾಮಾಣಿಕ ಕಳಕಳಿಯಿಂದ ಅವರಿಗೆ ತಿಳಿಸಿಬಂದಿದ್ದಾರೆ ನಾಗಭೂಷಣಯ್ಯನವರು.

ಕೆಲವೇ ಪ್ರವಾಸ ಕಥನಗಳ ಮೂಲಕವಾದರೂ ಆಸ್ಟ್ರೇಲಿಯಾದ ಬಗ್ಗೆ ಅನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡತಾಯ್ತು.

❑

# ಭಾಗ ೪ – ಪ್ರಯೋಗಶೀಲತೆ

## ಆಶಯ:

‘ಏನಾದೂ ಮಾಡುತಿರು ತಮ್ಮ ನೀ ಸುಮ್ಮನಿರಬೇಡ’ – ಎನ್ನುವ ಡಾ. ಎಂ. ಗೋಪಾಲಕೃಷ್ಣ ಅಡಿಗರ ಕವಿತೆಯ ಸಾಲುಗಳು ಹೆಚ್ಚು ಅರ್ಥಪೂರ್ಣ ಮತ್ತು ಪ್ರಸ್ತುತವೆನ್ನಿಸುತ್ತವೆ. ಮತ್ತೊಂದು ನೆಲೆಯಲ್ಲಿ ಪ್ರಯೋಗಶೀಲತೆಗೆ ಹೇಗೆ ತಮ್ಮನ್ನು ತಾವು ಒಡ್ಡಿಕೊಳ್ಳಬೇಕು ಎನ್ನುವುದನ್ನು ಒತ್ತಿ ಹೇಳುತ್ತವೆ ಕೂಡ. ಕರೋನ ನಿಮಿತ್ತ ಲಾಕ್‌ಡೌನ್ ಸಮಯದಲ್ಲಿ ಆಫ್‌ಲೈನ್ ಶಿಕ್ಷಣದಿಂದ ಆನ್ಲೈನ್ ಕಡೆಗೆ ಮುಖ ತಿರುಗಿಸಿದ್ದು ಕೂಡ ಪ್ರಯೋಗಶೀಲತೆಯ ಮತ್ತೊಂದು ರೂಪ. ಇಂತಹ ಆನ್ಲೈನ್ ಪಾಠ ಕೇಳುತ್ತಿರುವ ಮಕ್ಕಳಿಗಾಗಿ ಭೌತವಿಜ್ಞಾನ, ರಸಾಯನ ವಿಜ್ಞಾನ, ಜೀವವಿಜ್ಞಾನ ವಿಷಯದ ಹಲವು ಪ್ರಯೋಗಗಳು, ಭಾಷಾ ವಿಷಯದ ಹಲವು ಪ್ರಯೋಗಗಳು ಅದುವರೆಗೂ ಶಾಲಾಕಾಲೇಜುಗಳಲ್ಲಿ ಶಿಕ್ಷಣ ಪಡೆಯುತ್ತಿದ್ದ ವಿದ್ಯಾರ್ಥಿಗಳು ಮನೆಯಲ್ಲೇ ಈ ಪ್ರಯೋಗಗಳಿಗೆ ತೆತ್ತುಕೊಳ್ಳುವುದಕ್ಕೆ ಸಾಧ್ಯವಾಗಿರುವುದನ್ನು ಸ್ಪಷ್ಟಪಡಿಸುತ್ತವೆ. ‘ಲೋ ಕಾಸ್ಟ್ ಸೈನ್ಸ್ ಎಕ್ಸ್‌ಪೆರಿಮೆಂಟ್ ಕಿಟ್’ ಬಳಿಸಿ ಹೆಚ್ಚು ಹೆಚ್ಚು ಪ್ರಯೋಗ ಮಾಡಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕಾಗುತ್ತದೆ.

ಹೀಗಿರುವಾಗ ಇಲ್ಲಿಯ ಪಠ್ಯಗಳನ್ನು ಇದೇ ಹಿನ್ನಲೆಯಲ್ಲಿ ಗಮನಿಸಬೇಕಾಗುತ್ತದೆ. ದೇಹ ಮತ್ತು ಮನಸ್ಸು ಸದಾ ಚಲನಶೀಲವಾದ ಚಟುವಟಿಕೆಗಳಲ್ಲಿ ತೊಡಗಬೇಕು. ಇಲ್ಲವೆಂದರೆ ನಿಂತ ನೀರಾಗುತ್ತವೆ, ಆ ಮೂಲಕ ರಾಡಿಗೊಳ್ಳುತ್ತವೆ. ಇದನ್ನೇ ‘ಏನಾದರೂ ಮಾಡುತಿರು ತಮ್ಮ ನೀ ಸುಮ್ಮನಿರಬ್ಯಾಡ’ – ಕವಿತೆ ಸಾರುತ್ತದೆ.

ಹಾಗೆಯೇ ಮನುಷ್ಯನ ಸ್ವಾರ್ಥ ಹಿತಾಸಕ್ತಿಯಿಂದ ಇಡೀ ಭೂಮಿ ಬಂಜೆಯಾಗಿದ್ದು, ಸಹಜ ಕೃಷಿ ಪದ್ಧತಿಯ ಅಳವಡಿಕೆ, ಸಾವಯವ ಕೃಷಿಯ ಅನಿವಾರ್ಯತೆ, ಕಳೆನಾಶಕಗಳನ್ನು ಬಳಸದೆ ಕಳೆನಿಯಂತ್ರಣ ನೀತಿ ಅನುಸರಿಸಿದರೆ ಭೂಮಿ ತನ್ನ ಎಂದಿನ ಸಮತೋಲನದ ಕಡೆಗೆ ಸಾಗಿ ಆರೋಗ್ಯವಂತ ಸಮಾಜ ಕಟ್ಟುವುದಕ್ಕೆ ಸಾಧ್ಯ ಎನ್ನುವುದನ್ನು ‘ಸಹಜ ಕೃಷಿಯ ನಾಲ್ಕು ತತ್ವಗಳು’ ಲೇಖನ ಸ್ಪಷ್ಟಪಡಿಸುತ್ತದೆ.

೧೨ನೇ ಶತಮಾನದ ಅಕ್ಕನ ಬದುಕನ್ನು ಹೀಗೂ ನೋಡಲೂ ಸಾಧ್ಯ ಎನ್ನುವುದನ್ನು ‘ಅಕ್ಕ ಅವನು ಸಿಕ್ಕಿದನೇ?’ ಎನ್ನುವ ಕತೆ ನಿರೂಪಿಸಿದರೆ, ಭೋಗ ಜೀವನದಿಂದ ತ್ಯಾಗ ಜೀವನದ ಕಡೆಗೆ ಮುಖ ಮಾಡಿದ ಗಾಂಧೀಜಿಯ ವ್ಯಕ್ತಿತ್ವ ‘ಬ್ರಹ್ಮಚರ್ಯಪಾಲನೆ’ಯಲ್ಲಿ ಸ್ಪಷ್ಟವಾಗುತ್ತದೆ.

– ಸಂಪಾದಕ ಮಂಡಳಿ

# ೧. ಕಾವ್ಯ
# ಏನಾದರೂ ಮಾಡುತಿರು ತಮ್ಮ

**– ಡಾ. ಎಂ. ಗೋಪಾಲಕೃಷ್ಣ ಅಡಿಗ**

ಏನಾದರೂ ಮಾಡುತಿರು ತಮ್ಮ
ನೀ ಸುಮ್ಮನಿರಬ್ಯಾಡ;
ಆ ಸಸಿಯ ಕೀಳು, ಚಿವುಟೀ ಚಿಗುರ.
ಹೂವ ಕಂಡರೆ ಹಿಸುಕಿ ಬಿಸುಡು; ಹುಲ್ಲೆಲ್ಲೆಲ್ಲಿ
ಅಲ್ಲಲ್ಲಿ ಕೊಳ್ಳಿ ಹಿಡಿದಾಡು ಲಂಡಾದಹನ.

ಮರಿಚಿಟ್ಟೆ, ಗಿಳಿ, ಗುಬ್ಬಿ – ಎಲ್ಲಿ ಕಂಡರೆ ಅಲ್ಲಿ
ಅಟ್ಟು, ಹಿಡಿ, ಕುಟ್ಟು; ಕಿತ್ತೆಸೆ ಪುಕ್ಕಪುಕ್ಕಗಳ.
ಕಾಡಾನೆ ಹೊಕ್ಕ ನಂದನದಲ್ಲಿ
ಬಿಕ್ಕುತಿದೆ ಇಲ್ಲಿ ಮಲ್ಲಿಗೆ ಅಲ್ಲಿ ಹೊಂಬಾಳೆ.
ಸುತ್ತಲೂ ಗೋಡೆ ಮೇಲೆಲ್ಲ ಪೌರುಷ ಬಲದ
ಸ್ವಿಚ್ಚು; ಕಣ್ಣನು ಮುಚ್ಚು;
ಒತ್ತು ಹತ್ತಿಪ್ಪತ್ತನೊಂದೆ ಸಲ, ನೆಲ, ನೀರು, ಆಕಾಶ –
– ಬಂಗಾರ ಮೊಟ್ಟೆ ಕೋಳಿಯ ಹೊಟ್ಟೆ – ಬಗೆ ಸೀಳು
"ಮಾಡು ಇಲ್ಲವೋ, ಮಡಿ."
ನಿನ್ನ ನಾಲ್ಕೂಕಾಲ ನರ್ತನಕೆ ಪ್ರತಿನಿಮಿಷ
ಏನಾದರೊಂದಕ್ಕೆ ಜಖಂ ಆಗದಿರೆ ನಿನ್ನ
ಅದ್ಭುತ ಪ್ರತಿಭೆಗೇ ಕುಂದು ಕಂಡೆಯ ತಮ್ಮ.
ವಾನರನ ಮಾಡಮಾಡುತ್ತಲಿ ವಿನಾಯಕನ ಮಾಡಿಬಿಟ್ಟರು ಸರಿಯೆ.
ಯೋಚಿಸುವುರಳೆದು ಸುರಿವುದು ತೂಗಿ ತೂರುವುದು–
ಈ ಎಲ್ಲ ಗತಕಾಲದಾಪತ್ತು;
ಸತ್ತ ಭಾವದ ಸಾಯಲಾರದ ಪ್ರೇತ ಸಂಪತ್ತು.
ಕಾಡು ಇದೆ, ಕಡಿ; ಸಿಗಿದು ಕಟ್ಟು ತೋರಣ. ಕೈಲಿ

ಕೊಡಲಿ ಇದೆ, ಮಚ್ಚು, ಗರಗಸ, ಕತ್ತಿ ಎತ್ತೆತ್ತಿ

ಆಡಿಸಾಡಿಸು –
ಮಾಗಿಯಲ್ಲಿ ಸುತ್ತಲು ಮಬ್ಬು ಕವಿದಾಗ,
ಮೋರೆ ಮೋರೆಯ ಮಧ್ಯೆ ಒಂದೆರೆಡು ಗೆರೆ ಮಂಜುಗೋಡೆ
ನೆಗೆದೆದ್ದಾಗ.
ದಾರಿ ಕಣ್ಣೆದುರು ಕವಲೊಡೆದು ನಿಡುಸುಯ್ದಾಗ,
ಎರಡು ಗಿರಿಶಿಖರ ತಲೆಯೆತ್ತಿ ಮಾರ್ಮಲೆದಾಗ,
ಮರಮರದ ಮೇಲೆ ಮೋಹಿನಿ ಕಣ್ಣು ಹೊಡೆದಾಗ –
ಚಿಂತೆಯೇ, ಧರ್ಮಸಂಕಟವೇ?
ಛೀ, ತೆಗೆ, ನೀನು ಸರಳ
ಅದೆ ನಿನ್ನ ಹೆಗ್ಗಳಿಕೆ
ಕಣ್ಣಪಟ್ಟಿಯ ಕುದುರೆನೋಟ ನಿನ್ನಗ್ಗಳಿಕೆ.
ಕೈಗೇನೆ ಸಿಕ್ಕಿದರು ತಿನ್ನು;
ಕಣ್ಣಿಗೆ ಏನು ಬಿದ್ದರೂ ಅದ ಹಿಡಿದು ಹಿಂಡು;
ಕಾಲಿಗೆ ಏನು ತೊಡರಿದರು ಅದ ಹಿಡಿದು ಕತ್ತರಿಸು.
ಈ ಅಬಲೆ
'ಮಲಗಿರುವ ತಾಯಿ ಪೃಥಿವೀ'
ಸುಸ್ತಾಗಿ ಇಲ್ಲಿ ಮಲಗಿದ್ದಾಳೆ; ಮುಗಿಲಕಡೆ
ಕಣ್ಣನೆತ್ತಿದ್ದಾಳೆ.
ಅವಳ ಅಂಗಾಂಗದಲಿ
ಒಂದಿಷ್ಟು ರಕ್ತ ಜಿನುಗುವ ತನಕ ಅದ ಕಚ್ಚಿ ಹೀರು.
ಮಾಂಸ
ಮೂಳೆ ನರ ಮಜ್ಜೆ ತೊಗಲಷ್ಟಾದರೂ ಇಹುದೋ ಅಲ್ಲೊ!
ಅಹಹಾ, ಗಂಡು ನೀ ಕಣೋ!
    ಆ ಅಲ್ಲಿ ಇಹುದು ಜೀವದ ಬಾವಿ

    ಕಟ್ಟು ಯಾತವ – ಯಾತಕಾದರೇನಂತೆ ಅದು –
    ಮೊಗೆ ನೀರ.

ಬಾವಿತಳ ತೊಳಸು ಹನಿಬನಿಯ ಕೊನೆ ಸಿಗುವತನಕ
ಪಾತಾಳಗರುಡಿ ಇಳಿದಿಳಿದು ತಡಕಲಿ ತಳವ
ಅಣುವನೊಡೆ, ಮಹತ್ತನ್ನು ಪಡೆ.
ಬ್ರಹ್ಮಾಂಡಕ್ಕೆ ತೊಟ್ಟುಬಿಡು ಬ್ರಹ್ಮಾಸ್ತ್ರ
ವಿಜಯೀಭವ.

ಏನಾದರೂ ಮಾಡುತಿರು ತಮ್ಮ; ಸುಮ್ಮನೆ ಕೂತು
ನೆಲಕೆ ನೀ ಬರಿ ಭಾರವಾಗಬೇಡವೋ; ನೆಲದ
ಭಾರ ಕಳೆಯಲು ಹೀಗೆ ಮಾಡು ನೀ ಸರಿ, ಸಹಜ.

❑

# ೨. ಕಥೆ

# ಅಕ್ಕ ಅವನು ಸಿಕ್ಕಿದನೇ?

**– ಸ್ವಾಮಿ ಪೊನ್ನಾಚಿ**

**ಚಿಲಿಮಿಲಿ ಎಂದೋಡುವ ಗಿಳಿಗಳಿರಾ**
**ನೀವು ಕಾಣಿರೆ ನೀವು ಕಾಣಿರೆ**
**ಸರವೆತ್ತಿ ಪಾಡುವ ಕೋಗಿಲೆಗಳಿರಾ**
**ನೀವು ಕಾಣಿರೆ ನೀವು ಕಾಣಿರೆ**
**ಎರಗಿ ಬಂದಾಡುವ ದುಂಬಿಗಳಿರಾ**
**ನೀವು ಕಾಣಿರೆ ನೀವು ಕಾಣಿರೆ**
**ಕೊಳದ ತಡಿಯೊಳಗಾಡುವ ಹಂಸಗಳಿರಾ**
**ನೀವು ಕಾಣಿರೆ ನೀವು ಕಾಣಿರೆ**
**ಗಿರಿಗವ್ವರದೊಳಗಾಡುವ ನವಿಲುಗಳಿರಾ**
**ನೀವು ಕಾಣಿರೆ ನೀವು ಕಾಣಿರೆ**
**ಚೆನ್ನಮಲ್ಲಿಕಾರ್ಜುನನೆಲ್ಲಿಹನೆಂದು ಹೇಳಿರೆ...**

ಈ ಹಾಳುಗಾಳಿ ಯಾಕಾದರೂ ಬೀಸುತ್ತಾವೋ? ಹಾಗೆ ಅಂದುಕೊಂಡಾಗಲೆಲ್ಲಾ ಅವಳಿಗೆ ಸವಾಲು ಹಾಕುವಂತೆ ಮತ್ತಷ್ಟು ಜೋರಾಗಿ ಬೀಸುತ್ತಿತ್ತು. ಯಾಕಾದರೂ ಅರಮನೆ ಬಿಟ್ಟು ಬಂದೆನೋ. ನಾನು ಎಲ್ಲರ ಹಾಗೆ ಅವನಿಗೆ ಮಂಚದಲ್ಲಿ ಮೈ ಒಪ್ಪಿಕೊಂಡಿದ್ದರೆ ಆಗುತ್ತಿರಲಿಲ್ಲವೆ? ಈ ಉರಿಬಿಸಿಲಿನಲ್ಲಿ ಅಂಗಾಲು ಸುಡಿಸಿಕೊಂಡು ಪಾಡು ಪಡುವ ಬದಲು ಆ ಸುಖದ ಸುಪ್ಪತ್ತಿಗೆಯಲ್ಲಿ ನರಳಬಾರದಿತ್ತೇ? ಯಾವತ್ತೊಂದಿನವಾದರೂ ಈ ಹಾಳು ದೇಹ ಮಣ್ಣಾಗಬೇಕು. ಯಾವ ನಂಬಿಕೆಯಲ್ಲಿ ಅವನನ್ನು ಹುಡುಕಲು ಹೊರಟಿರುವುದು ನಾನು? ಛೇ, ಅಂಥದ್ದೆಲ್ಲಾ ಯೋಚನೆ ಮಾಡಬಾರದು ಎಂದು ಅವಳ ಅಂತಃಪ್ರಜ್ಞೆ ಜಾಗೃತವಾಯಿತು. ಒಮ್ಮೆ ಕೋಪಗೊಂಡ ಗಾಳಿ ಜೋರಾಗಿ ಬೀಸಿದ್ದರಿಂದ ಮೈಮೇಲೆ ಇಳಿಬಿದ್ದಿದ್ದ ಅವಳ ಕಡುಕಪ್ಪು ಅಮಾಸಿಯಂತಿದ್ದ ಕೂದಲ ರಾಶಿ ಅತ್ತಿತ್ತ ಚದುರಿತು. ಒಮ್ಮೆ ತನ್ನ ಪೂರಾ ಗುಲಾಬಿಯಂಥ

ಸೌಂದರ್ಯ ನೋಡಿಕೊಂಡ ಅವಳಿಗೆ ತನ್ನ ತುಂಬು ಯೌವನದ ದೇಹ ನೊಡಿ ಮರುಕವುಂಟಾಯಿತಾದರೂ ಮರುಕ್ಷಣವೇ ನಾಚಿದಂತಾಗಿ ಅತ್ತಿತ್ತ ಒಮ್ಮೆ ನೋಡಿ ತನ್ನ ಕೂದಲು ಸರಿಪಡಿಸಿಕೊಂಡಳು. ಇಂಥಾ ಜನ ಇಲ್ಲದ ಪ್ರದೇಶದಲ್ಲಿ ಯಾರು ತಾನೆ ನನ್ನ ನೋಡುವರು? ನೋಡಿದರೂ ನನಗೇನಂತೆ ಅಂದುಕೊಂಡಳಾದರೂ ಮನದೊಳಗೆ ಎಂಥದೋ ಶಂಕೆ ಮೂಡಿ ಮರೆಯಾಯಿತು.

ಸೊಂಟಕ್ಕೆ ಸುತ್ತಿದ ಬಟ್ಟೆ ಮುಳ್ಳಿಗೆ ಸಿಕ್ಕಿ ಅಲ್ಲಲ್ಲಿ ಹಿಂಜಿ ಜಾಲಿಕೊಂಡಿತ್ತು. ಸದ್ಯ ಈ ಸರಿಹೊತ್ತಿನಲ್ಲಿ ಯಾವ ಕಾಡುಮೃಗದ ಬೇಟೆ ಕಣ್ಣುಗಳಿಗೂ ಸಿಕ್ಕದೆ ಮುಂದಿನ ಊರನ್ನು ತಲುಪಿಕೊಂಡರೆ ಸಾಕು ಅನ್ನಿಸಿಬಿಟ್ಟಿತು. ಅವಳ ಮೃದುವಾದ ಅಂಗಾಲುಗಳಿಗೆ ಕಲ್ಲು ಒತ್ತಿ ರಕ್ತ ಒಸರುವ ಮಟ್ಟಕ್ಕೆ ಹೋಯಿತು. ನಯನಾಜೂಕಿನ ಹೂವಿನಂತೆ ನೋಡಿಕೊಳ್ಳುತ್ತಿದ್ದ ಅರಮನೆಯ ಸಖಿಯರು ನೆನಪಿಗೆ ಬಂದು ಮನಸಿಗೆ ತಳಮಳ ಶುರುವಾಯಿತು. ಎಷ್ಟು ಬೇಗ ಮುಂದಿನ ಊರನ್ನು ಸೇರಿಕೊಳ್ಳುತ್ತೇನೋ ಎನ್ನಿಸಿ ಬೇಗ ಬೇಗ ಹೆಜ್ಜೆ ಹಾಕಿದಳು. ದೂರದಲ್ಲಿ ದೀಪದ ಬೆಳಕು ಕಂಡಂತಾಗಿ ಇಲ್ಲೇ ಯಾವುದಾದರೂ ಮನೆಗಳಿದ್ದರೆ ಅವರನ್ನು ಬೇಡಿಕೊಂಡು ತಂಗಿದ್ದು ಬೆಳಿಗ್ಗೆ ಮುಂದುವರೆದರಾಯ್ತು. ನನ್ನ ಯಾರೂ ಗುರುತು ಹಿಡಿಯದಿದ್ದರೆ ಸರಿ ಎಂದುಕೊಂಡು ದೀಪದ ಬೆಳಕಿನತ್ತ ಮುಖ ಮಾಡಿ ನಡೆಯತೊಡಗಿದಳು.

ರಾತ್ರಿ ಹೊತ್ತಿನಲ್ಲಿ ಯಾವತ್ತೂ ಮನೆಯಿಂದ ಹೊರಗೆ ಬರದ ಅವಳಿಗೆ ಜೀರುಂಡೆಯ ಚೀರುವಿಕೆಯ ಶಬ್ದ ಅವ್ಯಕ್ತ ಭಯವನ್ನುಂಟುಮಾಡಿತು. ಹಗಲು ಕರಗಿ ಕತ್ತಲು ಸುತ್ತಲೂ ಆಕ್ರಮಿಸುತ್ತಿತ್ತು. ದಾರಿ ನಿಚ್ಚಳವಾಗಿ ಕಾಣುತ್ತಿದ್ದರೂ ಯಾವ ಮೃಗ ಮೇಲೆ ಎಗರಿ ಬೀಳುವುದೋ ಎಂಬ ಭೀತಿಯುಂಟಾಗಿ; ಮತ್ತೊಮ್ಮೆ ಧೈರ್ಯ ತಂದುಕೊಂಡು ಅವನನ್ನು ನಂಬಿ ಬಂದಿದ್ದೇನೆ, ನಿಜವಾಗಿಯೂ ಅವನಿಗೆ ನಾನು ಸೇರಲೇಬೇಕೆಂದಿದ್ದರೆ ನನ್ನನ್ನು ಕಾಪಾಡಿಕೊಳ್ಳಲಿ ಎನ್ನುತ್ತಾ ಮತ್ತಷ್ಟು ಜೋರಾಗಿ ಹೆಜ್ಜೆ ಹಾಕತೊಡಗಿದಳು. ನಿಧಾನವಾಗಿ ಆಕಾಶದಲ್ಲಿ ಚುಕ್ಕಿಗಳು ಸರದಿಯಂತೆ ಕಾಣತೊಡಗಿದವು. ತಣ್ಣನೆ ಬೀಸುವ ಗಾಳಿ, ದೂರದಲ್ಲೆಲ್ಲೋ ನಾಯಿಗಳೋ... ನರಿಗಳೋ... ಊಳಿಡುವುದು ಕೇಳಿಸಿತಾದರೂ ಅವುಗಳ

ನಿರ್ದಿಷ್ಟವಾದ ಶಬ್ದ ಯಾವುದರದಿರಬಹುದೆಂದು ಅವಳಿಗೆ ಊಹಿಸಲು ಆಗಲಿಲ್ಲ. ದೂರದಲ್ಲಿ ಕಾಣುತ್ತಿದ್ದ ಬೆಳಕು ಹತ್ತಿರತ್ತಿರಕ್ಕೆ ಬರುತ್ತಿತ್ತು. ನೋಡಿದರೆ ಅದೊಂದು ಊರಾಗಿರದೆ ಊರ ಹೊರಗಿನ ಯಾವುದೋ ಮಠದಂತಿತ್ತು. ನೇರವಾಗಿ ಮಠದ ಅಂಗಳಕ್ಕೆ ಬಂದು ನಿಂತಳು. ಈ ಸರಿ ಹೊತ್ತಿನಲ್ಲಿ ಬಂದ ಈಕೆ ಯಾರಾಗಿರಬಹುದೆಂದು ಶಂಕೆಯೊಂದಿಗೇ ಮಠದ ಜಗುಲಿಯಲ್ಲಿ ಕುಳಿತಿದ್ದ ಕಾವಿ ಸನ್ಯಾಸಿ "ಯಾವೂರು ತಾಯಿ? ಇಷ್ಟು ಹೊತ್ತಿನಲ್ಲಿ..." ಎಂದ. ಅವನ ಮೃದುಮಾತಿನಿಂದ ಸಮಾಧಾನಗೊಂಡ ಇವಳು ತನ್ನ ನಿಜಸ್ವರೂಪ ಹೇಳದೆ "ಇಲ್ಲೇ ಪಕ್ಕದೂರು. ಅಲ್ಲಿ ಕಾಣುವ ಊರಿಗೆ ಹೋಗಬೇಕಿತ್ತು" ಎಂದಳು. ಅನುಮಾನಗೊಂಡ ಕಾವಿ ಸನ್ಯಾಸಿ "ಮನೆಯಲ್ಲಿ ಗಲಾಟೆ ಮಾಡಿಕೊಂಡು ಏನಾದರೂ ಮನೆ ಬಿಟ್ಟು ಬಂದೆಯಾ ತಾಯಿ? ಪರವಾಗಿಲ್ಲ. ಈ ಹೊತ್ತಿನಲ್ಲಿ ಈ ದಾರಿ ಸರಿಯಿಲ್ಲ; ಇಲ್ಲೇ ಮಠದಲ್ಲಿ ಮಲಗಿದ್ದು ಬೆಳಿಗ್ಗೆ ಎದ್ದು ಹೋಗು ತಾಯಿ" ಎಂದ. ಈತನೊಬ್ಬನೇನೋ ಅಥವಾ ಮತ್ಯಾರಾದರೂ ಇರುವರೋ ಎಂದು ಸುತ್ತ ಕಣ್ಣಾಡಿಸಿದಾಗ ಮಠದ ಜಗುಲಿಯ ಮೇಲೆ ಮತ್ತೆ ಕೆಲವರು ಮಲಗಿರುವುದನ್ನು ಕಂಡು ಧೈರ್ಯ ಬಂದು; ಇಷ್ಟು ಹೊತ್ತಿನಲ್ಲಿ ಎಲ್ಲಿಗೆ ತಾನೇ ಹೊರಡುವುದು? ಎಂದು ಯೋಚಿಸುತ್ತಿರುವಾಗಲೇ "ಪರವಾಗಿಲ್ಲ ಬನ್ನಿ ತಾಯಿ, ಊಟ ಮಾಡಿದಿರಾ?" ಕೇಳಿದ ಕಾವಿ ಸನ್ಯಾಸಿ. ಏನು ಹೇಳಬೇಕೆಂದು ತೋಚದಾಗಿ ಆಯಿತು ಎಂಬಂತೆ ತಲೆಯಲ್ಲಾಡಿಸಿದಳು. "ಸರಿ ತಾಯಿ ಮಲಗಿಕೊಳ್ಳಿ" ಎಂದವನು ಚಾಪೆ ದಿಂಬುಗಳನ್ನು ತಂದಿಟ್ಟ. ಈತನೂ ಸಹ ತನ್ನಂತೆಯೇ ವೈರಾಗ್ಯದ ಹಾದಿ ಹಿಡಿದವನು; ಇಲ್ಲಿ ಮಲಗಿಕೊಂಡರೆ ತೊಂದರೆ ಇಲ್ಲ ಎನಿಸಿ ಜಗುಲಿಯ ಪಕ್ಕದಲ್ಲಿ ಹಾಸಿಕೊಂಡು ಮಲಗಿದಳು.

ಸುತ್ತ ಮುತ್ತಲಿನ ಸಣ್ಣಪುಟ್ಟ ಸದ್ದುಗಳು ನಿಧಾನಕ್ಕೆ ಕರಗತೊಡಗಿದ್ದವು. ಚೀರ್... ಚೀರ್... ಎನ್ನುವ ಎಂತದೋ ಒಂದು ಜಾತಿಯ ಕೀಟದ ಶಬ್ದ ಮಾತ್ರ ನಿಲ್ಲದೆ ನಿರಂತರವಾಗಿತ್ತು. ಬಹಳ ದೂರ ನಡೆದಿದ್ದ ಅವಳಿಗೆ ಮೈ ಕೈಕಾಲು ನೋವಿನಿಂದ ಮಂಪರು ಕವಿಯತೊಡಗಿತು. ಮುಂದಿನ ದಾರಿ ಯಾವುದು? ಎಲ್ಲಿಗೆ ಹೋಗುವುದು? ಯಾರನ್ನು ಕೇಳುವುದು? ಬೆಳಿಗ್ಗೆಯಾಗಲಿ ನೋಡಿಕೊಳ್ಳುವ ಎಂದು ಮನಸ್ಸಿನಲ್ಲೇ ಚನ್ನಮಲ್ಲಿಕಾರ್ಜುನ ಎಂದು ಗೊಣಗಿಕೊಂಡು ನಿದ್ರೆಗೆ ಒರಗಿದಳು.

ಯಾರೋ ಮೊಣಕಾಲನ್ನು ಸವರುತ್ತಿರುವಂತೆ ಭಾಸವಾಗಿ ಥಟ್ಟನೆ ಎಚ್ಚರಗೊಂಡು ನೋಡಿದರೆ ಕಾವಿಸನ್ಯಾಸಿ ಪಾದದಡಿಯಲ್ಲಿ ಕುಳಿತು ಅವಳ ಬಟ್ಟೆಯನ್ನು ಮೊಣಕಾಲಿನವರೆಗೂ ಎತ್ತಿಬಿಟ್ಟಿದ್ದ. ಕಾಲನ್ನು ಝಾಡಿಸಿ ಪೂರ್ತಿ ಬಟ್ಟೆ ಹೊದ್ದುಕೊಂಡು ಉಗ್ರಗೊಂಡು "ಛೇ... ಕಾವಿ ಹಾಕಿದ್ದೀಯಲ್ಲ, ನಾಚಿಕೆಯಾಗುವುದಿಲ್ಲವಾ ನಿನಗೆ ಇಂಥಾ ಕೆಲಸ ಮಾಡುವುದಕ್ಕೆ" ಎಂದು ಥಟ್ಟನೆ ಎದ್ದು ನಿಂತಳು. ಇದನ್ನು ನಿರೀಕ್ಷಿಸದ ಅವನು "ಹಗಲಲ್ಲಿ ಹೊಟ್ಟೆ ತುಂಬಿಸಿಕೊಳ್ಳುವುದಕ್ಕೆ ಕಾವಿ; ಆಗ ಎಲ್ಲಾ ನೋಡುತ್ತಿರುತ್ತಾರೆ. ಬಾ... ಈ ವೈರಾಗ್ಯವೆಲ್ಲಾ ಸುಳ್ಳು... ಭೋಗವೇ ನಿಜ. ಈ ದೇಹ ನಶ್ವರವಾದುದು, ಇರುವವರೆಗೂ ಸುಖಿಸಿ ಬಿಡಬೇಕು" ಎಂದು ತಬ್ಬಿಕೊಳ್ಳಲು ಮುಂದಾದ. ಆತನ ದುರ್ವರ್ತನೆಯನ್ನು ಹೇಗೆ ಸಹಿಸಿಕೊಳ್ಳಬೇಕೆಂದು ತಿಳಿಯದೆ ಒಮ್ಮೆ ಆತನನ್ನು ಜೋರಾಗಿ ತಳ್ಳಿ ಕಿರುಚಿಕೊಂಡಳು. ಸುತ್ತಮುತ್ತಲಿನ ನೀರವ ಮೌನದಲ್ಲಿ ಅವಳ ಧ್ವನಿ ಪ್ರತಿಧ್ವನಿಸಿದಂತಾಗಿ ಜಗುಲಿಯ ಮೂಲೆಯಲ್ಲಿ ಮಲಗಿದ್ದ ಮತ್ತೋರ್ವ ಕಾವಿಸನ್ಯಾಸಿಗೆ ಎಚ್ಚರವಾಗಿ ಆಕಳಿಸುತ್ತಾ ಎದ್ದು ಕೂತವನಿಗೆ ಈ ದೃಶ್ಯ ಕಂಡು ಪರಿಸ್ಥಿತಿಯ ಅರಿವಾಯಿತು. ತಕ್ಷಣವೇ ಎದ್ದ ಆತ ಈ ಕಾಮುಕ ಸನ್ಯಾಸಿಗೆ ಛೀಮಾರಿ ಹಾಕಿ ಮಠದ ಒಳಗಡೆ ತಳ್ಳಿ ಅಗುಳಿ ಹಾಕಿಕೊಂಡ. ಭಯದಿಂದ ಥರಥರ ನಡುಗುತ್ತಿದ್ದ ಅವಳನ್ನು "ತಾಯಿ ಅಂಜಬೇಡ ಆತನಂತೆ ನಾನಲ್ಲ; ನಾನು ನಿನ್ನ ಸಹೋದರ, ಧೈರ್ಯವಾಗಿ ಮಲಗಿ, ನಾನು ಕಾವಲಿರುತ್ತೇನೆ" ಎಂದು ಸ್ವಲ್ಪ ದೂರದಲ್ಲಿ ಕುಳಿತು ಬೊಂಗಿ ಹತ್ತಿಸಿದ.

ಇವಳಿಗೆ ಮಲಗಲು ಭಯವಾಗಿ ಎದ್ದು ಹೊರಟು ಬಿಡೋಣ ಎನ್ನಿಸಿತಾದರೂ 'ಈ ಸರಿಹೊತ್ತಿನಲ್ಲಿ ಎಲ್ಲಿ ಹೋಗುವುದು? ಏನಾದರೂ ಆಗಲಿ, ನೋಡಿ ಬಿಡುವಾ...' ಎನ್ನುತ್ತಾ ಎರಡೂ ಮಂಡಿಗಳನ್ನು ಕೂಡಿಸಿಕೊಂಡು ಅದರ ಮೇಲೆ ಕೈಗಳನ್ನಿಟ್ಟು ತಲೆ ಒರಗಿಸಿ ಕೂತಳು. 'ಇಂಥಾ ನೀಚ ಸನ್ಯಾಸಿಗಿಂತ ಆ ರಾಜನೇ ಎಷ್ಟೋ ಪಾಲು ಮೇಲು ಅನ್ನಿಸಿತು. ಪಾಪ ಅವನಾದರೂ ಧರ್ಮಪತ್ನಿಯಾಗೆಂದು ನನ್ನ ಸನಿಹ ಬಯಸಿದನೇ ಹೊರತು ಇವನಂತೆ ಕಾಮುಕನಾಗಿ ನಡೆದುಕೊಳ್ಳಲಿಲ್ಲ. ಥೂ... ಎಂಥಾ... ಜಂಗಮರು... ಇಂಥವರನ್ನೇ ಇರಬೇಕು. ರಾಜ ಬೇಡ ಬೇಡವೆಂದರೂ ಅರಮನೆಯಲ್ಲಿ ಇವರನ್ನು ಕರೆಸಿ ಪೂಜಿಸುತ್ತಿದ್ದುದು

ಮತ್ತು ಸತ್ಕರಿಸುತ್ತಿದ್ದುದು!' ಸನ್ಯಾಸಿಗಳ ಬಗ್ಗೆ ಅಸಹ್ಯವುಂಟಾಯಿತು. ಮತ್ತೊಮ್ಮೆ ದೂರದಲ್ಲಿ ಬೊಂಗಿ ಸೇಯುತ್ತಾ ತನ್ನ ಕಾವಲಿಗೆ ಕುಳಿತ ಸೋದರ ಸನ್ಯಾಸಿಯನ್ನು ನೋಡಿ ಎಲ್ಲರೂ ಅಂಥವರಿರುವುದಿಲ್ಲ ಎಂದುಕೊಂಡು ತನಗೆ ತಾನೇ ಸಮಾಧಾನ ಮಾಡಿಕೊಳ್ಳುತ್ತಿದ್ದಳು. ಸುತ್ತಲೂ ಕತ್ತಲು ಗವ್ ಎನ್ನುತ್ತಿತ್ತು. ಅನತಿ ದುರದಲ್ಲಿ ಸೋದರ ಸನ್ಯಾಸಿ ಸುರಳಿ ಸುರಳಿಯಾಗಿ ಹೊಗೆ ಬಿಡುವುದರಲ್ಲಿ ನಿರತನಾಗಿದ್ದ. 'ಯಾವ ಹೊತ್ತೋ? ಇದು ಬೆಳಿಗ್ಗೆಯಾಗಲು ಇನ್ನೂ ಎಷ್ಟು ಹೊತ್ತು ಬೇಕೋ?' ಎಂದು ನಿಟ್ಟುಸಿರಿಟ್ಟಳು. ಇವಳು ಮಲಗದೆ ಒದ್ದಾಡುತ್ತಿರುವುದನ್ನು ಕಂಡ ಆ ಸೋದರ ಸನ್ಯಾಸಿ "ತಾಯಿ, ಹೆದರಬೇಡ. ನನ್ನ ಗುರುದೇವರಾಣೆ ಕಾವಲಿರುತ್ತೇನೆ. ಮಲಗಿಕೊಳ್ಳಿ" ಎಂದು ಮರುಕ ವ್ಯಕ್ತಪಡಿಸಿದ. ಆತನನ್ನು ಪೂರ್ತಿ ನಂಬಲೂ ಆಗದೇ ದೇಹವನ್ನು ಹಾಸಿಗೆಗೆ ಒರಗಿಸಿದಳು. ಬಹಳ ಹೊತ್ತಾದರೂ ಕಣ್ಣಿಗೆ ನಿದ್ದೆ ಹತ್ತಲಿಲ್ಲ.

ಆವತ್ತು ನಾನು ಉಪ್ಪರಿಗೆಯ ಮೇಲೆ ಕೂದಲರಾಶಿ ಇಳಿಬಿಟ್ಟುಕೊಂಡು ನಿಲ್ಲಬಾರದಿತ್ತು. ಏನು ಮಹತ್ಕಾರ್ಯ ಮಾಡಿದ ಅಂತ ಎಲ್ಲರಂತೆ ನಾನೂ ಅವನನ್ನು ನೋಡಲು ಬಂದದ್ದು? ನಾನು ಬಂದದ್ದಲ್ಲ! ಗೆಳತಿ ಬಲವಂತವಾಗಿ ಕರೆದುಕೊಂಡು ಬಂದದ್ದು. ಈ ಊರಿನ ಗಣ್ಯರೆಲ್ಲಾ ಹೇಗೆ ಸಲ್ಲಿಸುತ್ತಿದ್ದರು ಅವನಿಗೆ ರಾಜ ಮರ್ಯಾದೆಯನ್ನ! ಕುದುರೆಯ ಮೇಲೆ ಕೂತಿದ್ದ ಆತ ಅದ್ಯಾವ ಗಳಿಗೆಯಲ್ಲಿ ನಾನಿದ್ದ ಉಪ್ಪರಿಗೆಯ ಕಡೆ ನೋಡಿದನೋ... ಎಂಥಾ ನೋಟ. ಕಣ್ಣ ಪಾಪೆಯನ್ನು ಅತ್ತಿತ್ತ ಅಲುಗಾಡಿಸದೇ ನನ್ನನ್ನೇ ನೋಡುತ್ತಿದ್ದಾನಲ್ಲ! ಸುತ್ತಮುತ್ತಲಿನ ಜನರ ಅರಿವಿಲ್ಲದೆ, ನಾನು ತಲೆತಗ್ಗಿಸಿ ಅಲ್ಲಿಂದ ತೆರಳದಿದ್ದರೆ ತಿಂದು ಬಿಡುತ್ತಿದ್ದನೇನೋ... ಎಂಥಾ ಕ್ಷುದ್ರನೋಟ! ಆಮೇಲೆ ಆತ ಯಾರನ್ನೂ ನೋಡಲಿಲ್ಲವಂತೆ, ಕಾಟಾಚಾರಕ್ಕೆ ಮೆರವಣಿಗೆ ಮುಗಿಸಿ ಅರಮನೆಗೆ ಹೋಗಿ ಊಟ ನಿದ್ರೆ ಬಿಟ್ಟನಂತೆ. ಆಮೇಲಾದರೂ ಸುಮ್ಮನಿದ್ದನಾ? ದೂತರನ್ನು ಅಟ್ಟಿ ಅಪ್ಪನಿಗೆ ಮದುವೆ ಮಾಡಿಕೊಡುವಂತೆ ರಾಜಾಜ್ಞೆಯನ್ನು ಹೊರಡಿಸಿಬಿಟ್ಟ. ರಾಜನ ಋಣಕ್ಕೆ ಬಿದ್ದ ಅಪ್ಪನಿಗೆ ನಾನು ಹೇಗೆ ತಾನೇ ತಿಳಿಹೇಳಲಿ. ನನ್ನನ್ನು ಸ್ವತಂತ್ರಕ್ಕೆ ಬಿಡಬೇಕು ಎಂದು ಗುರುಗಳ ಮಾತಿನಂತೆ ಷರತ್ತುಗಳನ್ನು ಹಾಕಿದರೆ ಮೂರ್ಖ ರಾಜ ಅಷ್ಟೂ ಷರತ್ತುಗಳನ್ನು ಒಪ್ಪಿಬಿಟ್ಟ. ನಿಜವಾಗಿ ಅವನು ಮೂರ್ಖನಲ್ಲ! ಆತನನ್ನು ಮದುವೆಯಾಗಲು ಒಪ್ಪಿದೆನಲ್ಲ ನನ್ನದು ಮೂರ್ಖತನ.

ಈಗಲೂ ನೆನಪಿದೆ, ಅರಮನೆಯ ಉದ್ಯಾನದಲ್ಲಿ ಅಡ್ಡಾಡುವಾಗ ಹಿಂದುಗಡೆಯಿಂದ ಬಂದು ಅಪ್ಪಿಬಿಟ್ಟ. ಆಗಲೇ ಎಚ್ಚರಿಕೆಯನ್ನು ಕೊಟ್ಟಿದ್ದಾಯಿತು. ಈಗಲಾದರೂ ಸುಮ್ಮನಿರಬಹುದಿತ್ತು ರಾಜ. ಆದರೆ ನಾನು ಮಾಡುವ ಜಂಗಮಸೇವೆ, ಲಿಂಗಪೂಜೆ ಎಲ್ಲವನ್ನೂ ತಿರಸ್ಕರಿಸಿದನಲ್ಲ! ನಾನೇ ನಿನ್ನ ಪತಿ... ನಿನಗೆ ಮೊದಲ ದೇವರು ನಾನೇ... ಮೊದಲು ನನ್ನನ್ನು ಸಂತೃಪ್ತಗೊಳಿಸು ಎಂದು ಕಾಡಿಸುತ್ತಿದ್ದನಲ್ಲ. ನನಗೋ ಆವೇಶ. ಸೆರಗ ಕಿತ್ತು ಬಿಸಾಡಿ ಇದಕ್ಕೆ ತಾನೆ ನೀನು ಆಸೆ ಪಡುತ್ತಿದ್ದುದು ಬಾ... ಎಷ್ಟು ಬೇಕೋ ಅಷ್ಟು ನಿನ್ನ ಆಸೆ ಪೂರೈಸಿಕೋ... ಎಂದು ನಿಂತರೆ ಹೆದರಿಬಿಟ್ಟ. ನಾನು ಸುಮ್ಮನಿರಬೇಕಿತ್ತು. ಅದೇ ಆವೇಶದಲ್ಲಿ ಸೀರೆಯನ್ನು ಕಿತ್ತು ಬಿಸಾಡಿ ಅರಮನೆಯ ಮೊಗಸಾಲೆಯಲ್ಲಿ ಬರುತ್ತಿದ್ದರೆ ಸಖಿಯರೆಲ್ಲಾ ಇವಳಿಗೆ ಹುಚ್ಚು ಹಿಡಿದಿದೆ ಎನ್ನುವಂತೆ ಯಾರೊಬ್ಬರೂ ಹತ್ತಿರ ಬಂದು ತಡೆಯಲಿಲ್ಲವಲ್ಲ! ಅಬ್ಬಾ! ನೆನೆಸಿಕೊಂಡರೆ ಈಗಲೂ ಮೈ ಝುಂ ಎನಿಸುತ್ತದೆ. ಗಂಡ ಹೆಂಡತಿಯನ್ನು ಬಯಸುವುದು ತಪ್ಪೆ? ಪಾಪ, ಸಾಮಾನ್ಯರಂತೆ ಅವನೂ ಬಯಸಿದ. ಅವನಿಗೇನು ಗೊತ್ತು ನಾನು ಆರಾಧಿಸುತ್ತಿರುವ ಪತಿದೇವ ಅವನಲ್ಲವೆಂದು.

ಹೀಗೆ ಅವಳು ಯೋಚಿಸುತ್ತಿರುವಾಗಲೇ ಬೆಳಕು ಹರಿದು ಹಕ್ಕಿಗಳು ಚಿಲಿಪಿಗುಟ್ಟುತ್ತಿದ್ದವು. ಹಿಂದಿನ ದಿನಕ್ಕಿಂತ ಮೈ ಸ್ವಲ್ಪ ಹಗುರಾದಂತೆನ್ನಿಸಿತು. ರಾತ್ರಿಯಿಂದಲೂ ಒಂದೇ ಸಮನೆ ಸೇಯುತ್ತಿರುವನೋ ಏನೋ ಸೋದರ ಸನ್ಯಾಸಿ ಇನ್ನೂ ಹೊಗೆ ಬಿಡುತ್ತಲೇ ಇದ್ದ. ಸೋದರ ಸನ್ಯಾಸಿಗೆ ವಂದನೆ ಹೇಳಿ, "ಬರುತ್ತೇನೆ ಸ್ವಾಮಿಗಳೇ..." ಎನ್ನುತ್ತಾ ಹೊರಡಲನುವಾದಳು. "ತಾಯಿ ನೀವು ನೆಂಟರ ಮನೆಗಂತೂ ಖಂಡಿತಾ ಹೋಗುವವರಲ್ಲ... ನಿಜ ಹೇಳು ತಾಯಿ ಯಾರು ನೀನು? ಎಲ್ಲಿಗೆ ಹೋಗುತ್ತಿರುವೆ?" ಎಂದು ಕುತೂಹಲ ತಡೆಯಲಾರದೆ ಕೇಳಿಬಿಟ್ಟ ಸೋದರ ಸನ್ಯಾಸಿ. ಎಲ್ಲವನ್ನೂ ಆತನೆದುರು ಹೇಳಬೇಕೆನಿಸಿದರೂ ಹೇಳದೆ "ಚೆನ್ನಮಲ್ಲಿಕಾರ್ಜುನನನ್ನು ಹುಡುಕಿಕೊಂಡು ಹೊರಟಿದ್ದೇನೆ..." ಎಂದಳು. ಅದುವರೆವಿಗೂ ಇದ್ದ ಕುತೂಹಲ ಒಮ್ಮೆಲೆ ಹಾರಿಹೋಗಿ "ಈಯಮ್ಮನಿಗೆ ಎಲ್ಲೋ ಹುಚ್ಚು ಹಿಡಿದಿರಬೇಕು" ಎಂದು ಮರುಗುತ್ತಾ ಹೊಗೆ ಬಿಡುವುದರಲ್ಲಿ ಮಗ್ನನಾದ.

ಸೂರ್ಯನ ಎಳೆ ಬಿಸಿಲು ಮೈ ತಾಕಿ ಹಿತವಾದ ರೋಮಾಂಚನ ವಾಗುತ್ತಿತ್ತು. ಜೊತೆಗೆ ಸಣ್ಣ ಭಯ. ಎಷ್ಟಾದರೂ ಆತ ತನ್ನನ್ನು ಹುಡುಕಲು

ಭಟರನ್ನು ಅಟ್ಟದಿರುತ್ತಾನೆಯೇ... ಒಂದು ವೇಳೆ ಹಾಗೇನಾದರೂ ಸಿಕ್ಕಿಕೊಂಡರೆ ಏನು ಮಾಡುವುದು, ಪೊಲೀಸ್ ಕಂಪ್ಲೇಂಟ್ ಕೊಟ್ಟರಾಯಿತು. ಅಯ್ಯೋ ಹಾಗೆ ಮಾಡಬಾರದು, ಅವರೂ ಅವನ ಜೊತೆ ಶಾಮೀಲಾಗಿ ನನ್ನ ಗುರುತು ಹಿಡಿದು ಒಪ್ಪಿಸಿಬಿಟ್ಟರೆ!? ಇಷ್ಟೊತ್ತಿಗಾಗಲೇ ಪೇಪರಿನಲ್ಲಿ, ಟೀವಿಯಲ್ಲಿ ಹಾಕಿಸಿರುತ್ತಾನೆ. ಯಾವುದಕ್ಕೂ ಹುಷಾರಾಗಿರಬೇಕೆಂದು ಯೋಚಿಸುತ್ತಾ ನಡೆದಳು. ಹೇಗಾದರೂ ಮಾಡಿ ಈ ದಿನವೇ ಕಲ್ಯಾಣವನ್ನು ತಲುಪಿಬಿಡಬೇಕು. ಅಲ್ಲಿ ಅಣ್ಣನ ಮನೆಗೆ ಸೇರಿಕೊಂಡರೆ ನನ್ನ ಚೆನ್ನಮಲ್ಲಿಕಾರ್ಜುನ ಸಿಕ್ಕಿದಂತೆಯೇ. ಮುಂದಿನ ಊರಿನಲ್ಲಿ ಬಸ್ಸು ಹತ್ತಿ ಬಿಡುವುದೇ ಸರಿ... ಆದರೆ ದುಡ್ಡೇ ತರದೆ ಬಂದು ಬಿಟ್ಟೆನಲ್ಲ. ಇದ್ದ ವಡವೆ ವಸ್ತ್ರ ಬಿಚ್ಚಿ ಬಿಸಾಡಿದ್ದಾಯಿತು. ಹೋಗಲಿ... ಎಟಿಎಂ ಕಾರ್ಡು, ಮೊಬೈಲ್‌ನಾದರೂ ಜೊತೆಯಲ್ಲಿ ತರಬಾರದಿತ್ತೇ? ಕಾಯಿನ್ ಬೂತ್‌ನಲ್ಲಿ ಫೋನ್ ಮಾಡೋಣವೆಂದರೆ ಅಣ್ಣನ ಫೋನ್ ನಂಬರೂ ಇಲ್ಲ, ಅಲ್ಲಮನದೂ ಇಲ್ಲ. ಕಲ್ಯಾಣದಲ್ಲಿ ಅವರು ಇರುವುದಂತೂ ಸತ್ಯ. ಅಲ್ಲಿಗೆ ತಲುಪಿದರೆ ಸಾಕು.

ಅವಳ ಗುಲಾಬಿಯಂಥಾ ಚರ್ಮ ಬಿಸಿ ತಾಕಿ ನಿಧಾನಕ್ಕೆ ಕಂದು ಬಣ್ಣಕ್ಕೆ ತಿರುಗುತ್ತಿತ್ತು. ಈ ಹಾಳು ಸೌಂದರ್ಯ ಸುಡಲಿ... ಇದರಿಂದ ತಾನೆ ಇಂತಾ ಪಾಡು. ತನ್ನ ಸೌಂದರ್ಯ ತಾನೆ ಹಳಿದುಕೊಳ್ಳುತ್ತಾ ನಡೆಯತೊಡಗಿದಳು. ಇದ್ಯಾರೋ ಆಗಂತುಕರು ಆಗಮಿಸಿದ್ದಾರೆಂದು ಹಕ್ಕಿ ಪಕ್ಷಿಗಳು ಜೋರಾಗಿ ಕಿರುಚಿಕೊಳ್ಳತೊಡಗಿದವು. ಇತರೆ ಪ್ರಾಣಿಗಳು ಕಡುಕಪ್ಪುಕೂದಲಿನ ಈ ಹೆಂಗಸಿನ ಕಡೆ ವಿಚಿತ್ರವಾದುದೊಂದು ನೋಟ ಬೀರಿ ಫಂಗನೆ ನೆಗೆಯುತ್ತಾ ಕಣ್ಮರೆಯಾಗುತ್ತಿದ್ದವು. ಸ್ವಲ್ಪವೇ ಕೂಗಳತೆ ದೂರದಲ್ಲಿ ಊರು ಕಾಣುತ್ತಿದ್ದು ಬಸ್ಸು ಕಾರುಗಳು ಓಡಾಡುವ ಶಬ್ದ ಕೇಳಿಸುತ್ತಿತ್ತು. ಯಾವ ಊರಿರಬಹುದೆಂದುಕೊಳ್ಳುತ್ತಾ ಊರಿನ ಬಾಗಲಿಗೇ ಬಂದು ನಿಂತಳು. ಹೆಬ್ಬಾಗಿಲ ಬಳಿ ನಿಂತ ಅವಳಿಗೆ ಬೀದಿಯಲ್ಲಿ ಯಾರೂ ಕಣ್ಣಿಗೆ ಬೀಳಲಿಲ್ಲ. ಎಲ್ಲಿತ್ತೋ... ಒಂದು ಬೀದಿನಾಯಿ ಗಲ್ಲಿಯೊಳಗಿಂದ ನುಸುಳಿ ಬಂದಿದ್ದೇ ಇವಳನ್ನು ಕಂಡು ಉಗ್ರರೂಪ ತಾಳಿ ಜೋರಾಗಿ ಬೊಗಳತೊಡಗಿ, ಅದು ಬಂದ ರಭಸಕ್ಕೆ ಕಚ್ಚಿಯೇ ಬಿಡುತ್ತದೋ ಏನೋ ಎಂದು ಸಣ್ಣಗೆ ಬೆವರಿದಳು. ನಾಯಿ ಬೊಗಳಿದ ಶಬ್ದ ಕೇಳಿ ಮಟಮಟ ಮಧ್ಯಾಹ್ನದಲಿ ಯಾರಿರಬಹುದೆಂದು ಕೆಲವರು ಮನೆಯಿಂದ ಹೊರಕ್ಕೆ ಬಂದರು. ಅಬ್ಬಾ!

ಎಂಥಾ ಚೆಲುವು! ಫಳಫಳ ಮಿನುಗುವ ಅಬೋಧ ಕಣ್ಣುಗಳು, ಕಡುಕಪ್ಪು ಮೊಳಕಾಲದವರೆಗೂ ಇಳಿಬಿದ್ದ ಕೂದಲು, ನಿರ್ಲಜ್ಜೆಯಿಂದ ನಿರ್ವಿಕಾರವಾಗಿ ನಿಂತ ಭಂಗಿಯನ್ನು ಕಂಡ ಅವರು ಹಾಗೇ ಬಿಟ್ಟ ಕಣ್ಣು ಬಿಟ್ಟುಕೊಂಡು ತಮ್ಮನ್ನು ಮರೆತಂತೆ ಅವಳನ್ನೇ ನೋಡಹತ್ತಿದರು. 'ಕಲ್ಯಾಣಕ್ಕೆ ಬಸ್ ಬರುತ್ತದೆಯೇ... ಎಂಬ ಅವಳ ಮಾತಿಗೆ ಎಚ್ಚರಗೊಂಡ ಅವರು ಹೌದು ಎನ್ನುವಂತೆ ತಲೆಯಲ್ಲಾಡಿಸಿ ಬಸ್ಟ್ಯಾಂಡ್ ಕಡೆ ದಾರಿ ತೋರಿದರು. ಮುಂದುವರೆದ ಅವಳನ್ನು ಯಾರೂ ಮಾತನಾಡಿಸುವ ಧೈರ್ಯ ಮಾಡದೆ ಕುತೂಹಲದಿಂದ ಅವಳ ಹಿಂದೆ ನಡೆದರು.

ಈ ಸೋಜಿಗವನ್ನು ನೋಡಲು ಅಕ್ಕಪಕ್ಕದಲ್ಲಿ ಜನ ನೆರೆದರು. 'ಅಯ್ಯೋ ಪಾಪ, ಯಾವೂರ ಹೆಂಗಸೋ... ಇಂಥಾ ಚಂದುಳ್ಳಿ ಹೆಂಗಸಿಗೆ ಹುಚ್ಚು ಹಿಡಿವಂತೆ ಮಾಡಲು ಆ ದೇವರಿಗಾದರೂ ಹೇಗೆ ಮನಸು ಬಂತು ಎಂದು ಕೆಲವು ಹೆಂಗಸರು ಮಾತನಾಡಿಕೊಂಡರೆ ಕೆಲವರು ಅವಳಿಂದ ಸಮ್ಮೋಹನಕ್ಕೊಳಗಾದವರಂತೆ ಅವಳ ಸೌಂದರ್ಯವನ್ನು ಕದ್ದೂಮುಚ್ಚಿ ನೋಡತೊಡಗಿದರು. ತನ್ನ ಸುತ್ತಮುತ್ತ ಯಾರೂ ಇಲ್ಲವೇನೋ ಎಂಬಂತೆ ಅದೇ ನಿರ್ವಿಕಾರ ಭಾವದಿಂದ ಮನದಲ್ಲಿ ಚನ್ನಮಲ್ಲಿಕಾರ್ಜುನನನ್ನು ನೆನೆಸಿಕೊಂಡು ಬಸ್ಟ್ಯಾಂಡಿಗೆ ಬಂದ ಅವಳಿಗೆ ಯಾವ ಬಸ್ಸು ಹತ್ತುವುದೆಂದು ಗೊಂದಲವಾಗಿ ಸುಮ್ಮನೆ ಸುತ್ತ ಕಣ್ಣಾಡಿಸುವಾಗ ಯಾವುದೋ ಮೂಲೆಯಲ್ಲಿದ್ದ ಬಸ್ ಕಂಡಕ್ಟರ್ ಜೋರಾಗಿ ಯಾರ್ರೀ ಕಲ್ಯಾಣ... ಯಾರ್ರೀ ಕಲ್ಯಾಣ..." ಎಂದು ಕೂಗತೊಡಗಿದುದು ಕೇಳಿಸಿ ಆ ಕಡೆ ನಡೆದು ಬಸ್ ಹತ್ತಿದಳು. ಇವಳ ಮುಖವನ್ನೇ ಗುರುಗುಟ್ಟಿದ ಕಂಡಕ್ಟರ್ ಏನೂ ಮಾತನಾಡದೆ ಸುಮ್ಮನಾದ. ಇವಳು ಹತ್ತಿದ ನಂತರ ಹಲವಾರು ಜನ ಹತ್ತಿದರೂ ಕೂಡ ಇವಳ ಪಕ್ಕ ಕೂರಲು ಏನೋ ಒಂಥರಾ ಆಗಿ ಯಾರೂ ಬಳಿ ಕೂರಲಿಲ್ಲ. ವಿಚಿತ್ರ ಕುತೂಹಲದಿಂದ ನೋಡಿ ಮರುಗುವವರೆ.

ಕಿಟಕಿ ಕಡೆ ಮುಖ ಮಾಡಿ ಕುಂತ ಇವಳು ತನ್ನ ಪಾಡಿಗೆ ತಾನು ಕೂದಲನ್ನು ನೀವಿಕೊಂಡು ಕುಂತಳು. ಅಲ್ಲಿದ್ದವರಿಗೆ ಅಯ್ಯೋ ಪಾಪ ಎನ್ನಿಸಿತು. ಟಿಕೆಟ್ ಕೇಳಿದ ಕಂಡಕ್ಟರನಿಗೆ ಯಾರೋ ದೊಡ್ಡ ಮನುಷ್ಯರು ಹೋಗಲಿ ಬಿಡಿ ಎಂದು ತಾನೇ ಕಲ್ಯಾಣಕ್ಕೆ ಒಂದು ಟಿಕೆಟ್

ತೆಗೆದುಕೊಟ್ಟನು. ತಾನು ಅವಳ ಪಕ್ಕದಲ್ಲೇ ಕುಳಿತು ಮಾತನಾಡಲು ಪ್ರಯತ್ನಿಸಿ ವಿಫಲವಾದನು. ಅವಳು ಬೇರೆ ಏನನ್ನೋ ಯೋಚಿಸುತ್ತಿದ್ದಳು. ಕಲ್ಯಾಣದ ಮಹಾಮನೆ, ಬಸವಣ್ಣ, ಅಲ್ಲಮ ಮುಂತಾದವರ ಬಗ್ಗೆ ಕೇಳಿದ್ದಳು. ಆಗಾಗ್ಗೆ ಬರುತ್ತಿದ್ದ ಅವರ ಸಂದರ್ಶನಗಳು, ಪತ್ರಿಕೆ ಸುದ್ದಿಗಳು ಮುಂತಾದವು ಅವರು ಬಹು ಎತ್ತರಕ್ಕೇರಿದ ದೊಡ್ಡ ಮನುಷ್ಯರು, ಸಾಧಕರೆಂದು ಪ್ರತಿಬಿಂಬಿಸಿದ್ದವು. ಹೇಗಾದರೂ ಅವರನ್ನು ಕಂಡು ಚೆನ್ನಮಲ್ಲಿಕಾರ್ಜುನನ ವಿಳಾಸ ಪಡೆದು ಅವನನ್ನು ಸೇರಿಕೊಳ್ಳುವ ಹಂಬಲ ಇವಳಿಗಿತ್ತು. ಕೊನೆಗೆ ಅವನ ಫೋನ್ ನಂಬರಾದರೂ ಸಿಗಬಹುದೆಂಬ ಆಸೆಯಿತ್ತು. ಈ ಭರವಸೆಯಿಂದ ತನ್ನ ಲೌಕಿಕ ಬದುಕಿನ ದಾಂಪತ್ಯವನ್ನು ಮುರಿದು ಕಲ್ಯಾಣದ ಕಡೆಗೆ ಹೊರಟಿದ್ದಳು.

ಕಲ್ಯಾಣದಲ್ಲಿ ಇಳಿದ ಅವಳಿಗೆ ಎತ್ತ ಹೋಗಬೇಕೆಂದು ತಿಳಿಯದೆ ದಿಕ್ಕು ತಪ್ಪಿದವಳಂತೆ ನಿಂತಳು. ಸುತ್ತಲೂ ಎತ್ತರವಾದ ಗಗನಚುಂಬಿ ಕಟ್ಟಡಗಳು, ರಸ್ತೆ ದಾಟುವುದಕ್ಕೆ ಅವಕಾಶ ಕೊಡದೆ ನಿರಂತರವಾಗಿ ಓಡಾಡುವ ಸಾವಿರಾರು ವಾಹನಗಳು, ಅಪಾರವಾದ ಜನ ಜಂಗುಳಿಯ ನಡುವೆ ಅವಳಿಗೆ ಏನು ಮಾಡಬೇಕೆಂಬುದೇ ತಿಳಿಯಲಿಲ್ಲ. ಪಕ್ಕದಲ್ಲೇ ಹುಡುಗರ ಗುಂಪೊಂದು ಇವಳನ್ನೇ ದುರುಗುಟ್ಟಿಕೊಂಡು ನೋಡುತ್ತಾ 'ಎಂಥಾ ಫಿಗರಮ್ಮಾ!' ಎಂದದ್ದು ಅವಳಿಗೆ ಕೇಳಿಸಿತು. ಸುತ್ತಮುತ್ತಲಿನ ಎಲ್ಲರೂ ತನ್ನನ್ನೇ ಗಮನಿಸಿಸುತ್ತಿದ್ದಾರೆಂಬ ಅರಿವು ಮೂಡಿ ಭಯ ಶುರುವಾಯಿತು. ಆದರೂ ಧೈರ್ಯ ಮಾಡಿ ಮಹಾಮನೆ ಎಲ್ಲಿದೆ ಎಂದು ಅಲ್ಲಿದ್ದಾತನೊಬ್ಬನನ್ನು ಕೇಳಿದಳು. ವಿಚಿತ್ರವಾಗಿ ನೋಡಿದ ಅವನು ಎದುರಿಗಿದ್ದ ವಿಶಾಲವಾದ ರಸ್ತೆಯ ಕಡೆ ಕೈತೋರಿದ. ಅವನು ಕೈ ತೋರಿಸಿದ ದಿಕ್ಕಿನಲ್ಲಿಯೇ ಮುಂದುವರೆದ ಅವಳಿಗೆ ವಿಶಾಲವಾದ ಅರಮನೆಯಂಥ ಬೃಹತ್ ಬಂಗಲೆ ಕಾಣಿಸಿತು. ಹೇಳದೆ ಕೇಳದೆ ಹೀಗೆ ಗೇಟಿನತ್ತ ನುಗ್ಗಿದ ಈ ಅಪರಿಚಿತ ಮಹಿಳೆಯನ್ನು ಕಂಡು ಗೇಟ್‌ಕೀಪರ್ "ಯಾರಮ್ಮ ನೀನು? ಯಾರು ಬೇಕಿತ್ತು?" ಎಂದ. "ಅಣ್ಣನನ್ನು ನೋಡಬೇಕಿತ್ತು..." ಮರುಮಾತನಾಡದೆ ಆತ ದಾರಿ ಬಿಟ್ಟ. ವರಾಂಡಕ್ಕೆ ನುಗ್ಗಿದ ಅವಳು ಸಭಾಂಗಣದ ಎದುರಿನಲ್ಲಿ ನಿಂತಳು. "ದಯವೇ ಧರ್ಮದ ಮೂಲವಯ್ಯಾ... ಕಾಯಕವೇ ಕೈಲಾಸ..." ಎಂಬ ವಾಕ್ಯಗಳು ದಪ್ಪಕ್ಷರದಲ್ಲಿ ಬರೆದಿರುವುದು ಕಾಣಿಸಿತು.

ಹಿಂದೂ ಮುಂದೂ ಯೋಚಿಸದೆ ಸೀದಾ ಒಳಗಡೆ ನುಗ್ಗಿಬಿಟ್ಟಳು. ದಿಢೀರ್ ಅಂತ ಒಳನುಗ್ಗಿದ ಈ ಅಪೂರ್ವ ಸೌಂದರ್ಯರಾಶಿಯನ್ನು ನೋಡಿದ ಶರಣ ಸಮೂಹ ನಿಬ್ಬೆಗಾಗಿ ಅವಳನ್ನೇ ದಿಟ್ಟಿಸಿದವು. ಎತ್ತರವಾದ ಕುರ್ಚಿಯ ಮೇಲೆ ಕುಳಿತಿದ್ದ ಪ್ರಭುದೇವರು ಸುತ್ತ ಒಮ್ಮೆ ಕಣ್ಣಲ್ಲೇ ಗದರಿದರು. ಈಗ ಶರಣರಿಗೆ ತಾವು ಶರಣರೆಂಬ ನೆನಪಾಗಿ ತಮ್ಮ ತಲೆತಗ್ಗಿಸಿ ಕುಳಿತರಾದರೂ ಮತ್ತೊಮ್ಮೆ ಅವಳನ್ನು ನೋಡಬೇಕೆಂಬ ಆಸೆಯುಂಟಾಗಿ ಕದ್ದೂಮುಚ್ಚಿ ನೋಡುತ್ತಿದ್ದರು. ಯಾರು ತಾಯಿ? ಏನಾಗಬೇಕಿತ್ತು? ಗಂಭೀರವಾಗಿ ಸಭಾಪತಿಯಾದ ಅಲ್ಲಮ ಕೇಳಿದರು. ಕಂಚಿಗೆ ಕಂಚು ತಾಗಿಸಿದಂತೆ ಹೊರಟ ಅವರ ಪ್ರಶ್ನೆಯಿಂದ ಕೊಂಚ ಅಧೀರಳಾದರೂ ತಾನು ಚೆನ್ನಮಲ್ಲಿಕಾರ್ಜುನನನ್ನು ಹುಡುಕಿಕೊಂಡು ಬಂದಿದ್ದೇನೆ ಎಂದಳು. ಅಲ್ಲಿದ್ದ ಶರಣ ಸಮೂಹವೆಲ್ಲ ಒಮ್ಮೆಲೆ ನಗೆಗಡಲಲ್ಲಿ ತೇಲಾಡಿತು. ಮತ್ತೊಮ್ಮೆ ಗದರಿದ ಅಲ್ಲಮ ಸಭೆಯನ್ನು ಉದ್ದೇಶಿಸಿ ಸದ್ದು... ಸದ್ದು... ಎಂದನು. ಸಭೆ ತಣ್ಣಗಾಯಿತು. ಅಲ್ಲಮನ ಕೆಳಗೆ ಅನತಿ ದೂರದಲ್ಲಿ ಕಿರೀಟ ಧರಿಸಿ ಕುಳಿತಿದ್ದವನನ್ನು ಕಂಡು ಈತ ಅಣ್ಣನಿರಬೇಕೆಂದುಕೊಂಡಳು. ಯಾವೂರು ತಾಯಿ ನಿನ್ನದು? ನಿಮ್ಮ ತಂದೆ ತಾಯಿ ಯಾರು? ಮತ್ತೊಮ್ಮೆ ಅಲ್ಲಮರ ಪ್ರಶ್ನೆ. ಈಗ ಏನೂ ಮಾತಾಡಲಿಲ್ಲ ಅವಳು. ಹೋಗಲಿ ನಿನ್ನ ಪತಿದೈವ ಯಾರು? ಪಟ್ಟನೆ ಚೆನ್ನಮಲ್ಲಿಕಾರ್ಜುನ ಎಂದಳು. ನಾನು ಕೇಳಿದ್ದು ತಾಳಿ ಕಟ್ಟಿದ ಗಂಡ ಮತ್ತೆ ಅಲ್ಲಮರ ಪ್ರಶ್ನೆ... ಓಹೋ... ಅವನಾ? ಕೌಶಿಕ ಮಹಾರಾಜ. ಮತ್ತೇಕೆ ಅವನನ್ನು ಬಿಟ್ಟು ಬಂದೆ? ಅವನು ಈ ಲೋಕದ ಗಂಡ. ನಾನು ಮನಸ್ಸಲ್ಲಿ ಆರಾಧಿಸುತ್ತಿರುವ ಆರಾಧ್ಯ ದೈವವಾದ ಚೆನ್ನಮಲ್ಲಿಕಾರ್ಜುನನೇ ನಿಜವಾದ ಗಂಡ. ಸರಿ ತಾಯಿ ನೀನು ಗಂಡನನ್ನು ಹೀಗೇ ಬಿಟ್ಟು ಬಂದುದು ಸರಿಯಾ? ಇದು ಪತಿವ್ರತಾ ಧರ್ಮವೇ ಅಲ್ಲಿಯವರೆಗೂ ಸುಮ್ಮನಿದ್ದ ಅಣ್ಣ ಪ್ರಶ್ನಿಸಿದರು. ಬಲವಂತಕ್ಕೆ ನನ್ನ ಮದುವೆ ಮಾಡಿಕೊಂಡದ್ದು ಧರ್ಮವಾ? ಅವಳ ಪ್ರಶ್ನೆ. ಈ ಉತ್ತರ ಕೇಳಿದ ಅಣ್ಣ ಒಮ್ಮೆ ಮದುವೆಯಾದರೆ ಮುಗಿಯಿತು. ಆತನೊಡನೆಯೇ ಬಾಳುವುದು ಧರ್ಮವೆಂದರು. ನಾನು ಇಷ್ಟ ಪಟ್ಟವನೊಂದಿಗೆ ಬಾಳುವುದೇ ನಿಜವಾದ ಧರ್ಮ ಅವಳ ದಿಟ್ಟ ಉತ್ತರ.

ಇವರ ಸಂವಾದವನ್ನು ಶರಣರು ನಿಶ್ಯಬ್ದವಾಗಿ ಕೇಳುತ್ತಿದ್ದರು. ಕೊನೆಗೆ ಅಲ್ಲಮನೇ... ಹೇಳು ತಾಯಿ ನಮ್ಮಿಂದೇನಾಗಬೇಕು? ನನ್ನನ್ನು ಅವನಲ್ಲಿಗೆ

ಸೇರಿಸಿ ಎಂದಳು. ಏನೂ ಮಾತನಾಡಲು ತೋಚದ ಅಲ್ಲಮನು ಸರಿ ತಾಯಿ... ಆತನನ್ನು ನಾವು ಹುಡುಕುವವರೆಗೂ ಈ ಮಹಾಮನೆಯಲ್ಲೇ ತಾವು ಇರಿ ಎಂದು ಅಣ್ಣನ ಮಡದಿ ನೀಲಾಂಬಿಕೆಗೆ ಅವಳನ್ನು ಒಪ್ಪಿಸಿ ಜೋಪಾನವಾಗಿ ನೋಡಿಕೊಳ್ಳಲು ತಿಳಿಸಿದರು. ತನ್ನ ಕಾರ್ಯದರ್ಶಿ ಸಿದ್ಧರಾಮನನ್ನು ಕರೆದು ಪತ್ರಿಕೆಗಳಿಗೆ, ಟೀವಿ. ಚಾನೆಲ್ಲುಗಳಿಗೆ ಚೆನ್ನಮಲ್ಲಿಕಾರ್ಜುನನ ಕುರಿತು ಮಾಹಿತಿಗೆ ಜಾಹೀರಾತು ಕೊಡಲು ತಿಳಿಸಿದರು.

ಎರಡು ಮೂರು ದಿನ ಮಹಾಮನೆಯಲ್ಲಿ ಅವಳು ಸಂತೋಷವಾಗೇ ಇದ್ದಳು. ಅಣ್ಣನ ಮಡದಿ ನೀಲಾಂಬಿಕೆ ಯಾಕೋ ಇತ್ತೀಚೆಗೆ ಸರಿಯಾಗಿ ಗಮನಿಸುತ್ತಿರಲಿಲ್ಲ. ಏನಾದರೂ ಸಹಾಯ ಮಾಡಲು, ಕೇಳಲು ಬರುವ ಗಂಡಸರು ಬೇಕೆಂತಲೇ ಮೈಕೈ ತಾಗಿಸುವುದು, ತಿಂದುಬಿಡುವಂತೆ ಗುರುಗುಟ್ಟಿಕೊಂಡು ನೋಡುವುದು, ತನ್ನನ್ನೇ ಹಿಂಬಾಲಿಸುವುದನ್ನು ಕಂಡು ಮಾಹಾಮನೆಯಲ್ಲಿರಲು ರೇಜಿಗೆ ಉಂಟಾಗತೊಡಗಿತು. ಅದೂ ಅಲ್ಲದೆ ಒಂದು ವಾರವಾದರೂ ಕೂಡ ಈ ಮಹಾಮನೆಯವರು ತನ್ನ ಪತಿದೇವನ ಕುರಿತು ಚಕಾರವೆತ್ತದಿದ್ದುದು ಕಂಡು ಅಣ್ಣನಾದಿಯಾಗಿ ಅಲ್ಲಮನ ಮೇಲೂ ಬೇಸರವುಂಟಾಯಿತು. ಒಂದು ದಿನ ಅಣ್ಣ, ಅಲ್ಲಮನನ್ನು ಸಂಧಿಸಿ ಅದರ ಕುರಿತು ಕೇಳಿಯೂ ಬಿಟ್ಟಳು. ಯಾವುದೋ ಬ್ಯುಸಿಯಲ್ಲಿದ್ದ ಅಣ್ಣ ರೇಗಿಬಿಟ್ಟಿದ್ದರು. ಖೇದಗೊಂಡ ಅವಳು ಇನ್ನು ತಾನು ಇಲ್ಲಿರುವುದು ಸರಿಯಲ್ಲವೆಂದು ತೀರ್ಮಾನಿಸಿ ಒಂದು ರಾತ್ರಿ ಯಾರಿಗೂ ಹೇಳದೆ ಮಹಾಮನೆಯಿಂದ ಹೊರಟೇ ಬಿಟ್ಟಳು.

ಬೀದಿಯಲ್ಲಿ ಸೋಲಾರ್ ದೀಪದ ಬೆಳಕು ಚೆಲ್ಲಿತ್ತು. ಸದ್ದಡಗಿ ನಗರ ಮಲಗಲು ಅಣಿಯಾಗುತ್ತಿತ್ತು. ದಾರಿ ಗೊತ್ತಿದ್ದರಿಂದ ಸೀದಾ ಬಸ್ಟ್ಯಾಂಡ್ ಬಳಿಗೇ ಬಂದು ಯಾವುದಾದರೂ ಬಸ್ ಶ್ರೀಶೈಲಕ್ಕೆ ಹೋಗುತ್ತದೇನೋ... ಎಂದು ವಿಚಾರಿಸಿದಳು. ಯಾವ ಬಸ್ಸೂ ಹೊರಡುವುದರ ಸೂಚನೆ ಕಾಣಲಿಲ್ಲ. ದೂರದಲ್ಲೊಂದು ಕಾರು ನಿಂತಿತ್ತು. ಕಾರಿನ ಬಳಿ ನಾಲ್ಕಾರು ಯುವಕರು ಸಿಗರೇಟು ಸೇದುತ್ತಾ ಏನೋ ಮಾತನಾಡಿಕೊಂಡು ನಿಂತಿದ್ದರು. ಅವರನ್ನಾದರೂ ಕೇಳೋಣವೆಂದು "ಅಣ್ಣಾ... ಶ್ರೀಶೈಲಕ್ಕೆ ಬಸ್ ಯಾವುದಿದೆ?" ಎಂದಳು. ಒಬ್ಬರ ಮುಖ ಒಬ್ಬರು ನೋಡಿಕೊಂಡ ಅವರು

"ಈಗ ಯಾವ ಬಸ್ಸೂ ಇಲ್ಲ. ಬೆಳಗಿನ ತನಕ ಕಾಯಬೇಕು. ನಾವೂ ಅಲ್ಲಿಗೆ ಹೋಗುತ್ತಿದ್ದೇವೆ. ಜೊತೆಯಲ್ಲಿ ಬೇಕಿದ್ದರೆ ಬನ್ನಿ" ಎಂದರು. ಮಹಾಮನೆಯಲ್ಲಿ ರೋಸಿಹೋಗಿದ್ದ ಅವಳು ಶ್ರೀಶೈಲಕ್ಕೆ ತಲುಪಿ ಹೇಗಾದರೂ ಅವನನ್ನು ಸೇರಿಕೊಳ್ಳಬೇಕೆಂದುಕೊಂಡರೂ ಕಾರನ್ನು ಹತ್ತಲಿಲ್ಲ. ಅವಳ ಅನುಮಾನ ಗಮನಿಸಿದ ಒಬ್ಬಾತ ಕಾರಿನಲ್ಲಿ ಮತ್ತೀರ್ವರು ಹೆಂಗಸರು ಕುಳಿತಿರುವುದನ್ನು ತೋರಿಸಿ ಅವರೂ ಕಲ್ಯಾಣದವರೇ... ಶ್ರೀಶೈಲಕ್ಕೆ ಬರುವವರು... ಬೇಕಾದರೆ ಕೇಳಿ ಎಂದು ತೋರಿಸಿದ. ಅನುಮಾನ ಸಡಿಲಗೊಂಡ ಅವಳು ಧೈರ್ಯ ಮಾಡಿ ಕಾರಿನೊಳಕ್ಕೆ ಹತ್ತಿ ಕೂತಳು. ಅವಳನ್ನು ಹತ್ತಿಸಿಕೊಂಡ ಕಾರು ವೇಗವಾಗಿ ಬೆಳಕನ್ನು ಕಳೆದುಕೊಳ್ಳುತ್ತಾ ಕತ್ತಲು ರಸ್ತೆಯ ಮೇಲೆ ಓಡತೊಡಗಿತು.

ಬೆಳಕಿನ ಚುಕ್ಕಿ ಮರೆಯಾಗುತ್ತಿರುವಂತೆ ಒಮ್ಮೆ ಅವಳ ಸ್ಮೃತಿಪಟಲದಲ್ಲಿ ಹಿಂದಿನ ಘಟನೆಗಳು ನೆನಪಿಗೆ ಬರತೊಡಗಿದವು. ಅಕ್ಕರೆಯ ಪ್ರೀತಿ ತೋರಿದ ತಂದೆತಾಯಿ, ಗುರುದೇವ, ತನ್ನನ್ನು ಬಯಸಿದ ಕೌಶಿಕ ಮಹಾರಾಜ, ಕಾಮುಕನಂತೆ ವರ್ತಿಸಿದ ಸನ್ಯಾಸಿ, ಸೋದರ ಸನ್ಯಾಸಿ ಮುಂತಾದವರು ಕಣ್ಮುಂದೆ ಬಂದರು. ತಂದೆತಾಯಿ ಬದುಕಿದ್ದಾರೋ ಹೇಗೋ? ರಾಜನ ಕತೆ ಏನಾಯಿತೋ? ಭಟರನ್ನು ಬಿಟ್ಟು ಹುಡುಕಿ ಹುಡುಕಿ ಸುಸ್ತಾದನೋ ಹೇಗೋ? ಪಾಪ ಅವನು ಮಾಡಿದ ತಪ್ಪಾದರೂ ಏನು? ನನ್ನನ್ನು ಬಯಸಿದ್ದು ತಪ್ಪೇ?

ಅವಳ ಯೋಚನೆಗಳಿಗೆ ಬ್ರೇಕು ಹಾಕಿದಂತೆ ಕಾರು ಗಕ್ಕನೆ ನಿಂತಿತು. ಯಾಕೆ ನಿಂತಿರಬಹುದು. ಶ್ರೀಶೈಲ ಏನಾದರೂ ಸಿಕ್ಕಿತೇ ಎಂದು ಅವಳು ಯೋಚಿಸುವ ಮೊದಲೇ ಇಬ್ಬರು ವ್ಯಕ್ತಿಗಳು ಅವಳ ತೋಳುಗಳನ್ನು ಹಿಡಿದು ಎಳೆದರು. ಹೇ... ಏನು ಮಾಡುತ್ತಿದ್ದೀರಿ... ಬಿಡ್ರೋ... ಪಾಪಿಗಳಾ... ಎಂದು ಜೋರಾಗಿ ಕಿರುಚಲು ಶುರುಮಾಡಿದ ಅವಳ ಬಾಯಿಗೆ ಮತ್ತೊಬ್ಬ ಕರ್ಚೀಫು ತುರುಕಿದ. ಅವರಿಂದ ಬಿಡಿಸಿಕೊಳ್ಳಲು ಹರಸಾಹಸ ಮಾಡುತ್ತಿದ್ದಳು. ಕಾರಿನಲ್ಲಿ ಕುಳಿತಿದ್ದ ಇಬ್ಬರು ಹೆಂಗಸರು ಗಹಗಹಿಸಿ ನಗುತ್ತಾ ಈಚೆಗೆ ಬಂದರು. ರಭಸದಿಂದ ಇಬ್ಬರು ಗಂಡಸರು ಎಳೆದುಕೊಂಡು ಮರಗಳ ನಡುವೆ ಮರೆಯಾದರು.

"ಸತ್ಯಮಂಗಲದ ಕಾಡಿನಲ್ಲಿ ಅಪರಿಚಿತ ಯುವತಿಯ ಮೃತದೇಹ ಪತ್ತೆಯಾಗಿದ್ದು ಸಾಮೂಹಿಕ ಅತ್ಯಾಚಾರವೆಸಗಿ ಅನಂತರ ಕೊಲೆ ಮಾಡಲಾಗಿದೆ ಎಂದು ಶಂಕಿಸಲಾಗಿದೆ" ಪತ್ರಿಕೆ ಮತ್ತು ಟೀವಿ ನ್ಯೂಸಿನಲ್ಲಿ ಬೆಳ್ಳಂಬೆಳಿಗ್ಗೆ ಸುದ್ದಿ ಬಿತ್ತರವಾಗುತ್ತಿತ್ತು.

"ಅಮೇಧ್ಯದ ಮಡಕೆ ಮೂತ್ರದ ಕುಡಿಕಿ
ಎಲುವಿನ ತಡಿಕೆ ಕೀವಿನ ಹಡಿಕೆ
ಸುಡಲೀ ದೇಹವ ಒಡಲವಿಡಿದು ಕೆಡದಿರು
ಚೆನ್ನಮಲ್ಲಿಕಾರ್ಜುನರೇ ಮರುಳೇ!"

– ಅಕ್ಕಮಹಾದೇವಿ

❑

# ೩. ಲೇಖನ
# ಸಹಜ ಕೃಷಿಯ ನಾಲ್ಕು ತತ್ವಗಳು

**– ಮೂಲ: ಮಸನೊಬು ಪುಕುವೊಕಾ**
**ಕನ್ನಡಕ್ಕೆ: ಸಂತೋಷ್ ಕೌಲಗಿ**

ಇಲ್ಲಿ ಕಾಣುವ ನನ್ನ ಹೊಲದಲ್ಲಿದ ಎಲೆಗಳನ್ನು ಸ್ವಲ್ಪ ಸರಿಸಿ ನೋಡಿ. ಆ ಎಲೆ ಮರೆಯ ತಂಪಿನಲ್ಲಿ ಅನೇಕ ಜೀವಜಂತುಗಳು ಆಸರೆ ಪಡೆದಿವೆ. ಆ ಮಣ್ಣಿನಲ್ಲಿ ಕಪ್ಪೆ, ಇಲಿ, ಎರೆಹುಳು ಮುಂತಾದವು ಮನೆ ಮಾಡಿವೆ. ಇದು ಎಲ್ಲ ದೃಷ್ಟಿಯಿಂದಲೂ ಸಮತೋಲನದಲ್ಲಿರುವ ಭೂಮಿ. ಇಲ್ಲಿ ಕೀಟಗಳು ಹಾಗೂ ಬೆಳೆಗಳು ಪರಸ್ಪರ ಒಂದು ದೃಢವಾದ ಸಂಬಂಧವನ್ನು ಹೊಂದಿವೆ. ಈ ಪ್ರದೇಶದಲ್ಲಿ ಈ ಭೂಮಿಯ ಬೆಳೆಗಳನ್ನು ಬಿಟ್ಟು ಮಿಕ್ಕೆಲ್ಲ ಭೂಮಿಯ ಬೆಳೆಗಳು ರೋಗಕ್ಕೆ ತುತ್ತಾಗುವುದು ಸರ್ವೇ ಸಾಮಾನ್ಯ.

ಆ ಪಕ್ಕದ ರೈತನ ಭೂಮಿಯನ್ನೊಮ್ಮೆ ನೋಡಿ. ಆ ಹೊಲದಲ್ಲಿನ ಎಲ್ಲ ಕಳೆಯನ್ನು ಕಳೆನಾಶಕ ಹಾಕಿಯೋ ಅಥವಾ ತೀವ್ರವಾದ ಕೃಷಿ ನಡೆಸಿಯೋ ನಿರ್ಮೂಲನ ಮಾಡಲಾಗಿದೆ. ಆ ಭೂಮಿಯ ಎಲ್ಲಾ ಜಂತುಗಳೂ ಅಲ್ಲಿಯ ವಿಷ ತಿಂದು ನಿರ್ನಾಮ ಹೊಂದಿವೆ. ರಾಸಾಯನಿಕ ಗೊಬ್ಬರಗಳ ಸೇರ್ಪಡೆಯಿಂದಾಗಿ ಆ ಭೂಮಿಯಲ್ಲಿನ ಎಲ್ಲಾ ಸಾವಯವ ವಸ್ತುಗಳು ಹಾಗೂ ಸೂಕ್ಷ್ಮಜೀವಿಗಳು ನಶಿಸಿಹೋಗಿವೆ. ಬೇಸಿಗೆಯಲ್ಲಿ ರೈತರು ಆ ಹೊಲಗಳಲ್ಲಿ ಮುಖ ಕವಚಗಳನ್ನೂ, ಕೈ ಚೀಲಗಳನ್ನೂ ಧರಿಸಿ ಕೆಲಸದಲ್ಲಿ ತೊಡಗಿರುತ್ತಾರೆ. ಸಾವಿರದ ಐದುನೂರು ವರ್ಷಗಳಿಂದ ಸತತವಾಗಿ ಅನ್ನ ನೀಡುತ್ತಿದ್ದ ಆ ಭೂಮಿ ಈ ಒಂದು ತಲೆಮಾರು ಮಾಡಿದ ಅತ್ಯಾಚಾರದಿಂದಾಗಿ ಬರಡಾಗಿ ನಿಂತಿದೆ.

**ನಾಲ್ಕು ತತ್ವಗಳು**

ಸಹಜ ಕೃಷಿಯ ನಾಲ್ಕು ತತ್ವಗಳಲ್ಲಿ ಮೊದಲನೆಯದು ಉಳುಮೆ ಮಾಡದಿರುವುದು. ಉಳುಮೆ ಶತಶತಮಾನಗಳಿಂದಲೂ ವ್ಯವಸಾಯದ ಅತ್ಯಂತ ಪ್ರಮುಖ ಚಟುವಟಿಕೆಯಾಗಿದೆ. 'ಉಳುಮೆಯಿಲ್ಲದೆ ಬೆಳೆಯಿಲ್ಲ' ಎಂಬ ತತ್ವಕ್ಕೆ ರೈತರು ಅಂಟಿಕೊಂಡಿದ್ದಾರೆ. ಆದರೆ ಈ ಸಹಜ ಕೃಷಿ

ಪದ್ಧತಿಯಲ್ಲಿ ಉಳುಮೆ ಮಾಡದಿರುವುದೇ ಅದರ ಮೂಲ ತತ್ವಗಳಲ್ಲಿ ಒಂದು. ಭೂಮಿಯಲ್ಲಿ ಸಹಜವಾಗಿಯೇ ಗಿಡಗಳ ಬೇರುಗಳ ಮೂಲಕ, ಸೂಕ್ಷ್ಮಜೀವಿಗಳ ಮೂಲಕ ಹಾಗೂ ಎರೆಹುಳುವಿನ ಮೂಲಕ ಉಳುಮೆ ನಡೆಯುತ್ತಲೇ ಇರುತ್ತದೆ.

**ಎರಡನೆಯ ತತ್ವ,** ಕಾಂಪೋಸ್ಟ್ ಗೊಬ್ಬರವನ್ನಾಗಲೀ ಅಥವಾ ರಾಸಾಯನಿಕ ಗೊಬ್ಬರವನ್ನಾಗಲೀ ಉಪಯೋಗಿಸದಿರುವುದು. ಮನುಷ್ಯರು ಪ್ರಕೃತಿಯಲ್ಲಿ ತಾನೇತಾನಾಗಿ ನಡೆಯುತ್ತಿರುವ ಕ್ರಿಯೆಗಳಲ್ಲಿ ತಲೆಹಾಕಿ ಅಳಿಸಲು ಸಾಧ್ಯವಾಗದಂತಹ ಕಲೆಯನ್ನುಂಟು ಮಾಡುತ್ತಾರೆ. ಅವರ ಬೇಜವಾಬ್ದಾರಿ ವರ್ತನೆಯಿಂದಾಗಿ ಭೂಮಿಯಲ್ಲಿನ ಪೌಷ್ಠಿಕಾಂಶ ಕ್ಷೀಣಿಸುತ್ತಾ ಹೋಗಿ ವರ್ಷದಿಂದ ವರ್ಷಕ್ಕೆ ಭೂತಾಯಿ ಬಂಜೆಯಾಗುತ್ತಾ ಹೋಗುತ್ತಾಳೆ. ಆದರೆ ಅವಳ ಪಾಡಿಗೆ ಅವಳನ್ನೇ ಬಿಟ್ಟರೆ ಗಿಡ ಹಾಗೂ ಪ್ರಾಣಿಗಳ ಜೀವನ ಚಕ್ರದಿಂದಾಗಿ ಆಕೆ ವರ್ಷದಿಂದ ವರ್ಷಕ್ಕೆ ಹೆಚ್ಚು ಸಮೃದ್ಧಳಾಗುತ್ತಾ ಹೋಗುತ್ತಾಳೆ.

**ಮೂರನೆಯ ತತ್ವ,** ಕಳೆ ತೆಗೆಯದಿರುವುದು ಹಾಗೂ ಕಳೆ ನಾಶಕಗಳನ್ನು ಉಪಯೋಗಿಸದಿರುವುದು. ಕಳೆಗಳು ಭೂಮಿಯ ಸತ್ವವನ್ನು ಅಭಿವೃದ್ಧಿ ಪಡಿಸುವಲ್ಲೂ ದೊಡ್ಡ ಪಾತ್ರವನ್ನು ವಹಿಸುತ್ತವೆ. ಮೂಲಭೂತವಾಗಿ ಕಳೆಗಳನ್ನು ನಿಯಂತ್ರಿಸಬೇಕೆ ಹೊರತು ಕಳೆಗಳನ್ನು ನಿರ್ಮೂಲನ ಮಾಡಿಬಿಡಬೇಕು ಎಂಬ ತಪ್ಪು ಯೋಜನೆ ಇರಬಾರದು. ಭೂಮಿಯನ್ನು ಹುಲ್ಲಿನಿಂದ ಮುಚ್ಚುವುದರಿಂದ, ತಾತ್ಕಾಲಿಕವಾಗಿ ಹೊಲಗಳಲ್ಲಿ ನೀರು ಕಟ್ಟುವುದರಿಂದ ಕಳೆಗಳನ್ನು ನಿಯಂತ್ರಿಸಬಹುದು.

**ನಾಲ್ಕನೆಯ ತತ್ವ,** ರಾಸಾಯನಿಕ ವಸ್ತುಗಳ ಮೇಲಿನ ಅವಲಂಬನೆಯಿಂದ ದೂರ ಉಳಿಯುವುದು. ಅಸಹಜ ವ್ಯವಸಾಯ ಪದ್ಧತಿ ಹಾಗೂ ಭೂಮಿಯ ಸತ್ವ ಅಭಿವೃದ್ಧಿ ಎಂಬುದು ಎಂದು ಪ್ರಾರಂಭವಾಯಿತೋ ಅಂದೇ ಅಶಕ್ತ ಗಿಡಗಳು ಬೆಳೆಯಲು ಪ್ರಾರಂಭಿಸಿದವು. ಇದರಿಂದಾಗಿ ಸಸ್ಯರೋಗ ಹಾಗೂ ಕೀಟ ಅಸಮತೋಲನಗಳು ವ್ಯವಸಾಯದಲ್ಲಿ ಬೃಹತ್ ಸಮಸ್ಯೆಗಳಾದವು. ಪ್ರಕೃತಿ ಸ್ವತಃ ಪೂರ್ಣ ಸಮತೋಲನದಲ್ಲಿದೆ. ಹೀಗೆಂದ ಮಾತ್ರಕ್ಕೆ ಹಾನಿಕಾರಕ ಕ್ರಿಮಿಗಳು ಮತ್ತು ರೋಗಗಳು ಇಲ್ಲವೆಂದಲ್ಲ, ಅವೂ ಇವೆ. ಆದರೆ ಎಂದಿಗೂ ಅವನ್ನು ವಿಷಪೂರಿತ ರಾಸಾಯನಿಕ ವಸ್ತುಗಳಿಂದ ಎದುರಿಸುವಷ್ಟು ದುಃಸ್ಥಿತಿ ಬರುವುದಿಲ್ಲ. ಕೀಟಗಳನ್ನು ಹಾಗೂ ರೋಗಗಳನ್ನು ದೂರವಿಡಲು

ಮಾಡಬೇಕಾದ ಬುದ್ಧಿವಂತಿಕೆಯ ಕೆಲಸವೆಂದರೆ ಆರೋಗ್ಯಕರವಾದ ಪರಿಸರದಲ್ಲಿ ಗಟ್ಟಿಯಾದ ಜಾತಿಯ ಬೆಳೆ ಬೆಳೆಯುವುದು.

**ಉಳುಮೆ:**

ಯಾವಾಗ ಭೂಮಿಯನ್ನು ಉಳುಮೆ ಮಾಡಲಾಗುವುದೋ ಆಗಲೇ ಅಲ್ಲಿಯ ಪರಿಸರದಲ್ಲಿ ಅಗಾಧವಾದ ಬದಲಾವಣೆಯಾಗುವುದು. ರೈತನ ಈ ಕ್ರಿಯೆಯೇ ಅವನಿಗೆ ಮಾರಕವಾಗಿ ನಿಲ್ಲುವುದು. ಉಳುಮೆ ಕಂಡಿಲ್ಲದ ಭೂಮಿಗೆ ಒಮ್ಮೆ ನೇಗಿಲು ಹಚ್ಚಿದರೆ ಸಾಕು ಅಲ್ಲಿ ಪ್ರಚಂಡವಾದ ಕಳೆಗಳು ಹುಟ್ಟಿಕೊಳ್ಳುತ್ತವೆ. ಯಾವಾಗ ಈ ಕಳೆಗಳ ಕೈಮೇಲಾಯಿತೋ ಆಗಿನಿಂದಲೇ ಕಳೆ ತೆಗೆಯುವುದೇ ರೈತನ ದೊಡ್ಡ ಉದ್ಯೋಗವಾಗುತ್ತದೆ.

ಈ ಎಲ್ಲಾ ಸಮಸ್ಯೆಗಳಿಗೆ ಉತ್ತರವೆಂದರೆ ನಾವು ಮಾಡುತ್ತಿರುವ ಅಸಹಜ ಕೃಷಿಯನ್ನು ಕೈಬಿಡುವುದು! ಇಂದಿನ ರೈತನ ಜವಾಬ್ದಾರಿಯು ಮುಂದೆ ಈ ರೀತಿ ತಪ್ಪಾಗದಂತೆ ಎಚ್ಚರಿಕೆ ವಹಿಸುವುದಷ್ಟೇ ಅಲ್ಲ, ಹಿಂದೆ ಆಗಿರುವ ತಪ್ಪನ್ನು ಸರಿಪಡಿಸುವುದೂ ಆಗಿದೆ. ಮನುಷ್ಯ ನಿರ್ಮಿತ ರಾಸಾಯನಿಕ ಗೊಬ್ಬರ ಹಾಗೂ ಯಂತ್ರೋಪಕರಣಗಳನ್ನು ಬಳಸಿ ಕಳೆ ನಿರ್ಮೂಲನಕ್ಕಾಗಿ ಒಂದು ಯಾಗವನ್ನೇ ಮಾಡಲು ಹೊರಡುವ ಬದಲು ಸಹಜ ಕೃಷಿ ಪದ್ಧತಿಯ ಕಳೆ ನಿಯಂತ್ರಣ ನೀತಿ ಅನುಸರಿಸಿದರೆ ಭೂಮಿ ಕೂಡ ಸಮತೋಲನದ ಕಡೆಗೆ ಹೊರಡುತ್ತದೆ. ರೈತನ ತಲೆ ತಿನ್ನುವ ಕಳೆಗಳೂ ತಣ್ಣಗಾಗುತ್ತವೆ.

**ಗೊಬ್ಬರ:**

ನಾನು ಅನೇಕ ಸಲ ಭೂಮಿಯ ಸತ್ವಕ್ಕೆ ಸಂಬಂಧಿಸಿದ ಪರಿಣಿತರಲ್ಲಿ ಭೂಮಿಯನ್ನು ಹಾಗೆಯೇ ಬಿಟ್ಟುಬಿಟ್ಟರೆ ಅದರ ಸತ್ವ ಹೆಚ್ಚುತ್ತದೋ, ಕಮ್ಮಿಯಾಗುತ್ತದೋ ಎಂದು ಪ್ರಶ್ನಿಸಿದ್ದೇನೆ. ಅವರಲ್ಲಿ ಅನೇಕರು ಒಂದು ಕ್ಷಣ ತಡೆದು ಭೂಮಿಯ ಸತ್ವ ಕಡಿಮೆಯಾಗುತ್ತದೆ ಎನ್ನುತ್ತಾರೆ. ಆದರೆ ಖಂಡಿತಾ ಅದು ಹಾಗೆ ಆಗಲಾರದು. ಭೂಮಿಯ ಸತ್ವ ಯಾವುದೋ ಒಂದು ನಿರ್ದಿಷ್ಟ ಮಟ್ಟವನ್ನು ತಲುಪಿದ ಮೇಲೆ ಕಮ್ಮಿಯೂ ಆಗದು, ಜಾಸ್ತಿಯೂ ಆಗದು.

ನಿಜವಾಗಿ ಭೂಮಿಗೆ ತಯಾರು ಮಾಡಿದ ಕಾಂಪೋಸ್ಟ್ ಗೊಬ್ಬರದ ಅಗತ್ಯವಿಲ್ಲ. ಅದೇ ಭೂಮಿಯಲ್ಲಿ ಬೆಳೆದ ಬೆಳೆಯ ಉಳಿಕೆಯನ್ನು ಮತ್ತೆ ಅದೇ ಭೂಮಿಯ ಮೇಲೆ ಹಾಕಿದರೆ ಸಾಕು. ಅದೇ ಕೊಳೆತು ಭೂಮಿಯ ಸತ್ವವನ್ನು

ಹೆಚ್ಚಿಸುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಸಾವಯವ ಗೊಬ್ಬರವನ್ನು ಭೂಮಿಗೆ ಸೇರಿಸುವುದು ಅಹಿತಕರವೇ. ಒಮ್ಮೆ ನನ್ನ ಗದ್ದೆಗಳಲ್ಲಿ ಭತ್ತ ಬೆಳೆದಿದ್ದಾಗ ಒಂದು ಮೂಲೆಯಲ್ಲಿದ್ದ ಭತ್ತಕ್ಕೆ ಮಾತ್ರ ಬೆಂಕಿ ರೋಗ ತಗಲಿತ್ತು. ಏಕೆ ಎಂದು ಯೋಚಿಸತೊಡಗಿದೆ. ಕಾರಣ ಹೊಳೆಯಿತು. ಹಾಂ! ಬೆಳೆ ಪ್ರಾರಂಭಿಸುವುದಕ್ಕೆ ಮುಂಚೆ ಆ ಸ್ಥಳದಲ್ಲಿ ಕೋಳಿಗೊಬ್ಬರ ಗುಡ್ಡೆ ಹಾಕಿದ್ದೆ.

ಕೇವಲ ಸ್ವಲ್ಪ ಹುಲ್ಲು, ಹಸಿರು ಹಾಗೂ ಕೋಳಿಗೊಬ್ಬರ ಹಾಕಿ ಗರಿಷ್ಠ ಇಳುವರಿ ಪಡೆಯಬಹುದು. ಸಾವಯವ ಗೊಬ್ಬರ, ರಾಸಾಯನಿಕ ಗೊಬ್ಬರ ಇವೆಲ್ಲ ಭ್ರಮೆ. ಕೆಲವಾರು ವರ್ಷಗಳಿಂದ ನಾನು ಸುಮ್ಮನೆ ಕುಳಿತು ಪ್ರಕೃತಿ ತಾನೇ ತಾನಾಗಿ ಮಾಡುವ ಕೃಷಿಯನ್ನು ನೋಡುತ್ತಾ ತರಕಾರಿ, ನಿಂಬೆ, ಭತ್ತ, ಬಾರ್ಲಿ ಹೀಗೆ ಎಲ್ಲದರ ಗರಿಷ್ಠ ಇಳುವರಿ ಪಡೆದಿದ್ದೇನೆ.

**ಕಳೆಯೊಂದಿಗೆ:**

ಕಳೆಯೊಂದಿಗೆ ವ್ಯವಹರಿಸುವಾಗ ಈ ಕೆಳಗಿನ ಅಂಶಗಳನ್ನು ಗಮನಿಸುವುದು ಸೂಕ್ತ:–

೧. ಉಳುಮೆಯನ್ನು ನಿಲ್ಲಿಸಿದ ಕೂಡಲೆ ಅನೇಕ ಜಾತಿಯ ಕಳೆಗಳು ಹುಟ್ಟುವುದೇ ನಿಂತುಹೋಗುತ್ತದೆ.

೨. ಹೊಲದಲ್ಲಿ ಒಂದು ಬೆಳೆ ನಿಂತಿರುವಾಗಲೇ ಮುಂದಿನ ಬೆಳೆಯ ಬೀಜವನ್ನು ಬಿತ್ತಿದರೆ ಅವು ಕಳೆಗಿಂತ ಮುಂದಾಗಿ ಬೆಳೆಯುತ್ತವೆ.

೩. ಕುಯಿಲು ಮುಗಿದ ಕೂಡಲೆ ಇಡೀ ಭೂಮಿಯನ್ನು ಹುಲ್ಲಿನಿಂದ ಮುಚ್ಚಿದರೆ ಸೂರ್ಯಕಿರಣ ಪಡೆಯದೆ ಕಳೆಗಳು ಅಲ್ಲೇ ಸೊರಗುತ್ತವೆ.

ಸಾಮಾನ್ಯವಾಗಿ ಕಳೆ ನಿರ್ಮೂಲನೆಗೆ ನಮ್ ರೈತರು ಆಳವಾದ ಉಳುಮೆ ಮಾಡಿ ಸೆತ್ತೆ ಆರಿಸುತ್ತಾರೆ. ಹೀಗೆ ಆಳವಾಗಿ ಉಳುಮೆ ಮಾಡಿದಾಗ ಭೂಮಿಯ ಒಳಗೆ ಸೇರಿ ಹೋಗಿ ಮೊಳಕೆ ಒಡೆಯಲು ಅವಕಾಶವಿಲ್ಲದೆ ಕಂಗಾಲಾಗಿರುವ ಅನೇಕ ಕಳೆಯ ಬೀಜಗಳು ಮೇಲೆ ಬಂದು ಮೊಳಕೆ ಒಡೆಯುತ್ತವೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಕಳೆ ನಿರ್ಮೂಲನ ಹೆಸರಿನಲ್ಲಿ ರೈತ ಪದೇಪದೇ ತನ್ನ ದುರಾದೃಷ್ಟದ ಬೀಜ ಬಿತ್ತುತ್ತಿರುತ್ತಾನೆ!

**ಕೀಟ ನಿಯಂತ್ರಣ:**

ರಾಸಾಯನಿಕ ಗೊಬ್ಬರ ಉಪಯೋಗಿಸದೆ ಇದ್ದರೆ ಹಣ್ಣಿನ ಗಿಡ ಹಾಗೂ ಇತರ ಬೆಳೆಸು ತಮ್ಮ ಕಣ್ಮುಂದೆಯೇ ಮಣ್ಣುಪಾಲಾಗುವುದೆಂದು ನಂಬಿದವರಿದ್ದಾರೆ. ರಾಸಾಯನಿಕಗಳನ್ನು ಉಪಯೋಗಿಸಿ ಕಂಡರಿಯದ ಭಯದಲ್ಲಿ ನಾವೇ ಸಿಕ್ಕಿ ನರಳುತ್ತಿರುವುದು ಶೋಚನೀಯ. ತಮ್ಮ ಗಿಡಗಳಿಗೆ ಹಿಡಿದಿರುವ ರೋಗ ಅಥವಾ ಕೀಟಕ್ಕೆ ನಿಜವಾದ ಕಾರಣವೇನೆಂದು ರೈತರಿಗೆ ತಿಳಿದಿರುವುದಿಲ್ಲ. ಒಟ್ಟಿನಲ್ಲಿ ಅದಕ್ಕೆ ರಾಸಾಯನಿಕ ಶೂಶ್ರೂಶೆ ನೀಡುತ್ತಾರೆ. ಕಡೆಗೆ ತಾವು ನೀಡಿದ ಶೂಶ್ರೂಶೆಯ ಪರಿಣಾಮವಾದರೂ ಏನು ಎಂಬುದೂ ಸಹ ಅವರಿಗೆ ತಿಳಿಯುವುದಿಲ್ಲ. ನಿಜ ಹೇಳಬೇಕೆಂದರೆ ತಿಳಿಯದೆ ಮಾಡಿದ ಪ್ರತಿಯೊಂದು ಕ್ರಿಯೆ ವಿನಾಶದ ಬಿತ್ತನೆ. ಗಿಡಗಳಿಗೆ ತಗಲುವ ರೋಗ ಮತ್ತು ಕೀಟನಾಶಕ್ಕೆ ರಾಸಾಯನಿಕಗಳ ಉಪಯೋಗ ಬಹಳ ಅಸಮಂಜಸವಾದ ವಿಧಾನ ಹಾಗೂ ಭವಿಷ್ಯದಲ್ಲುಂಟಾಗುವ ದೊಡ್ಡ ತಲೆನೋವು.

**ಈ ನಾಲ್ಕು ತತ್ವಗಳು:**

೧. ಉಳುಮೆ ಮಾಡದಿರುವುದು

೨. ರಾಸಾಯನಿಕ ಹಾಗೂ ಕಾಂಪೋಸ್ಟು ಗೊಬ್ಬರವನ್ನು ಉಪಯೋಗಿಸದೇ ಇರುವುದು.

೩. ಉಳುಮೆ ಅಥವಾ ಕಳೆನಾಶಕದಿಂದ ಕಳೆಯ ನಿರ್ಮೂಲನೆಗೆ ಪ್ರಯತ್ನಿಸದೇ ಇರುವುದು.

೪. ರಾಸಾಯನಿಕ ಕ್ರಿಮಿನಾಶಕಗಳನ್ನು ಅವಲಂಬಿಸದಿರುವುದು.

ಇವು ಪ್ರಕೃತಿಯ ವ್ಯವಸ್ಥೆಗೆ ಹೊಂದುವಂತಹ ಮತ್ತು ಪ್ರಕೃತಿಯ ಸಿರಿತನವನ್ನು ಹೆಚ್ಚಿಸುವ ಹಾದಿಗಳು. ನನ್ನ ಎಲ್ಲ ಪ್ರಯೋಗಗಳು ಈ ತತ್ವದ ಹಾದಿಯಲ್ಲೇ ನಡೆದಂಥವು. ಅಲ್ಲದೆ ಇವು ನಾನು ಬೆಳೆಯುವ ತರಕಾರಿ, ಧಾನ್ಯ, ಹಣ್ಣು ಎಲ್ಲದರ ಜೀವಾಳ ಕೂಡ.

❑

# ೪. ಓದು ಪಠ್ಯ
# ಗಾಂಧಿಯವರ ಬ್ರಹ್ಮಚರ್ಯಪಾಲನೆ ಮತ್ತು ಸರಳ ಜೀವನ

## ಬ್ರಹ್ಮಚರ್ಯ – ೧

ನಾನು ಬ್ರಹ್ಮಚರ್ಯ ವ್ರತವನ್ನು ತೆಗೆದುಕೊಳ್ಳಬೇಕೆಂದು ಗಂಭೀರವಾಗಿ ಯೋಚನೆ ಮಾಡಿದ ಸಮಯ, ಈ ಕತೆಯಲ್ಲಿ ಈಗ ಬಂದಿದೆ. ನಾನು ಮದುವೆಯಾದಂದಿನಿಂದ, ಏಕಪತ್ನೀವ್ರತ ನನ್ನ ಹೃದಯದಲ್ಲಿ ಸ್ಥಾಪನೆಯಾಗಿತ್ತು. ಪತ್ನಿಯ ವಿಷಯದಲ್ಲಿ ಪ್ರಾಮಾಣಿಕ ನಡತೆ ನನ್ನ ಸತ್ಯದ ಆರಾಧನೆಯ ಅಂಗವೇ ಆಗಿತ್ತು. ಆದರೆ ನನ್ನ ಪತ್ನಿಯ ವಿಷಯದಲ್ಲಿಯೂ ಬ್ರಹ್ಮಚರ್ಯವನ್ನು ಆಚರಿಸಬೇಕೆಂಬ ಮನೋನಿಶ್ಚಯದ ಪ್ರಾಮುಖ್ಯ ನನಗೆ ಮೊದಲು ಉಂಟಾದುದು ದಕ್ಷಿಣ ಆಫ್ರಿಕಾದಲ್ಲಿಯೇ. ಯಾವ ಘಟನೆ ಅಥವಾ ಯಾವ ಗ್ರಂಥಾಭ್ಯಾಸ, ನನ್ನನ್ನು ಈ ಆಲೋಚನಾ ಮಾರ್ಗಕ್ಕೆ ಎಳೆಯಿತು ಎಂಬುದು ಈಗ ಸ್ಪಷ್ಟವಾಗಿ ನೆನಪಿಲ್ಲ. ಆದರೆ ಇದಕ್ಕೆ ಮುಖ್ಯ ಕಾರಣ, ಈಗಾಗಲೇ ನಾನು ಹೇಳಿರುವಂತೆ ನನ್ನ ಮೇಲೆ ರಾಯಚಂದಭಾಯಿಯವರ ಪ್ರಭಾವವಾಗಿತ್ತು. ಆತನಿಗೂ ನನಗೂ ನಡೆದ ಒಂದು ಸಂಭಾಷಣೆ ಇನ್ನೂ ಜ್ಞಾಪಕವಿದೆ. ಒಂದು ಸಲ ನಾನು, ಶ್ರೀಮತಿ ಗ್ಲಾಡ್‌ಸ್ಟನ್‌ರವರ ಪತಿಪರಾಯಣತೆಯನ್ನು ಕುರಿತು ತುಂಬ ಪ್ರಶಂಸಿಸಿ ಮಾತನಾಡಿದೆ. ಆಕೆ ಕಾಮನ್ಸ್ ಸಭೆಯಲ್ಲಿ ಸಹ ಮಿ. ಗ್ಲಾಡ್‌ಸ್ಟನ್‌ರಿಗೆ ತಾನೇ ಟೀ ಸಿದ್ಧ ಮಾಡಿ ಕೊಡುತ್ತಿದ್ದಳೆಂದೂ ತಮ್ಮ ಜೀವನವನ್ನು ನಿಯಮಗಳಿಗೆ ಅನುಸಾರವಾಗಿ ನಡೆಸುತ್ತಿದ್ದ ಈ ಪ್ರಸಿದ್ಧ ದಂಪತಿಗಳ ಜೀವನದಲ್ಲಿ ಅದೂ ಒಂದು ನಿಯಮವಾಗಿದ್ದಿತೆಂದೂ ಎಲ್ಲಿಯೋ ಓದಿದ್ದುದನ್ನು ನಾನು ರಾಯಚಂದಭಾಯಿಗೆ ಹೇಳಿದೆ. ಈ ವಿಷಯವನ್ನು ಹೇಳುತ್ತಾ ಜೊತೆಯಲ್ಲಿಯೇ ದಾಂಪತ್ಯ ಪ್ರೇಮವನ್ನೂ ಕುರಿತು ಪ್ರಶಂಸಿಸಿದೆ. ರಾಯಚಂದಭಾಯಿ ಕೇಳಿದರು, “ನೀವು ಎರಡು ಪ್ರೇಮಗಳಲ್ಲಿ ಯಾವುದಕ್ಕೆ

ಹೆಚ್ಚಾಗಿ ಬೆಲೆಕೊಡುತ್ತೀರಿ? ಗಂಡನಲ್ಲಿ ಶ್ರೀಮತಿ ಗ್ಲಾಡ್‌ಸ್ಟನ್‌ರ ಶ್ರದ್ಧೆಗೋ ಅಥವಾ ಆಕೆಯ ಸೇವಾಭಾವಕ್ಕೋ? ಒಂದು ಪಕ್ಷ ಆಕೆ, ಅವರ ಸಹೋದರಿಯೋ ಅಥವಾ ನಂಬಿಕೆಯ ಸೇವಕಿಯೋ ಆಗಿದ್ದು ಅಷ್ಟೇ ಶ್ರದ್ಧೆಯಿಂದ ಆತನ ಸೇವೆಯನ್ನು ಮಾಡಿದ್ದರೆ ಆಗ ನೀವು ಏನು ಹೇಳುತ್ತಿದ್ದಿರಿ? ಅಂತಹ ಶ್ರದ್ಧಾವಂತ ಸಹೋದರಿಯ ಅಥವಾ ಸೇವಕರ ಉದಾಹರಣೆಯನ್ನು ನಾವು ಕೇಳಿಲ್ಲವೆ? ಅಥವಾ ಒಂದು ಗಂಡು ಆಳಿನಲ್ಲಿ ನೀವು ಇದೇ ಬಗೆಯ ಪ್ರೇಮ ಮತ್ತು ಶ್ರದ್ಧೆಯನ್ನು ಕಂಡಿದ್ದರೆ, ಶ್ರೀಮತಿ ಗ್ಲಾಡ್‌ಸ್ಟನ್‌ರ ವಿಷಯದಲ್ಲಿ ಉಂಟಾದ ಆನಂದ ನಿಮಗೆ ಆಶ್ಚರ್ಯವುಂಟು ಮಾಡುತ್ತಿದ್ದಿತೆ? ನಾನು ಸೂಚಿಸಿರುವ ಈ ದೃಷ್ಟಿಯಿಂದ ವಿಷಯವನ್ನು ಪರೀಕ್ಷಿಸಿ."

ರಾಯಚಂದಭಾಯಿಯವರು ವಿವಾಹಿತರಾಗಿದ್ದರು. ಅವರು ಹೇಳಿದಾಗ ಅವರ ಮಾತು ಸ್ವಲ್ಪ ಕಠಿಣವಾಯಿತು ಎಂದು ನನಗೆ ತೋರಿದ ಜ್ಞಾಪಕ. ಆದರೆ ಅದು ನನ್ನ ಮನಸ್ಸಿನಲ್ಲಿ ಬಲವಾಗಿ ಬೇರೂರಿತು. ಸೇವಕನ ಸ್ವಾಮಿನಿಷ್ಠೆ, ಹೆಂಡತಿಗೆ ಗಂಡನಲ್ಲಿರುವ ಪತಿನಿಷ್ಠೆಗಿಂತ ಸಾವಿರ ಪಾಲು ಹೆಚ್ಚು ಪ್ರಶಂಸನೀಯವಾದುದು. ಗಂಡ ಹೆಂಡಿರ ಬಾಂಧವ್ಯ ಅವಿಭಾಜ್ಯ. ಆದುದರಿಂದ ಗಂಡನಲ್ಲಿ ಹೆಂಡತಿಯ ಶ್ರದ್ಧಾಪ್ರೇಮ ಏನೂ ಆಶ್ಚರ್ಯವಲ್ಲ. ಈ ನಿಷ್ಠೆ ಸ್ವಾಭಾವಿಕ. ಆದರೆ ಸೇವಕನಿಗೂ ಯಜಮಾನನನಿಗೂ ನಡುವೆ ಇಂತಹ ನಿಷ್ಠೆ ಬೆಳೆಯಬೇಕಾದರೆ ಅದಕ್ಕೆ ವಿಶೇಷ ಶ್ರಮ ಪಡಬೇಕಾಗುವುದು. ರಾಯಚಂದಭಾಯಿಯವರ ದೃಷ್ಟಿಕೋನ ನಿಧಾನವಾಗಿ ನನ್ನ ಮನಸ್ಸನ್ನು ಆಕ್ರಮಿಸತೊಡಗಿತು.

ಹಾಗಾದರೆ ನನ್ನ ಹೆಂಡತಿಯೊಂದಿಗೆ ನನ್ನ ಸಂಬಂಧ ಹೇಗಿರಬೇಕು ಎಂದು ನನ್ನನ್ನು ನಾನೇ ಕೇಳಿಕೊಂಡೆ. ಪತ್ನಿಯನ್ನು ನನ್ನ ಭೋಗಲಾಲಸೆಯ ವಸ್ತುವನ್ನಾಗಿ ಮಾಡಿಕೊಳ್ಳುವುದೇ ಆಕೆಯಲ್ಲಿ ನನ್ನ ಪ್ರೇಮಚಿಹ್ನೆಯೆ? ಎಲ್ಲಿಯವರೆಗೆ ನಾನು ವಿಷಯಾಸಕ್ತಿಗೆ ಗುಲಾಮನಾಗಿದ್ದೇನೋ ಅಲ್ಲಿಯವರೆಗೆ ನಾನು ನನ್ನ ಹೆಂಡತಿಯಲ್ಲಿ ಇಟ್ಟಿರುವ ಪ್ರೀತಿಗೆ ಏನೂ ಬೆಲೆ ಇರಲಿಲ್ಲ. ನಿಜವನ್ನು ಹೇಳಬೇಕಾದರೆ ನನ್ನ ಹೆಂಡತಿ ನನ್ನನ್ನು ಚಪಲಗೊಳಿಸುವ ಮಾಯಾಗಾತಿಯಾಗಿರಲಿಲ್ಲ. ಆದುದರಿಂದ ನನ್ನಲ್ಲಿ ಮನಃಸ್ಥೈರ್ಯವಿದ್ದಿದ್ದರೆ ಬ್ರಹ್ಮಚರ್ಯವ್ರತವನ್ನು ಅಂಗೀಕರಿಸುವುದು ನನಗೆ ಅತ್ಯಂತ ಸುಲಭವಾಗಿತ್ತು. ನನ್ನ ಅಶಕ್ತಿ ಅಥವಾ ವಿಷಯಾಸಕ್ತಿಯೇ ಇದಕ್ಕೆ ತಡೆಯಾಗಿತ್ತು.

ನನ್ನ ಮನಸ್ಸು ಈ ವಿಷಯದಲ್ಲಿ ಜಾಗೃತವಾದ ಮೇಲೆ ಸಹ ನಾನು ಎರಡು ಬಾರಿ ವಿಫಲನಾದೆ. ನನ್ನ ಉದ್ದೇಶ ಉಚ್ಚತರವಾಗಿಲ್ಲದುದೇ ಇದಕ್ಕೆ ಕಾರಣ. ನನ್ನ ಮುಖ್ಯ ಉದ್ದೇಶ ಹೆಚ್ಚು ಮಕ್ಕಳಾಗುವುದನ್ನು ತಪ್ಪಿಸಿಕೊಳ್ಳುವುದೇ ಆಗಿತ್ತು. ನಾನು ಇಂಗ್ಲೆಂಡಿನಲ್ಲಿರುವಾಗ ಸಂತತಿನಿರೋಧ ಉಪಕರಣ ವಿಷಯವಾಗಿ ಸ್ವಲ್ಪ ಓದಿದ್ದೆ. ಡಾ. ಆಲಿಸನ್‌ರ ಮಿತಸಂತಾನ ಪ್ರಚಾರದ ವಿಷಯವಾಗಿಯೂ, ಶಾಕಾಹಾರದ ಅಧ್ಯಾಯದಲ್ಲಿ ಆಗಲೇ ಹೇಳಿದ್ದೇನೆ. ಡಾ. ಆಲಿಸನ್‌ರ ವಾದ ನನ್ನ ಮೇಲೆ ಕೇವಲ ತಾತ್ಕಾಲಿಕ ಪರಿಣಾಮವನ್ನು ಹೊಂದಿತ್ತು. ಆದರೆ ಬಾಹ್ಯ ಹತೋಟಿಗಿಂತ ಅಂತರಂಗದ ಸಂಯಮ ಹೆಚ್ಚು ಪರಿಣಾಮಕಾರಿ, ಎಂದು ವಾದಿಸಿದ ಮಿ. ಹಿಲ್‌ರ ವಿರೋಧ ವಾದ ನನ್ನ ಮೇಲೆ ಬಹಳ ಹೆಚ್ಚಾದ ಪರಿಣಾಮವನ್ನುಂಟು ಮಾಡಿತು. ಆ ಪರಿಣಾಮ ಶಾಶ್ವತವಾಯಿತು. ನನಗೆ ಇನ್ನು ಹೆಚ್ಚು ಮಕ್ಕಳಾಗಬೇಕೆಂಬ ಆಸೆ ಇಲ್ಲದುದರಿಂದ ನಾನು ಆತ್ಮ ಸಂಯಮವನ್ನೇ ಸಾಧಿಸತೊಡಗಿದೆ. ಈ ಸಾಧನೆಯಲ್ಲಿ ಅಸಂಖ್ಯಾತ ಕಷ್ಟಗಳಾದವು. ನಾವು ಬೇರೆ ಬೇರೆ ಹಾಸಿಗೆಗಳಲ್ಲಿ ಮಲಗತೊಡಗಿದವು. ದಿವಸದ ಕೆಲಸಗಳೆಲ್ಲ ಮುಗಿದು ನನಗೆ ಪೂರ್ಣವಾಗಿ ಆಯಾಸವಾದ ತರುವಾಯ ನಾನು ಮಲಗಿಕೊಳ್ಳುತ್ತಿದ್ದೆ. ಇಂಥ ಯಾವ ಪರಿಶ್ರಮದಿಂದಲೂ ಹೆಚ್ಚು ಫಲವಾದಂತೆ ತೋರಲಿಲ್ಲ. ಆದರೆ ನಾನು ಹಿಂದೆ ನಡೆದುದನ್ನು ಯೋಚಿಸಿ ನೋಡಿದರೆ, ಕೊನೆಯ ಸಂಕಲ್ಪ, ಈ ಎಲ್ಲ ವಿಫಲ ಯತ್ನಗಳ ಒಟ್ಟುಗೂಡಿದ ಫಲವೆಂದು ತೋರುತ್ತದೆ.

ಕೊನೆಯ ಸಂಕಲ್ಪ ೧೯೦೬ನೆಯ ವರ್ಷಕ್ಕೆ ಮುಂಚಿತವಾಗಿ ಆಗಲಿಲ್ಲ. ಆ ವೇಳಗೆ ಸತ್ಯಾಗ್ರಹ ಆರಂಭವಾಗಿರಲಿಲ್ಲ. ಆಗ ಅದು ಸಾಧಿಸುವುದೇ ಎಂಬುದನ್ನು ನನು ಕನಸಿನಲ್ಲಿಯೂ ಎಣಿಸಿರಲಿಲ್ಲ. ಬೋಯರ್ ಯುದ್ಧ ನಡೆದ ನಂತರ ಜೂಲೂ ಜನರು ನೆಟಾಲಿನಲ್ಲಿ ದಂಗೆ ಎದ್ದರು. ಆಗ ನಾನು ಜೋಹಾನ್ಸ್‌ಬರ್ಗ್‌ನಲ್ಲಿ ವಕೀಲಿ ವೃತ್ತಿಯನ್ನು ನಡೆಸುತ್ತಿದ್ದೆ. ನನ್ನ ಸೇವೆಯನ್ನು ಸರಕಾರ ಒಪ್ಪಿಕೊಂಡಿತು. ಮುಂದೆ ಬರುವ ಅಧ್ಯಾಯದಲ್ಲಿ ಅದರ ವರ್ಣನೆ ಈ ಕಾರ್ಯ, ನನ್ನನ್ನು ಸಂಯಮದ ತೀವ್ರಾಲೋಚನೆಯಲ್ಲಿ ತೊಡಗಿಸಿತು. ನನ್ನ ಪದ್ಧತಿಯಂತೆ, ನಾನು ನನ್ನ ಅಭಿಪ್ರಾಯಗಳನ್ನು ಕುರಿತು ಸಹೋದ್ಯೋಗಿಗಳೊಂದಿಗೆ ಚರ್ಚಿಸಿದೆ. ಸಂತಾನೋತ್ಪತ್ತಿ ಮತ್ತು ಅದರ ಫಲವಾದ ಸಂತಾನರಕ್ಷಣೆ, ಸಾರ್ವಜನಿಕ

ಕೆಲಸಕ್ಕೆ ವಿರೋಧವೆಂಬುದು ನನ್ನ ನಿಶ್ಚಿತ ಅಭಿಪ್ರಾಯವಾಯಿತು. ನಾನು ದಂಗೆಯ ಕಾಲದಲ್ಲಿ ಸೇವೆ ಸಲ್ಲಿಸುವುದಕ್ಕೆ ಸಾಧ್ಯವಾಗಲು ಜೋಹಾನ್ಸ್‌ಬರ್ಗ್‌ನಲ್ಲಿದ್ದ ನನ್ನ ಮನೆಯನ್ನು ಬಿಡಬೇಕಾಗಿತ್ತು. ನಾನು ಹೆಂಡತಿ ಮಕ್ಕಳನ್ನು ಫೀನಿಕ್ಸ್‌ಗೆ ಕರೆದುಕೊಂಡು ಹೋಗಿ ಅವರನ್ನು ಅಲ್ಲಿ ಬಿಟ್ಟು, ನೆಟಾಲಿನ ಸೈನ್ಯಕ್ಕೆ ಸೇರಿದ್ದ ಭಾರತೀಯ ಡೋಲಿಯನ್ನು ಹೊರುವ ಶೂಶ್ರೂಷಾ ಪಡೆಯನ್ನು ತೆಗೆದುಕೊಂಡು ಹೋಗಬೇಕಾಯಿತು. ಕಠಿಣವಾದ ಪ್ರವಾಸಗಳನ್ನು ಮಾಡುತ್ತಿದ್ದ ಆ ಕಾಲದಲ್ಲಿ ನಾನು ಪೂರ್ಣವಾಗಿ ಹೀಗೆ ಸಾರ್ವಜನಿಕ ಕಾರ್ಯದಲ್ಲಿಯೇ ತೊಡಗಬೇಕಾದರೆ ಮಕ್ಕಳ ಆಸೆಯನ್ನೂ, ಐಶ್ವರ್ಯದ ಆಸೆಯನ್ನೂ (ಪುತ್ರೈಷಣ, ವಿತ್ತೈಷಣಗಳನ್ನು) ಬಿಡಬೇಕು. ವಾನಪ್ರಸ್ಥನ (ಸಂಸಾರದ ಹೊರೆಯಿಂದ ಮುಕ್ತವಾದ) ಬಾಳನ್ನು ನಡೆಸಬೇಕು ಎಂಬುದು ನನಗೆ ಹೊಳೆಯಿತು.

ದಂಗೆಯಲ್ಲಿ ನಾನು ಆರುವಾರಗಳಿಗಿಂತ ಹೆಚ್ಚು ಕಾಲ ಸೇವೆ ಸಲ್ಲಿಸಬೇಕಾಗಲಿಲ್ಲ. ಆದರೆ ಈ ಅಲ್ಪಕಾಲವೇ ನನ್ನ ಜೀವಮಾನದಲ್ಲಿ ಅತ್ಯಂತ ಅಮೂಲ್ಯವಾದ ಕಾಲವಾಯಿತು. ವ್ರತಗಳ ಮಹತ್ವ ಹಿಂದೆ ಯಾವಾಗಲೂ ಇಲ್ಲದಷ್ಟು ನನಗೆ ಮನದಟ್ಟಾಯಿತು. ವ್ರತಬಂಧನ, ಸ್ವಾತಂತ್ರ್ಯದ ಬಾಗಿಲನ್ನು ಮುಚ್ಚುವುದಿಲ್ಲ, ತೆರೆಯುತ್ತದೆ ಎಂಬುದು ನನಗೆ ಅರ್ಥವಾಯಿತು. ಅಲ್ಲಿಯವರೆಗೆ ನನ್ನ ಪ್ರಯತ್ನಗಳಿಗೆ ಜಯವಾಗಿರಲಿಲ್ಲ. ಅದಕ್ಕೆ ಕಾರಣ ನನ್ನ ನಿಶ್ಚಯ ಧೃಡವಾದುದಾಗಿರಲಿಲ್ಲ. ನನ್ನ ಶಕ್ತಿಯಲ್ಲಿಯೇ ನನಗೆ ನಂಬಿಕೆಯಿರಲಿಲ್ಲ. ಭಗವಂತನ ಕೃಪೆಯಲ್ಲಿಯೂ ನನಗೆ ವಿಶ್ವಾಸವಿರಲಿಲ್ಲ. ಆದುದರಿಂದ ನನ್ನ ಮನಸ್ಸು ಅನೇಕ ತರಂಗಗಳಿಂದಲೂ ವಿಕಾರಗಳಿಂದಲೂ ಸಂಶಯವೆಂಬ ಸಮುದ್ರದಲ್ಲಿ ತೊಳಲಾಡುತ್ತಿತ್ತು. ವ್ರತಬಂಧನವನ್ನು ತೆಗೆದುಕೊಳ್ಳದವನು ಮೋಹಕ್ಕೆ ಈಡಾಗುತ್ತಾನೆ. ವ್ರತದಿಂದ ಬಂಧಿತನಾಗುವುದು ಸ್ವೇಚ್ಛಾಚಾರವನ್ನು ಬಿಟ್ಟು ಏಕಪತ್ನೀವ್ರತಸ್ಥನಾದಂತೆ ಎಂಬುದು ನನಗೆ ಮನವರಿಕೆಯಾಯಿತು. "ನನಗೆ ಪ್ರಯತ್ನದಲ್ಲಿ ನಂಬಿಕೆ. ವ್ರತದಿಂದ ಬಂಧಿತನಾಗುವುದು ನನ್ನ ಇಷ್ಟವಲ್ಲ" ಎಂದು ಹೇಳುವುದು ದೌರ್ಬಲ್ಯದ ಗುರುತು. ಬೇಡವಾದುದನ್ನು ಪೂರ್ಣವಾಗಿ ಬಿಟ್ಟುಬಿಡುವುದರಲ್ಲಿ ಕಷ್ಟವೇನು? ಹಾವು ನನ್ನನ್ನು ಕಡಿಯುವುದೆಂದು ನನಗೆ ಗೊತ್ತು. ಆದುದರಿಂದ ಅದರಿಂದ ತಪ್ಪಿಸಿಕೊಂಡು ಓಡಿಹೋಗಲು ಬರಿಯ ಪ್ರಯತ್ನವನ್ನು ಮಾತ್ರ

ಮಾಡುತ್ತೇನೆ. ನಾನು ಅದರಿಂದ ಓಡಿಹೋಗಲು ಬರಿಯ ಪ್ರಯತ್ನವನ್ನು ಮಾತ್ರ ಮಾಡುವುದಿಲ್ಲ. ಬರಿಯ ಪ್ರಯತ್ನದಲ್ಲಿ ಮರಣ ಖಂಡಿತವೆಂದು ನನಗೆ ಗೊತ್ತು. ಬರಿಯ ಪ್ರಯತ್ನ ಮಾಡುವುದೆಂದರೆ ಹಾವು ನನ್ನನ್ನು ಖಂಡಿತಾವಾಗಿ ಕೊಲ್ಲುವುದೆಂಬ ವಿಷಯದಲ್ಲಿ ಸ್ಪಷ್ಟ ಜ್ಞಾನದ ಅಭಾವ. ಆದುದರಿಂದ ನಾನು ಬರಿಯ ಪ್ರಯತ್ನದಿಂದ ತೃಪ್ತನಾಗುತ್ತೇನೆ ಎಂದಲ್ಲಿ, ನಾನು ಮಾಡಬೇಕಾದ ಕಾರ್ಯವನ್ನು ನಾನು ಸ್ಪಷ್ಟವಾಗಿ ತಿಳಿದುಕೊಂಡಿಲ್ಲ ಎಂದು ಆಯಿತು. ಆದರೆ ಮುಂದೆ ನನ್ನ ಅಭಿಪ್ರಾಯಗಳು ಬದಲಾವಣೆಯಾದರೆ? ವ್ರತದ ಕಟ್ಟಿಗೆ ನಾನು ಹೇಗೆ ಈಡಾಗಲಿ? ಎಂಬ ಸಂಶಯ ಅನೇಕ ವೇಳೆ ವ್ರತವನ್ನು ತೆಗೆದುಕೊಳ್ಳಲು ಅಡ್ಡಿ ಬರುತ್ತದೆ. ಒಂದು ವಸ್ತು ತ್ಯಾಜ್ಯ ಎಂಬುದರ ಸ್ಪಷ್ಟ ಭಾವನೆ ಇಲ್ಲದಿರುವುದನ್ನು ಸಹ ಈ ಶಂಕೆ ಸೂಚಿಸುತ್ತದೆ. ಆದುದರಿಂದಲೇ ನಿಷ್ಕುಲಾನಂದರು ಹೀಗೆ ಹಾಡಿದ್ದಾರೆ,

ತ್ಯಾಗ ನಟಿಕೇರೆ ವೈರಾಗ ಬಿನಾ (ವೈರಾಗಯವಿಲ್ಲದ ತ್ಯಾಗ ಶಾಶ್ವತವಲ್ಲ) ಆಸೆ ನಿರ್ನಾಮವಾದರೆ ತ್ಯಾಗವ್ರತ ಸ್ವಾಭಾವಿಕವೂ ಅನಿವಾರ್ಯವೂ ಆಗುವುದು.

## ಬ್ರಹ್ಮಚರ್ಯ – ೨

ಪೂರ್ಣವಾಗಿ ಚರ್ಚೆಮಾಡಿ ಸಾವಧಾನವಾಗಿ ಆಲೋಚಿಸಿ ೧೯೦೬ರಲ್ಲಿ ನಾನು ಬ್ರಹ್ಮಚರ್ಯ ವ್ರತವನ್ನು ಕೈಗೊಂಡೆ. ಅಲ್ಲಿಯವರೆಗೆ ನನ್ನ ಹೆಂಡತಿಯೊಂದಿಗೆ ಈ ವಿಚಾರವನ್ನು ಚರ್ಚಿಸಿರಲಿಲ್ಲ. ವ್ರತವನ್ನು ಹಿಡಿಯುವಾಗ ಮಾತ್ರ ಆಕೆಯ ಸಲಹೆಯನ್ನು ಕೇಳಿದೆ. ಅವಳ ಆಕ್ಷೇಪಣೆಯಿರಲಿಲ್ಲ. ಆದರೆ ಕೊನೆಯ ನಿರ್ಣಯವನ್ನು ತೆಗೆದು ಕೊಳ್ಳುವುದು ನನಗೇ ಬಹಳ ಕಷ್ಟವಾಯಿತು. ನನ್ನಲ್ಲಿ ಅದಕ್ಕೆ ಸಾಕಷ್ಟು ಶಕ್ತಿಯಿರಲಿಲ್ಲ. ನನ್ನ ವಿಕಾರಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಹೇಗೆ? ತನ್ನ ಹೆಂಡತಿಯೊಂದಿಗೆ ಸಹ ವಿಷಯ ವಿಕಾರದಿಂದ ಆಲಿಪ್ತನಾಗಿರುವುದು ಒಂದು ವಿಚಿತ್ರ ವಿಚಾರವಾಗಿ ನನಗೆ ತೋರಿತು. ಆದರೆ ಕೈಹಿಡಿದು ನಡೆಸುವ ಈಶ್ವರನ ಮೇಲೆ ಭಾರಹಾಕಿ ವ್ರತವನ್ನು ಕೈಗೊಂಡೆ.

ಆ ವ್ರತವನ್ನು ಕೈಗೊಂಡ ಈ ಇಪ್ಪತ್ತು ವರುಷಗಳ ನಂತರ ಯೋಚಿಸಿದಂತೆಲ್ಲ ನನಗೆ ಆಶ್ಚರ್ಯವೂ ಆನಂದವೂ ಉಂಟಾಗುತ್ತಿದೆ.

ಸ್ವಲ್ಪ ಹೆಚ್ಚು ಕಡಿಮೆ ಜಯಪ್ರದವಾಗಿಯೇ ಸಂಯಮದ ಅಭ್ಯಾಸ ೧೯೦೧ನೇ ಇಸವಿಯಿಂ ನನಗೆ ಆಗುತ್ತಿತ್ತು. ಆದರೆ ವ್ರತವನ್ನು ಹಿಡಿದ ಮೇಲೆ ನಾನು ಅನುಭವಿಸಿದ ಸ್ವಾತಂತ್ರ್ಯ ಮತ್ತು ಆನಂದವನ್ನು ೧೯೦೬ಕ್ಕೆ ಮುಂಚೆ ಎಂದೂ ಅನುಭವಿಸಿರಲಿಲ್ಲ. ವ್ರತವನ್ನು ಹಿಡಿಯುವುದಕ್ಕೆ ಮುನ್ನ ಇಂದ್ರಿಯವಿಕಾರ ಯಾವಾಗ ಬೇಕಾದರೂ ನನ್ನನ್ನು ಜಯಿಸಿ ಬಿಡಬಹುದಾಗಿತ್ತು. ಆದರೆ ವಾಸನೆ, ಈಗ ನನ್ನ ಮೇಲೆ ಸವಾರಿ ಮಾಡದಂತೆ ವ್ರತ ನನ್ನ ಗುರಾಣಿಯಾಯಿತು. ಬ್ರಹ್ಮಚರ್ಯದ ಮಹಿಮೆ ನನಗೆ ದಿನ ದಿನಕ್ಕೆ ಅಧಿಕವಾಗಿ ಸ್ಪಷ್ಟವಾಗುತ್ತಾ ಬಂತು. ವ್ರತವನ್ನು ನಾನು ಹಿಡಿದುದು ಫೀನಿಕ್ಸ್‌ನಲ್ಲಿದ್ದಾಗ ನನಗೆ ರೋಗಿಗಳ ಶೂಶ್ರೂಷೆಯ ಕಾರ್ಯದಿಂದ ಬಿಡುಗಡೆಯಾದ ಕೂಡಲೇ ನಾನು ಫೀನಿಕ್ಸ್‌ಗೆ ಹೋದೆ. ಅಲ್ಲಿಂದ ನಾನು ಜೋಹಾನ್ಸ್‌ಬರ್ಗ್‌ಗೆ ಹಿಂದಿರುಗಬೇಕಾಯಿತು. ಅಲ್ಲಿಗೆ ನಾನು ಹಿಂದಿರುಗಿದ ಒಂದು ತಿಂಗಳಿನೊಳಗಾಗಿ ಸತ್ಯಾಗ್ರಹ ಸಂಗ್ರಾಮದ ಅಂಕುರಾರ್ಪಣೆಯಾಯಿತು. ನನಗೆ ಗೊತ್ತಿಲ್ಲದಂತೆಂಯೋ ಎಂಬಂತೆ ಬ್ರಹ್ಮಚರ್ಯ ವ್ರತ ನನ್ನನ್ನು ಅದಕ್ಕೆ ಸಿದ್ಧಪಡಿಸುತ್ತಿತ್ತು. ಸತ್ಯಾಗ್ರಹ, ಪೂರ್ವಭಾವಿಯಾಗಿ ಸಿದ್ಧಮಾಡಿಕೊಂಡ ಕಾರ್ಯವಲ್ಲ. ಅದು ಸ್ವಾಭಾವಿಕವಾಗಿ ಅನಾಯಾಸವಾಗಿ, ನಾನು ಬಯಸದೆಯೇ ಸಂಭವಿಸಿತು. ಆದರೆ ನನ್ನ ಹಿಂದಿನ ಕಾರ್ಯಗಳೆಲ್ಲ ನನ್ನನ್ನು ಆ ಗುರಿಗೇ ಮುಟ್ಟಿಸುತ್ತಿದ್ದುವೆಂಬುದನ್ನು ನಾನು ಅರಿತೆ. ನಾನು ಜೋಹಾನ್ಸ್‌ಬರ್ಗ್‌ನಲ್ಲಿ ಮನೆಯ ಹೆಚ್ಚು ವೆಚ್ಚವನ್ನೆಲ್ಲ ತಗ್ಗಿಸಿ, ಬ್ರಹ್ಮಚರ್ಯವ್ರತ ಪಾಲನೆಗಾಗಿಯೋ ಎಂಬಂತೆ ಫೀನಿಕ್ಸ್‌ಗೆ ಹೋಗಿದ್ದೆ.

ಬ್ರಹ್ಮಚರ್ಯ ವ್ರತವನ್ನು ಸರಿಯಾಗಿ ಪಾಲಿಸುವುದೆಂದರೆ, ಬ್ರಹ್ಮದರ್ಶನವೆಂದು ಅರ್ಥ. ಇದು ನನಗೆ ಶಾಸ್ತ್ರಾಭ್ಯಾಸದಿಂದ ಉಂಟಾಗಲಿಲ್ಲ. ಅನುಭವದಿಂದ ನಿಧಾನವಾಗಿ ನನಗೆ ಸಿದ್ಧಿಯಾಗುತ್ತಾ ಬಂತು. ಈ ವಿಷಯವನ್ನು ಕುರಿತ ಶಾಸ್ತ್ರ ಗ್ರಂಥಗಳನ್ನು ನಾನು ಆಮೇಲೆ ಓದಿದೆ. ಈ ವ್ರತಾನುಷ್ಠಾನದಲ್ಲಿ ಒಂದೊಂದು ದಿನವೂ, ಬ್ರಹ್ಮಚರ್ಯದಲ್ಲಿ ದೇಹದ, ಮನಸ್ಸಿನ ಮತ್ತು ಆತ್ಮದ ರಕ್ಷಣೆಯಿದೆ ಎಂಬ ಜ್ಞಾನದ ಸಮೀಪಕ್ಕೆ ನನ್ನನ್ನು ಕರೆದುಕೊಂಡು ಹೋಗುತ್ತಿದೆ. ಈಗ ನನಗೆ ಬ್ರಹ್ಮಚರ್ಯ ಘೋರವಾದ ತಪಶ್ಚರ್ಯವಾಗಲಿಲ್ಲ. ಅದರ ಬದಲು ಶಾಂತಿಮಯವೂ ಆನಂದಮಯವೂ ಆಯಿತು. ದಿನ ದಿನವೂ ನನಗೆ ಅದರಲ್ಲಿ ಹೊಸ ಸೊಬಗು ತೋರುತ್ತಿತ್ತು.

ಹೀಗೆ ಅದು ದಿನದಿನವೂ ಹೆಚ್ಚು ಹೆಚ್ಚು ಆನಂದದಾಯಕವಾಗುತ್ತಿದ್ದರೂ, ಅದರ ಆಚರಣೆ ನನಗೆ ಸುಲಭವಾಗಿದ್ದಿತೆಂದು ಯಾರೂ ಭಾವಿಸದಿರಲಿ. ಈಗ ನನಗೆ ಐವತ್ತಾರು ವರುಷಗಳಾಗಿದ್ದರೂ ಅದು ಎಷ್ಟು ಕಷ್ಟ ಎಂಬುದು ನನಗೆ ಮನವರಿಕೆಯಾಗುತ್ತಿದೆ. ಅದು ಕತ್ತಿಯ ಅಲುಗಿನ ಮೇಲೆ ನಡೆಯುವಂತೆ ಎಂಬುದು ನನಗೆ ದಿನದಿನಕ್ಕೆ ಗೊತ್ತಾಗುತ್ತಿದೆ. ನಿರಂತರವಾದ ಜಾಗರೂಕತೆ ಇದರ ವಿಷಯದಲ್ಲಿ ಅಗತ್ಯ.

ಬ್ರಹ್ಮಚರ್ಯ ವ್ರತವನ್ನು ಪಾಲಿಸುವವರಿಗೆ ಸ್ವಾದೇಂದ್ರಿಯ (ನಾಲಿಗೆಯ ರುಚಿಯ ಮೇಲೆ ಹತೋಟಿ) ಮೊಟ್ಟ ಮೊದಲು ವಶವಾಗಿರಬೇಕು. ನಾಲಿಗೆಯ ರುಚಿಯ ಮೇಲೆ ಪೂರ್ಣ ಹತೋಟಿ ಇಡುವುದರಿಂದ ಬ್ರಹ್ಮಚರ್ಯ ವ್ರತಾನುಷ್ಠಾನ ಸುಲಭವೆಂಬುದು ನನಗೆ ಗೊತ್ತಾಯಿತು. ಆದುದರಿಂದ ನಾನು ಈಗ ಆಹಾರದ ವಿಷಯದಲ್ಲಿ ನನ್ನ ಪ್ರಯೋಗಗಳನ್ನು ಬರಿಯ ಶಾಕಾಹಾರದ ದೃಷ್ಟಿಯಿಂದ ಮಾತ್ರವೇ ಅಲ್ಲದೆ ಬ್ರಹ್ಮಚರ್ಯದ ದೃಷ್ಟಿಯಿಂದಲೂ ನಡೆಸತೊಡಗಿದೆ. ಈ ಪ್ರಯೋಗಗಳ ಪರಿಣಾಮವಾಗಿ ಬ್ರಹ್ಮಚಾರಿಯ ಆಹಾರ ಮಿತವಾಗಿರಬೇಕು, ಸರಳವಾಗಿರಬೇಕು. ಸಾಂಬಾರವಸ್ತು ರಹಿತವಾಗಿರಬೇಕು ಮತ್ತು ಸಾಧ್ಯವಾದರೆ ಸ್ವಾಭಾವಿಕವಾಗಿ (ಬೇಯಿಸದೆ) ಇರಬೇಕು ಎಂಬುದನ್ನು ನಾನು ಮನಗಂಡೆ.

ಆರು ವರ್ಷಗಳ ಅನುಭವದಿಂದ ನನಗೆ ಬ್ರಹ್ಮಚಾರಿಗೆ ಉತ್ತಮವಾದ ಆಹಾರ ಹೊಸ ಮಾಗಿದ ಹಣ್ಣುಗಳು ಮತ್ತು ನೆಲಗಡಲೆ ಮುಂತಾದ ಬೀಜವೆಂಬುದು ಗೊತ್ತಾಗಿತ್ತು. ಈ ಬಗೆಯ ಆಹಾರವನ್ನು ನಾನು ತಿನ್ನುತ್ತಿದ್ದಾಗ ನನಗೆ ಇದ್ದ ನಿರ್ವಿಕಾರ ಭಾವನೆಯನ್ನು , ಆ ಆಹಾರವನ್ನು ಬದಲಾಯಿಸಿದ ಮೇಲೆ ನಾನು ಎಂದೂ ಅನುಭವಿಸಲಿಲ್ಲ. ನಾನು ದಕ್ಷಿಣ ಆಫ್ರಿಕಾದಲ್ಲಿ ಇರುವಾಗ ಮಾಗಿದ ಹೊಸ ಹಣ್ಣು ಮತ್ತು ನೆಲಗಡಲೆ ಮುಂತಾದವುಗಳ ಮೇಲೆಯೇ ಜೀವಿಸುತ್ತಿದ್ದೆ. ಆಗ ನನಗೆ ಬ್ರಹ್ಮಚರ್ಯ ವ್ರತವನ್ನು ಅನುಸರಿಸಲು ಕಷ್ಟವೇ ಆಗಲಿಲ್ಲ. ನಾನು ಹಾಲನ್ನು ಕುಡಿಯಲು ಪ್ರಾರಂಭಿಸಿದಂದಿನಿಂದ ಈ ಬ್ರಹ್ಮಚರ್ಯ ಪಾಲನೆ ಬಹಳ ಕಷ್ಟದ ಕಾರ್ಯವಾಗಿದೆ. ನಾನು ಫಲದ ಆಹಾರವನ್ನು ಬಿಟ್ಟು ಹಾಲನ್ನು ಕುಡಿಯಲು ಹೇಗೆ ಪ್ರಾರಂಭಿಸಿದೆ ಎಂಬುದನ್ನು ಅದಕ್ಕೆ ಉಚಿತವಾದ ಸ್ಥಳದಲ್ಲಿ ಹೇಳುತ್ತೇನೆ. ಇಲ್ಲಿ ಇಷ್ಟು ಹೇಳಿದರೆ ಸಾಕು. ಹಾಲನ್ನು

ಕುಡಿಯುವುದರಿಂದ ಬ್ರಹ್ಮಚರ್ಯವನ್ನು ಆಚರಿಸಲು ಅತ್ಯಂತ ಕಷ್ಟವಾಗುವುದು. ಇದರಿಂದ ಎಲ್ಲ ಬ್ರಹ್ಮಚಾರಿಗಳಿಗೂ ಹಾಲು ಕುಡಿಯುವುದನ್ನು ಬಿಡಬೇಕೆಂದು ಅರ್ಥಮಾಡಿಕೊಳ್ಳಬೇಕಾದುದಿಲ್ಲ. ಬೇರೆ ಬೇರೆ ಆಹಾರಗಳನ್ನು ತೆಗೆದುಕೊಳ್ಳುವುದರಿಂದ ಬ್ರಹ್ಮಚರ್ಯದ ಪಾಲನೆಯ ಮೇಲೆ ಉಂಟಾಗುವ ಪರಿಣಾಮವನ್ನು, ಅನೇಕ ಪ್ರಯೋಗಗಳನ್ನು ನಡೆಸಿದ ನಂತರ ಮಾತ್ರ ನಿರ್ಣಯಿಸಬಹುದು. ಹಾಲಿನಂತೆ ಪುಷ್ಟಿಕರವಾದ ಮತ್ತು ಸುಲಭವಾಗಿ ಜೀರ್ಣವಾಗಬಲ್ಲ ಹಣ್ಣು ಇನ್ನೂ ನನಗೆ ಸಿಕ್ಕಿಲ್ಲ. ವೈದ್ಯರೂ, ಡಾಕ್ಟರರೂ, ಹಕೀಮರೂ ಅಂತಹ ಹಣ್ಣನ್ನು ನನಗೆ ತೋರಿಸಿಲ್ಲ. ಆದುದರಿಂದ ಹಾಲು ಸ್ವಲ್ಪ ಮಟ್ಟಿಗೆ ಇಂದ್ರಿಯ ವಿಕಾರೋತ್ಪಾಕವಾದುದೆಂದು ನನಗೆ ಗೊತ್ತಿದ್ದರೂ ಅದನ್ನು ಬಿಟ್ಟುಬಿಡಿ ಎಂದು ಈಗ ನಾನೂ ಯಾರಿಗೂ ಹೇಳುವುದಿಲ್ಲ.

ಬ್ರಹ್ಮಚರ್ಯ ಪಾಲನೆಯಲ್ಲಿ ಬಾಹ್ಯ ಸಹಾಯಕ್ಕೆ ಆಹಾರದಲ್ಲಿ ಸಂಯಮ ಹೇಗೆ ಅವಶ್ಯಕವೋ, ಹಾಗೆಯೇ ಉಪವಾಸವೂ ಅವಶ್ಯಕ. ಇಂದ್ರಿಯಗಳು ಅತಿ ಬಲಿಷ್ಠವಾದವು. ಅವುಗಳನ್ನು ಪೂರ್ಣವಾಗಿ ಮೇಲೆ ಕೆಳಗೆ ಸುತ್ತ ಎಲ್ಲ ಕಡೆಗಳಿಂದಲೂ ಅದುಮಿ ಇಟ್ಟಿದ್ದ ಹೊರತು ಅವುಗಳನ್ನು ಪೂರ್ಣವಾಗಿ ಅಂಕೆಯಲ್ಲಿಡುವುದು ಸಾಧ್ಯವಿಲ್ಲ. ಆಹಾರವಿಲ್ಲದಿದ್ದಲ್ಲಿ ಇಂದ್ರಿಯಗಳು ಬಲಹೀನವಾಗುತ್ತವೆಂಬುದು ಎಲ್ಲರಿಗೂ ಗೊತ್ತು. ಆದುದರಿಂದ ಇಂದ್ರಿಯಗಳನ್ನು ಹತೋಟಿಯಲ್ಲಿಡುವ ಉದ್ದೇಶದಿಂದ ಆಚರಿಸುವ ಉಪವಾಸದಿಂದ ಅದಕ್ಕೆ ತುಂಬಾ ಸಹಾಯವಾಗುವುದರಲ್ಲಿ ನನಗೆ ಸಂದೇಹವೆ ಇಲ್ಲ. ಕೆಲವರಿಗೆ ಉಪವಾಸದಿಂದ ಏನೂ ಪ್ರಯೋಜನವಾಗುವುದಿಲ್ಲ. ಏಕೆಂದರೆ ಬರಿಯ ಯಾಂತ್ರಿಕ ಉಪವಾಸದಿಂದ ಫಲವುಂಟಾಗುವುದೆಂದು ಅವರು ಭಾವಿಸುತ್ತಾರೆ. ಅವರ ದೇಹಕ್ಕೆ ಆಹಾರವಿಲ್ಲದಿದ್ದರೂ, ಉಪವಾಸ ಮುಕ್ತಾಯವಾದ ನಂತರ ತಾವು ತಿನ್ನುವ ರುಚಿ ಯೋಚಿಸುತ್ತಾ ಮನಸ್ಸಿನಲ್ಲಿಯೇ ಮಧುರ ಭೋಜನದ ಭೋಗಗಳನ್ನು ಅನುಭವಿಸುತ್ತಿರುತ್ತಾರೆ. ಇಂತಹ ಉಪವಾಸದಿಂದ ಹೊಟ್ಟೆಯನ್ನಾಗಲಿ ಇಂದ್ರಿಯಗಳನ್ನಾಗಲಿ ಹತೋಟಿಯಲ್ಲಿಟ್ಟುಕೊಳ್ಳಲು ಅವರಿಂದ ಸಾಧ್ಯವಾಗುವುದಿಲ್ಲ. ಉಪವಾಸ ಮಾಡುತ್ತಿರುವ ದೇಹದೊಂದಿಗೆ ಮನಸ್ಸೂ ಸಹಕರಿಸಿದರೆ, ಅಂದರೆ ದೇಹಕ್ಕೆ ದೊರಕದ ವಸ್ತುವಿಗೆ ಮನಸ್ಸಿನಲ್ಲಿಯೂ ಅರುಚಿಯುಂಟಾದರೆ

ಮಾತ್ರ ಉಪವಾಸದಿಂದ ಪ್ರಯೋಜನವಾಗುತ್ತದೆ. ಎಲ್ಲ ಇಂದ್ರಿಯ ಭೋಗದ ಮೂಲವು ಮನಸ್ಸೇ. ಆದುದರಿಂದ ಉಪವಾಸದ ಪ್ರಯೋಜನ ಮಿತವಾಗಿದೆ. ಏಕೆಂದರೆ ಉಪವಾಸ ಮಾಡುತ್ತಿರುವವನೂ ಕೂಡ ವಿಷಯಗಳ ಕೈಯಲ್ಲಿ ಸಿಕ್ಕಿಕೊಳ್ಳಬಹುದು. ಆದರೆ ಉಪವಾಸವಿಲ್ಲದೆ ಇಂದ್ರಿಯ ಸುಖದ ಇಚ್ಛೆಯನ್ನು ಜಯಿಸುವುದು ಎಂದಿಗೂ ಸಾಧ್ಯವಿಲ್ಲವೆಂದು ಖಂಡಿತವಾಗಿ ಹೇಳಬಹುದು. ಬ್ರಹ್ಮಚರ್ಯ ಪಾಲನೆಗೆ, ಉಪವಾಸ ಮಾಡುವುದು ಅನಿವಾರ್ಯ ನಿಯಮವೆಂದು ಹೇಳಬಹುದು. ಬ್ರಹ್ಮಚರ್ಯ ಪಾಲನೆಯಲ್ಲಿ ಅನೇಕ ಸಾಧಕರು ವಿಫಲರಾಗುತ್ತಾರೆ. ಇದಕ್ಕೆ ಕಾರಣ ಅವರು ತಮ್ಮ ಇತರ ಇಂದ್ರಿಯಗಳ ವಿಷಯದಲ್ಲಿ ಬ್ರಹ್ಮಚಾರಿಗಳಲ್ಲದವರು ನಡೆಯುವಂತೆಯೇ ನಡೆದುಕೊಳ್ಳುತ್ತಾರೆ. ಅವರ ಪ್ರಯತ್ನ, ಬೇಸಿಗೆಯಲ್ಲಿ ಕೊರೆಯುವ ಚಳಿಯನ್ನು ಅನುಭವಿಸಬೇಕೆಂಬ ಇಷ್ಟದಂತೆ ವ್ಯರ್ಥವಾಗುತ್ತದೆ. ಬ್ರಹ್ಮಚಾರಿಯಾದವನ ಜೀವನಕ್ರಮಕ್ಕೂ ಬ್ರಹ್ಮಚಾರಿಯಲ್ಲದವನ ಜೀವನಕ್ರಮಕ್ಕೂ ಸ್ಪಷ್ಟವಾದ ವ್ಯತ್ಯಾಸವಿರಬೇಕು. ಅವರಿಬ್ಬರಲ್ಲಿಯೂ ಕಾಣುವ ಸಾಮ್ಯ, ಬರಿಯ ಹೊರಗಿನ ನೋಟ ಮಾತ್ರ. ಈ ವ್ಯತ್ಯಾಸ, ಹಗಲು ಬೆಳಕಿನಂತೆ ಸ್ಪಷ್ಟವಾಗಿರಬೇಕು. ಇಬ್ಬರೂ ತಮ್ಮ ಕಣ್ಣುಗಳನ್ನು ಉಪಯೋಗಿಸುತ್ತಾರೆ. ಬ್ರಹ್ಮಚಾರಿಯು ಪರಮಾತ್ಮನ ವೈಭವವನ್ನು ನೋಡಲು ಉಪಯೋಗಿಸುತ್ತಾರೆ. ಇನ್ನೊಬ್ಬ ತನ್ನ ಸುತ್ತಲ ಕ್ಷುದ್ರ ವಿನೋದಗಳನ್ನು ನೋಡುತ್ತಾನೆ. ಇಬ್ಬರೂ ಕಿವಿಗಳನ್ನು ಉಪಯೋಗಿಸುತ್ತಾರೆ. ಒಬ್ಬ ದೇವರ ಹೊಗಳಿಕೆಯನ್ನು ಹೊರತು ಮತ್ತೇನನ್ನೂ ಕೇಳುವುದಿಲ್ಲ. ಮತ್ತೊಬ್ಬ ತನ್ನ ಕಿವಿಗಳಿಂದ ಅಭಾಸ ವಿನೋದಗಳನ್ನು ಕೇಳುತ್ತಾನೆ. ಇಬ್ಬರೂ ರಾತ್ರಿಯ ಹೊತ್ತು ಎಚ್ಚರವಾಗಿರುತ್ತಾರೆ. ಒಬ್ಬನು ಆ ವೇಳೆಯಲ್ಲಿ ಹೃದಯಮಂದಿರದಲ್ಲಿರುವ ದೇವರ ಪ್ರಾರ್ಥನೆಯನ್ನು ಮಾಡುತ್ತಾನೆ. ಮತ್ತೊಬ್ಬನು ಅವುಗಳನ್ನು ವ್ಯರ್ಥವಾದ ನೃತ್ಯ ಸಂಗೀತಾದಿಗಳಲ್ಲಿ ನಿದ್ರಿಸುವ ಪರಿವೆಯೇ ಇಲ್ಲದೆ ಕಳೆಯುತ್ತಾನೆ. ಇಬ್ಬರೂ ಆಹಾರವನ್ನು ಸೇವಿಸುತ್ತಾರೆ. ಒಬ್ಬ ಪರಮಾತ್ಮನ ದೇವಾಲಯ (ದೇಹ) ವನ್ನು ಸರಿಯಾದ ಸ್ಥಿತಿಯಲ್ಲಿಡುವುದಕ್ಕಾಗಿ, ಮತ್ತೊಬ್ಬ ಮಿತಿಯಿಲ್ಲದೆ ಹೊಟ್ಟೆ ತುಂಬಿಕೊಂಡು ಪವಿತ್ರ ದೇಹವನ್ನು ದುರ್ಗಂಧದ ಆಗರವನ್ನಾಗಿ ಮಾಡುತ್ತಾನೆ. ಹೀಗೆ ಈ ಇಬ್ಬರೊಳಗೆ ಅಂತರ ಬಹಳ ಇರುತ್ತದೆ. ಕಾಲ ಕಳೆದಂತೆ ಈ ಅಂತರ ಹೆಚ್ಚುವುದೇ ಹೊರತು ಕಡಿಮೆಯಾಗುವುದಿಲ್ಲ.

ಬ್ರಹ್ಮಚರ್ಯವೆಂದರೆ ಕಾಯಾ ವಾಚಾ ಮನಸಾ ಪೂರ್ಣ ಇಂದ್ರಿಯನಿಗ್ರಹ. ನಾನು ಮೇಲೆ ಹೇಳಿದ ಸಂಯಮಗಳ ಅವಶ್ಯಕತೆ ನನಗೆ ದಿನದಿನಕ್ಕೂ ಹೆಚ್ಚು ಹೆಚ್ಚಾಗಿ ಮನವರಿಕೆಯಾಗುತ್ತಿದೆ. ಬ್ರಹ್ಮಚರ್ಯದ ಶಕ್ತಿಗೆ ಹೇಗೆ ಮಿತಿಯಿಲ್ಲವೋ ಹಾಗೆ ತ್ಯಾಗದ ಶಕ್ತಿಗೆ ಮಿತಿಯೇ ಇಲ್ಲ. ಇಂತಹ ಬ್ರಹ್ಮಚರ್ಯ ಅಲ್ಪವಾದ ಪ್ರಯತ್ನದಿಂದ ಸಾಧ್ಯವಲ್ಲ. ಅನೇಕರಿಗೆ ಅದು ಬರಿಯ ಒಂದು ಆದರ್ಶ ಧ್ಯೇಯವಾಗಿ ಮಾತ್ರ ಉಳಿಯಬಲ್ಲದು. ಬ್ರಹ್ಮಚರ್ಯ ಸಾಧಕನು ತನ್ನ ಕುಂದುಕೊರತೆಗಳನ್ನು ಅರಿತು ತನ್ನ ಹೃದಯಾಂತರಾಳದಲ್ಲಿ ಅಡಗಿರುವ ಇಂದ್ರಿಯ ವಿಕಾರಗಳನ್ನು ಹುಡುಕಿ ಅವುಗಳನ್ನು ತನ್ನಿಂದ ಹೊರದೂಡಲು ಸತತ ಪ್ರಯತ್ನ ಮಾಡುವನು. ಆಲೋಚನೆ, ಎಲ್ಲಿಯವರೆಗೆ ಪೂರ್ಣವಾಗಿ ಹತೋಟಿಯಲ್ಲಿ ರುವುದಿಲ್ಲವೋ ಅಲ್ಲಿಯವರೆಗೆ ಪೂರ್ಣ ಬ್ರಹ್ಮಚರ್ಯ ಸಾಧ್ಯವಿಲ್ಲ. ತನ್ನ ಇಚ್ಛೆಯಿಲ್ಲದೆ ಮನಸ್ಸಿನಲ್ಲಿ ಬರುವ ಆಲೋಚನೆಗಳೂ ಮನೋವಿಕಾರಗಳೇ ಆದುದರಿಂದ ಆಲೋಚನೆಗಳನ್ನು ಅಡಗಿಸುವುದೆಂದರೆ ಮನಸ್ಸನ್ನು ಅಡಗಿಸಿದಂತೆ. ಮನಸ್ಸನ್ನು ಅಡಗಿಸುವುದು ಗಾಳಿಯನ್ನು ಅಡಗಿಸುವಷ್ಟೇ ಕಷ್ಟ. ಆದರೂ ನಮ್ಮ ಅಂತರಾತ್ಮದಲ್ಲಿರುವ ದೇವರು, ಮನಸ್ಸನ್ನು ವಶದಲ್ಲಿಟ್ಟುಕೊಳ್ಳುವುದನ್ನೂ ಸಾಧ್ಯ ಮಾಡಿಕೊಡುತ್ತಾನೆ. ಅದು ಕಷ್ಟವಾದ ಮಾತ್ರಕ್ಕೆ ಅಸಾಧ್ಯ ಎಂದು ಯಾರೂ ಭಾವಿಸದಿರಲಿ. ಬ್ರಹ್ಮಚರ್ಯ, ಅತ್ಯುಚ್ಚ ಧ್ಯೇಯ. ಅದನ್ನು ಸಾಧಿಸಲು ಅತ್ಯುಚ್ಚ ಪ್ರಯತ್ನ ಅವಶ್ಯಕವೆಂಬುದು ಏನೂ ಆಶ್ಚರ್ಯವಲ್ಲ.

ಆದರೆ, ಇಂತಹ ಬ್ರಹ್ಮಚರ್ಯವನ್ನು, ಬರಿಯ ಮನುಷ್ಯಪ್ರಯತ್ನದಿಂದ ಸಾಧಿಸಲು ಅಸಾಧ್ಯವೆಂಬದು ನನಗೆ ಭಾರತಕ್ಕೆ ಬಂದ ಮೇಲೆ ಮನವರಿಕೆಯಾಯಿತು. ಅಲ್ಲಿಯವರೆಗೆ ನಾನು "ಫಲಗಳ ಆಹಾರದಿಂದ ಎಲ್ಲ ಮನೋವಿಕಾರಗಳನ್ನೂ ಜಯಿಸಬಲ್ಲೆ" ಎಂಬ ಭ್ರಾಂತಿಯಲ್ಲಿದ್ದು ನಾನು ಮಾಡಬೇಕಾದುದು ಮತ್ತೇನೂ ಇಲ್ಲವೆಂದು ನಂಬಿ ಹೆಮ್ಮೆ ಪಡುತ್ತಿದ್ದೆ.

ಆದರೆ ಮುಂದಿನ ನನ್ನ ಹೋರಾಟವನ್ನು ಕುರಿತು ಈಗಲೇ ಹೇಳುವುದಿಲ್ಲ. ಈ ಮಧ್ಯೆ ಇಷ್ಟನ್ನು ಮಾತ್ರ ಸ್ಪಷ್ಟಪಡಿಸುತ್ತೇನೆ. ಮೋಕ್ಷಸಾಧನೆಗಾಗಿ ಬ್ರಹ್ಮಚರ್ಯ ವ್ರತವನ್ನು ಸಾಧಿಸಲು ಬಯಸುವವರು ತಮ್ಮ ಸ್ವಂತ ಪ್ರಯತ್ನದಲ್ಲಿ ಅವರಿಗೆ ಎಷ್ಟು ನಂಬಿಕೆಯಿದೆಯೋ, ಅಷ್ಟೇ ದೇವರಲ್ಲಿಯೂ ಭಕ್ತಿಯನ್ನು ಇಟ್ಟರೆ ನಿರುತ್ಸಾಹಿಗಳಾಗಬೇಕಾದುದಿಲ್ಲ.

ವಿಷಯಾ ವಿನಿವರ್ತಂತೆ ನಿರಾಹಾರಸ್ಯ ದೇಹಿನಃ
ರಸವರ್ಜಂ ರಸೋಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೆ

ಗೀತಾ, ೨, ೫೯

(ದೇಹಧಾರಿ, ನಿರಾಹಾರಿಯಾಗಿದ್ದರೆ ಅವನ ವಿಷಯಗಳು ಮಂದವಾಗಿರುತ್ತವೆ. ಆದರೆ ರಾಗ ಹೋಗುವುದಿಲ್ಲ. ಈಶ್ವರನ ಸಾಕ್ಷಾತ್ಕಾರವಾದರೆ ರಾಗವು ನಿರ್ಮೂಲವಾಗುವುದು)

ಆದುದರಿಂದ ಆತ್ಮಾರ್ಥಿಯ (ಮೋಕ್ಷ ಸಾಧಕನ) ಅಂತಿಮ ಸಾಧನ ಭಗವಂತ ಮತ್ತು ಅವನ ಅನುಗ್ರಹ. ಈ ಸತ್ಯ ನನಗೆ ಹೊಳೆದುದು ನಾನು ಭಾರತಕ್ಕೆ ಹಿಂದಿರುಗಿದ ಮೇಲೆಯೇ.

## ಸರಳ ಜೀವನ

ನಾನು ಭೋಗಜೀವನವನ್ನೇನೋ ಪ್ರಾರಂಭಿಸಿದ್ದೆ. ಆದರೆ ಅದು ಬಹುಕಾಲ ನಡೆಯಲಿಲ್ಲ. ನಾನು ಎಚ್ಚರಿಕೆಯಿಂದ ಮನೆಯನ್ನು ಸಾಮಾನುಗಳಿಂದ ಸಜ್ಜುಗೊಳಿಸಿದ್ದರೂ, ಅದರಿಂದ ಮೋಹಿತನಾಗಲಿಲ್ಲ. ಆ ಜೀವನವನ್ನು ಪ್ರಾರಂಭಿಸಿದುದೇ ತಡ, ಕೂಡಲೇ ನನ್ನ ವೆಚ್ಚಗಳನ್ನೆಲ್ಲ ಕಡಿಮೆ ಮಾಡತೊಡಗಿದೆ. ಅಗಸನಿಗೆ ತಿಂಗಳ ತಿಂಗಳೂ ಕೊಡಬೇಕಾದ ಹಣ ಹೆಚ್ಚಾಗುತ್ತಿತ್ತು. ಅವನು ಕಾಲಕ್ಕೆ ಸರಿಯಾಗಿ ಬಟ್ಟೆಗಳನ್ನು ಮಡಿಮಾಡಿ ತಂದುಕೊಡುತ್ತಿರಲಿಲ್ಲವಾಗಿ ಎರಡು ಮೂರು ಡಜನ್ ಷರ್ಟ್ ಕಾಲರ್‌ಗಳು ನನ್ನಲ್ಲಿ ಇದ್ದರೂ ನನಗೆ ಸಾಕಾಗುತ್ತಿರಲಿಲ್ಲ. ಪ್ರತಿದಿನವೂ ಮಡಿ ಮಾಡಿದ ಕಾಲರುಗಳನ್ನು ಹಾಕಿಕೊಳ್ಳಬೇಕಾಗಿತ್ತು ಮತ್ತು ಷರ್ಟ್‌ಗಳನ್ನು ನಿತ್ಯವೂ ಬದಲಾಯಿಸದಿದ್ದರೂ ದಿನಬಿಟ್ಟು ದಿನ ಬದಲಾಯಿಸಬೇಕಾಗಿತ್ತು. ಇದರಿಂದ ವೆಚ್ಚ, ಒಂದಕ್ಕೆ ಇಮ್ಮಡಿಯಾಗುತ್ತಿತ್ತು. ಅದು ಅನಾವಶ್ಯಕವೆಂದು ನನಗೆ ತೋರಿತು. ಈ ಹಣವನ್ನು ಉಳಿಸಲು ನಾನೇ ಒಗೆಯುವ ಉಪಕರಣಗಳನ್ನು ಒದಗಿಸಿಕೊಂಡೆ. ಬಟ್ಟೆಗಳನ್ನು ಮಡಿಮಾಡುವ ವಿಷಯವನ್ನು ಕುರಿತು ಒಂದು ಪುಸ್ತಕವನ್ನು ನಾನು ಕೊಂಡುಕೊಂಡೆ. ಅದನ್ನು ಅಧ್ಯಯನ ಮಾಡಿ ನನ್ನ ಹೆಂಡತಿಗೂ ಹೇಳಿಕೊಟ್ಟೆ. ಇದರಿಂದ ನನ್ನ ಕೆಲಸವೇನೋ ಹೆಚ್ಚಾಯಿತು. ಆದರೆ ಈ ಹೊಸ ಉದ್ಯಮದಿಂದ ಮನಸ್ಸಿಗೆ ಆನಂದವೂ ಆಗುತ್ತಿತ್ತು.

ನಾನೇ ಸ್ವತಃ ಮಡಿಮಾಡಿದ ಮೊದಲನೆಯ ಕಾಲರನ್ನು ಎಂದಿಗೂ ಮರೆಯಲಾರೆ. ನಾನು ಬೇಕಾದುದ್ದಕ್ಕಿಂತ ಹೆಚ್ಚು ಗಂಜಿಯನ್ನು ಹಾಕಿಬಿಟ್ಟಿದ್ದೆ. ಇಸ್ತ್ರಿ ಪೆಟ್ಟಿಗೆಯನ್ನು ಎಷ್ಟು ಬೇಕೋ ಅಷ್ಟು ಬಿಸಿ ಮಾಡಿರಲಿಲ್ಲ. ಕಾಲರು ಎಲ್ಲಿ ಸುಟ್ಟು ಹೋಗುವುದೋ ಎಂದು ನನಗೆ ಭಯವಾಗಿದ್ದುದ್ದರಿಂದ, ಇಸ್ತ್ರಿ ಪೆಟ್ಟಿಗೆಯನ್ನು ಚೆನ್ನಾಗಿ ಊರಿ ಇಸ್ತ್ರಿ ಮಾಡಲಿಲ್ಲ. ಇದರ ಫಲವಾಗಿ ಕಾಲರು ತಕ್ಕಮಟ್ಟಿಗೆ ಬಿರುಸಾಗಿದ್ದರೂ ಅದರಿಂದ ಹಿಟ್ಟು ಉದುರುತ್ತಲೇ ಇದ್ದಿತು. ಆ ಕಾಲರನ್ನೇ ಧರಿಸಿಕೊಂಡು ನಾನು ಕೋರ್ಟ್‌ಗೆ ಹೋಗಿ ಇತರ ಬ್ಯಾರಿಸ್ಟರ್‌ಗಳ ಅಪಹಾಸ್ಯಕ್ಕೆ ಗುರಿಯಾದೆ. ಆ ಕಾಲದಲ್ಲಿಯೂ ಸಹ ನಾನು ಅಂತಹ ಕುಚೋದ್ಯಗಳನ್ನು ಸಹಿಸುವ ಶಕ್ತಿಯುಳ್ಳವನಾಗಿದ್ದೆ.

"ನನ್ನ ಬಟ್ಟೆಗಳನ್ನು ನಾನೇ ಮಡಿ ಮಾಡಿಕೊಳ್ಳುವುದು ಇದೇ ಮೊದಲನೆಯ ಪ್ರಯೋಗ. ಅದರಿಂದ ಗಂಜಿ ಹೆಚ್ಚಾಗಿ ಹಿಟ್ಟು ಉದುರುತ್ತಿದೆ. ಇದರಿಂದ ನನಗೇನೂ ತೊಂದರೆಯಿಲ್ಲ. ಇದರಿಂದ ನಿಮ್ಮ ವಿನೋದಕ್ಕೆ ಇಷ್ಟೊಂದು ಅವಕಾಶವಾಯಿತಲ್ಲ, ಅದೂ ಒಂದು ಲಾಭವೇ" ಎಂದು ನಾನು ವಿವರಿಸಿದೆ.

ಒಬ್ಬ ಮಿತ್ರರು, "ಆದರೆ ಇಲ್ಲಿ ಅಗಸರು ಇಲ್ಲದೆ ಬರಗಾಲ ಬಂತೆ?" ಎಂದು ಕೇಳಿದರು.

ನಾನು ಹೇಳಿದೆ "ಅಗಸದವನಿಗೆ ಕೊಡುವ ಹಣ ಬಹಳ ಹೆಚ್ಚಾಗುತ್ತಿದೆ. ಒಂದು ಕಾಲರನ್ನು ಮಡಿಮಾಡುವ ಕೂಲಿ ಆ ಕಾಲರಿನ ಬೆಲೆಯಷ್ಟೇ ಆಗುತ್ತಿದೆ. ಜತೆಗೆ ನಾವು ಯಾವಾಗಲೂ ಅಗಸನ ಮೇಲೆಯೇ ಅವಲಂಬಿಸಿರಬೇಕಾಗುತ್ತದೆ. ಆದುದರಿಂದ ನನ್ನ ವಸ್ತ್ರಗಳನ್ನು ನಾನೇ ಮಡಿ ಮಾಡಿಕೊಳ್ಳುವುದು ಒಳ್ಳೆಯದೆಂದು ನನಗೆ ತೋರುತ್ತದೆ."

ಆದರೆ ನನ್ನ ಮಿತ್ರರಿಗೆ ಈ ಸ್ವಾವಲಂಬನ ಸುಖ ಅರ್ಥವಾಗಲಿಲ್ಲ. ಸ್ವಲ್ಪ ಕಾಲದೊಳಗೆ ನಾನು ನನ್ನ ಬಟ್ಟೆಗಳಿಗೆ ನಿಪುಣನಾದ 'ಅಗಸ'ನೇ ಆದೆ. ನಾನು ಮಡಿ ಮಾಡುತ್ತಿದ್ದುದು, ಅಗಸರ ಮಡಿಗೆ ಯಾವ ವಿಧದಲ್ಲಿಯೂ ಕಡಿಮೆಯಾಗಲಿಲ್ಲ. ನನ್ನ ಕಾಲರುಗಳು ಇತರರು ಧರಿಸುತ್ತಿದ್ದ ಕಾಲರುಗಳಿಗಿಂತ ಗಟ್ಟಿಯಾಗಿಯೂ ಹೊಳಪಿನಲ್ಲಿಯೂ ಕಡಿಮೆಯಾಗಿರಲಿಲ್ಲ.

ಗೋಖಲೆಯವರು ದಕ್ಷಿಣ ಆಫ್ರಿಕಾಕ್ಕೆ ಬಂದಾಗ, ಅವರ ಹತ್ತಿರ ಮಹದೇವ ಗೋವಿಂದ ರಾನಡೆಯವರು ಜ್ಞಾಪಕಾರ್ಥಕವಾಗಿ ಕೊಟ್ಟಿದ್ದ

ಒಂದು ಅಂಗವಸ್ತ್ರವಿತ್ತು. ಈ ನೆನಪಿನ ಗುರುತನ್ನು ಗೋಖಲೆಯವರು ಬಹಳ ಜೋಪಾನವಾಗಿಟ್ಟುಕೊಂಡು ಅದನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಧರಿಸುತ್ತಿದ್ದರು. ಜೋಹಾನ್ಸ್‌ಬರ್ಗ್ ಭಾರತೀಯರು ಅವರಿಗೆ ಔತಣಕೂಟವನ್ನು ಏರ್ಪಡಿಸಿದುದು ಅಂತಹ ವಿಶೇಷ ಸಮಾರಂಭವಾಗಿತ್ತು. ಅಂಗವಸ್ತ್ರ ಇಸ್ತ್ರಿ ಮಾಡಬೇಕಾಗಿತ್ತು. ಅದನ್ನು ಅಗಸನಲ್ಲಿಗೆ ಕಳುಹಿಸಿ, ಸಕಾಲದಲ್ಲಿ ಹಿಂದಕ್ಕೆ ತರಿಸಲು ಸಮಯವಿರಲಿಲ್ಲ. ನಾನು ಇಸ್ತ್ರಿ ಮಾಡಿಕೊಡುತ್ತೇನೆಂದು ಗೋಖಲೆಯವರಿಗೆ ಹೇಳಿದೆ.

ಗೋಖಲೆಯವರು, "ವಕೀಲಿ ವೃತ್ತಿಯಲ್ಲಿ ನೀವು ಗಟ್ಟಿಗರೆಂದು ನಂಬಬಲ್ಲೆ. ಆದರೆ ಅಗಸನಾಗಿ ನಿಮ್ಮನ್ನು ನಂಬಲಾರೆ. ನೀವು ಇದನ್ನು ಕೆಡಿಸಿಬಿಟ್ಟರೆ? ಈ ಅಂಗವಸ್ತ್ರ ನನಗೆ ಎಷ್ಟು ಬೆಲೆಯಾದುದೆಂದು ನಿಮಗೆ ಗೊತ್ತೇ?" ಎಂದು ಕೇಳಿದರು.

ಅವರು ತಮಗೆ ಆ ವಸ್ತ್ರವನ್ನು ರಾನಡೆಯವರು ಕೊಟ್ಟ ಕಥೆಯನ್ನು ಬಹಳ ಉಲ್ಲಾಸದಿಂದ ಹೇಳಿದರು. ಆದರೂ ನಾನು ಒತ್ತಿ ಹೇಳಿ ಚೆನ್ನಾಗಿ ಕೆಲಸ ಮಾಡುವುದಾಗಿ ಆಶ್ವಾಸನೆ ಕೊಟ್ಟು ಅವರ ಅನುಮತಿಯನ್ನು ಪಡೆದು ಅದನ್ನು ಇಸ್ತ್ರಿ ಮಾಡಿ ಅವರಿಂದ ಮೆಚ್ಚುಗೆಯನ್ನು ಪಡೆದೆ. ಅನಂತರ, ಜಗತ್ತೆಲ್ಲ ನನಗೆ ಮೆಚ್ಚುಗೆಯನ್ನು ಕೊಡದಿದ್ದರೂ ನಾನು ಚಿಂತಿಸುವವನಾಗಿರಲಿಲ್ಲ.

ಅಗಸರವನ ಮೇಲೆ ನನ್ನ ಅವಲಂಬನೆಯನ್ನು ತಪ್ಪಿಸಿಕೊಂಡಂತೆ ನಾನು ಕ್ಷೌರಿಕನ ಕೈಯಿಂದೂ ತಪ್ಪಿಸಿಕೊಂಡೆ. ಇಂಗ್ಲೆಂಡಿಗೆ ಹೋಗುವವರೆಲ್ಲ, ಮುಖ ಕ್ಷೌರ ಮಾಡಿಕೊಳ್ಳುವುದನ್ನು ಕಲಿತುಕೊಂಡಿರುತ್ತಾರೆ. ಆದರೆ ಸ್ವಂತವಾಗಿ ಕೂದಲನ್ನು ಕತ್ತರಿಸಿಕೊಳ್ಳುವುದನ್ನು ಕಲಿತವರು ನನಗೆ ತಿಳಿಯದು. ನಾನು ಅದನ್ನೂ ಕಲಿಯಬೇಕಾಗಿತ್ತು. ನಾನು ಪ್ರಿಟೋರಿಯಾದಲ್ಲಿ ಒಂದು ಬಾರಿ ಇಂಗ್ಲೀಷ್ ಕ್ಷೌರಿಕನ ಅಂಗಡಿಗೆ ಹೋದೆನು. ಅವನು ನನ್ನ ಕೂದಲನ್ನು ಕತ್ತರಿಸಲು ಒಪ್ಪಲಿಲ್ಲ. ಅವನು ತೋರಿಸಿದ ತಿರಸ್ಕಾರ ಅಸಹನೀಯವಾಗಿತ್ತು. ನನಗೆ ಬಹಳ ದುಃಖ ಉಂಟಾಯಿತು. ನಾನು ಕೂಡಲೇ ಅಂಗಡಿಗೆ ಹೋಗಿ ಕತ್ತರಿಯನ್ನು ಕೊಂಡುಕೊಂಡು ಬಂದು ಕನ್ನಡಿಯ ಮುಂದೆ ನಿಂತುಕೊಂಡು ನನ್ನ ಕೂದಲನ್ನು ಸ್ವಲ್ಪ ಹೆಚ್ಚು ಕಡಿಮೆ ಸರಿಯಾಗಿಯೇ ಕತ್ತರಿಸಿದೆ. ಆದರೆ ಹಿಂಭಾಗದಲ್ಲಿ ಕೆಟ್ಟುಹೋಯಿತು. ಕೋರ್ಟ್‌ನಲ್ಲಿ ಮಿತ್ರರೆಲ್ಲ ಬಿದ್ದು ಬಿದ್ದು ನಕ್ಕರು.

“ಗಾಂಧೀ, ನಿಮ್ಮ ಕೂದಲಿಗೆ ಏನಾಗಿದೆ? ಅದನ್ನು ಇಲಿಗಳು ತಿಂದಂತೆ ಕಾಣುತ್ತಿದೆಯಲ್ಲ?”

“ಇಲ್ಲ, ಬಿಳಿಯ ಕ್ಷೌರಿಕ ನನ್ನ ಕಪ್ಪು ತಲೆಕೂದಲನ್ನು ಹೇಗೆ ಮುಟ್ಟಿಯಾನು? ಆದುದರಿಂದ ನಾನೇ ಅದನ್ನು ಕತ್ತರಿಸಿಕೊಂಡೆ. ಎಷ್ಟು ಕೆಟ್ಟುಹೋದರೂ ಚಿಂತೆಯಿಲ್ಲ” ಎಂದು ಉತ್ತರ ಕೊಟ್ಟೆ.

ಈ ಉತ್ತರದಿಂದ ಮಿತ್ರರಿಗೆ ಆಶ್ಚರ್ಯವಾಗಲಿಲ್ಲ.

ನನ್ನ ಕೂದಲನ್ನು ಕತ್ತರಿಸುವುದಕ್ಕೆ ನಿರಾಕರಿಸಿದುದರಲ್ಲಿ ಕ್ಷೌರಿಕನದೇನೂ ತಪ್ಪು ಇರಲಿಲ್ಲ. ಅವನು ಕಪ್ಪು ಜನರ ಸೇವೆ ಮಾಡಿದ್ದರೆ, ಅವನ ಬಿಳಿಯ ಗಿರಾಕಿಗಳೆಲ್ಲ ಅವನನ್ನು ಬಿಟ್ಟು ಹೋಗುವ ಸಂಭವವಿದ್ದಿತು. ನಾವು ನಮ್ಮ ಕ್ಷೌರಿಕರು ನಮ್ಮ ದೇಶದ ಅಸ್ಪೃಶ್ಯ ಬಂಧುಗಳಿಗೆ ಕ್ಷೌರ ಮಾಡಲು ಅವಕಾಶ ಕೊಡುವುದಿಲ್ಲ. ನನಗೆ ಇದಕ್ಕಾಗಿ ದಕ್ಷಿಣ ಆಫ್ರಿಕಾದಲ್ಲಿ ಒಂದು ಸಲವಲ್ಲ, ಅನೇಕ ಸಲ ತಕ್ಕ ಶಿಕ್ಷೆ ದೊರಕಿತು. ಇದು ನಮ್ಮ ಪಾಪಕ್ಕೆ ಪ್ರಾಯಶ್ಚಿತ್ತವೆಂಬುದು ನನಗೆ ಮನವರಿಕೆಯಾಗಿದ್ದುದರಿಂದ ನನಗೆ ಅವರಿಂದ ಕೋಪ ಬರಲಿಲ್ಲ.

ಸ್ವಾವಲಂಬನೆ ಮತ್ತು ಸರಳತೆಯ ನನ್ನ ಇಚ್ಛೆ ಎಂತಹ ತೀವ್ರ ಸ್ವರೂಪದಲ್ಲಿ ಕೊನೆಗೆ ಪ್ರಕಟವಾಯಿತೆಂಬ ಸಂಗತಿಗಳು, ಮುಂದೆ ಸರಿಯಾದ ಸ್ಥಳಗಳಲ್ಲಿ ವಿವರಿಸಲ್ಪಡುವುವು. ಆದರೆ ಅದರ ಬೀಜಾರೋಪಣ ಬಹಳ ಹಿಂದೆಯೇ ಆಗಿತ್ತು. ಬೇರು ಬಿಟ್ಟು ಹೂವು ಹಿಡಿದು ಫಲ ಬಿಡಲು ನೀರೆರೆಯುವುದು ಮಾತ್ರ ಅವಶ್ಯಕವಾಗಿತ್ತು. ಈ ನೀರೆಯುವುದೂ ಸಕಾಲದಲ್ಲಿ ಉಂಟಾಯಿತು.

❑